ನಾಯಕನಹಟ್ಟಿ ತಿಪ್ಪೇಸ್ವಾಮಿ: ಸಂಕಥನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರಬಂಧ)

ಸಂಶೋಧಕಿ
ರೇಖಾ ಎಸ್.ಟಿ.

...ರ್ಶಕರು
...ಥ ಬೇವಿನಕಟ್ಟಿ
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬.
೨೦೦೯

700

ನಾಯಕನಹಟ್ಟಿ ತಿಪ್ಪೇಸ್ವಾಮಿ: ಸಂಕಥನ

(ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರಬಂಧ)

ಸಂಶೋಧಕಿ

ರೇಖಾ ಎಸ್.ಟಿ.

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ನಾಯಕನಹಟ್ಟಿ ತಿಪ್ಪೇಸ್ವಾಮಿ: ಸಂಕಥನ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪ್ರಬಂಧ)

ಸಂಶೋಧಕಿ

ರೇಖಾ ಎಸ್.ಟಿ.

ಮಾರ್ಗದರ್ಶಕರು

ಪ್ರೊ.ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಕೃತಜ್ಞತೆಗಳು

ಪ್ರಬಂಧ ರೂಪುಗೊಳ್ಳಲು ನನಗೆ ಸಹಾಯ, ಸಹಕಾರ ನೀಡಿ ಎಂ.ಫಿಲ್ ಸಂಶೋಧನಾ ಅಧ್ಯಯನ ಕೈಗೊಳ್ಳಲು ಪ್ರೇರಕಶಕ್ತಿಯಾಗಿದ್ದು ಮತ್ತು ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರೂ ಹಾಗೂ ಮಾರ್ಗದರ್ಶಕರಾದ ಡಾ.ಮಂಜುನಾಥ ಬೇವಿನಕಟ್ಟಿ ಅವರಿಗೆ ಭಕ್ತಿಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅಧ್ಯಯನಕ್ಕೆ ಸಹಕರಿಸಿದ ವಿಭಾಗದ ಅಧ್ಯಾಪಕರಾದ ಡಾ.ಹೆಬ್ಬಾಳೆ ಕೆ.ನಾಗೇಶ, ಡಾ.ಸ.ಚಿ.ರಮೇಶ, ಡಾ. ಮೊಗಳ್ಳಿ ಗಣೇಶ್ ಹಾಗೂ ಅಜಿತ್ ಮತ್ತು ಖಾಸಿಂ ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಜೀವನದ ಯಶಸ್ಸಿನ ಹಾದಿಗೆ ಹಗಲಿರುಳು ಶ್ರಮಿಸಿದ ಹಾಗೂ ಸದಾ ಆಶೀರ್ವಾದ ಸಹಕಾರ ನೀಡಿ ನನ್ನ ಅಧ್ಯಯನಕ್ಕೆ ಸಂಪೂರ್ಣ ಪ್ರೋತ್ಸಾಹವನ್ನು ನೀಡಿದ ಪೂಜ್ಯ ತಂದೆ ತಾಯಿಯವರಾದ ದಿ.ಸಣ್ಣತಿಪ್ಪಯ್ಯ, ಬೋರಮ್ಮ, ನಿಂಗಮ್ಮ ಇವರಿಗೆ ನನ್ನ ಅನಂತ ನಮನಗಳು. ನನ್ನ ಯಶಸ್ಸಿಗೆ ಸಹಕರಿಸಿದ ಪ್ರೀತಿಯ ಅಕ್ಕ ಭಾವರಾದ ಸುನಂದ, ತಿಪ್ಪೇಸ್ವಾಮಿ, ಭಾಗ್ಯ, ರಂಗಸ್ವಾಮಿ, ಶಾಂತ, ತಿಪ್ಪೇಸ್ವಾಮಿ, ಚಂದ್ರಕಲಾ, ಶಿವಕುಮಾರ, ಮಂಜುಳ, ಮಹೇಶ್, ಶೈಲಜಾ, ಹೇಮಪ್ಪ, ವತ್ಸಲಾ, ಜಗನ್ನಾಥ ಹಾಗೂ ಸಹೋದರ ಪ್ರಸನ್ನ ಎಸ್.ಟಿ., ಅನುಪಮ ಟಿ. ಹಾಗೂ ಮಧುಸೂಧನ, ರಾಂಮೋಹನ, ಅಶ್ವಿನಿ, ನಂದಿನಿ, ತಿಲಕನಂದನ, ಗೌತಮ್, ಶಿವು, ಸಹನ, ಸೌಂದರ್ಯ ಇವರೆಲ್ಲರಿಗೂ ನಾನು ಋಣಿಯಾಗಿರುವೆ. ಹಾಗೂ ಓಬಯ್ಯ, ಜಗದೀಶ ಕುಮಾರ ಚ.ನಾಯಕ ಅವರುಗಳಿಗೂ ಕೃತಜ್ಞತೆಗಳು.

ನನ್ನ ಅಧ್ಯಯನದ ಅವಧಿಯಲ್ಲಿ ಪ್ರೀತಿ, ವಾತ್ಸಲ್ಯದಿಂದ ಪ್ರತಿ ಕೆಲಸದಲ್ಲೂ ಪ್ರೇರಕ ಶಕ್ತಿಯಾಗಿ ನಿಂತು ಸಲಹೆ ಸಹಕಾರಗಳನ್ನು ನೀಡಿ ಅಧ್ಯಯನಕ್ಕೆ ಶ್ರಮಿಸಿದ ಪ್ರೀತಿಯ ಗೆಳೆಯ ರಮೇಶ, ಹನುಮೇಶ, ಪಂಪಾಪತಿ, ಮಹಾಂತೇಶ, ಬಸವರಾಜು, ನಾಗಭೂಷಣ ಹಾಗೂ ಶಕೀಲಾ, ಶಶಿಕಲಾ, ಶಿಲ್ಪ, ಅಂಜಲಿ ಹಾಗೂ ಕ್ಷೇತ್ರಕಾರ್ಯದ ಅವಧಿಯಲ್ಲಿ ಸಹಕರಿಸಿದ ಗೆಳೆಯರಾದ ರವಿ, ಮಹಾಂತೇಶ, ಕಣ್ಮೇಶ, ಮಧು ಹಾಗೂ ಅಧ್ಯಯನದ ಅವಧಿಯಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲ ಗೆಳೆಯ ಹಾಗೂ ಗೆಳತಿಯರಿಗೂ ನನ್ನ ಪ್ರೀತಿಪೂರ್ವಕ ಕೃತಜ್ಞತೆಗಳು.

ಎಂ.ಫಿಲ್ ಪ್ರಬಂಧವನ್ನು ಅಂದವಾಗಿ ಸಂಯೋಜಿಸಿ ಕೊಟ್ಟ ವೀರೇಶ ಕೆ. ನಾಯಕ ಅವರಿಗೂ ಹೃತ್ಪೂರ್ವಕ ಕೃತಜ್ಞತೆಗಳು. ಈ ನಿಬಂಧ ರಚಿಸುವಲ್ಲಿ ನೆರವಾದ ವಿದ್ವಾಂಸರಿಗೆ, ಮಾಹಿತಿ ನೀಡಿದ ವಕ್ತೃಗಳಿಗೆ ಹಾಗೂ ಗ್ರಂಥಾಲಯ ಸಿಬ್ಬಂದಿಯವರಿಗೆ ಹಾಗೂ ಸಹಾಯ ಮಾಡಿದ ಎಲ್ಲರಿಗೂ ಮತ್ತೊಮ್ಮೆ ಕೃತಜ್ಞಪೂರ್ವಕ ವಂದನೆಗಳು.

ರೇಖಾ ಎಸ್.ಟಿ.

ಪ್ರಮಾಣ ಪತ್ರ

ನಾಯಕನಹಟ್ಟಿ ತಿಪ್ಪೇಸ್ವಾಮಿ:ಸಂಕಥನ ಎಂಬ ಶೀರ್ಷಿಕೆಯ ಪ್ರಬಂಧವನ್ನು ಪ್ರೊ.ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೨೨-.೦೯.೨೦೦೯

ರೇಖಾ ಎಸ್.ಟಿ.

ರೇಖಾ. ಎಸ್. ಟಿ.

ಸಂಶೋಧಕಿ

ಜಾನಪದ ಅಧ್ಯಯನ ವಿಭಾಗ

ಕವಿಹಂ, ವಿದ್ಯಾರಣ್ಯ

ದೃಢೀಕರಣ

ಕು.ರೇಖಾ ಎಸ್.ಟಿ. ಇವರು ನಾಯಕನಹಟ್ಟಿ ತಿಪ್ಪೇಸ್ವಾಮಿ:ಸಂಕಥನ ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇವರು ಯಾವುದೇ ಪದವಿಗಳಿಗೆ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

೨೩ -

ದಿನಾಂಕ : ~~[illegible]~~.೦೯.೨೦೦೯

ಪ್ರೊ.ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಪರಿವಿಡಿ

ಅಧ್ಯಾಯ - ೧

ನಾಯಕನಹಟ್ಟಿ ತಿಪ್ಪೇಸ್ವಾಮಿ: ಸಂಕಥನದ ಉದ್ದೇಶ ಮತ್ತು ವ್ಯಾಪ್ತಿ

ನಾಯಕನಹಟ್ಟಿ ತಿಪ್ಪೇಸ್ವಾಮಿ: ಸಂಕಥನದ ಉದ್ದೇಶ ಮತ್ತು ವ್ಯಾಪ್ತಿ

ಭವ್ಯ ಭಾರತದ ಸಂಸ್ಕೃತಿ, ಪರಂಪರೆಯ ಹಿನ್ನೆಲೆಯಲ್ಲಿ ಭಾರತೀಯ ಧರ್ಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಇತಿಹಾಸದುದ್ದಕ್ಕೂ ತನ್ನದೇ ಆದ ವಿಶೇಷತೆಯನ್ನು ಪಡೆದುಕೊಂಡಿದೆ. ಚಿತ್ರದುರ್ಗ ಜಿಲ್ಲೆ ಇಡೀ ಕರ್ನಾಟಕದಲ್ಲಿಯೇ ಅತ್ಯಂತ ಮಹತ್ತ್ವವನ್ನು ಪಡೆದ ಸ್ಥಳ. ಇಲ್ಲಿಯ ಚರಿತ್ರೆ, ಕಾಲದಿಂದ ಕಾಲಕ್ಕೆ ತನ್ನದೇ ಆದ ಮಹತ್ತ್ವದ ಮೈಲುಗಲ್ಲಿನಂತೆ ಗುರುತಿಸಲ್ಪಟ್ಟ ಪ್ರದೇಶ. ಹಿಂದಿನ ಪ್ರಾಗೈತಿಹಾಸಿಕ ಕಾಲದಿಂದ ಇಂದಿನ ಪ್ರಸ್ತುತವರೆಗೂ ತನ್ನ ಕಾಲಗರ್ಭದಲ್ಲಿ ಹುದುಗಿಸಿಕೊಂಡಿದ್ದ ಘಟನಾವಳಿಗಳನ್ನು ಬಿಚ್ಚಿ ಹರಡಿಕೊಳ್ಳುತ್ತಾ, ಕೆದಕಿದಷ್ಟು ಆಳಕ್ಕಿಳಿಯುತ್ತ, ಹುಡುಕಿದಷ್ಟು ಎತ್ತರಕ್ಕೇರುತ್ತ, ಪ್ರತಿ ಹೆಜ್ಜೆಗೂ ಕುತೂಹಲ ಕೆರಳಿಸುತ್ತಾ ಹುಡುಕಾಟ ಹೆಚ್ಚಿಸುತ್ತಿದೆ. ಏನಾದರೂ ಆಗಬಹುದು ಎಂದು ಹುಡುಕುತ್ತಾ ಹೊರಟಾಗ ಇಲ್ಲಿಯ ಭೌಗೋಳಿಕ ಹಿನ್ನೆಲೆ, ಇಲ್ಲಿಯ ಇತಿಹಾಸ ಈ ನೆಲದಲ್ಲಿ ಆಳಿ ಬಾಳಿದವರ ಬದುಕಿನ ರುದ್ರ-ರಮಣೀಯತೆಯತ್ತ ಕೊಂಡೊಯ್ಯುತ್ತದೆ. ಜಿಲ್ಲೆಯ ಉದ್ದಗಲಕ್ಕೂ ಹರಡಿ ಹಬ್ಬಿರುವ ಬೆಟ್ಟ, ಗುಡ್ಡಗಳ ಸಾಲು, ಕಣಿವೆ, ಕೊಳ್ಳಗಳು, ಇಲ್ಲಿಯ ಕೋಟೆ, ಕೊತ್ತಲೆಗಳು, ಸಾವಿರಾರು ಗುಡಿ ಗೋಪುರಗಳು, ಮಠ ಮಾನ್ಯಗಳು, ವಾಸ್ತು ಶಿಲ್ಪ ಕಲೆ, ಇಲ್ಲಿಯ ಶಾಸನ ಸಂಪತ್ತು, ಸ್ಮಾರಕಗಳು, ಪ್ರಾಚೀನ ಸಂಸ್ಕೃತಿಗಳ ಭವ್ಯ ಇತಿಹಾಸವನ್ನು ತೆರೆದಿಡುತ್ತವೆ.

ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡಿರುವ ನಾಯಕನಹಟ್ಟಿಯು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯಿಂದ ೨೨ ಕಿ.ಮೀ. ದೂರದಲ್ಲಿದೆ. ಚಿತ್ರದುರ್ಗವು ಗಂಡುಮೆಟ್ಟಿನ ನಾಡೆಂದು ಪ್ರಸಿದ್ಧಿಯನ್ನು ಪಡೆದಿದೆ. ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ತನ್ನದೇ ಆದ ಇತಿಹಾಸವನ್ನು ಒಳಗೊಂಡಿದೆ. ಮತ್ತು ಪಾಳೆಗಾರಿಕೆಯ ಆಡಳಿತವನ್ನು ಒಳಗೊಂಡಿದೆ.

ನಾಯಕನಹಟ್ಟಿ ತಿಪ್ಪೇಸ್ವಾಮಿ ಸಾಂಸ್ಕೃತಿಕ ನಾಯಕನಾಗಿ ಆ ಭಾಗದ ಜನರಲ್ಲಿ ಆರಾಧ್ಯ ದೈವವಾಗಿ ಆರಾದಿಸಲ್ಪಡುತ್ತಾರೆ. ತಿಪ್ಪೇಸ್ವಾಮಿಯನ್ನು ಜನಪದರು ತಮ್ಮ ನಂಬಿಕೆ, ಆಚರಣೆ, ಸಂಪ್ರದಾಯದ ನೆಲೆಯಲ್ಲಿ ಜಾತ್ರೆಯನ್ನು ಆಚರಿಸುತ್ತಾರೆ. ಹೀಗೆ ಆಚರಿಸುವುದರ ಮುಖಾಂತರ ಸಂಪ್ರದಾಯಗಳನ್ನು ಜಾತ್ರೆಯ ನೆಪದಲ್ಲಿ ಮುಂದಿನ ತಲೆಮಾರಿಗೆ ವರ್ಗಾಯಿಸುವ ಅನಿವಾರ್ಯತೆಯು ಜನಪದರಲ್ಲಿದೆ. ತಿಪ್ಪೇಸ್ವಾಮಿ ಜನರ ಒಳಿತಿಗಾಗಿ ಜನರಲ್ಲಿರುವ ಅಜ್ಞಾನ, ಅಂದಕಾರ ನಿವಾರಿಸುವ ಸಲುವಾಗಿ ಮತ್ತು ಶೈವ ಧರ್ಮವನ್ನು ಸಾರಿದ ಮಹಾ

ಮಹಿಮಾ ಪುರುಷನಾಗಿ ಪವಾಡಗಳನ್ನು ಮಾಡಿ ಊರಿನ ಹಿತದೃಷ್ಟಿಯಿಂದ ಸಾಂಸ್ಕೃತಿಕ ನಾಯಕನಾಗಿ ತಿಪ್ಪೇಸ್ವಾಮಿ ನೆಲೆಯೂರಿದ್ದಾನೆ.

ಸಂಕಥನದ ಉದ್ದೇಶ

ವಸಾಹತುಶಾಹಿ ಆಡಳಿತ ಕಾಲದಲ್ಲಿ ರಚಿಸಲ್ಪಟ್ಟ ಸಂಸ್ಕೃತಿ ಚರಿತ್ರೆಯು ಸಂಸ್ಕೃತಿಯನ್ನು ರೂಪಿಸುವ ನಿಟ್ಟಿನಲ್ಲಿ ದುಡಿಯುವ ವರ್ಗಗಳ ಬಹುದೊಡ್ಡ ಗೈರು ಹಾಜರಿ ಕಂಡುಬರುತ್ತದೆ.

ಪಾಶ್ಚಾತ್ಯರೊಂದಿಗೆ ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿದ ಉನ್ನತ ವರ್ಗದ ಬುದ್ಧಿ ಜೀವಿಗಳು ಈ ರೀತಿ ಸಂಸ್ಕೃತಿ ಚರಿತ್ರೆಯನ್ನು ಕಟ್ಟಲು ಮುಖ್ಯ ಕಾರಣಕರ್ತರಾಗಿದ್ದಾರೆ. ಇವರ ಪ್ರಕಾರ ತಾವು ನಂಬಿದ ಶ್ರೇಷ್ಠ ಜೀವನಾದರ್ಶ ಹಾಗೂ ಮೌಲ್ಯಗಳೇ 'ಸಂಸ್ಕೃತಿ' ಎನಿಸಿಕೊಂಡವು. ಇವನ್ನು ಹೊರತುಪಡಿಸಿ ನೂರಾರು ಆಚರಣೆಗಳು, ಹಾಡುಗಳು, ನಂಬಿದ ದೈವಗಳು ಬಹುಸಂಖ್ಯಾತ ಜನರನ್ನು ಪ್ರಭಾವಿಸಿದೆ ಎನ್ನುವುದನ್ನು ಗಮನಿಸುವುದೇ ಇಲ್ಲ.

ವಚನ ಪರಂಪರೆಯನ್ನು ಅಧ್ಯಯನ ಮಾಡುವಾಗಲೂ ಸಹ ಉನ್ನತವರ್ಗದ ಬಸವಣ್ಣ, ಅಕ್ಕಮಹಾದೇವಿ, ಚನ್ನಬಸವಣ್ಣ, ನೀಲಾಂಬಿಕೆಯಂತಹವರು ಮುಖ್ಯವಾಗುತ್ತಾರೆಯೇ ಹೊರತು ದಲಿತ ಶರಣರು, ಕೆಳವರ್ಗದ ವಚನಕಾರ್ತಿಯರು ಮುಖ್ಯವಾಗಿ ಅಧ್ಯಯನಕ್ಕೆ ಒಳಪಟ್ಟಿಲ್ಲ. ೧೨ನೇ ಶತಮಾನದ ಶರಣ ಚಳುವಳಿಯಲ್ಲಿಯೇ ವಿಭಿನ್ನ ಧಾರೆಗಳಿವೆ. ಅಲ್ಲಮ, ಬಸವ, ಚೆನ್ನಬಸವಣ್ಣ, ದಲಿತರು, ಸ್ತ್ರೀವಚನಕಾರ್ತಿಯರು, ಹೀಗೆ ತಮಗೆ ತಾವೇ ವಿಶಿಷ್ಟ ಹಾದಿಗಳನ್ನು, ಆಲೋಚನಾ ಕ್ರಮಗಳನ್ನು ಚಳುವಳಿಯಲ್ಲಿದ್ದುಕೊಂಡೇ ರೂಪಿಸಿಕೊಂಡವರಾಗಿದ್ದಾರೆ. ಈ ವೈವಿಧ್ಯತೆ ೧೨ನೇ ಶತಮಾನದ ನಂತರವೂ ಶಿಷ್ಟ ಪರಿಶಿಷ್ಟ ಲಿಖಿತ ಮೌಖಿಕ ಧಾರೆಗಳಾಗಿ ಅಭಿವ್ಯಕ್ತಗೊಂಡಿವೆ. ಇವುಗಳಲ್ಲಿ ಲಿಖಿತ ಧಾರೆಗಳು ಕುರಿತು ಫ.ಗು.ಹಳಕಟ್ಟಿ, ಶಿ.ಶಿ.ಬಸವನಾಳ, ಮಧುರಚೆನ್ನ, ಉತ್ತಂಗಿಚೆನ್ನಪ್ಪನಂತಹ ವಿದ್ವಾಂಸರು, ಗದುಗಿನ ತೋಂಟದಾರ್ಯಮಠ, ಚಿತ್ರದುರ್ಗದ ಮುರುಘರಾಜೇಂದ್ರ ಮಠ, ಸುತ್ತೂರು ಶಿವರಾತ್ರೀಶ್ವರ ಮಠಗಳು ಆಸಕ್ತಿವಹಿಸಿ ಸಂಗ್ರಹ ವ್ಯಾಖ್ಯಾನ ಸಂಪಾದನೆಗಳನ್ನು ಮಾಡಿದರು. ಆದರೆ ಲಿಖಿತ ಧಾರೆಗಳಾದ ಮಂಟೇಸ್ವಾಮಿ ಪರಂಪರೆ, ಕೊಡೇಕಲ್ ಪರಂಪರೆ, ಮಲೆ ಮಾದೇಶ್ವರ ಪರಂಪರೆ ಇತ್ಯಾದಿಗಳ ಕುರಿತು ಗಂಭೀರವಾದ ಅಧ್ಯಯನಗಳು ಈ ಮೊದಲು ನಡೆದಿರಲಿಲ್ಲ. ಇತ್ತೀಚೆಗೆ ವಿವಿಧ ವಿದ್ವಾಂಸರು, ವಿಶ್ವವಿದ್ಯಾಲಯಗಳು ಇಂತಹ ಮೌಖಿಕ ಪಂಥ ಪರಂಪರೆಗಳ ಅಧ್ಯಯನ, ಸಂಗ್ರಹ, ದಾಖಲೀಕರಣಗಳಲ್ಲಿ ಆಸಕ್ತಿ ವಹಿಸುತ್ತಿದ್ದಾರೆ.

ಈ ಎಲ್ಲಾ ಅಧ್ಯಯನಗಳು ಕರ್ನಾಟಕದ ಉತ್ತರ ಮತ್ತು ದಕ್ಷಿಣ ಭಾಗಗಳಿಗೆ ಸಂಬಂಧಿಸಿದ್ದಾಗಿವೆ. ಆದರೆ ಮಧ್ಯಕರ್ನಾಟಕ ಭಾಗದ ಕುರಿತು ಇದುವರೆಗೂ ಗಂಭೀರ ಅಧ್ಯಯನಗಳು ನಡೆದಿಲ್ಲ. ಮಧ್ಯಕರ್ನಾಟಕ ಭಾಗದ ಜನಸಮುದಾಯಗಳ ಆರಾಧ್ಯ ದೈವಗಳ ಅಧ್ಯಯನವು ನಡೆಯದೆ ಹಾಗೆಯೇ ಉಳಿದಿದೆ. ಈ ಪ್ರಬಂಧದ ಮೂಲಕ ಆ ಕೊರತೆಯನ್ನು ತುಂಬಲು ಪ್ರಯತ್ನಿಸಲಾಗಿದೆ. ಪಂಚಗಣಾಧೀಶ್ವರರು ಮಧ್ಯಕರ್ನಾಟಕ ಭಾಗದಲ್ಲಿ ಎಲ್ಲ ಸಮುದಾಯಗಳಿಂದ ಆರಾಧನೆಗೊಳ್ಳುವ ಸಂತರಾಗಿದ್ದಾರೆ. ಅದರಲ್ಲೂ

ಈ ಪರಿಸರದಲ್ಲಿ ಬೇಡರು ಮತ್ತು ಕುರುಬರು ಹೆಚ್ಚಾಗಿದ್ದಾರೆ. ಮಧ್ಯಕಾಲೀನ ಸಂದರ್ಭದಲ್ಲಿ ಈ ಸಮುದಾಯಗಳು ಬೇಟೆ ಸಂಸ್ಕೃತಿ ಮತ್ತು ಪಶುಪಾಲನ ಸಂಸ್ಕೃತಿಯಿಂದ ಕೃಷಿ ಸಂಸ್ಕೃತಿಗೆ ಪರಿವರ್ತನೆ ಹೊಂದಿರುವಂತಹವು. ಹೀಗೆ ಪರಿವರ್ತನೆ ಹೊಂದುವ ನಿರ್ಣಾಯಕ ಘಟ್ಟದಲ್ಲಿ ಪಂಚಗಣಾಧೀಶ್ವರರು ವಹಿಸಿದ ಪಾತ್ರ ಎಂತಹುದು? ಈ ಬಗ್ಗೆ ಸಂತರ ಜೀವನ ಮತ್ತು ಪವಾಡಗಳ ಹಿನ್ನೆಲೆಯಲ್ಲಿ ಮೊದಲಬಾರಿಗೆ ಅಧ್ಯಯನಕ್ಕೆ ಕೈಗೊಳ್ಳಲಾಗಿದೆ. ಸಂತರ ಜೀವನದ ಸುತ್ತಲು ಇರುವ ಪವಾಡಗಳಿಗೆ ಹಿನ್ನೆಲೆಯಾಗಿ ಕೆಲಸ ಮಾಡಿರುವ ಈ ಪರಿಸರದ ಸಾಮಾಜಿಕ, ರಾಜಕೀಯ, ಆರ್ಥಿಕ ಹಿನ್ನೆಲೆಯನ್ನು ತಿಳಿಯಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಕ್ಷೇತ್ರಕಾರ್ಯದ ಮೂಲಕ ಮೊದಲಬಾರಿಗೆ ಅಧ್ಯಯನಮಾಡಲು ಪ್ರಯತ್ನಿಸಲಾಗಿದೆ.

ಸಂಗ್ರಹವಾಗಿರುವ ಮತ್ತು ಲಿಖಿತ ರೂಪದಲ್ಲಿರುವ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಪಂಚಗಣಾಧೀಶ್ವರರ ಆಚರಣೆಗಳ ಹಿಂದಿರುವ ತಾತ್ವಿಕತೆಯನ್ನು ಹಾಗೂ ಲಿಖಿತ ಮೌಖಿಕ ಸಾಹಿತ್ಯ ಪ್ರಕಾರಗಳನ್ನು ವಿಶ್ಲೇಷಣೆಗೊಳಪಡಿಸಲಾಗಿದೆ. ಒಟ್ಟಾರೆ ದುಡಿಯುವ ವರ್ಗಗಳಿಂದಲೇ ಹೆಚ್ಚಾಗಿ ಆರಾಧನೆಗೊಳ್ಳುತ್ತಿರುವ ಪಂಚಗಣಾಧೀಶ್ವರರಲ್ಲಿ ಒಬ್ಬರಾದ ನಾಯಕನಹಟ್ಟಿ ತಿಪ್ಪೇಸ್ವಾಮಿ ಕುರಿತ ಸಾಂಸ್ಕೃತಿಕ ಅಧ್ಯಯನವನ್ನು ಈ ಪ್ರಬಂಧದಲ್ಲಿ ಕೈಗೊಳ್ಳಲಾಗಿದೆ. ತಿಪ್ಪೇಸ್ವಾಮಿ ಆಚರಣೆ, ನಂಬಿಕೆ, ಸಂಪ್ರದಾಯ, ಪವಾಡ ವಿಧಿ, ನಿಷೇಧ, ಹರಕೆ, ತಿಪ್ಪೇಸ್ವಾಮಿಯ ಸಾಹಿತ್ಯ, ಕಥೆ, ಕಾವ್ಯಗಳು, ತಿಪ್ಪೇಸ್ವಾಮಿಯ ಜೀವನವನ್ನು ಕುರಿತು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ತಿಪ್ಪೇಸ್ವಾಮಿಯ ಪರಿಚಯ ಮಾಡಿಕೊಡುವ ಸಣ್ಣ ಕೃತಿಗಳು ಪ್ರಕಟವಾಗಿವೆ. ಸಮಗ್ರ ಹಾಗೂ ಸೂಕ್ಷ್ಮ ನೆಲೆಯಲ್ಲಿ ಅಧ್ಯಯನಗಳು ನಡೆದಿರುವುದು ಕಡಿಮೆ ಎಂದು ಹೇಳಬಹುದು. ಹೆಚ್ಚಿನ ಸಂಶೋಧನೆ ಕೈಗೊಂಡಲ್ಲಿ ಇನ್ನೂ ಹೆಚ್ಚಿನ ಮಾಹಿತಿಗಳು ಶಾಸನಗಳು ದೊರಕುವ ಸಾಧ್ಯತೆಗಳಿವೆ. ಜಿಲ್ಲೆಯ ಅತ್ಯಂತ ಪ್ರಮುಖವಾದ ಧಾರ್ಮಿಕ ತಾಣಗಳಲ್ಲಿ ನಾಯಕನಹಟ್ಟಿಯು ಒಂದಾಗಿದೆ. ಇಲ್ಲಿಯ ಪರಿಸರವನ್ನು ಅಧ್ಯಯನಕ್ಕೆ ಒಳಪಡಿಸುವ ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಅಧ್ಯಯನಗಳಿಗೆ ಒಳಪಡಿಸುವ ಮೂಲಕ ಇಲ್ಲಿನ ಜನಪದ ಸಂಸ್ಕೃತಿಯನ್ನು ಕಟ್ಟಿಕೊಡುವ ಹಿನ್ನೆಲೆಯಲ್ಲಿ ಮತ್ತು ಧಾರ್ಮಿಕವಾಗಿ ಸಹ ಇಲ್ಲಿಯ ಸಂಸ್ಕೃತಿಯನ್ನು ಕೋಮು ಸೌಹಾರ್ದಯುತ ನೆಲೆಯಲ್ಲಿ ಅಧ್ಯಯನ ಮಾಡುವ ಮುಖ್ಯ ಉದ್ದೇಶವನ್ನಿಟ್ಟುಕೊಂಡು ಪ್ರಸ್ತುತ ಕಾರ್ಯವನ್ನು ಕೈಗೊಳ್ಳಲಾಗಿದೆ.

ವ್ಯಾಪ್ತಿ

ಒಂದು ನಿರ್ದಿಷ್ಟ ಹಾಗೂ ಉದ್ದೇಶ ಪೂರಿತ ಸಂಶೋಧನೆ ಯಶಸ್ವಿಯಾಗಲು ವ್ಯಾಪ್ತಿಯು ತುಂಬಾ ಸಹಕಾರಿಯಾಗಿದೆ. ನಾಯಕನಹಟ್ಟಿ ತಿಪ್ಪೇಸ್ವಾಮಿ: ಸಂಕಥನವನ್ನು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದ್ದು ಅದರ ವ್ಯಾಪ್ತಿಯನ್ನು ಭೌಗೋಳಿಕ ಮತ್ತು ಕಾಲಾವಧಿಯ ದೃಷ್ಟಿಯಿಂದ ನಿರ್ದಿಷ್ಟಪಡಿಸಲಾಗಿದೆ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿಯಲ್ಲಿ ಕೆಲವು ಭಾಗಗಳನ್ನು ಅಧ್ಯಯನ ವ್ಯಾಪ್ತಿ ಒಳಗೊಂಡಿದೆ. ೧೨ನೇ ಶತಮಾನದ ಕಲ್ಯಾಣದ ಕ್ರಾಂತಿಯಿಂದ ಉಂಟಾದ ವೀರಶೈವ ಧರ್ಮವನ್ನು ಎತ್ತಿಹಿಡಿಯುವ

ಸಲುವಾಗಿ ಪಂಚಗಣಾಧೀಶ್ವರರ ಆಗಮನವಾಯಿತು. ಅದರಲ್ಲಿ ಪ್ರಮುಖರಾದವರು ತಿಪ್ಪೇಸ್ವಾಮಿ. ಅವರ ಕುರಿತು ಅಧ್ಯಯನ ಮಾಡಲಾಗಿದೆ.

ಸಾಂಸ್ಕೃತಿಕ ಸಂಬಂಧಗಳ ಮಹತ್ವ ಮತ್ತು ಅಲ್ಲಿನ ದೈವವನ್ನು ಕುರಿತ ಪರಿಚಯ, ದೇವಸ್ಥಾನ, ಪಂಚಗಣಾಧೀಶ್ವರರು, ಮಧ್ಯಕಾಲೀನ ಸಂದರ್ಭದ ಹಿನ್ನೆಲೆ, ತಿಪ್ಪೇಸ್ವಾಮಿಯ ಪವಾಡಗಳು, ಆಚರಣೆಗಳು, ವಾರ್ಷಿಕ ಆಚರಣೆಗಳು, ಜೀವನಾವರ್ತನದ ಆಚರಣೆಗಳು ಹುಟ್ಟು, ನಾಮಕರಣ, ಸಾವು, ತಿಪ್ಪೇಸ್ವಾಮಿ ಬಗೆಗಿನ ನಂಬಿಕೆ, ನಿಷೇಧ, ಹರಕೆಗಳು, ತಿಪ್ಪೇಸ್ವಾಮಿ ಮತ್ತು ಇತರ ದೈವಗಳ ಸಂಬಂಧ ತಿಪ್ಪೇಸ್ವಾಮಿ ಕುರಿತ ಸಾಹಿತ್ಯ, ಕಥೆ, ದೈವ ಪ್ರಸರಣ ಹಾಗೂ ಭಕ್ತ ಪರಂಪರೆ ಇವುಗಳು ಅಧ್ಯಯನ ವ್ಯಾಪ್ತಿಯಲ್ಲಿ ಬರುತ್ತವೆ.

ನಾಯಕನಹಟ್ಟಿ ತಿಪ್ಪೇಸ್ವಾಮಿ ಸಂಕಥನವು ಆ ಹೊತ್ತಿನ ಸಮಕಾಲೀನ ಪರಂಪರೆಗಳು ೧೨ನೇ ಶತಮಾನದ ಶರಣ ಚಳವಳಿ ಹಾಗೂ ಅದಕ್ಕೂ ಹಿಂದಿನ ಶೈವ ಪಂಥಗಳವರೆಗೆ ವ್ಯಾಪಿಸಿಕೊಂಡಿದೆ. ಸಧ್ಯದ ಆಧುನಿಕ ಸಮಾಜವು ಈ ಪಂಥದೊಂದಿಗೆ ನಡೆಸುತ್ತಿರುವ ಅನುಸಂಧಾನವನ್ನು ಇಲ್ಲಿ ಗಮನಿಸಲಾಗಿದೆ.

ವಿಧಾನ

ಪ್ರಸ್ತುತ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳನ್ನು ಗಮನದಲ್ಲಿಟ್ಟುಕೊಂಡು ನಾಯಕನಹಟ್ಟಿ ತಿಪ್ಪೇಸ್ವಾಮಿ: ಸಂಕಥನ ವಿಷಯಕ್ಕೆ ಸಂಬಂಧಿಸಿದಂತೆ ನಾಯಕನಹಟ್ಟಿ ತಿಪ್ಪೇಸ್ವಾಮಿಯನ್ನು ಹೆಚ್ಚಾಗಿ ಆರಾಧಿಸುವವರು ದುಡಿಯುವವರು ಅಥವಾ ದುಡಿಯುವ ವರ್ಗಗಳಾಗಿದ್ದು ಇವರು ತಮ್ಮ ಧಾರ್ಮಿಕ ಶ್ರದ್ಧೆಯನ್ನು ಜಾತ್ರೆ, ಉತ್ಸವ, ಆಚರಣೆ, ನಂಬಿಕೆ, ಹಾಡು ಮುಂತಾದ ಮೌಖಿಕ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ. ಹೀಗಾಗಿ ಪ್ರಸ್ತುತ ಪ್ರಬಂಧವು ಮುಖ್ಯವಾಗಿ ಮೌಖಿಕ ಆಕರಗಳನ್ನು ಆಧರಿಸಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಪೂರಕವಾಗಿ ಲಿಖಿತ ಆಕರಗಳನ್ನು ಹಾಗೂ ಈವರೆಗಿನ ಅಧ್ಯಯನಗಳನ್ನು ಬಳಸಿಕೊಳ್ಳಲಾಗಿದೆ. ಸ್ಥಳೀಯರಿಂದ, ವಕ್ತೃಗಳಿಂದ ಕ್ಷೇತ್ರಕಾರ್ಯದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅಧ್ಯಯನ ಕೈಗೊಳ್ಳುವಾಗ ಸಮುದಾಯಗಳು ಹಾಗೂ ಅವು ಕಟ್ಟಿಕೊಡುವ ಬಹುಮುಖಿ ಆಯಾಮಗಳನ್ನು ಅಧ್ಯಯನದಲ್ಲಿ ಅಳವಡಿಸಿಕೊಂಡಿದ್ದೇನೆ.

ಆಕರ ಸಾಮಾಗ್ರಿ ಮತ್ತು ಈವರೆಗಿನ ಅಧ್ಯಯನಗಳು

ತಿಪ್ಪೇಸ್ವಾಮಿ ಕುರಿತು ಸಂಶೋಧನಾತ್ಮಕ ಅಧ್ಯಯನಗಳು ಹೆಚ್ಚಾಗಿ ನಡೆದಿಲ್ಲ. ಆದರೆ ಕ್ಷೇತ್ರಗಳಲ್ಲಿ ಪುರಾಣ ಕಥನಗಳು, ಪವಾಡಗಳು, ಕ್ಷೇತ್ರ ಮಹಿಮೆಯನ್ನೊಳಗೊಂಡ ಗ್ರಂಥಗಳು, ಕಾವ್ಯಗಳು, ನಮೂನೆಗಳು ರಚಿತವಾಗಿವೆ. ಅವುಗಳ ಸಮಿಕ್ಷೆ ಈ ಕೆಳಗಿನಂತಿವೆ.

ನಾಯಕನಹಟ್ಟಿ ತಿಪ್ಪೇಸ್ವಾಮಿಗೆ ಸಂಬಂಧಿಸಿದಂತೆ ಬಸಪ್ಪ ಎಂ. (೧೯೫೮) “ಅವತಾರ ಪುರುಷ ಶ್ರೀ ತಿಪ್ಪೇರುದ್ರಸ್ವಾಮಿಯವರ ಮಹಾತ್ಮೆ” ಎನ್ನುವ ಪುಟ್ಟ ಗದ್ಯ ಕೃತಿ ಮೊಟ್ಟಮೊದಲ ಬಾರಿಗೆ ರಚನೆಯಾಗಿದೆ.

ಈ ಕೃತಿಕಾರರು ವದನಕಲ್ಲಿನವರಾಗಿದ್ದರಿಂದ ಪಾವಗಡ ತಾ|| ಆ ಸ್ಥಳಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಣೆಯನ್ನು ನೀಡುತ್ತಾರೆ. ಬಸವರಾಜ ಮಹದೇವಪುರ (೧೯೮೩) ಅವರ "ಶ್ರೀ ಗುರು ತಿಪ್ಪೇರುದ್ರಸ್ವಾಮಿ ಮಹಾತ್ಮೆ" ಎನ್ನುವ ಕಥನಕಾವ್ಯ ಕೃತಿಯು ತಿಪ್ಪೇಸ್ವಾಮಿಯ ಪವಾಡಗಳನ್ನು ಮೊದಲಬಾರಿಗೆ ಕಾವ್ಯರೂಪದಲ್ಲಿ ವಿವರಿಸಿದೆ. "ಶ್ರೀ ಸಿದ್ಧ ವೀರಕವಿ" ಸೊಕ್ಕೆ (೧೯೮೪) ರಚಿಸಿದ (ಶ್ರೀ ಗುರು ತಿಪ್ಪೇರುದ್ರೇಶ್ವರ) ಬೃಹತ್ ಕೃತಿಯಾಗಿದೆ. ಮೇಲಿನ ಬರಹಗಳಿಂದ ಭಿನ್ನವಾಗಿರುವ ಇದು ಪಂಚಗಣಾಧೀಶ್ವರರನ್ನು ಹಿಮಗಿರಿಯಿಂದ ಬಂದವರು ಎಂದು ಗುರುತಿಸುತ್ತದೆ. ಒಟ್ಟು ೨೧ ಸಂಧಿಯಿಂದ ಕೂಡಿರುವ ಕೃತಿಯು ೧೬-೧೭ನೇ ಶತಮಾನದ ರಾಜಕೀಯ ಸ್ಥಿತಿಗತಿಯ ಬಗ್ಗೆ ಸಂಕ್ಷಿಪ್ತ ವಿವರವನ್ನು ನೀಡುತ್ತದೆ. ಪ್ರೊ.ಡಿ.ಟಿ.ರಂಗಸ್ವಾಮಿಯವರು ೧೯೯೧ ರಚಿಸಿದ "ಶ್ರೀ ಗುರು ತಿಪ್ಪೇರುದ್ರಸ್ವಾಮಿ ಮಹಿಮಾಮೃತ" ಕೃತಿಯು ತಿಪ್ಪೇಸ್ವಾಮಿ ಬಗೆಗೆ ಪ್ರಮುಖ ಚರ್ಚೆಗಳನ್ನು ಎತ್ತಿಕೊಂಡರು ನಿಡುಗಲ್ಲು ಸಂಸ್ಥಾನದ ಬಗೆಗೆ ಗೊಂದಲವುಂಟಾಗುವ ಮಾಹಿತಿಯನ್ನು ನೀಡುತ್ತದೆ. ಇನ್ನು ನಾಯಕನಹಟ್ಟಿ ದೇವಾಲಯದ ಕಾರ್ಯನಿರ್ವಾಹಣಾ ಅಧಿಕಾರಿಯಾಗಿ ಸೇವೆ ಸಲ್ಲಿಸಿದ ಚಂದ್ರಶೇಖರ ವಿ.ದಾವಣಗೇರಿ (೨೦೦೧) ಅವರು ರಚಿಸಿದ "ಕಾಯಕಯೋಗಿ ಶ್ರೀಗುರು ತಿಪ್ಪೇರುದ್ರಸ್ವಾಮಿ (ಜೀವನ ಚರಿತ್ರೆ ಮತ್ತು ಕ್ಷೇತ್ರ ದರ್ಶನ) ಎನ್ನುವ ಕೃತಿಯು ತಿಪ್ಪೇಸ್ವಾಮಿಗೆ ಸಂಬಂಧಿಸಿದಂತೆ ಐತಿಹಾಸಿಕ ದಾಖಲೆಗಳ ಸಮೇತ ವಿವರಿಸಿದೆ. ದೇವಾಲಯಗಳ ವಾಸ್ತುಶಿಲ್ಪ, ಆಚರಣೆಗಳನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿದೆ. ಕೊಟ್ರಪ್ಪಶಾಸ್ತ್ರಿ ಎಂ.ಎ.ಎನ್. ಅವರ ನಾಯಕನಹಟ್ಟಿ "ಶ್ರೀ ಗುರು ತಿಪ್ಪೇರುದ್ರಸ್ವಾಮಿ ಚರಿತ್ರೆ" ಎನ್ನುವ ಪುಟ್ಟ ಕೃತಿಗಳು ನಮಗೆ ದೊರೆಯುತ್ತವೆ.

ಈ ಮೇಲಿನ ಎಲ್ಲ ಕೃತಿಗಳನ್ನು ಹೊರತುಪಡಿಸಿ ಈ ಬಗೆಗೆ ನಾಯಕನಹಟ್ಟಿ ಪರಿಸರದ ಬಗೆಗೆ ಸಂಶೋಧನಾತ್ಮಕ ಅಧ್ಯಯನ ಮಾಡಿದ ಕೃತಿಗಳು ಹಾಗೂ ವಿಶೇಷ ಒಳನೋಟಗಳನ್ನು ಕೊಡುವ ಲೇಖನಗಳಿವೆ. ಅವರಲ್ಲಿ ಖ್ಯಾತ ಜಾನಪದ ವಿದ್ವಾಂಸರಾದ ಅಂಬಳಿಕೆ ಹಿರಿಯಣ್ಣನವರು (೧೯೭೮) ಸಂಪಾದಿಸಿದ "ಕಾಡುಗೊಲ್ಲರ ಜನಪದ ಗೀತೆಗಳು" ಎನ್ನುವ ಕೃತಿಯು ಮುಖ್ಯವಾದುದು. ಈ ಸಂತನ ಬಗೆಗೆ ಕಾಡುಗೊಲ್ಲರು ಹಾಡಿರುವ ಕಾವ್ಯವು ತಿಪ್ಪೇಸ್ವಾಮಿಯ ಒಟ್ಟು ಜೀವನ, ಪವಾಡಗಳನ್ನು ಕುರಿತು ವಿಶಿಷ್ಟ ಮಾಹಿತಿಗಳನ್ನು ನೀಡುತ್ತವೆ. ಆಚರಣೆಗೆ ಹಿನ್ನೆಲೆಯಾಗಿರುವ ಘಟನೆಗಳನ್ನು ವಿವರಿಸುತ್ತದೆ. ತಿಪ್ಪೇಸ್ವಾಮಿ ಕುರಿತ ಅಧ್ಯಯನದಲ್ಲಿ ಇದೊಂದು ಪ್ರಮುಖ ಆಕರವನ್ನಾಗಿ ಬಳಸಿಕೊಳ್ಳಲಾಗಿದೆ.

ಕೃಷ್ಣಮೂರ್ತಿ ಹನೂರು (೧೯೯೩) ಅವರು "ಮ್ಯಾಸಬೇಡರ ಸಂಸ್ಕೃತಿ" ಎನ್ನುವ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ ಮ್ಯಾಸಬೇಡರ ರಾಜಕೀಯ, ಆರ್ಥಿಕ, ಧಾರ್ಮಿಕ ವಿಷಯಗಳನ್ನು ಸಮಗ್ರವಾಗಿ ಕ್ಷೇತ್ರಕಾರ್ಯಮಾಡಿ ವಿವರಿಸಿದ್ದಾರೆ. ಅನುಬಂಧದಲ್ಲಿ ಸಂಬಂಧಿಸಿದ ಜನಪದಗೀತೆಯನ್ನು ಸಂಗ್ರಹಿಸಿ ಕೊಟ್ಟಿದ್ದಾರೆ.

ಮೀರಾಸಾಬಿಹಳ್ಳಿ ಶಿವಣ್ಣನವರ "ಗೊಲ್ಲ ಕಡಗ" (೧೯೯೯) "ದುರುಗ ಜಾನಪದ" ಎನ್ನುವ ಕೃತಿಗಳಲ್ಲಿ ನಾಯಕನಹಟ್ಟಿ ಪರಿಸರದ ಬಗೆಗೆ ಲೇಖನಗಳನ್ನು ಬರೆದಿದ್ದಾರೆ. "ಜಾನಪದ ನೆಲೆಯಲ್ಲಿ

ಹಟ್ಟಿಯ ಜಾತ್ರೆ" ಎನ್ನುವ ಲೇಖನ ಆಚರಣೆಗಳ ಬಗೆಗೆ ಮಾಹಿತಿಗಳನ್ನು ಒದಗಿಸುತ್ತದೆ. ಡಾ.ವಿರೂಪಾಕ್ಷಿ ಪೂಜಾರಹಳ್ಳಿಯವರು ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ (೨೦೦೨) "ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು" ಎನ್ನುವ ಕೃತಿ ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು (೨೦೦೨) ಎನ್ನುವ ಕೃತಿಗಳು ಮತ್ತು ಪರಿಸರದ ಆಚರಣೆ, ಹಾಡು, ಕಲೆ, ನಂಬಿಕೆ ಕುರಿತು ವಿವರಿಸಿದೆ.

ಇವರಲ್ಲದೆ ಪ್ರೊ.ಲಕ್ಷ್ಮಣ್ ತೆಲಗಾವಿ (ಜನಪದ ಸಾಹಿತ್ಯ ಚಾರಿತ್ರಿಕ ವಿವೇಚನೆ) ಬಿ.ಪಿ.ವಿರೇಂದ್ರಕುಮಾರ್ (ಬುಡಕಟ್ಟು ಸಂಸ್ಕೃತಿಯ ಹಿನ್ನೆಲೆಯಲ್ಲಿ ನಾ. ತಿಪ್ಪೇಸ್ವಾಮಿ ಜಾತ್ರೆ, ಎಂ.ವಿ.ಚಿತ್ರಲಿಂಗಯ್ಯ, ನಾಯಕನಹಟ್ಟಿ ಬಖೈರು) ತಮ್ಮ ಬರಹಗಳ ಮೂಲಕ ನಾಯಕನಹಟ್ಟಿ ತಿಪ್ಪೇಸ್ವಾಮಿ ಪರಿಸರ ಆಚಾರ, ಸಂಪ್ರದಾಯಗಳ ಬಗ್ಗೆ ಮಾಹಿತಿ ಒದಗಿಸಿದ್ದಾರೆ. ಮೇಲಿನ ಎಲ್ಲ ಬರವಣಿಗೆಗಳು ಸಂತರನ್ನು ಕುರಿತು ಇಲ್ಲವೆ ಆ ಪ್ರದೇಶದ ಪರಿಸರವನ್ನು ಕುರಿತು ಮಾಹಿತಿಯನ್ನು ಒದಗಿಸುತ್ತವೆ.

ಸ್ವರೂಪ

ನಾಯಕನಹಟ್ಟಿ ತಿಪ್ಪೇಸ್ವಾಮಿ ಹಿನ್ನೆಲೆಯನ್ನು ಆಧಾರವಾಗಿಟ್ಟುಕೊಂಡಿರುವ ಪ್ರಸ್ತುತ ಸಂಕಥನದ ವಿಷಯವು ಕ್ಷೇತ್ರಕಾರ್ಯ ಆಧಾರಿತವಾಗಿದೆ. ನಾಯಕನಹಟ್ಟಿ ಪ್ರದೇಶದ ಸ್ಥಳಕ್ಕೆ ಬೇಟಿ ನೀಡಿ ಅಲ್ಲಿನ ವಕ್ತೃಗಳಿಂದ ಮಾಹಿತಿಯನ್ನು ಪರಿಶೀಲಿಸಿ ದಾಖಲಿಸಿಕೊಳ್ಳಲಾಗಿದೆ. ಒಟ್ಟು ಈ ಪ್ರಬಂಧವು ಎಂಟು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೇ ಅಧ್ಯಾಯದಲ್ಲಿ ಅಧ್ಯಯನ ಉದ್ದೇಶ, ವ್ಯಾಪ್ತಿ, ವಿಧಾನ ಕುರಿತು ವಿವರಿಸಲಾಗಿದೆ. ೨ನೇ ಅಧ್ಯಾಯದಲ್ಲಿ ನಾಯಕನಹಟ್ಟಿ ತಿಪ್ಪೇಸ್ವಾಮಿ ಪರಿಚಯವನ್ನು ಕುರಿತು ಸಂಕ್ಷಿಪ್ತ ವಿವರ ನೀಡಲಾಗಿದೆ. ೩ನೇ ಅಧ್ಯಾಯದಲ್ಲಿ ನಾಯಕನಹಟ್ಟಿ ತಿಪ್ಪೇಸ್ವಾಮಿ ಮಠ ಕುರಿತು ವಿವರಿಸಲಾಗಿದೆ. ೪ನೇ ಅಧ್ಯಾಯದಲ್ಲಿ ತಿಪ್ಪೇಸ್ವಾಮಿ ಕುರಿತ ನಂಬಿಕೆ ಹರಕೆ ಮತ್ತು ಪವಾಡಗಳನ್ನು ಕುರಿತು ಹೇಳಲಾಗಿದೆ. ೫ನೇ ಅಧ್ಯಾಯದಲ್ಲಿ ತಿಪ್ಪೇಸ್ವಾಮಿ ಆಚರಣೆಗಳನ್ನು ಕುರಿತು ವಿವರಿಸಲಾಗಿದೆ. ೬ನೇ ಅಧ್ಯಾಯದಲ್ಲಿ ತಿಪ್ಪೇಸ್ವಾಮಿ ಕುರಿತ ಸಾಹಿತ್ಯ, ಕಥೆ, ಕಾವ್ಯಗಳನ್ನು ವಿವರಿಸಲಾಗಿದೆ. ಅಧ್ಯಾಯ ಏಳರಲ್ಲಿ ಆಧುನಿಕ ಪರಿಸರದಲ್ಲಿ ತಿಪ್ಪೇಸ್ವಾಮಿ ಹಾಗೂ ಕೊನೆಯ ಅಧ್ಯಾಯದಲ್ಲಿ ಉಪಸಂಹಾರ ಕುರಿತು ವಿವರಿಸಲಾಗಿದೆ.

ಅಧ್ಯಾಯ - ೨

ನಾಯಕನಹಟ್ಟಿ ತಿಪ್ಪೇಸ್ವಾಮಿ ಪರಿಚಯ

ನಾಯಕನಹಟ್ಟಿ ತಿಪ್ಪೇಸ್ವಾಮಿ ಪರಿಚಯ

ತಿಪ್ಪೇಸ್ವಾಮಿಯವರ ಹುಟ್ಟು ಬಹಳ ವಿಸ್ಮಯವಾಗಿರುವಂತಹದ್ದು. ಇದನ್ನು ಎರಡು ರೀತಿಯಲ್ಲಿ ಉಲ್ಲೇಖ ಮಾಡಬಹುದು.[೧] ಒಂದು ಜನಪದರು, ಜನ ಮಾನಸದಲ್ಲಿ ಗುರುತಿಸುವಂತಹ ಕಥಾಪ್ರಸಂಗಗಳು. ಎರಡನೆಯದು ಇತ್ತೀಚೆಗೆ ಮಾಡಿರುವಂತಹ ಸಂಶೋಧನೆಗಳ ವಿಷಯಗಳು.[೨] ಮೌಖಿಕ ಪರಂಪರೆಯಲ್ಲಿ ಬರುವಂತಹ ಸಂಶೋಧನೆಯನ್ನು ಆಧರಿಸಿ ಹೇಳುವುದಾದರೆ ಶಿವನ ಸುತ್ತಯಿರುವ ಪಂಚಗಣಾಧಿಶ್ವರರಲ್ಲಿ ತಿಪ್ಪೇರುದ್ರ ಸ್ವಾಮಿಯವರು ಒಬ್ಬರು ಎಂಬುದನ್ನು ಆ ಹೊತ್ತಿನ ಮೌಖಿಕ ಪರಂಪರೆಯವರು ಗುರುತಿಸಿದ್ದಾರೆ. ಶಿವನ ಕಾಯಕ ಕಲ್ಪನೆ ಏನಿದೆಯೋ, ಅಂತಹ ಕಾಯಕ ಸಂಸ್ಕೃತಿಗೆ ಒತ್ತು ಕೊಟ್ಟಿದ್ದರು. ಜನರ ಕಲ್ಯಾಣವನ್ನು ಬಯಸಿದ್ದರು. ಅವರ ಹತ್ತಿರದ ಆಪ್ತರಲ್ಲಿ ತಿಪ್ಪೇಸ್ವಾಮಿಯವರು ಒಬ್ಬರು. ಇವರು ಬಂದಂತಹ ಸಮಯ ಬಹಳ ಹಳೆಯದು ಮತ್ತು ಪ್ರಸಿದ್ಧವಾದದ್ದು.

ತಿಪ್ಪೇಸ್ವಾಮಿ ಬಂದಂತಹ ಕಾಲ ಪ್ರಮುಖವಾದುದು. ಏಕೆಂದರೆ ವಚನಕಾರರ ನಂತರದ ಕಾಲಘಟ್ಟ ಇವರದು. ಬಸವಾದಿ ಶರಣರು ಏನು ಕಾಯಕ ಸಂಸ್ಕೃತಿಯನ್ನು ನಮ್ಮ ನಾಡಿನಲ್ಲಿ ಬಿಟ್ಟು ಹೋಗಿದ್ದರೋ ಆ ಪರಂಪರೆಯನ್ನು ಮುಂದುವರಿಸಿದರು. ಮೂಢನಂಬಿಕೆಯ, ಜಾತಿಪದ್ಧತಿಯ ವಿರುದ್ಧ ಹೋರಾಡಿ ಸಮಾನತೆಯ ಆಧಾರದ ಮೇಲೆ ಸಮಾಜವನ್ನು ಕಟ್ಟಲು ಹೋರಾಟ ಮಾಡಿದವರು. ಆ ಸಮಯದ ನಂತರದ ಕಾಲದಲ್ಲಿ ತಿಪ್ಪೇರುದ್ರಸ್ವಾಮಿಯವರ ಹೆಸರು ಬಹಳ ವಿಸ್ಮಯವಾದುದು. ಅದಕ್ಕೆ ಒಂದು ಸಣ್ಣ ಕಥೆಯಿದೆ: ಕೆಂಪಾವದೂತರು ಅಂತ ಹೇಳಿ ಒಬ್ಬ ಅವದೂತರಿದ್ದರು. ಅವರು ತಿಪ್ಪೇಸ್ವಾಮಿಗಳಿಗೆ ಬಹಳ ಆಪ್ತರು. ಅವರು ವೈಭವಯುತವಾಗಿ ಪಲ್ಲಕ್ಕಿಯ ಮೆರವಣಿಗೆ ಕಂಡು ತಿಪ್ಪೇಸ್ವಾಮಿಗಳಿಗೆ ತುಂಬಾ ಆಶ್ಚರ್ಯವಾಗುತ್ತದೆ. ಅದನ್ನು ಕಂಡು ತಿಪ್ಪೇಸ್ವಾಮಿಗಳು ತಿಪ್ಪೆಯ ಮೇಲೆ ನಿಂತು ಕುಣಿದಾಡುತ್ತಾರೆ. ಜನರಿಗೆಲ್ಲ ಆಶ್ಚರ್ಯವಾಗುತ್ತದೆ. ಕೆಂಪಾವಧೂತರಿಗೂ ಆಶ್ಚರ್ಯವಾಗುತ್ತದೆ. ಕೆಂಪಾವಧೂತರು ಬಂದು ಕೇಳುತ್ತಾರೆ. ವೈಭವಯುತವಾದ ಮೆರವಣಿಗೆ ಮಾಡಿಸಿಕೊಳ್ಳುತ್ತಿದ್ದೀನಿ ನೀನು ಈ ರೀತಿ ಕುಣಿದಾಡುತ್ತಿದ್ದೀಯ ಎಂದರಂತೆ. ಆಗ ಸ್ವಾಮಿಗಳು ಮೆರವಣಿಗೆಯಲ್ಲ ದೊಡ್ಡವರಿಗೆ ಸ್ವಾಮಿ ನಮಗಲ್ಲ ಎಂದರಂತೆ. ಕೆಂಪಾವಧೂತರಿಗೆ ಆಶ್ಚರ್ಯವಾಗುತ್ತದೆ. ಸ್ವಾಮಿಗಳ ನಿಜವಾದ ಉದ್ದೇಶವನ್ನು ಮರೆತು ಮೆರವಣಿಗೆ ಮಾಡಿಸಿಕೊಳ್ಳುತ್ತಿದ್ದೀರಾ ಎಂಬುದನ್ನು ಮನದಟ್ಟು ಮಾಡಿಸಿದರು. ನೀವು ನಿಜವಾಗಿ ನನ್ನ ಕಣ್ಣನ್ನು

ತೆರೆಸಿದ್ದೀರಾ ಎಂದು ಹೇಳಿದರು. ಸ್ವಾಮಿಗಳು ತಿಪ್ಪೆಯ ಮೇಲೆ ಕುಣಿದಾಡಿದ್ದರಿಂದ ಅವರಿಗೆ ತಿಪ್ಪೇಸ್ವಾಮಿ, ತಿಪ್ಪೇರುದ್ರಸ್ವಾಮಿ ಎಂಬ ಹೆಸರು ಬಂತು ಎಂಬುದನ್ನು ಕಾಣುತ್ತೇವೆ. ಇದೊಂದು ಕುತೂಹಲಕಾರಿಯಾದ ಘಟನೆ ಎಂದು ಹೇಳಬಹುದು.

ನಾಯಕನಹಟ್ಟಿ ತಿಪ್ಪೇಸ್ವಾಮಿಯವರ ಹುಟ್ಟು ಮತ್ತು ಬಾಲ್ಯ

ತಿಪ್ಪೇಸ್ವಾಮಿಯವರು ಪಂಚಗಣಾಧೀಶ್ವರರಲ್ಲಿ ಒಬ್ಬರಾಗಿದ್ದರು. ಮೌಖಿಕ ಪರಂಪರೆಯಲ್ಲಿ ಗುರುತಿಸುವುದಾದರೆ ಇತ್ತೀಚಿನ ಸಂಶೋಧನೆಯನ್ನು ಮೀರಿ ಬೇರೆ ಬೇರೆ ಅಂಶಗಳನ್ನು ಗುರುತಿಸಿದೆ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಬಹಳ ಪ್ರಮುಖವಾದ ಬುಡಕಟ್ಟು ಬೇಡರದ್ದು. ಇವರ ಮೂಲ ಪುರುಷನೇ ತಿಪ್ಪೇಸ್ವಾಮಿ ಎಂದು ಗುರುತಿಸಿದೆ. ಈತನು ಜೀವನದಲ್ಲಿ ನಡೆದ ಅನೇಕ ಘಟನೆಗಳಿಂದ ವೈರಾಗ್ಯವನ್ನು ತಾಳುತ್ತಾರೆ. ಮತ್ತೆ ತನ್ನ ಸುತ್ತಮುತ್ತಲಿನ ಜನತೆಗೆ ಒಳಿತನ್ನು ಉಂಟುಮಾಡಬೇಕೆಂದು ಕೆಲವು ಆಧ್ಯಾತ್ಮಿಕ ಶಕ್ತಿಯನ್ನು ಗಳಿಸಿಕೊಂಡು ಆ ಮುಖೇನ ಮೂಢನಂಬಿಕೆ, ಕಂದಾಚಾರ, ಜಾತೀಯತೆಯ ವಿರುದ್ಧ ಹೋರಾಟ ಮಾಡಲು ಸಂಕಲ್ಪ ಮಾಡುತ್ತಾರೆ.

ತಿಪ್ಪೇಸ್ವಾಮಿ ಬಗೆಗಿರುವ ಚಾರಿತ್ರಿಕ ಗೊಂದಲಗಳು

ನಾಯಕನಹಟ್ಟಿಯು ಮ್ಯಾಸಬೇಡರ ೧೨ ಪೆಟ್ಟಿಗೆ ದೇವರುಗಳ ಪ್ರಮುಖ ಸ್ಥಳವಾಗಿದೆ. ಶ್ರೀಶೈಲದ ಕಡೆಯಿಂದ ಬಂದು ವಾಸ ಮಾಡುತ್ತಿರುವ ಮ್ಯಾಸ ಬೇಡರಿಗೆ ತಿಪ್ಪೇಸ್ವಾಮಿ ಕುಲದೈವವಾಗಿ ಆರಾಧನೆಗೊಳ್ಳುತ್ತಿದ್ದಾನೆ. ಈತನಿಗೆ ಸಂಬಂಧಿಸಿದಂತೆ ನಮಗೆ ಲಿಖಿತವಾದ ಮಾಹಿತಿಗಳು ದೊರೆಯುವುದಿಲ್ಲ. ಆದರೆ ತಿಪ್ಪೇಸ್ವಾಮಿಯ ಜೀವನದ ಬಗೆಗಿನ ಮೌಖಿಕ ವಿವರಗಳು ಈತನು ಬದುಕಿದ್ದ ಪರಿಸರದ ಬಗೆಗೆ ಮಾಹಿತಿಯನ್ನು ಕೊಡುತ್ತವೆ. ಈತನು ಸುತ್ತಾಡಿದ ಹಲವಾರು ಸ್ಥಳಗಳು, ಮಠಗಳು, ಸಮುದಾಯದ ಮಿತ್‌ಗಳು ಈತನ ಕಾಲದ ಕುರಿತು ಮಾಹಿತಿಗಳನ್ನು ಕೊಡುತ್ತವೆ. ಈತನ ಸಂಬಂಧವಾಗಿ ಆಚರಿಸುವ ಹರಕೆ, ಸಂಪ್ರದಾಯ, ಆಚರಣೆಗಳು, ನಂಬಿಕೆಗಳು ಈತನೊಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದನೆಂದೂ, ತನ್ನ ಹಲವಾರು ಸಾಮಾಜಿಕ ಕಾರ್ಯಗಳಿಂದ ಅಂದು ಸಮುದಾಯದ ಬಹುಮುಖ್ಯ ಆಧಾರವಾಗಿದ್ದನೆಂದು ತಿಳಿಸುತ್ತವೆ.

ಕರ್ನಾಟಕ ಸಂಸ್ಕೃತಿ ಸಂಶೋಧನೆಯ ಪ್ರಕಾರ ರುದ್ರಮುನಿ ರೇವಣಸಿದ್ಧರ ಶಿಷ್ಯ. ಗುರುಪರಂಪರೆಯಲ್ಲಿ ಎರಡನೇ ಗುರುವಾದ ರುದ್ರಮುನಿಯು ಮುಕ್ತಿ ಮುನಿಯೆಂಬ ಶಿಷ್ಯನನ್ನು ಹೊಂದಿರುವುದು ತಿಳಿದುಬರುತ್ತದೆ. ಇಲ್ಲಿ ರೇವಣಸಿದ್ಧನ ಕಾಲ ೧೦೫೦ ರಿಂದ ೧೦೭೦ ಎಂದು ಗುರುತಿಸಲಾಗಿದೆ. (ಕಪಟರಾಳ ಕೃಷ್ಣರಾವ್, ೧೯೭೦, ಪು.೧-೧೩). ಈತನ ಶಿಷ್ಯನಾದ ರುದ್ರಮುನಿಯೇ ೧೨ನೇ ಶತಮಾನಕ್ಕೆ ಸೇರಿದವನಾಗಿದ್ದಾನೆ. ಆದರೆ ತಿಪ್ಪೇಸ್ವಾಮಿಗೆ ಸಂಬಂಧಿಸಿದ ಯಾವುದೇ ಜೀವನ ಘಟನೆಗಳು, ಮಿತ್‌ಗಳು ೧೨ನೇ ಶತಮಾನಕ್ಕೆ ಹೊಂದಿಕೆಯಾಗುವುದಿಲ್ಲ.

ಇನ್ನು ಗೋಸಲ ಗುರುಪರಂಪರೆಯನ್ನು ಕುರಿತಂತೆ ಸಿದ್ಧಲಿಂಗಯತಿಯ ವಚನವೊಂದು ರುದ್ರಮುನಿ ಕುರಿತು ಈ ರೀತಿ ಹೇಳುತ್ತದೆ.

'ಅನಾದಿ ಗಣೇಶ್ವರನ ಶಿಷ್ಯ ಆದಿಗಣೇಶ್ವರ
ಆದಿ ಗಣೇಶ್ವರನ ಶಿಷ್ಯ ನಿರ್ಮಾಯನೆಂಬ ಗಣೇಶ್ವರ
ನಿರ್ಮಾಯನೆಂಬ ಗಣೇಶ್ವರನ ಶಿಷ್ಯ ಜ್ಞಾನಾನಂದ ಗಣೇಶ್ವರ
ಜ್ಞಾನಾನಂದನೆಂಬ ಗಣೇಶ್ವರನ ಶಿಷ್ಯ ಆತ್ಮಗಣೇಶ್ವರ
ಆತ್ಮಗಣೇಶ್ವರನ ಶಿಷ್ಯ ಆಧ್ಯಾತ್ಮಗಣೇಶ್ವರ
ಆಧ್ಯಾತ್ಮ ಗಣೇಶ್ವರನ ಶಿಷ್ಯ ರುದ್ರನೆಂಬ ಗಣೇಶ್ವರ
ರುದ್ರನೆಂಬ ಗಣೇಶ್ವರನ ಶಿಷ್ಯ ಬಸವ ಪ್ರಭು ದೇವರು
....
................ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ'

ಮೇಲಿನ ವಚನದ ಪ್ರಕಾರ ಗೋಸಲ ಪರಂಪರೆಯಲ್ಲಿ ರುದ್ರಮುನಿ ಎಂಬುವವನು ಎರಡನೆಯವನು. ತೀರ್ಥಮಲೆ, ಹದಿನಾಡು ಸೀಮೆ, ಎಳಂದೂರು, ನಿಡುಗಲ್ಲು, ನಾಯಕನಹಟ್ಟಿಯಲ್ಲಿ ಸಂಚಾರ ಮಾಡಿ ನಿಡುಗಲ್ಲಿನ ವಾಲ್ಮೀಕಿ ಕುಲದರಸನಿಗೆ ಉಪದೇಶ ಮಾಡಿ ಪರಮತೀಯರನ್ನು ಪರಾಭವಗೊಳಿಸಿ, ನಾಯಕನಟ್ಟಿಯಲ್ಲಿ ಸಮಾಧಿ ಹೊಂದಿದನು. ತಿಪ್ಪೆಯಲ್ಲಿ ಮಠಕಟ್ಟಿಸಿ ಯೋಗ ಸಮಾಧಿ ಮಾಡಿರುವುದರಿಂದ ತಿಪ್ಪೇರುದ್ರಸ್ವಾಮಿ ಎಂದು ಕರೆಯುತ್ತಾರೆ (ಡಾ.ಆರಂ.ಸಿ.ಹಿರೇಮಠ, ೧೯೭೨, ಪು.೩೦೧). ಇದು ಕೂಡ ನಿಖರವಾಗಿಲ್ಲ. ಮೇಲಿನ ವಚನದಲ್ಲಿ ಬರುವ ರುದ್ರಮುನಿಗೂ ಮತ್ತು ನಾಯಕನಹಟ್ಟಿಯಲ್ಲಿ ಸಮಾಧಿಯಾದ ತಿಪ್ಪೇಸ್ವಾಮಿಗೂ ಕಾಲದ ಅಂತರ ಸಾಕಷ್ಟಿದೆ. ವಚನದಲ್ಲಿ ಬರುವ ರುದ್ರಮುನಿಯ ಕಾಲ ನೂರೊಂದು ವಿರಕ್ತರಿಗಿಂತ ಹಿಂದೆ ಇದೆ. ಈತನು ನಿಡುಗಲ್ಲಿನ ವಾಲ್ಮೀಕಿ ಕುಲದ ಅರಸನಿಗೆ ಉಪದೇಶ ಮಾಡಿರಲು ಸಾಧ್ಯವಿಲ್ಲ. ಕಾರಣ ಆ ಸಂದರ್ಭದಲ್ಲಿ ನಿಡುಗಲ್ಲಿನಲ್ಲಿ ಬದುಕಿದ್ದ ಯಾವುದೇ ವಾಲ್ಮೀಕಿ (ಬೇಡ) ಕುಲದ ಅರಸರ ಆಳ್ವಿಕೆಯ ಕುರಿತು ಐತಿಹಾಸಿಕ ದಾಖಲೆಗಳಿಲ್ಲ. ಹಾಗೆ ನಿಡುಗಲ್ಲು ದೊರೆಗೆ ಉಪದೇಶ ಮಾಡಿದ ತಿಪ್ಪೇಸ್ವಾಮಿ ೧೬-೧೭ನೇ ಶತಮಾನಕ್ಕೆ ಸಂಬಂಧಿಸಿದವನಾಗಿದ್ದಾನೆ. ಏಕೆಂದರೆ ನಿಡುಗಲ್ಲಿನ ಹೊಟ್ಟೆಪ್ಪ ನಾಯಕನಿಗೆ ಮತ್ತು ನಾಯಕನಟ್ಟಿಯ ಜೋಡಿಮಲ್ಲಪ್ಪನಾಯಕನಿಗೆ ಕದನ ಏರ್ಪಟ್ಟಾಗ ತಿಪ್ಪೇಸ್ವಾಮಿ ಪ್ರತ್ಯಕ್ಷವಾಗಿ ಉಪದೇಶ ನೀಡಿದನೆಂದು ತಿಪ್ಪೇಸ್ವಾಮಿ ಜೀವನದಲ್ಲಿನ ಮಿತ್ ಹೇಳುತ್ತದೆ. ಉಪದೇಶ ಪಡೆದ ಹೊಟ್ಟೆಪ್ಪನಾಯಕ (೧೬೫೩) ಹಾಗೂ ಕದನದಲ್ಲಿ ಪಾಲ್ಗೊಂಡ ನಾಯಕನಹಟ್ಟಿ ಬೋಡಿಮಲ್ಲನಾಯಕ (೧೬೬೧-೧೬೭೧) ಇಬ್ಬರೂ ಸಮಕಾಲೀನರಾಗಿದ್ದಾರೆ.

ಅಲ್ಲದೆ ತಿಪ್ಪೇಸ್ವಾಮಿಗೆ ಸಂಬಂಧಿಸಿದಂತೆ ಇರುವ ಮಿತ್‌ನ ಪ್ರಕಾರ ೭ ಕೆರೆ, ೭ ಪುರಗಳನ್ನು ಕಟ್ಟಿಸಿದನೆಂದು ಹೇಳುತ್ತದೆ. ಈ ೭ ಕೆರೆ ೭ ಪುರಗಳು ಬೋಡಿಮಲ್ಲಪ್ಪನ ಕಾಲದಲ್ಲಿಯೇ ನಿರ್ಮಾಣವಾಗಿವೆ. ಜನಪದ ಸಾಹಿತ್ಯದ ಪ್ರಕಾರ ತಿಪ್ಪೇಸ್ವಾಮಿಯು ಜಗಳೂರು ಪಾಪನಾಯಕನೊಂದಿಗೆ ಬದುಕಿದ್ದನೆಂದು ಹೇಳಲಾಗುತ್ತದೆ.

"ಅಟ್ಟೀಯ ತಿಪ್ಪಯ್ಯ ಜಗಳೂರು ಪಾಪಯ್ಯ

ಚಿಕ್ಕೇರಿ ಕೋಡಿ ಬಸವಯ್ಯ ಜೊತೆಕೂಡಿ

ಲತ್ತವಾಡ್ಯಾರ ಕೆರೆಯಾಗೆ?

ಇಲ್ಲಿ ಬರುವ ಜಗಳೂರು ಪಾಪನಾಯಕನ ಕಾಲವನ್ನು ೧೫೭೦ ಎಂದು ತಿಳಿಯಲಾಗಿದೆ. ಬೋಡಿಮಲ್ಲಪ್ಪನಾಯಕ ಮತ್ತು ಜಗಳೂರು ಪಾಪನಾಯಕನಿಗೆ ಒಂದು ಶತಮಾನದ ಕಾಲ ವ್ಯತ್ಯಾಸವಾಗುತ್ತದೆ. ಆರಂಭದಲ್ಲಿ ತಿಪ್ಪೇಸ್ವಾಮಿಯು ಪಾಪನಾಯಕನೊಂದಿಗಿದ್ದ ನಂತರ ನಾಯಕನಹಟ್ಟಿಗೆ ಬಂದಿರಬೇಕು. ಒಟ್ಟಾರೆ ಈ ಎಲ್ಲಾ ಆಧಾರಗಳು ತಿಪ್ಪೇಸ್ವಾಮಿ ೧೬ನೇ ಶತಮಾನದ ಉತ್ತರಾರ್ಧ, ೧೭ನೇ ಶತಮಾನದ ಪೂರ್ವಾರ್ಧದಲ್ಲಿ ಬದುಕಿದ್ದನೆಂದು ಸ್ಪಷ್ಟಪಡಿಸುತ್ತದೆ.

ಪಂಚಗಣಾಧೀಶ್ವರರು ಯಾರು

ಪರಶಿವನ ಪಂಚ ಮುಖಗಳೇ ಪಂಚಗಣಾಧೀಶ್ವರರು. ಜಗನ್ಮಾತಾಪಿತರ ಆದೇಶದಂತೆ ಭೂಲೋಕದಲಿ ಶಿವಧರ್ಮ ಪ್ರಚಾರಕ್ಕಾಗಿ ಶ್ರೀಶೈಲದಿಂದ ಬಸವಾದಿ ಶಿವಶರಣರ ಆದರ್ಶ ತತ್ವಗಳನ್ನು ಪ್ರಚಾರ ಮಾಡುತ್ತಾ ಬಂದರು. ಹೀಗೆ ಬಂದವರಲ್ಲಿ

ಶ್ರೀ ವೃಷಭರಾಜೇಂದ್ರ ಸರಸೀಪುರ (ಕೊಟ್ಟೂರು)

ಶ್ರೀ ಕೋಲಶಾಂತೇಶ್ವರ ಅರಸೀಕೆರೆ (ಹರಪನಹಳ್ಳಿ ತಾಲೂಕು)

ಶ್ರೀ ರುದ್ರಮುನಿ ನಿಷಾದಾಪುರ (ನಾಯಕನಹಟ್ಟಿ)

ಶ್ರೀ ಕೆಂಪಯ್ಯ, ಹರಪುರ (ಹರಪನಹಳ್ಳಿ)

ಶ್ರೀ ಮಹಾತ್ಮ ಮದ್ದಾನ ಸ್ವಾಮಿ ಕೊಲಹಳ್ಳಿ (ಹರಪನಹಳ್ಳಿ ತಾ)

ಇವರು ಸರ್ವಧರ್ಮಗಳನ್ನು ಸಮಾನವಾಗಿ ಕಾಣುತ್ತಾ ಸರ್ವರಲ್ಲಿಯೂ ಶಿವನಿರುವುದನ್ನು ಜ್ಞಾನದೃಷ್ಟಿಯಿಂದ ತಿಳಿದುಕೊಂಡು ಅಜ್ಞಾನ ಅಂಧಕಾರಗಳನ್ನು ತೊಡೆದುಹಾಕಿದರು. ಸರ್ವರನ್ನು ಸಲಹುವ ಕಾಯಕ ಮಾಡುತ್ತಾ ಸರ್ವರಿಗೂ ಮಹಾಮಹಿಮರಾಗಿ ತೋರಿದ್ದಾರೆ. ಇವರು ಜೀವಿತದ ಅವಧಿಯಲ್ಲಿ ಮಾತ್ರವಲ್ಲದೆ ಜೀವೈಕ್ಯ ಸಮಾಧಿಯಾದ ಮೇಲೂ ಭಕ್ತ ಜನತೆಯ ಉದ್ಧಾರಕ್ಕಾಗಿ ಜೀವಂತ ಸಾಕ್ಷಿಯಾಗಿ ಭಕ್ತರ ಹೃದಯದಲ್ಲಿ ಇಂದಿಗೂ ರಾರಾಜಿಸುತ್ತಿದ್ದಾರೆ.

ಮೊದಲು ಊರೂರಿಗೆ ಸಂತೆ ನಡೆಯುತ್ತಿರಲಿಲ್ಲ. ರಾಜ್ಯಕ್ಕೆ ಒಂದೆ ಸಂತೆ ನಡೆಯುತ್ತಿತ್ತು. ಆಂಧ್ರ ಮತ್ತು ಕರ್ನಾಟಕ ಎರಡು ರಾಜ್ಯದವರು ಸೇರಿ ಒಂದು ಕಡೆ ಸಂತೆ ನಡೆಸಲು ನಿರ್ಧರಿಸಿದರು. ಆಗ "ರಾಯದುರ್ಗ"ವನ್ನು ಸಂತೆಯ ಕೇಂದ್ರವನ್ನಾಗಿ ಮಾಡಿದರು. ವ್ಯಾಪಾರ, ವ್ಯವಹಾರಗಳ ಸಲುವಾಗಿ ಹಾಗೂ ಪ್ರಯಾಣ ಬೆಳೆಸುವಾಗ ವಿಶ್ರಾಂತಿಗಾಗಿ ಅಲ್ಲಲ್ಲಿ ತಂಗುದಾಣಗಳನ್ನು ಮಾಡಿಕೊಂಡಿದ್ದರು. ಸ್ವಾಮಿಗಳು ಶಿವನಭಕ್ತರಾದ ಕಾರಣ ಅಂದಿನ ರಾಜರು ಹೋಗುವವರಿಗೆ, ಬರುವವರಿಗಾಗಿ ವಿಶ್ರಾಂತಿಧಾಮಗಳನ್ನು ನಿರ್ಮಿಸಿದರು. ಶಿವನ ಧ್ಯಾನವನ್ನು ಮಾಡುವ ಸಲುವಾಗಿ ಗುಡಿಗಳನ್ನು ಕಟ್ಟಿಕೊಂಡು ಅಲ್ಲಿ ಕಲ್ಯಾಣಿ ಮಾಡಿ ಮರಗಿಡಗಳನ್ನು ಹಾಕಿ ದಾರಿಹೋಕರಿಗೆ ನೆರಳಿನ ವ್ಯವಸ್ಥೆ ಮಾಡಿದ್ದರು. ಹೀಗೆ ಸ್ವಾಮಿಗಳು ಪೂಜೆ ಮುಗಿಸಿಕೊಂಡು ಪಂಚಗಣಾಧೀಶ್ವರರೆಲ್ಲ ಒಬ್ಬೊಬ್ಬರು ಒಂದೊಂದು ಕಡೆ ಪ್ರಯಾಣ ಬೆಳೆಸಿದರು ಎಂಬುದು ವಾಡಿಕೆ. ಸ್ವಾಮಿಗಳು ೪೫ ಕಡೆ ಅಂದರೆ ಎಲ್ಲೆಲ್ಲಿ ಕುಳಿತು ಹೋದರೋ ಅಲ್ಲೆಲ್ಲ ಪವಿತ್ರ ಸ್ಥಳಗಳಾಗಿವೆ. ಗುಡಿ ಗೋಪುರಗಳಿವೆ. ಕೇರಳದಲ್ಲಿಯು ಮಠಗಳಿವೆ ಎಂಬ ಪ್ರತೀತಿ. ಹೀಗೆ ಬರುವಂತಹ ಸಂದರ್ಭದಲ್ಲಿ ಕೂಡ್ಲಿಗಿ ತಾಲೂಕು "ಕುಪ್ಪಿನಕೆರೆ" ಎಂಬಲ್ಲಿ ಆಂಜನೇಯ ಸ್ವಾಮಿಗೆ ಲಿಂಗಧಾರಣೆ ಮಾಡುತ್ತಾರೆ. ಅಂದರೆ ಪಂಚಗಣಾಧೀಶ್ವರರು ಐದು ಜನರು ಬಳ್ಳಾರಿ ಜಿಲ್ಲಾ ಕೂಡ್ಲಿಗಿಗೆ ಬರುತ್ತಾರೆ. ಇವರೆಲ್ಲರು ಒಂದೆಡೆ ಕೂಡಿಕೊಂಡಿದ್ದರಿಂದ ಆ ಊರಿಗೆ ಕೂಡ್ಲಿಗಿ ಎಂಬ ಹೆಸರು ಬಂತು.

ಅಂದು ಸಂಜೆ ಕತ್ತಲಾಗುತ್ತದೆ. ಶಿವಾರ್ಚನೆ ಮಾಡಬೇಕು. ಏನು ಮಾಡುವುದು ಎಂದು ಯೋಚಿಸುವಾಗ ಊರು ಬಿಟ್ಟು ಹೊರಗಡೆ ಸ್ವಲ್ಪ ದೂರ ಮುಂದೆ ಹೋದಾಗ ಕತ್ತಲಾಗುತ್ತದೆ. ಮುಂದೆ ಒಂದು ದೇವಸ್ಥಾನ ಕಾಣಿಸುತ್ತದೆ. ಆಗ ಇಲ್ಲಿಯೇ ಕುಳಿತು ಶಿವಪೂಜೆ ಮಾಡೋಣ ಎಂದು ತೀರ್ಮಾನಿಸಿದಾಗ ದೇವಾಲಯದ ಒಳಗೆ ಆಂಜನೇಯಸ್ವಾಮಿ ದೇವರನ್ನು ಕಾಣುತ್ತಾರೆ. ಅಲ್ಲಿ ವನವಾಗಿರುತ್ತದೆ ಎಂದರೆ ಶಿವನಮೂರ್ತಿ ಒಂದೇ ಇಟ್ಟಿರುತ್ತಾರೆ. ಶಿಲ್ಪಿ ದೇವಸ್ಥಾನ ಪ್ರತಿಷ್ಠಾಪನೆ ಮಾಡಿರುವುದಿಲ್ಲ. ಆಗ ತಿಪ್ಪೇಸ್ವಾಮಿಗಳು ಇದೇನು ಹೀಗಾಯ್ತಲ್ಲ ಎಂದು ಹೇಳಿ ಆಂಜನೇಯ ಸ್ವಾಮಿಗೆ ಶಿಲಾಮೂರ್ತಿ ಪ್ರತಿಷ್ಠಾಪನೆ ಮಾಡಿ ದೀಕ್ಷೆ ಕೊಡುತ್ತಾರೆ. ಆಗ ಆಂಜನೇಯಸ್ವಾಮಿ ಪ್ರತ್ಯಕ್ಷನಾಗಿ ಐದು ಜನ ಶಿವಶರಣರಿಗೆ ಆಶೀರ್ವಾದ ಮಾಡುತ್ತಾರೆ ಮತ್ತು ವಾಗ್ದಾನ ತೆಗೆದುಕೊಳ್ಳುತ್ತಾರೆ. ಸ್ವಾಮಿ ದೇವಸ್ಥಾನಕ್ಕೆ ಕತ್ತಲೆ ಕವಿದಿತ್ತು. ನಿಮ್ಮ ದರ್ಶನ ಅಥವಾ ಆಗಮನದಿಂದ ಬೆಳಕಾಯಿತು ಎಂದು ಹೇಳಿ ಐದು ಜನರು ಲಿಂಗಾಂಗ ಮಾಡಿ ಎಂದು ಅವರಿಂದ ವಾಗ್ದಾನ ತೆಗೆದುಕೊಳ್ಳುತ್ತಾರೆ. ನೀವು ಐದು ಜನರು ಎಲ್ಲೆಲ್ಲಿ ನೆಲೆಸಿದ್ದೀರಿ ಅಲ್ಲಿಗೆ ಬಂದು ನಿಮ್ಮ ರಥ ನಡೆಸಿಕೊಡುತ್ತೇನೆ ಎಂದು ಹೇಳಿ ಐದು ಜನ ಶಿವ ಶರಣರಿಗೆ ಹಾರೈಸುತ್ತಾರೆ. ಆಗ ತಿಪ್ಪೇರುದ್ರಸ್ವಾಮಿಗಳು ನನ್ನ ರಥ ನಡೆಯುವುದಕ್ಕಿಂತ ಮೊದಲು ನಿನಗೆ ಮಹಾ ಮಂಗಳಾರತಿ ಆಗಲಿ ಎಂದು ಹಾರೈಸುತ್ತಾರೆ. ಈಗಲೂ ಸಹ ನಾಯಕನಹಟ್ಟಿಯಲ್ಲಿ ರಥ ನಡೆಯುವ ಸಂದರ್ಭದಲ್ಲಿ ಮೊದಲು ಆಂಜನೇಯ ಸ್ವಾಮಿಗೆ ಮಹಾಮಂಗಳಾರತಿ ಮಾಡುತ್ತಾರೆ.

ರಥ ನಡೆಯುವ ಸ್ಥಳದ ಪಕ್ಕದಲ್ಲಿ (ಎಡಭಾಗ) ಆಂಜನೇಯ ಸ್ವಾಮಿಯ ಉದ್ಭವ ಮೂರ್ತಿಯಿದೆ. ಅದಕ್ಕೆ ರಥ ನಡೆಯುವ ಪೂರ್ವದಲ್ಲಿ ೩ ಸಾರಿ ಆರೋಹಣ ಮಾಡುತ್ತಾರೆ. ರಥ ನಡೆಯುತ್ತದೆ ಸ್ವಾಮಿಗಳು

ಬಂದು ನಡೆಸಿಕೊಡಬೇಕು ಎಂದು ೩ ಸಾರಿ ಹೇಳುತ್ತಾರೆ. ಪೂಜೆ ಮಾಡಲಿಲ್ಲ ಹಾಗೂ ಆರತಿ ಮಾಡಲಿಲ್ಲ ಎಂದರೆ ಮುಂದೆ ರಥ ನಡೆಯುವುದಿಲ್ಲ ಅದೊಂದು ವಿಶೇಷ ಸ್ವಾಮಿಗಳು ಆಂಜನೇಯನಿಗೆ ಲಿಂಗಾಧಾರಣೆ ಮಾಡಿಸಿದ್ದು.

ಮಧ್ಯಕಾಲೀನ ಕರ್ನಾಟಕ ಸಂಸ್ಕೃತಿಯಲ್ಲಿ ಪಂಚಗಣಾಧೀಶ್ವರರು

ಮಧ್ಯಕಾಲೀನ ಕರ್ನಾಟಕ ಸಂಸ್ಕೃತಿ ಚರಿತ್ರೆಯಲ್ಲಿ ೧೨ನೇ ಶತಮಾನದ ಶರಣ ಚಳುವಳಿಗೆ ಮಹತ್ವದ ಸ್ಥಾನವಿದೆ. ಅಷ್ಟೇ ಮಹತ್ವದ ಮಾನವೀಯವಾದ ಸಮಾನತೆ ಸಾರಿದ ಸಾಂಸ್ಕೃತಿಕ ಆಂದೋಲನಗಳು ೧೨ನೇ ಶತಮಾನದ ನಂತರವೂ ನಡೆದಿವೆ. ಪಂಚಗಣಾಧೀಶ್ವರರಲ್ಲಿ ತಿಪ್ಪೇಸ್ವಾಮಿಯವರು ಒಬ್ಬರು. ಇವರು ಎಲ್ಲ ಧರ್ಮ, ಜಾತಿ, ಸಮುದಾಯಗಳ ನೆಲೆಯಲ್ಲಿ ಕೋಮು ಸೌಹಾರ್ದತೆಯ ನೆಲೆಯಲ್ಲಿ ಸಮಾಜವನ್ನು ಕಟ್ಟಲು ಪ್ರಯತ್ನಿಸಿದರು. ಈ ಉದ್ದೇಶವನ್ನಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಚಿತ್ರದುರ್ಗ ಜಿಲ್ಲೆಯ ಭಾಗದಲ್ಲಿ ಪ್ರಚಲಿತ ಇರುವ ದೈವ ತಿಪ್ಪೇಸ್ವಾಮಿ.

೧೬-೧೭ನೇ ಶತಮಾನದಲ್ಲಿ ನಾಯಕನಹಟ್ಟಿ ತಿಪ್ಪೇಸ್ವಾಮಿ ಉತ್ಸವ ಆಚರಣೆಗಳ ಮೂಲಕ ಜನಪದರಲ್ಲಿ ಅಪಾರ ಪ್ರಭಾವವನ್ನು ಬೀರುವುದರ ಮುಖಾಂತರ ದೈವದ ನೆಲೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಈ ಪಂಥವು ಪೂರ್ವದ ಶರಣರ ಚಳುವಳಿಯೊಂದಿಗೆ ಹಾಗೂ ಅಂದಿನ ಸಮಕಾಲೀನ ಪರಂಪರೆಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿವೆ. ಅವು ಒಂದನ್ನೊಂದು ಆಧರಿಸಿಕೊಂಡು ಬಂದಿವೆ.

೧೧ನೇ ಶತಮಾನದಲ್ಲಂತೂ ದೇವಸ್ಥಾನಗಳ ನಿರ್ಮಾಣಕ್ಕೆ ದಾನ ದತ್ತಿಗಳಿಗೆ ಇನ್ನಿಲ್ಲದ ಪುರಸ್ಕಾರ, ಅದರಲ್ಲೂ ವಿಶೇಷವಾಗಿ ಧಾರವಾಡ, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ಶಿವ ದೇವಾಲಯಗಳ ಪ್ರಚಾರ ಕಾರ್ಯ ಇನ್ನಿಲ್ಲದ ಉತ್ಸಾಹದಿಂದ ನಡೆಯಿತು. ಈ ಸಮಯದಲ್ಲಿ ಸ್ಥಾವರ ಪೂಜಕರು ದೇವಾಲಯಗಳ ಬೆಳವಣಿಗೆಯನ್ನು ತೀವ್ರಗತಿಯಲ್ಲಿ ಸಾಧಿಸಿಕೊಂಡು ದಾನದತ್ತಿಗಳನ್ನು ರಾಜರಿಂದಲೂ ಜನ ಸಾಮಾನ್ಯರಿಂದಲೂ ಪಡೆದುಕೊಂಡರು. ವೇದಶಾಸ್ತ್ರದ ಮೂಲಕ ವೈದಿಕ ಮೌಲ್ಯಗಳನ್ನು, ಬ್ರಾಹ್ಮಣರು ಸೃಷ್ಟಿಸಿದ ಶ್ರೇಣಿ ಪದ್ಧತಿಯನ್ನು ರಕ್ಷಿಸಿಕೊಂಡು ಬಂದವು. ಇದರಿಂದಾಗಿ ಸಮಾಜದ ಬಹುಸಂಖ್ಯಾತರು ಶೋಷಣೆಗೊಳಪಟ್ಟರು.

ಇದೇ ಅವಧಿಯಲ್ಲಿ ಉಂಟಾದ ಮುಖ್ಯವಾದ ಪ್ರಕ್ರಿಯೆ ಎಂದರೆ ಸಂತೆಗಳ ನಿರ್ಮಾಣ ಹಾಗೂ ನಾಣ್ಯದ ಚಲಾವಣೆಯ ಪ್ರಮಾಣದಲ್ಲಿ ಏರಿಕೆ ೧೧ ಮತ್ತು ೧೨ನೇ ಶತಮಾನದ ಶಾಸನಗಳು ಸಂತೆಗಳ ಬಗ್ಗೆ ಪುನರಾವರ್ತಿತ ಹಾಗೂ ನಿರ್ದಿಷ್ಟ ಉಲ್ಲೇಖಗಳನ್ನು ನೀಡುತ್ತವೆ. ಈ ಸಂತೆಗಳು, ರೈತರು ಹಾಗೂ ಕಸುಬುದಾರರು ಉತ್ಪಾದಕರು ತಮ್ಮ ಉತ್ಪನ್ನಗಳನ್ನು ಮಾರುವುದಕ್ಕೆ ಹಾಗೂ ಮಧ್ಯವರ್ತಿ ವ್ಯಾಪಾರಿಗಳು ಅವರೊಂದಿಗೆ ವ್ಯವಹರಿಸುವುದಕ್ಕಾಗಿ ಮಾಡಿದ ಒತ್ತಾಯದ ಫಲಿತಾಂಶಗಳಾಗಿವೆ. ಇದೇ ಸಮಯದಲ್ಲಿ ಜನಸಂಖ್ಯೆಯ ಕೇಂದ್ರೀಕರಣದಿಂದ ಉಂಟಾದ ನಗರಗಳ ಸಂತೆಯ ಮೂಲಕ ಕೃಷಿಕರು ಮತ್ತು ಕುಶಲಕರ್ಮಿಗಳ ಉತ್ಪಾದನೆಗೆ ಬೇಡಿಕೆಗಳನ್ನು ಹೆಚ್ಚಿಸಿದವು. "ಬ್ರಾಹ್ಮಣ ಒಡೆಯರಿಗೆ ಹಾಗೂ ಉಳಿಗಮಾನ್ಯ

ಮುಖ್ಯಸ್ಥರಿಗೆ ಈ ಸಂತೆಗಳ ರಚನೆಯನ್ನು ಗುರುತಿಸುವುದು ಹಾಗೂ ಅವುಗಳ ಕಾರ್ಯಚರಣೆಯನ್ನು ಮಾನ್ಯ ಮಾಡುವುದು ಅನಿವಾರ್ಯವಾಯಿತು. ಆ ಮೂಲಕವಾಗಿ ಅವರು ರೈತರ ಹಾಗೂ ಕುಶಲಕರ್ಮಿಗಳ ಒಂದು ವಿಭಾಗದ ಹೊಸ ಬಗೆ ಅಸ್ತಿತ್ವವನ್ನು ಅನುಮತಿಸುವ ನಿರ್ಬಂಧಕ್ಕೆ ಗುರಿಯಾದರು. ಈ ರೀತಿಯ ಮಾನ್ಯತೆಯಿಂದಾಗಿ ಕೃಷಿಕರು ಮತ್ತು ಕುಶಲಕರ್ಮಿಗಳು ಆರ್ಥಿಕವಾಗಿ ಪ್ರಬಲರಾದರು. ೧೨ನೇ ಶತಮಾನದ ಹೊತ್ತಿಗೆ ಕುಶಲಕರ್ಮಿಗಳು, ಕೃಷಿಕ್ಷೇತ್ರದಿಂದ ಸಂಪೂರ್ಣವಾಗಿ ಬೇರ್ಪಟ್ಟು ತಮ್ಮ ಕೌಶಲ್ಯದ ಬಲದಿಂದಲೇ ಬದುಕಲಾರಂಭಿಸಿದರು. ಆದರೆ ಅಗ್ರಹಾರದ ಭೂಮಾಲಿಕ ವರ್ಗವು ತಮ್ಮ ಅಧಿಕಾರ ಬಲದಿಂದ ಹೆಚ್ಚೆಚ್ಚು ತೆರಿಗೆಗಳನ್ನು ಹಾಕುವ ಮೂಲಕ ಹಳೆಯ ಊಳಿಗಮಾನ್ಯ ವಿಧಾನ ಶ್ರಮಕ್ಕೆ ಅವರನ್ನು ಒಳಪಡಿಸಲು ಪ್ರಯತ್ನಿಸಿದರು.

ಒಂದು ಕಡೆ ಸಾಮಾಜಿಕ ಅಸಮಾನತೆಯನ್ನು ಸಮರ್ಥಿಸುತ್ತಿದ್ದ ದೇವಾಲಯ-ಅಗ್ರಹಾರಗಳಲ್ಲಿದ್ದ ಪುರೋಹಿತಶಾಹಿ, ಇನ್ನೊಂದೆಡೆ ಊಳಿಗಮಾನ್ಯ ಪದ್ಧತಿಯನ್ನು ಪೋಷಿಸಿಕೊಂಡು ಬಂದ ಭೂಮಾಲೀಕರು, ಅರಸರು ಒಬ್ಬರನ್ನೊಬ್ಬರು ಸಮರ್ಥಿಸುತ್ತ ಸಾಮಾಜಿಕ ಮತ್ತು ಆರ್ಥಿಕ ವೈಷಮ್ಯದಿಂದೊಡಗೂಡಿದ ಸಮಾಜ ನಿರ್ಮಾಣದಲ್ಲಿ ತೊಡಗಿದರು. ದೇವಾಲಯಗಳು ಧರ್ಮದ ಹೆಸರಿನಲ್ಲಿ ಸಾಮಾಜಿಕ ಅಸಮಾನತೆಯನ್ನು ಸಮರ್ಥಿಸುತ್ತಿದ್ದರೆ, ಅರಸರು ಪ್ರಭುತ್ವದ ಅಸ್ತಿತ್ವಕ್ಕಾಗಿ ದೇವಾಲಯಗಳನ್ನು ಬೆಂಬಲಿಸುತ್ತಿದ್ದರು. ಹೀಗಾಗಿ ೧೨ನೇ ಶತಮಾನದ ಕಾಲಕ್ಕಾಗಲೇ ದುಡಿಯುವ ವರ್ಗ ಹಾಗೂ ಧಾರ್ಮಿಕ, ರಾಜಕೀಯ ಪ್ರಭುತ್ವಕ್ಕೂ ತಿಕ್ಕಾಟ ಶುರುವಾಯಿತು.

೧೨ನೇ ಶತಮಾನದ ಶರಣಕ್ರಾಂತಿಯಲ್ಲಿ ಪಾಲ್ಗೊಂಡವರಲ್ಲಿ ಹೆಚ್ಚು ಜನ ದುಡಿಯುವ ವರ್ಗದವರಾಗಿದ್ದರು. ಅಂಬಿಗರ ಚೌಡಯ್ಯ, ಆಯ್ದಕ್ಕಿ ಮಾರಯ್ಯ, ಜೋದರ ಮಾಯಣ್ಣ ಹೀಗೆ ಎಷ್ಟೋ ಹೆಸರಿನೊಂದಿಗೆ ಅವರ ವೃತ್ತಿಗಳನ್ನು ಸೂಚಿಸುತ್ತಿದ್ದ ಶರಣರ ಪಟ್ಟಿಯನ್ನು ನೋಡಿದರೆ, ಅವರಲ್ಲಿ ವಿವಿಧ ಉತ್ಪಾದಕ ವೃತ್ತಿ ಹಾಗೂ ಕುಲಗಳಿಂದ ಬಂದವರೆಂದು ಗೋಚರವಾಗುತ್ತದೆ. ಈ ಕಾಯಕ ಜೀವಿಗಳಿಗೆ ಬೆಂಬಲವಾಗಿ ಬಸವ, ಅಲ್ಲಮ, ಚೆನ್ನಬಸವಣ್ಣನಂತಹ ಶರಣರು ಅಕ್ಕಮಹಾದೇವಿ, ನಾಗಲಾಂಬಿಕೆ, ನೀಲಮ್ಮ ಶರಣೆಯರು ಸೇರಿಕೊಂಡರು.

ಹೀಗೆ ಒಟ್ಟುಗೂಡಿದ ಸಮಾನ ಮನಸ್ಕರಾದ ಕಾಯಕಜೀವಿಗಳ ಸಂಘಟನೆ ಒಂದು ಹಂತಕ್ಕೆ ತಲುಪಿ ಅದು ತನ್ನ ಉತ್ಪಾದಕ ಚಟುವಟಿಕೆಗಳ ಸಕ್ರಿಯತೆಯನ್ನು ಮೀರಿ ಒಟ್ಟು ಜನಜೀವನದ ಸಮಗ್ರ ಬದಲಾವಣೆಯನ್ನು ಬಯಸಿ ಪಟ್ಟಭದ್ರ ಹಿತಾಸಕ್ತಿಗಳನ್ನು ಪ್ರಶ್ನಿಸಿತೊಡಗಿದಾಗ ಅದಕ್ಕೆ ಸಾಮಾಜಿಕ ಕ್ರಾಂತಿಯ ರೂಪ ಪ್ರಾಪ್ತವಾಯಿತು. ಇದನ್ನೇ "ಶರಣರ ಕ್ರಾಂತಿ", "ಕಲ್ಯಾಣ ಕ್ರಾಂತಿ" ಎಂದು ಕರೆಯಲಾಗುತ್ತದೆ.

ಶರಣರು ತಮ್ಮ ಆಲೋಚನೆಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಲು ವಚನಗಳನ್ನು ಬರೆದರು. ಇವು ಭಾಷೆ, ವಸ್ತು, ಶೈಲಿಯ ದೃಷ್ಟಿಯಿಂದ ಹೊಸ ಪರಂಪರೆಯನ್ನೇ ಸೃಷ್ಟಿಸಿದವು. ಎಂತಹನಾದಡೇನು ಲಿಂಗ ಮುಟ್ಟಿದವನೆ ಕೀಳು ಜಾತಿ ಎನ್ನುವ ಮೂಲಕ ಹಳೆಯಜಾತಿ ಪದ್ಧತಿಯನ್ನು ಖಂಡಿಸಿ ಎಲ್ಲರನ್ನು

ಸಮಾನರಾಗಿ ಕಾಣಲಾರಂಭಿಸಿದರು. ವೃತ್ತಿ ಆಧಾರಿತ ದುಡಿಮೆಯಲ್ಲಿ ಸಮಾನ ಸ್ಥಾನವನ್ನು ಪ್ರಜ್ಞಾಪೂರ್ವಕವಾಗಿ ನೀಡಿದರು. 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಪ್ರತಿಪಾದಿಸಿದರು. ಕಾಯಕದಿಂದ ಬಂದ ದುಡಿಮೆಯನ್ನು ದಾಸೋಹಕ್ಕೆ ಬಳಸಿದರು. ದೇವಾಲಯ ಕೇಂದ್ರಿತ ಆರಾಧನಾ ಪದ್ಧತಿಯನ್ನು ನಿರಾಕರಿಸಿ "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎನ್ನುವುದರ ಮೂಲಕ ದೇವಾಲಯ ಸಂಸ್ಕೃತಿಗೆ ಬಲವಾದ ಹೊಡೆತ ನೀಡಿದರು. ಮಹಿಳೆಯರಿಗೆ ಸ್ವಾತಂತ್ರ್ಯವನ್ನು ಕಲ್ಪಿಸುವುದರ ಮೂಲಕ ಅವರು ಚಳುವಳಿಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವಂತಾಯಿತು. ಈ ಸಾಮಾಜಿಕ ಬದಲಾವಣೆ ಮಾಧವರಸ ಮತ್ತು ಹರಳಯ್ಯನ ಮಕ್ಕಳ ಮದುವೆಯ ವಿಷಯವಾಗಿ ಉತ್ತುಂಗ ಸ್ಥಿತಿಯನ್ನು ಮುಟ್ಟಿ ಬಿಜ್ಜಳನ ಕೊಲೆಯಲ್ಲಿ ಕೊನೆಗೊಂಡು ಶರಣರು ಕಲ್ಯಾಣವನ್ನು ಬಿಡುವಂತಾಯಿತು.

೧೨ನೇ ಶತಮಾನದ ಶರಣರ ಆಚಾರ ಮಾರ್ಗವನ್ನು ಕೇಂದ್ರವಾಗಿಸಿಕೊಂಡು ವೀರಶೈವ ಧರ್ಮಕ್ಕೆ ಒಂದು ಸಿದ್ಧಾಂತದ ರೂಪಕೊಡಲು ಪ್ರಯತ್ನಿಸಿದರು. ವಚನಗಳನ್ನು ಒಂದು ನಿರ್ದಿಷ್ಟ ಪಂಗಡದ ಆಸ್ತಿಯಾಗಿಸುವ ಅಥವಾ ಒಂದು ಧಾರ್ಮಿಕ ಸೈದ್ಧಾಂತಿಕತೆಗೆ ಅಳವಡಿಸುವ ಪ್ರಕ್ರಿಯೆ ನಡೆದರೆ ಅದೇ ವಚನಗಳ ಮೂಲ ಆಶಯಗಳನ್ನು ಆರೂಢ ಮತ್ತು ಸೂಫಿ ಪಂಥಗಳು ಆಚರಣೆಗಳ ಮೂಲಕ ಮೌಖಿಕ ಸಾಹಿತ್ಯದ ಮೂಲಕ ಮತ್ತೊಮ್ಮೆ ಜನ ಸಮುದಾಯದಲ್ಲಿ ಪ್ರಚಾರಕ್ಕೆ ತಂದರು.

೧೨ನೇ ಶತಮಾನದ ಶರಣರು ಕುಲೇಳು ಹದಿನೆಂಟು ಜಾತಿಗಳು ಒಂದೇ ಎಂದು ಸಾರಿದ್ದ ಆಶಯ ಅವರ ನಂತರ ಸಾಂಸ್ಥಿಕ ಪ್ರಕ್ರಿಯೆಯಿಂದ ಒಡೆದು ಜಾತಿ ಅಸಮಾನತೆ ಕಂಡುಬಂತು. ಇಂತಹ ಸಮಯದಲ್ಲಿ ಕೆಳವರ್ಗದ ಕಾಯಕ ಜೀವಿಗಳ ಸಾಂಸ್ಕೃತಿಕ ನಾಯಕರಾಗಿ ಕಂಡು ಬರುತ್ತಾರೆ. ಪಂಚಗಣಾಧೀಶ್ವರರು ರೂಪುಗೊಳ್ಳಲು ಅಂದಿನ ರಾಜಕೀಯ, ಧಾರ್ಮಿಕ, ಸಾಮಾಜಿಕ ಒತ್ತಡಗಳು ಕಾರಣವಾಗಿದ್ದರೆ, ೧೨ನೇ ಶತಮಾನದ ಶರಣ ಚಳುವಳಿ, ಸಮಕಾಲೀನ ಪಂಥದ ಪರಂಪರೆಗಳು ಪ್ರೇರಣೆಯನ್ನು ನೀಡಿವೆ. ಇಂದಿಗೂ ಆಚರಣೆಯ ಮೂಲಕ ಮಧ್ಯ ಕರ್ನಾಟಕ ಭಾಗದಲ್ಲಿ ಜನಪದರಿಗೆ ಆರಾಧ್ಯ ದೈವವಾಗಿದ್ದಾರೆ.

ಒತ್ತಡಗಳು

ರಾಜಕೀಯ ಒತ್ತಡಗಳು

ರಾಜಕೀಯವಾಗಿ ೧೨ನೇ ಶತಮಾನದ ಕೊನೆಯಿಂದ ಕರ್ನಾಟಕ ಪ್ರಾಂತ್ಯದಲ್ಲಿ ಅರಾಜಕತೆ ಪ್ರಾರಂಭವಾಯಿತು. ಕರ್ನಾಟಕದ ಉತ್ತರ ಭಾಗದಲ್ಲಿ ಸೇವುಣರು, ದಕ್ಷಿಣದಲ್ಲಿ ಹೊಯ್ಸಳರು, ಕಾಕತೀಯರು, ಚೋಳರು, ಪಾಂಡ್ಯರು, ಅಧಿಕಾರಕ್ಕೆ ಬಂದರು. ಇವರೆಲ್ಲರ ನಡುವೆ ಯುದ್ಧಗಳು ನಿರಂತರವಾಗಿ ನಡೆದವು. ವಿಜಯನಗರ ಪತನನಂತರ ಕರ್ನಾಟಕದಲ್ಲಿ ಸ್ಥಿರವಾದ ನಾಯಕತ್ವವಿಲ್ಲದೆ, ಪಾಳೆಗಾರ ವ್ಯವಸ್ಥೆ ಪ್ರಾರಂಭವಾಯಿತು. ವಿಜಯನಗರ ಅರಸರ ಕಾಲದಲ್ಲಿ ಒಂದು ನಿರ್ದಿಷ್ಟ ಪ್ರದೇಶವನ್ನು ಆಳುತ್ತಿದ್ದವರಿಗೆ ಅಮರನಾಯಕರು ಎನ್ನುತ್ತಿದ್ದರು. ಉಪನಾಮಂತೀಕರಣ ಪ್ರಕ್ರಿಯೆಯು ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಬಹುವಿಸ್ತೃತ ರೂಪ ಪಡೆದುಕೊಂಡಿತ್ತು. ಈ ಅಮರನಾಯಕರು ತಮ್ಮ ನಿರ್ದಿಷ್ಟ ಕ್ಷೇತ್ರಗಳ

ವ್ಯಾಪ್ತಿಯಲ್ಲಿ, ಕೃಷಿ, ನೀರಾವರಿ, ಸರಕುಗಳ ಉತ್ಪಾದನೆ, ರಸ್ತೆ ಕಾಮಗಾರಿ ಮುಂತಾದವುಗಳನ್ನು ವಿಜಯನಗರ ಸಾಮ್ರಾಜ್ಯದ ಕೇಂದ್ರಾಡಳಿತ ಮಾದರಿಯಲ್ಲಿಯೇ ನಡೆಸುತ್ತಿದ್ದರು. ಇದೊಂದು ಅಧೀನ ಒಕ್ಕೂಟ ವ್ಯವಸ್ಥೆಯೆಂಬಂತೆ ನಿರ್ವಹಿಸುತ್ತಿದ್ದವು. ಯಾವಾಗ ವಿಜಯನಗರ ಪತನವಾಯಿತೋ ಈ ಅಮರ ನಾಯಕರು ಸ್ವಾತಂತ್ರ್ಯರಾದರು. ಹಾಗೆ ಸ್ವಾತಂತ್ರ್ಯಗೊಂಡರವರಲ್ಲಿ ಚಿತ್ರದುರ್ಗ ಪಾಳೆಗಾರರು, ನಾಯಕನಹಟ್ಟಿ ಪಾಳೇಗಾರರು ಸ್ವಾತಂತ್ರ್ಯ ಅಸ್ತಿತ್ವವನ್ನು ಪಡೆದುಕೊಂಡ ಕೆಲವು ಪಾಳೆಗಾರ ಮನೆತನಗಳಾಗಿವೆ.

ಹೀಗೆ ಅಸ್ತಿತ್ವ ಪಡೆದುಕೊಂಡ ಪಾಳೇಗಾರರ ನಡುವೆ ಮೇಲಿಂದ ಮೇಲೆ ಯುದ್ಧಗಳಾಗ ತೊಡಗಿದವು. ಇದಕ್ಕಾಗಿ ಪಾಳೇಗಾರರಿಗೆ ಅಪಾರ ಜನಮನ್ನಣೆ ಅವಶ್ಯಕವಾಗಿದ್ದಿತು. ಅದಕ್ಕಾಗಿ ಸಮಾಜದಲ್ಲಿ ಜನಪ್ರಿಯರಾಗಿದ್ದ ಧಾರ್ಮಿಕ ಸಂತರನ್ನು ಗೌರವಿಸಿವುದರ ಮೂಲಕ ಜನ ಬೆಂಬಲ ಪಡೆಯುತ್ತಿದ್ದರು. ಚಿತ್ರದುರ್ಗದ ಭರಮಣ್ಣ ನಾಯಕನ ಕಾಲದಲ್ಲಿ (೧೬೮೯-೧೭೨೧) ನಾಯಕನಹಟ್ಟಿ ಹೊರಮಠ ಕಟ್ಟಲಾಗಿದೆ.

ಧಾರ್ಮಿಕ ಸಂತರನ್ನು ಗೌರವಿಸುವ ಹಿಂದೆ ಬರೇ ಧಾರ್ಮಿಕ ಶ್ರದ್ಧೆ ಮಾತ್ರ ಕಾರಣವಾಗಿರಲಿಲ್ಲ. ಈ ಧಾರ್ಮಿಕ ಸಂತರು ರಾಜಕೀಯ ಅಧಿಕಾರಕ್ಕೆ ಸಮನಾಂತರವಾಗಿ ತಮ್ಮದೇ ಆದ ಅಧಿಕಾರವನ್ನು ಸಮಾಜದಲ್ಲಿ ಗಳಿಸಿಕೊಂಡಿದ್ದರು. ಮೇಲ್ವರ್ಗ-ಕೆಳವರ್ಗವೆನ್ನದೆ ಬಹುಸಂಖ್ಯಾತರನ್ನು ಪ್ರಭಾವಿಸಿದ್ದರು. ಈ ಸಂತರನ್ನು ಗೌರವಿಸುವ ಮೂಲಕ ಅವರ ಪ್ರಭಾವದಲ್ಲಿನ ಜನರ ಒಲವನ್ನು ರಾಜರು ಪಡೆಯುತ್ತಿದ್ದರು. ಈ ಲೌಕಿಕ ಆಲೋಚನೆ ಬರೀ ರಾಜಪ್ರಭುತ್ವಕಷ್ಟೇ ಸೀಮಿತವಾಗಿರಲಿಲ್ಲ. ಸಂತರಿಗೂ ಅನಿವಾರ್ಯವಾಗಿತ್ತು. ಪ್ರಭುತ್ವದ ಮೂಲಕ ಇವರು ವ್ಯಾಪಕವಾಗಿ ಬೆಳೆಯುತ್ತಾ ಅಧಿಕೃತಗೊಳ್ಳುತ್ತಾ ಹೆಚ್ಚುಕಾಲ ಉಳಿಯಲು ಸಾಧ್ಯವಾಗುತ್ತಿತ್ತು. ಯುದ್ಧ ಪವಾಡಗಳ ಮೂಲಕ ಈ ಧಾರ್ಮಿಕ ಸಂತರು ರಾಜ್ಯಕ್ಕೆ ಅನುಕೂಲವಾದ ಲೋಕದೃಷ್ಟಿಯನ್ನು ಬೆಳೆಸಿ, ಮಾನ್ಯತೆಯನ್ನು ಸೃಷ್ಟಿಸುವ ಪರಿಣಾಮಕಾರಿ ಮಾಧ್ಯಮಗಳಾಗಿದ್ದರು.

ಈ ಪಾಳೇಗಾರ ವ್ಯವಸ್ಥೆಯಲ್ಲಿ ಪ್ರತಿ ಹತ್ತಿಪ್ಪತ್ತು ಹಳ್ಳಿಗಳ ಗುಂಪೂ ಕೂಡ ಒಂದೊಂದು ಪುಟ್ಟ ರಾಜರ ಸ್ಥಾನದ ಮಾದರಿಯ ಖರ್ಚುಗಳನ್ನು ಭರಿಸಬೇಕಾದ ದುಬಾರಿ ವೆಚ್ಚಕ್ಕೆ ಗುರಿಯಾಯಿತು. ಅಲ್ಲದೆ ಅಕ್ಕ ಪಕ್ಕದ ಪಾಳೇಪಟ್ಟುಗಳ ಜೊತೆಯಲ್ಲಿ ಯುದ್ಧ ಮಾಡಬೇಕಾದ ಪ್ರಮೇಯ ಬಂದೊದಗುತ್ತಿದ್ದುದರಿಂದ ರೈತರಿಗೆ ಅಪಾರ ಪ್ರಮಾಣದ ತೆರಿಗೆಗಳನ್ನು ನಿಗಧಿಪಡಿಸಲಾರಂಭಿಸಿದರು. ಅಲ್ಲದೆ ಪ್ರತಿ ಪ್ರಾಂತ್ಯವು ತನ್ನ ವಿರೋಧಿ ಪಾಳೆಪಟ್ಟಿನ ಸೈನಿಕರಿಂದ ಯಾವಾಗ ಬೇಕಾದರೂ ಧ್ವಂಸಕ್ಕೆ ಗುರಿಯಾಗುವಂತಹ ಆತಂಕವನ್ನು ಎದುರಿಸಬೇಕಾಯಿತು.

ಪಾಳೆಯಪಟ್ಟುಗಳ ನಡುವಿನ ದಿನನಿತ್ಯದ ಯುದ್ಧ ಕಲಹ ಒಬ್ಬರ ಪ್ರಾಂತ್ಯವನ್ನು ಮತ್ತೊಬ್ಬರು ಲೂಟಿ ಮಾಡುವುದು, ಬಲತ್ಕಾರದ ತೆರಿಗೆ, ಕಾಣಿಕೆಗಳ ಸಂಗ್ರಹ ಮುಂತಾದವು ಜನತೆಯನ್ನು ದಿವಾಳಿ ಎಬ್ಬಿಸಿದವು. ಮಧ್ಯಕಾಲೀನ ಸಂದರ್ಭದಲ್ಲಿ ಯುದ್ಧಗಳಿಂದ ಅನಾಯಕತ್ವದಿಂದ, ರಾಜಕೀಯ ಸ್ಥಿತ್ಯಂತರಗಳಿಂದ ಜನಸಮುದಾಯಗಳು ಅನೇಕ ಬಗೆಯಲ್ಲಿ ಕಷ್ಟ-ನಷ್ಟಗಳನ್ನು ಅನಿವಾರ್ಯವಾಗಿ ಅನುಭವಿಸುವಂತಾಯಿತು. ಹೊರಗಿನವರ ಆಕ್ರಮಣದಿಂದ ಅನ್ಯಭಾಷೆ, ಧರ್ಮ, ಸಂಸ್ಕೃತಿಗಳು ಜನಸಮುದಾಯದೊಳಗೆ ಪ್ರವೇಶಿಸಿದವು.

ಪರಿಣಾಮವಾಗಿ ಈ ಪ್ರಾಂತ್ಯದ ಬದುಕು ಒಂದು ಬಗೆಯ ಸಂಕರ ಸಂಸ್ಕೃತಿಗೆ ನೆಲೆಯಾಯಿತು. ಯುದ್ಧಗಳ ನೆರಳಲ್ಲೆ ಬದುಕು ಸವೆಸುತ್ತಿರುವ ಜನಸಮುದಾಯಗಳು ಇಂತಹ ಒತ್ತಡದಲ್ಲಿಯೇ ಪಂಚಗಣಾಧೀಶ್ವರರು ರೂಪುತಳೆದರು.

೨. ಧಾರ್ಮಿಕ ಒತ್ತಡಗಳು

ಧಾರ್ಮಿಕವಾಗಿ ವೀರಶೈವ ಧರ್ಮಕ್ಕೆ ಬಹುದೊಡ್ಡ ಪರಂಪರೆಯಿದೆ. ಅದರ ಆರಂಭಕಾಲವನ್ನು ವೇದ ಉಪನಿಷತ್ತುಗಳ ಕಾಲದವರೆಗೂ ಕೊಂಡೊಯ್ಯುವ ಪ್ರಯತ್ನಗಳು ನಡೆದಿವೆ. ಇವರು ಲಿಂಗಾಯಿತ ಧರ್ಮವನ್ನು ಎತ್ತಿ ಹಿಡಿಯುವರೆನ್ನುವ ಕಾಲ್ಪನಿಕ ಕತೆಯೊಂದು ಬಳಕೆಯಲ್ಲಿದೆ. ಕರ್ನಾಟಕದಲ್ಲಿ ಅಪಾರ ಪ್ರಭಾವವನ್ನು ಹೊಂದಿರುವ ಪೀಠಗಳು ಪ್ರಾಚೀನ ಕಾಲದಿಂದಲೂ ಅರಸರಿಂದ ದಾನದತ್ತಿಗಳನ್ನು ಪಡೆದುಕೊಂಡಿವೆ. ಇವುಗಳು ಸಮುದಾಯದ ಧಾರ್ಮಿಕ ಮತ್ತು ನೈತಿಕ ಬದುಕನ್ನು ನಿಯಂತ್ರಿಸುವುದರ ಜೊತೆಗೆ ಕೃಷಿ ಮತ್ತು ಹಣಕಾಸು ಚಟುವಟಿಕೆಗಳನ್ನು ನಿಯಂತ್ರಿಸುತ್ತಿದ್ದವು.

೧೨ನೇ ಶತಮಾನದ ಶರಣರು ಕುಲೇಳು ಹದಿನೆಂಟು ಜಾತಿಗಳು ಒಂದೇ ಎಂದು ಸಾರಿದ್ದ ಆಶಯ ಗುರು ವಿರಕ್ತರ ತಿಕ್ಕಾಟದಿಂದ ಒಡೆದು ಹೋಯಿತು. ಇದರಿಂದಾಗಿ ವೀರಶೈವದಿಂದ ಅನೇಕ ದುಡಿಯುವ ವರ್ಗಗಳು ಹೊರಗುಳಿದವು. ಈ ಸಂದರ್ಭದಲ್ಲಿ ದುಡಿಯುವ ವರ್ಗದ ಆರಾಧ್ಯ ದೈವಗಳಾಗಿ ಗಣಾಧೀಶ್ವರರು ಕಾಣಿಸಿಕೊಂಡರು. ಈ ಎಲ್ಲಾ ಶರಣರು ಮಧ್ಯ ಕರ್ನಾಟಕವನ್ನೆ ತಮ್ಮ ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಳ್ಳಲು ಇದ್ದ ಒತ್ತಡವೆಂದರೆ, ದಕ್ಷಿಣ ಭಾಗದ ಮಂಟೇಸ್ವಾಮಿ, ಮಾದೇಶ್ವರ ಪರಂಪರೆಗಳು ೧೨ನೇ ಶತಮಾನದ ಶರಣರ ಆಶಯಗಳನ್ನು ಪ್ರಚಾರಪಡಿಸಿದರೆ, ಉತ್ತರದ ಕಡೆ ಮುಸ್ಲಿಂ ಪ್ರಭಾವದಿಂದಾಗಿ ಸೂಫಿ ಸಂತರು ಈ ಕೆಲಸವನ್ನು ಮಾಡಿದರು. ಮಧ್ಯಕರ್ನಾಟಕ ಭಾಗದಲ್ಲಿ ಅದರಲ್ಲಿ ನೂರೊಂದು ವಿರಕ್ತರಿದ್ದ ಹಂಪೆಯ ಪರಿಸರದ ಜನ ಸಮುದಾಯದಲ್ಲಿ ಶರಣರ ಆದರ್ಶಗಳು ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಲಿದ್ದು ಅದನ್ನು ಬದಲಾದ ಕಾಲಮಾನದ ಪರಿಸ್ಥಿತಿಗನುಗುಣವಾಗಿ ಪುನರುಜ್ಜೀವನಗೊಳಿಸಲಿಕ್ಕೆ ಪಂಚಗಣಾಧೀಶ್ವರರು ಪ್ರಯತ್ನಿಸಿದರು.

ಸಾಮಾಜಿಕ ಒತ್ತಡಗಳು

ಪ್ರಾಚೀನ ಜೀವನ ಪದ್ಧತಿಯಲ್ಲಿ ಮನುಷ್ಯ ಸಂಘಜೀವಿಯಾಗಿದ್ದನು. ಏನನ್ನೇ ಉತ್ಪಾದಿಸಲಿ, ಬೇಟೆಯಾಡಲಿ ಎಲ್ಲವೂ ಸಾಂಘಿಕವಾಗಿಯೇ ನಡೆದು ಬರುತ್ತಿತ್ತು. ಏಕೆಂದರೆ ಒಬ್ಬನೇ ಪ್ರಕೃತಿಯ ವಿರುದ್ಧ ಹೋರಾಡಲು ಅಶಕ್ತನಾಗಿದ್ದ. ಹಾಗಾಗಿ ಅಲ್ಲಿ ಜಾತಿ ವ್ಯವಸ್ಥೆಯಾಗಲಿ, ಶೋಷಕ-ಶೋಷಿತ ಸಂಬಂಧವುಳ್ಳ ಸಮಾಜ ವ್ಯವಸ್ಥೆಯಾಗಲಿ ಇರಲಿಲ್ಲ. ಬೆಳವಣಿಗೆಯ ಮುಂದಿನ ಹಂತದಲ್ಲಿ ಬೆಂಕಿಯ ಉಪಯೋಗ ಮತ್ತು ಪ್ರಾಣಿಗಳನ್ನು ಪಳಗಿಸುವುದರ ಮೂಲಕ ಒಂದೆಡೆ ನೆಲೆ ನಿಲ್ಲುವುದನ್ನು ಸಂಪತ್ತಿನ ಉತ್ಪಾದನೆಯನ್ನು ಪಶು ಸಾಕಾಣಿಕೆಯನ್ನು ಪ್ರಾರಂಭಿಸಿದ. ಇದರಿಂದಾಗಿ ಹೊಸ ಸಮಾಜ ರಚನೆ ನಿರ್ಮಾಣವಾಯಿತು.

ಪ್ರಾಣಿಗಳನ್ನು ಪಳಗಿಸುವುದರ ಮೂಲಕ ಸಾಕುವುದನ್ನು ಕಲಿತ ಮನುಷ್ಯ ಅವುಗಳ ಹಾಲು, ತುಪ್ಪ, ಚರ್ಮ, ಉಣ್ಣೆ, ಮಾಂಸ ಮೊದಲಾದ ಸೌಲಭ್ಯಗಳನ್ನು ಪಡೆಯಲಾರಂಭಿಸಿದ. ಇಂತಹ ದನಗಾಹೀ ಗುಂಪುಗಳು ಇತರ ಅನಾಗರಿಕರ ದೊಡ್ಡ ಮೊತ್ತದಿಂದ ಬೇರೆಯಾದವು. ಇದೇ ಜಗತ್ತಿನ ಮೊತ್ತ ಮೊದಲನೇ ಶ್ರಮ ವಿಭಜನೆ. ದನ ಕುರಿಗಳ ಸಂಖ್ಯೆ ಜಾಸ್ತಿ ಆದಂತೆ ಸೌಲಭ್ಯಗಳ ಬಳಕೆ ಹೆಚ್ಚಾಗಿ ಒಬ್ಬರಿಗೊಬ್ಬರು ವಿನಿಮಯ ಮಾಡಿಕೊಳ್ಳಲಾರಂಭಿಸಿದರು. ಇದೇ ಹೊತ್ತಿನಲ್ಲಿ ಬದುಕಿಗೆ ಅವಶ್ಯಕವಾದ ಆಯುಧಗಳನ್ನು, ಕರಕುಶಲ ವಸ್ತುಗಳನ್ನು ಉತ್ಪಾದಿಸಲು ಆರಂಭಿಸಲಾಯಿತು.

ವಿಜಯನಗರ ಪತನನಂತರ ಪಾಳೇಗಾರರು ಒಂದನ್ನೊಂದು ಮುಗಿಸುವ ಪೈಪೋಟಿಯಲ್ಲಿ ಇನ್ನಿಲ್ಲದಷ್ಟು ಪ್ರಮಾಣದ ಯುದ್ಧಗಳಲ್ಲಿ ತೊಡಗಿದವು. ಇದರಿಂದಾಗಿ ಸೇನಾಶಕ್ತಿಯ ಪ್ರಾಮುಖ್ಯತೆ ಹೆಚ್ಚಾಗಿ ಸಾಮಾಜಿಕ ರಂಗದಲ್ಲಿ ಸಮರಶೀಲ ಜಾತಿಗಳ ಪ್ರಾಮುಖ್ಯತೆಯೂ ಹೆಚ್ಚುತ್ತಾ ಹೋಯಿತು. ಅವುಗಳಲ್ಲಿ ಬೇಡ, ಕುರುಬ ಜನಾಂಗ ಪ್ರಮುಖವಾದವು. ಮಧ್ಯಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದ ಚಿತ್ರದುರ್ಗ, ಹರಪನಹಳ್ಳಿ, ನಾಯಕನಹಟ್ಟಿ, ಗುಡೇಕೋಟೆ, ರಾಯದುರ್ಗದ ಪಾಳೇಗಾರರು ಬೇಡ ಸಮುದಾಯದವರಾಗಿದ್ದರು. ಈಗಲೂ ಬೇಡ ಸಮುದಾಯದವರು ಈ ಭಾಗದಲ್ಲಿ ಅತಿ ಹೆಚ್ಚು ವಾಸಿಸುತ್ತಿದ್ದಾರೆ. ಅದೇ ರೀತಿ ಕಬ್ಬಿಣ ಉತ್ಪಾದನೆಯ ಕೌಶಲ್ಯವನ್ನು ಹೊಂದಿರುವ ಕುರುಬ ಜನಾಂಗ ಈ ಭಾಗದಲ್ಲಿ ಹೆಚ್ಚಿಗಿದೆ. ಇದರೊಂದಿಗೆ ಲಿಂಗಾಯಿತ ಸಮುದಾಯದವರೂ ಹೆಚ್ಚಾಗಿ ಕಂಡುಬರುತ್ತಾರೆ.

ಲಿಂಗಧಾರಣೆ ಮತ್ತು ವೈವಾಹಿಕ ಸಂಬಂಧಗಳ ಮೂಲಕ ಸಮಾಜದ ವಿವಿಧ ವರ್ಗಗಳಿಗೆ ಮಾನ್ಯತೆ ಕೊಡುವುದರ ಜೊತೆಗೆ ಪಂಚಗಣಾಧೀಶ್ವರರು ಕುಲೇಳು ಹದಿನೆಂಟು ಜಾತಿಗಳನ್ನು ಸಮಾನವಾಗಿ ಕಾಣಲು ಪ್ರಯತ್ನಿಸಿದರು. ಅಷ್ಟೇ ಅಲ್ಲದೆ ಕೆಲವೊಂದು ಲೌಕಿಕ ಉದ್ದೇಶಗಳನ್ನು ಇವರು ಹೊಂದಿದ್ದರು. ಅವುಗಳೆಂದರೆ ಬೇಡ ಜನಾಂಗ ಮಧ್ಯ ಕರ್ನಾಟಕ ಭಾಗದಲ್ಲಿ ಪ್ರಭುತ್ವವನ್ನು ಹೊಂದಿತ್ತು. ಈ ಬೇಡ ಸಮುದಾಯಕ್ಕೆ ತಿಪ್ಪೇಸ್ವಾಮಿ ಲಿಂಗಧಾರಣೆ ಮಾಡುವುದರ ಮುಖಾಂತರ ಪ್ರಭುತ್ವದ ಮೇಲೆ ಪ್ರಭಾವ ಬೀರಿದ್ದಾರೆ.

ಯಾವುದೇ ಧರ್ಮಗಳಿಗೆ ರಾಜಪ್ರಭುತ್ವ ಹಾಗೂ ಜನಸಮುದಾಯಗಳ ಬೆಂಬಲ, ಪ್ರೋತ್ಸಾಹ ಆಶ್ರಯ ದೊರೆತರೆ ಅಂತಹವು ವ್ಯಾಪಕವಾಗಿ ಬೆಳೆಯುತ್ತ ಅಧಿಕೃತಗೊಳ್ಳುತ್ತಾ ಹೆಚ್ಚು ಕಾಲ ಉಳಿದು ಬೆಳೆದು ನಿಲ್ಲುತ್ತದೆ. ಇವರು ಸಹ ಬೆಂಬಲ ನಿರೀಕ್ಷೆಗಳನ್ನು ಇಟ್ಟುಕೊಂಡು ಬಾಳಿವೆ.

ಪ್ರೇರಣೆಗಳು

೧೨ನೇ ಶತಮಾನದ ಹೊತ್ತಿಗಾಗಲೇ ಕರ್ನಾಟಕದಲ್ಲಿ ಬೌದ್ಧಧರ್ಮ ಕಣ್ಮರೆಯಾಗಿತ್ತು. ಜೈನಧರ್ಮ ಅತಿಯಾದ ಅಹಿಂಸೆ, ಅದರ ಕಟ್ಟುನಿಟ್ಟಿನ ಜೀವನಕ್ರಮ ಮತ್ತು ಮಹಿಳೆಯನ್ನು ಕಡೆಗಣಿಸಿದ್ದು, ರಾಜಾಶ್ರಯವನ್ನು ಬಯಸುತ್ತಿದ್ದವರ ಮೂಲಕ ಜನಸಾಮಾನ್ಯರಿಂದ ದೂರವಾಗಲಾರಂಭಿಸಿತ್ತು. ವೈದಿಕ ಧರ್ಮ ಕಾಲಕಾಲಕ್ಕೆ ಹೊಸ ರೂಪವನ್ನು ಪಡೆಯುತ್ತಾ ಪ್ರಬಲವಾಗಿಯೇ ಇತ್ತು. ಅಲ್ಲದೆ ವರ್ಣಾಶ್ರಮ ಪದ್ಧತಿಯನ್ನು ಅನುಸರಿಸುವ ಮೂಲಕ ದುಡಿಯುವ ವರ್ಗವನ್ನು ಕೀಳಾಗಿ ಕಾಣುತ್ತಿತ್ತು. ದೇವಾಲಯಗಳು

ಅದಕ್ಕೆ ಹೊಂದಿಕೊಂಡ ಪ್ರಾಚೀನ ಶೈವ ಮಠಮಾನ್ಯಗಳು ಸಂಪದ್ಭರಿತವಾಗಿ ಸಮಾಜದ ಅಧಿಕಾರವನ್ನು ತಮ್ಮಲ್ಲಿಟ್ಟುಕೊಂಡಿದ್ದವು. ಭೂ ಮಾಲೀಕರು ಪ್ರಭುತ್ವ ಮತ್ತು ಸಮಾಜದ ನಡುವೆ ಮಧ್ಯವರ್ತಿಗಳಾಗಿದ್ದರು. ಭೂ ಮಾಲೀಕ ವರ್ಗವು. ರೈತರನ್ನು, ದುಡಿಯುವ ವರ್ಗವನ್ನು ಸುಲಿಯುತ್ತಿತ್ತು. ಪುರೋಹಿತಶಾಹಿ ಶಕ್ತಿ ಮತ್ತು ಭೂಮಾಲೀಕತ್ವದ ಶೋಷಣೆಯಿಂದ ಬೇಸತ್ತ ಬಹುಸಂಖ್ಯಾತ ದುಡಿಯುವ ವರ್ಗದ ರೈತರು, ಕುಶಲಕರ್ಮಿಗಳು, ಸಮಾಜದಲ್ಲಿ ಬದಲಾವಣೆಯನ್ನು ಬಯಸಿದ್ದರು.

ವ್ಯಾಪಾರಸ್ಥರು, ರೈತರು, ಕಸುಬುದಾರರು ವೀರಶೈವ ಧರ್ಮದಲ್ಲಿ ಸೇರಿಕೊಂಡು ಸಮಾಜದಲ್ಲಿ ತಮ್ಮ ನಡೆಯ ಮೂಲಕ, ವಚನಗಳ ಮೂಲಕ ಹೊಸ ಸ್ವರೂಪವನ್ನು ಕೊಡಲು ಪ್ರಯತ್ನಿಸಿದರು. ಪ್ರತಿಯೊಬ್ಬನಿಗೂ ದುಡಿಮೆಯನ್ನು ಕಡ್ಡಾಯ ಮಾಡಿದರು. ವೃತ್ತಿ ಆಧಾರಿತ ದುಡಿಮೆಯಲ್ಲಿ ಸಮಾನ ಸ್ಥಾನವನ್ನು ನೀಡಿದರು. ಸಮಾಜದಲ್ಲಿನ ಎಲ್ಲ ವರ್ಗಗಳಿಗೂ ಸಮಾನ ಗೌರವನವನ್ನು ನೀಡಲಾಯಿತು. ಲಿಂಗದೀಕ್ಷೆಯನ್ನು ಕೆಳವರ್ಗಗಳಿಗೆ ನೀಡುವ ಮೂಲಕ "ಹೊಲೆಯುಂಟೆ ಲಿಂಗವಿದ್ದಡೆಯಲ್ಲಿ" ಎಂದು ಅವರನ್ನು ಸಮಾನವಾಗಿ ಕಾಣತೊಡಗಿದರು. ಸಂಪತ್ತಿನ ದುರಾಸೆಯೇ ಅಪಾಯಕಾರಿ ಎಂದು ತಿಳಿಸಲಾಯಿತು. ಆದ್ದರಿಂದ ಕಾಯಕದಿಂದ ಗಳಿಸಿದ್ದನ್ನು ಸಮುದಾಯದಲ್ಲಿನ ಬಡಬಗ್ಗರಿಗೆ ದೀನ ದಲಿತರಿಗೆ, ದುರ್ಬಲರಿಗೆ ವ್ಯಯಿಸುವಂತಾಗಲು ದಾಸೋಹ ಪದ್ಧತಿಯನ್ನು ಜಾರಿಗೆ ತರಲಾಯಿತು. ಸಮುದಾಯದಲ್ಲಿ ಸಂಘಟನಾತ್ಮಕ ಭ್ರಾತೃತ್ವ ಬೆಳೆಯಲು ಕಾರಣವಾಯಿತು.

೧೨ ನೇ ಶತಮಾನದಲ್ಲಿ ಮರುಕಳಿಸುವ ವಸ್ತುವೆಂದರೆ ಜಾತಿ. ಊಳಿಗಮಾನ್ಯ ವ್ಯವಸ್ಥೆಯ ಶ್ರಮದ ಮೌಲ್ಯವನ್ನು ದೋಚುವುದಕ್ಕೆ ಜಾತಿಯನ್ನೇ ಒಂದು ಮಾನದಂಡವನ್ನಾಗಿ ಬಳಸಿಕೊಂಡಿತ್ತು. ಜಾತಿ ಪದ್ಧತಿಯನ್ನು ಹೋಗಲಾಡಿಸಲು ಮುಂದಾದರು. ಜಾತಿ ಗುಂಪುಗಳಾಗಿ ಸಮಾಜವನ್ನು ವರ್ಗೀಕರಿಸಿದ್ದ ಪೂರ್ವಾಗ್ರಹಗಳ ವಿರುದ್ಧ ಚಳುವಳಿ ದೊಡ್ಡ ಹೋರಾಟವನ್ನೇ ಸಂಘಟಿಸಿತು. ಕೆಳವರ್ಗಗಳಲ್ಲಿ ಆಚರಣೆಯಲ್ಲಿರುವ ಅನಿಷ್ಟಕಾರಿ ಪದ್ಧತಿಗಳನ್ನು ಖಂಡಿಸಲಾಯಿತು.

ಮಾಂಸಹಾರವನ್ನು 'ಅಪವಿತ್ರ'ವೆಂದು ನಂಬಿ ಅದನ್ನುಣ್ಣುವ ಭಕ್ತರನ್ನು ಪವಿತ್ರರಾಗಿಸುವಾಗ ಹುಟ್ಟುವ ಬಿಕ್ಕಟ್ಟಿದು.

"ಬ್ಯಾಡರ ಸಂಗಾಕೆ ಹೋದಾನೆ ತಿಪ್ಪಯ್ಯ
ಮದ್ಯ ಮಾಂಸಗಳ ಮಾಡೆಂದ ಹೊರ ಮಠಕೆ
ಎಡಿಯೇ ತಿಪ್ಪಯ್ಯಗ ಇರಲೆಂದು"

ಮಾಂಸವನ್ನು ಸ್ವೀಕರಿಸುವುದರ ಮೂಲಕ ನಾಯಕನಹಟ್ಟಿ ತಿಪ್ಪೇಸ್ವಾಮಿಯು ೧೨ನೇ ಶತಮಾನದ ಶರಣರ ಆಲೋಚನೆಗಳಿಗಿಂತ ಭಿನ್ನವಾಗಿ ಕೆಳವರ್ಗಗಳ ಸಾಂಸ್ಕೃತಿಕ ಅನನ್ಯತೆಯನ್ನು ಎತ್ತಿ ಹಿಡಿಯುತ್ತಾನೆ.

ಈ ರೀತಿ ಬೇಡರ ಸಂಗಕ್ಕೆ ಹೋಗಿ ಮದ್ಯ ಮಾಂಸಗಳನ್ನು ಸ್ವೀಕರಿಸುವುದಕ್ಕೆ ಸ್ಥಳೀಯ ಪ್ರದೇಶದಲ್ಲಿದ್ದು ಸಾಮಾಜಿಕ, ರಾಜಕೀಯ, ಆರ್ಥಿಕ ಕಾರಣಗಳು ಹಿನ್ನೆಲೆಯಾಗಿ ಕೆಲಸ ಮಾಡಿರುತ್ತವೆ. ನಾಯಕರು ಹೆಚ್ಚಾಗಿ

ಕಂಡುಬರುವ ಈ ಭಾಗದಲ್ಲಿ ಆರ್ಥಿಕವಾಗಿ, ರಾಜಕೀಯವಾಗಿ ಅವರು ಪ್ರಬಲರಾಗಿದ್ದಾರೆ. ಅಲ್ಲದೆ ಯಾವುದೇ ಜಾತಿ-ಜನಾಂಗ ಒಟ್ಟಿಗೆ ಬದುಕುವಾಗ ಮತಾಂತರ ಅಥವಾ ಧಾರ್ಮಿಕ ಪ್ರಭಾವಕ್ಕೆ ಒಳಗಾಗಿ ಹೊಸ ಪಂಥ ಧರ್ಮದ ಅನುಯಾಯಿಯಾದೊಡನೆ ಹಳೆ ನಂಬಿಕೆ ಆಚರಣೆಗಳನ್ನು ಹೊಸ ಜೀವನ ಪದ್ಧತಿಯೊಡನೆ ಬೆರಸತೊಡಗುತ್ತಾರೆ. ೧೨ನೇ ಶತಮಾನದ ಚಳುವಳಿ ಈ ಕಾಲದ ಮಾನವೀಯ ಮೌಲ್ಯಗಳ ಹುಡುಕಾಡುವ ಕಾಲವಾಗಿದೆ. ಸಂಪೂರ್ಣವಾಗಿ ಈ ಚಳುವಳಿಯ ನೆಲೆಯು ಮನುಷ್ಯನ ಆರೋಗ್ಯಕರ ಬದುಕಿನ ಮೌಲ್ಯವಾಗಿರುವುದರಿಂದ ಅದು ಕಾಲಾತೀತವಾಗಿಯು ಉಳಿದುಕೊಂಡಿದೆ.

ತಿಪ್ಪೇಸ್ವಾಮಿಗಳು ನಾಯಕನಹಟ್ಟಿ ಪ್ರವೇಶಿಸುವ ಸಂದರ್ಭ

ಫಣಿಯಪ್ಪ ಒಬ್ಬ ವ್ಯಾಪಾರಿ ಇಲ್ಲಿ ಬೆಳೆದಂತಹ ಕೊಬ್ಬರಿಯನ್ನು ತೆಗೆದುಕೊಂಡು ಹೋಗಿ ಮಾರಿ ಬಂದಂತಹ ಹಣದಿಂದ ದಿನಸಿ ಪದಾರ್ಥಗಳನ್ನು ತಂದು ಮಾರಾಟ ಮಾಡುತ್ತಿದ್ದ. ಹೀಗೆ ಮಾಡುವಂತಹ ಸಂದರ್ಭದಲ್ಲಿ ಫಣಿಯಪ್ಪನಿಗೆ ಸ್ವಾಮಿಜಿಗಳು ಭೇಟಿಯಾಗುವ ಸಂದರ್ಭದಲ್ಲಿ ಎಂದು ಸಿಗದೆಯಿರುವಷ್ಟು ಲಾಭ ಸಿಗುತ್ತದೆಯಂತೆ. ಫಣಿಯಪ್ಪ ತುಂಬಾ ಲಾಭ ಸಿಕ್ಕಿದೆ, ಇಲ್ಲೆ ಈಶ್ವರನ ಗುಡಿಯಿದೆ ಹೋಗಿ ಹಣ್ಣು ಕಾಯಿ ತೆಗೆದುಕೊಂಡು ಪೂಜೆ ಮಾಡಿಸಿ ಪ್ರಸಾದ ನೈವೇದ್ಯ ಮಾಡಿಕೊಂಡು ಮುಂದೆ ಪ್ರಯಾಣ ಮುಂದುವರಿಸಬೇಕೆಂದುಕೊಂಡು ಹೊರಡುವ ಸಂದರ್ಭದಲ್ಲಿ ದೇವಸ್ಥಾನದ ಹತ್ತಿರ ಸ್ವಾಮಿಗಳು ಕುಳಿತುಕೊಂಡು ಫಣಿಯಪ್ಪನನ್ನು ಕೂಗಿ ಕರೆದರು. ಫಣಿಯಪ್ಪ ಸ್ವಾಮಿಗಳ ಹತ್ತಿರಹೋಗಿ ಏನು ಸ್ವಾಮಿ ಎಂದು ಫಣಿಯಪ್ಪ ಕೇಳಿದ. ಆದರೂ ಎಲ್ಲೋ ಒಂದು ಕಡೆ ಫಣಿಯಪ್ಪನವರಿಗೆ ಈ ಸ್ವಾಮಿಗಳು ನನ್ನ ಹೆಸರಿಡಿದು ಕರೆಯುತ್ತಾರೆ ಅಂದುಕೊಂಡು ಏನು ಸ್ವಾಮಿ ಎಂದಾಗ ನನಗೆ ತುಂಬಾ ಹಸಿವಾಗಿದೆ ಎಂದರು. ಫಣಿಯಪ್ಪ ಸ್ವಾಮಿ ಇಲ್ಲೇ ಪಕ್ಕದಲ್ಲಿ ಈಶ್ವರನ ದೇವಾಲಯವಿದೆ ಪೂಜೆ ಮುಗಿಸಿಕೊಂಡು ಬಂದು ಪ್ರಸಾದ ನಿಮಗೆ ಕೊಡುತ್ತಿನಿ ಎಂದು ಫಣಿಯಪ್ಪನವರು ಹೇಳಿದರು. ಸ್ವಾಮಿಗಳು ಇಲ್ಲ ಹಣ್ಣುಕಾಯಿ ನನಗೆ ಕೊಡು ತುಂಬಾ ಹಸಿವಾಗುತ್ತಿದೆ ಎಂದು ಹಠ ಮಾಡುತ್ತಾರೆ.

ಫಣಿಯಪ್ಪ ಇಲ್ಲಸ್ವಾಮಿ ನಾನು ಕೊಡಲ್ಲ ಶಿವನ ಪೂಜೆ ಆಗದೆ ನಾನು ಏನು ಕೊಡಲ್ಲ ಪೂಜೆ ಮುಗಿದ ಮೇಲೆ ಕೊಡುತ್ತೀನಿ ಎಂದು ಹೇಳಿದರು. ಸ್ವಾಮೀಜಿಯನ್ನು ನೋಡಿ ನೀವು ಗುರುಗಳ ತರಹ ಕಾಣಿಸುತ್ತೀರಾ ಪೂಜೆಯನ್ನೇ ಧಿಕ್ಕಾರ ಮಾಡುತ್ತೀರಲ್ಲ ಎಂದು ಬೈದು ಶಿವಪೂಜೆ ಮಾಡುವ ಕಾಲಕ್ಕೆ ಪೂಜೆಗೆ ಇಟ್ಟಂತಹ ಹಣ್ಣು ಕಾಯಿ ಪತ್ರೆಯಲ್ಲ ಮಾಯವಾಗಿ ಬಿಟ್ಟವೆಂದು ಅಯ್ಯೋ ಇದೇನಾಶ್ಚರ್ಯ ಎಂದು ಸುತ್ತ ತಿರುಗಿ ನೋಡಿದಾಗ ಇಟ್ಟಂತಹ ಪತ್ರೆ, ಹೂ, ಹಣ್ಣು, ಕಾಯಿ ಎಲ್ಲವೂ ಸ್ವಾಮಿಯ ಪಾದದ ಕೆಳಗೆ ಬಿದ್ದಿದ್ದವಂತೆ.

ಫಣಿಯಪ್ಪ ಸ್ವಾಮಿಯ ಹತ್ತಿರ ಬಂದು ಸ್ವಾಮಿ ನಾನು ಮಾಡಿದ್ದು ತಪ್ಪಾಯಿತು. ನನ್ನನ್ನು ಮನ್ನಿಸಬೇಕು ಎಂದು ಕೇಳಿಕೊಂಡಾಗ ಸ್ವಾಮಿ ಹಣ್ಣು ಕಾಯಿಗಳನ್ನೆಲ್ಲ ನೀವೇ ತಿನ್ನಿ ಸ್ವಾಮಿ ಎಂದು ತಿನ್ನಲು ಕೊಟ್ಟಾಗ ಸ್ವಾಮಿಗಳು ತಿಂದ ನಂತರ ಫಣಿಯಪ್ಪ ನನಗೆ ಹಸಿವಿನ ದಾಹ ನೀಗಲಿಲ್ಲ. ನಿನ್ನ ಹತ್ತಿರ ಇರುವಂತಹ

ಬುತ್ತಿಕೊಡು ಎಂದು ಕೇಳಿದರು. ಫಣಿಯಪ್ಪ ಸ್ವಾಮಿ ನನ್ನ ಹತ್ತಿರ ಬುತ್ತಿ ಸ್ವಲ್ಪ ಪ್ರಮಾಣದಲ್ಲಿದೆ. ಫಣಿಯಪ್ಪ ನಾನು ಮತ್ತು ನನ್ನ ಗೆಳೆಯರಲ್ಲ ಇದ್ದೀವಿ ಇದನ್ನು ನೀವೇ ತಿನ್ನಿ ಎಂದು ಹೇಳಿದರು. ಆಗ ತಿಪ್ಪೇಸ್ವಾಮಿ ಇಲ್ಲ ಇದ್ದುದರಲ್ಲೆ ಹಂಚಿ ತಿನ್ನಬೇಕು ಎಂದು ಗುರು ಹಿರಿಯರು ಹೇಳಿದ್ದಾರೆ. ತೆಗೆದುಕೊಂಡು ಬಾ ಎಂದು ಹೇಳಿದರು. ಫಣಿಯಪ್ಪನವರು ಇರುವ ಬುತ್ತಿಯನ್ನು ಎಲ್ಲರಿಗೂ ಹಂಚಿದರಂತೆ ಹಂಚಿದಾಗ ಎಲ್ಲರಿಗೂ ನಿಂಬೆಹಣ್ಣಿನ ಗಾತ್ರದಷ್ಟು ಬುತ್ತಿ ಬಂತಂತೆ ಜೊತೆಯಲ್ಲಿದ್ದ ಗೆಳೆಯರೆಲ್ಲ ತಮಾಷೆ ಮಾಡಿದರಂತೆ. ಅಯ್ಯೋ ಇದೇನು ನಮಗೆ ಊಟ ಸಾಲುತ್ತ ಎಂದಾಗ ಊಟ ತಿನ್ನುತ್ತ ತಿನ್ನುತ್ತ ಬುತ್ತಿ ಒಂದಕ್ಕೆ ಎರಡು ಪಟ್ಟು ಜಾಸ್ತಿಯಾಗುತ್ತ ಹೋಗುತ್ತದೆ. ಎಲ್ಲರೂ ಊಟ ಮಾಡಿದರು ಸಹ ಬುತ್ತಿ ಹಾಗೆಯೇ ಉಳಿದಿರುವುದನ್ನು ಕಂಡು ಆಶ್ಚರ್ಯವಾಯಿತು. ಹೀಗೆ ಉಳಿದಂತಹ ಬುತ್ತಿಯನ್ನು ಹೊಳೆಯಲ್ಲಿ ಬಿಟ್ಟರಂತೆ.

ಜನರು ಸ್ವಾಮೀಜಿಗಳ ಈ ಪವಾಡವನ್ನು ನೋಡಿ ನೀವು ನಮ್ಮೂರಿಗೆ ಬರಬೇಕು, ನಮ್ಮ ಕ್ಷೇತ್ರಕ್ಕೆ ಬರಬೇಕು, ನಮ್ಮ ಕ್ಷೇತ್ರದ ಜನರ ಸ್ಪರ್ಶಮಾಡಿ ಪಾವನ ಮಾಡಬೇಕು ಎಂದರಂತೆ. ನಂತರ ಸ್ವಾಮೀಜಿಗಳು ನಡೀರಿ ನಾವು ಆ ಕಡೆನೇ ಬರುತ್ತಾಯೀದೀನಿ ಎಂದು ಹೇಳಿದರು. ಹೀಗೆ ಬಂದಂತಹ ಸಂದರ್ಭ ಸುಮಾರು ೧೪-೧೫ನೇ ಶತಮಾನದಲ್ಲಿ ನಾಯಕನಹಟ್ಟಿ, ಆನೆಗೊಂದಿ ಸಂಸ್ಥಾನಕ್ಕೆ ಸೇರಿತ್ತು. ಸ್ವಾಮಿಗಳು ನಡೆದುಕೊಂಡು ಬರುತ್ತಿರುವಾಗ ಮೊಳಕಾಲ್ಮೂರು ಈ ಕಡೆಗೆ ಕೊಂಡ್ಲಹಳ್ಳಿ ಆಚೆಗೆ ಕಾಡುದಾರಿ ಆ ಸ್ಥಳಕ್ಕೆ ಬರುವ ಹೊತ್ತಿಗೆ ಕತ್ತಲಾಯಿತಂತೆ. ಆಗ ಸ್ವಾಮಿಗಳಿಗೆ ಶಿವನ ಪೂಜೆ ಮಾಡುವುದು ವಾಡಿಕೆ. ಸ್ವಾಮಿಗಳು ಫಣಿಯಪ್ಪನಿಗೆ ಹೇಳಿದರು. ಶಿವಪೂಜೆಗೆ ನೀರಿನ ವ್ಯವಸ್ಥೆ ಮಾಡು ಎಂದು ಆಗ ಫಣಿಯಪ್ಪನವರು ಸ್ವಾಮಿ ಇದು ಬೆಂಗಾಡು ಇಲ್ಲಿ ಎಲ್ಲೂ ಸಹ ನೀರು ಸಿಗೊಲ್ಲ. ಇನ್ನು ಸ್ವಲ್ಪ ಮುಂದೆ ಹೋಗುವುದರೊಳಗಾಗಿ ಕತ್ತಲಾಗಿ ಬಿಡುತ್ತೆ ಹೇಗೆ ಮಾಡೋದು ಎಂದು ಯೋಚಿಸುತ್ತಿರುವಾಗ ಸ್ವಾಮಿಗಳು ಸುತ್ತಮುತ್ತ ನೋಡಿ ಒಂದು ಸ್ಥಳದಲ್ಲಿ ಅದು ಪೂರ್ತಿಯಾಗಿ ಸುಣ್ಣಗಾಡು ಪ್ರದೇಶ ಅಲ್ಲಿ ಎಲ್ಲೂ ನೀರು ಸಿಗೊಲ್ಲ ಅಂತಹ ಒಂದು ಸ್ಥಳದಲ್ಲಿ ಸ್ವಾಮಿಗಳು ಜಾಗ ತೋರಿಸಿ ಇಲ್ಲಿ ಒಂದು ಅಡಿಯಷ್ಟು ಮಣ್ಣು ತೆಗೆಯಿರಿ ನೀರು ಸಿಗುತ್ತೆ ಎಂದು ಹೇಳಿದರು.

ಒಂದು ಅಡಿಯಷ್ಟು ಮಣ್ಣು ತೆಗೆದಾಗ ಸುಣ್ಣಗಾಡು ಪ್ರದೇಶದಲ್ಲಿ ನೀರು ಉಕ್ಕಿ ಹರಿಯಿತಂತೆ. ಆ ಉಕ್ಕಿದ ನೀರಿನಲ್ಲಿ ಶಿವಪೂಜೆ ಮಾಡಿಕೊಂಡು ಬಂದರಂತೆ. ಈಗಲೂ ಸಹಿತ ಅದನ್ನು ಕೊಂಡ್ಲಹಳ್ಳಿಯಲ್ಲಿ ಕಾಣಬಹುದು. ಅದನ್ನು “ಬಿಳಿನೀರಿನ ಚಿಲುಮೆ” ಎಂದು ಕರೆಯುತ್ತಾರೆ. ಅಲ್ಲಿ ಒಂದು ಕಲ್ಯಾಣಿ ಮಾಡಿದ್ದಾರೆ. ಈಗಲೂ ಸಹ ನೀರು ಸಿಗುತ್ತದೆ. ಅದು ಪೂರ್ತಿ ಬಿಳಿಯಾಗಿರುತ್ತದೆ. ಹಾಲಿನ ತರಹವಿದೆ. ನೀರು ಎಷ್ಟು ಸಿಹಿಯಾಗಿದೆ ಎಂದರೆ ಸುಣ್ಣಗಾಡು ಪ್ರದೇಶದಲ್ಲಿ ಅಂತಹ ಸಿಹಿಯಾದ ನೀರು ಎಲ್ಲೂ ಸಿಗುವುದಿಲ್ಲ. ತರಹ ಕುಳಿತು ಪೂಜೆ ಮಾಡಿದಂತಹ ಸ್ಥಳ ಪವಿತ್ರವಾದುದು.

ಅಲ್ಲಿಂದ ಮುಂದೆ ಪ್ರಯಾಣ ಮಾಡುತ್ತಾ ಮಾಡುತ್ತಾ ಹೋಗುವಾಗ ಮಾರ್ಗ ಮಧ್ಯದಲ್ಲಿ ಕತ್ತಲಾಯಿತು. ಮೊದಲೆಲ್ಲಾ ಪ್ರಯಾಣ ಮಾಡುವಂತಹ ಸಂದರ್ಭದಲ್ಲಿ ಕತ್ತಿ, ಗುರಾಣಿಗಳನ್ನು ಇಟ್ಟುಕೊಂಡು

ಹೋಗುತ್ತಿದ್ದರು. ಏಕೆಂದರೆ ವ್ಯಾಪಾರದ ದೃಷ್ಟಿಯಿಂದ ಕಳ್ಳಕಾಕರ ಸಲುವಾಗಿ, ಕಾಡು ಪ್ರಾಣಿಗಳಿಂದ ರಕ್ಷಣೆ ಪಡೆಯುವ ಸಲುವಾಗಿ ಕತ್ತಿ ಗುರಾಣಿಯಿಟ್ಟುಕೊಂಡು ಹೋಗುತ್ತಿದ್ದರು. ಹಾಗಾಗಿ ರಾತ್ರಿ ವೇಳೆಯಲ್ಲಿ ಪ್ರಯಾಣ ಮಾಡಲು ಪಂಜುಗಳನ್ನು ಇಟ್ಟುಕೊಂಡು ಹೋಗುತ್ತಿದ್ದರು. ಬೆಳಕಿಗೋಸ್ಕರ ಪಂಜುಗಳನ್ನು ಹಿಡಿದುಕೊಂಡು ಹೋಗುವಂತಹ ಸಂದರ್ಭದಲ್ಲಿ ಇವರುಗಳೆಲ್ಲ ಒಂದು ತಂಡವಾಗಿ ಹೋಗುವಂತಹ ಸಮಯದಲ್ಲಿ ಪಂಜನ್ನು ಆಕಸ್ಮಿಕವಾಗಿ ಮರೆತು ಹೋಗಿದ್ದರು. ಆ ಸಂದರ್ಭದಲ್ಲಿ ಹೋದಂತಹವರೆಲ್ಲ ಯೋಚಿಸಿದರಂತೆ ಏನು ಮಾಡುವುದು. ಸ್ವಾಮೀಜಿಗಳನ್ನು ಕತ್ತಲೆಯಲ್ಲಿ ಕರೆದುಕೊಂಡು ಹೋಗುವುದು ಅಷ್ಟು ಶುಭವಲ್ಲ ಎಂದು ಯೋಚಿಸುತ್ತಿರುವಾಗ ಪಣಿಯಪ್ಪನವರಿಗೆ ಒಂದು ಆಲೋಚನೆ ಬಂತಂತೆ. ಕೊಬ್ಬರಿಯನ್ನು ಕತ್ತಿಗೆ ಸಿಕ್ಕಿಸಿಕೊಂಡು ಆ ಬೆಳಕಿನಲ್ಲಿ ಯಾಕೆ ಸ್ವಾಮಿಗಳನ್ನು ಕರೆದುಕೊಂಡು ಹೋಗಬಾರದು ಎಂದು ಯೋಚಿಸಿದರು. ಆಗ ವ್ಯಾಪಾರದಲ್ಲಿ ಉಳಿದುಕೊಂಡಿದ್ದ ಕೊಬ್ಬರಿಯನ್ನು ಕತ್ತಿಗೆ ಸಿಕ್ಕಿಸಿಕೊಂಡು ಕೊಬ್ಬರಿಯ ಬೆಳಕಿನಲ್ಲಿ ತಿಪ್ಪೇಸ್ವಾಮಿಯನ್ನು ನಾಯಕನಹಟ್ಟಿಗೆ ಕರೆದುಕೊಂಡು ಬಂದರು. ಇದು ಸ್ವಾಮಿಗಳು ನಾಯಕನಹಟ್ಟಿಗೆ ಬಂದಂತಹ ಸಂದರ್ಭ.

ತಿಪ್ಪೇಸ್ವಾಮಿಗಳು ನಾಯಕನಹಟ್ಟಿ ಪ್ರವೇಶ ಪಡೆದ ನಂತರದ ಸಂದರ್ಭ

ಸ್ವಾಮಿಗಳು ನಾಯಕನಹಟ್ಟಿಗೆ ಬಂದಂತಹ ಸಂದರ್ಭದಲ್ಲಿ ಪಾಳೇಗಾರಿಕೆಯ ಆಡಳಿತಕ್ಕೆ ಒಳಪಟ್ಟಿತ್ತು. ಪಾಳೇಗಾರನಾದ ಹಟ್ಟಿ ಮಲ್ಲಪ್ಪನಾಯಕ ಇವರು ನಾಯಕನಹಟ್ಟಿಯ ಶ್ರೀಮಂತ ರಾಜನಾಗಿದ್ದ. ಇವರೆಲ್ಲ ಪಾಳೇಯಗಾರರಾದ ಕಾರಣ ದೇವಿ ಆರಾಧಕರಾಗಿದ್ದರು. ಆದ್ದರಿಂದ ಶ್ರೀ ಮಾರೆಮ್ಮ ದೇವಿಯನ್ನು ಆರಾಧಿಸುತ್ತಿದ್ದರು. ನಾಯಕನಹಟ್ಟಿ ಒಂದು ೨೫ ಮನೆಗಳ ಪುಟ್ಟಗ್ರಾಮ. ಈ ಗ್ರಾಮದಲ್ಲಿ ಊರಾಚೆ ಮಂಟಪದಲ್ಲಿ ಒಂದು ಚಾವಡಿ ಮಂಟಪವಿದೆ. ಚಾವಡಿ ಮಂಟಪದ ಹಿಂದೆ ಒಂದು ದೊಡ್ಡ ಬೇವಿನಮರ ಮತ್ತು ಬೃಹದಾಕಾರದ ಮರಗಳು ಸಂಜೆಯ ವೇಳೆಯಲ್ಲಿ ಯಾರಾದರು ಬರುವುದಕ್ಕೆ ಹೆದರುತ್ತಾಯಿದ್ದರು. ಅಷ್ಟೊಂದು ಭೀಕರವಾದ ಪ್ರದೇಶವಾಗಿತ್ತು.

ಫಣಿಯಪ್ಪನಿಗೆ ಸ್ವಾಮೀಜಿಗಳು ಶಿವಪೂಜೆಗೆ ಎಲ್ಲಾ ವ್ಯವಸ್ಥೆ ಮಾಡಿ ನಾವು ವಾಯು ವಿಹಾಹಕ್ಕೆ ಹೋಗಿ ಬರುತ್ತೇವೆ ಎಂದು ಹೇಳಿ ಹೋದರು. ಹೀಗೆ ಹೋಗುವಂತಹ ಸಂದರ್ಭದಲ್ಲಿ ದೇವಿ ಪ್ರತ್ಯಕ್ಷಳಾಗಿ ಅರ್ಭಟಿಸುತ್ತಿರುವಾಗ ಸ್ವಾಮಿ ಅಮ್ಮ ನಾವು ಈ ಊರಿಗೆ ಹೊಸಬರು ಎಲ್ಲಿ ಉಳಿದುಕೊಳ್ಳಬೇಕೆಂದು ತಿಳಿಯುತ್ತಿಲ್ಲ. ಇಂದು ರಾತ್ರಿ ಇಲ್ಲೇ ಕಳೆದು ನಾಳೆ ಪ್ರಯಾಣ ಬೆಳೆಸುತ್ತೇನೆ ಎಂದು ಹೇಳಿದರು. ಮಾರೆಮ್ಮ ಒಪ್ಪದೇ ಹೋದಾಗ ಸ್ವಾಮಿಗಳು ಬೆತ್ತ ಜೋಳಿಗೆಯನ್ನಿಡಲು ಸ್ಥಳಾವಕಾಶಕೊಡು ಎಂದು ಮಾರಮ್ಮನನ್ನು ಶ್ರೀ ತಿಪ್ಪೇಸ್ವಾಮಿ ಕೇಳಿದರು. ಬೆತ್ತ ಜೋಳಿಗೆಯಿಡಲು ಮಾರಮ್ಮ ಒಪ್ಪಿದಳು. ಸರಿ ಎಂದು ಹೇಳಿ ಭಕ್ತನ ಮನೆಗೆ ಹೋಗಿ ಬಂದು ರಾತ್ರಿ ಮಲಗಿ ಬೆಳಗಾಗುವುದರೊಳಗೆ ಗುಡಿ ತುಂಬಾ ಜೋಳಿಗೆ ಬೆತ್ತ ತುಂಬಿಕೊಂಡಿದ್ದವು. ಅದು ಎಷ್ಟರ ಮಟ್ಟಿಗೆ ಎಂದರೆ ದೇವಿ ಕುಳಿತುಕೊಳ್ಳಲು ಆಗದೆ ಇರುವಂತಹ ಸ್ಥಿತಿಯಲ್ಲಿ ತುಂಬಿ ಹೋಗಿದ್ದವು.

ಮಾರಮ್ಮನಿಗೆ ಬಹಳ ಸಿಟ್ಟು ಬಂತು ಏನಿದು? ದೇವಾಲಯವೇ ಬೆತ್ತ ಜೋಳಿಗೆಯಿಂದ ತುಂಬಿ ಹೋಗಿವೆ ಎಂದಾಗ ಸೂರ್ಯೋದಯ ಸಮಯದಲ್ಲಿ ನೋಡಿದರೆ ಗುಡಿಯ ತುಂಬೆಲ್ಲಾ ಬೆತ್ತ ಜೋಳಿಗೆಗಳೇ ತುಂಬಿವೆಯಲ್ಲ ಎಂದು ಆಶ್ಚರ್ಯವಾಯಿತು. ಮಾರಮ್ಮ ಸ್ವಾಮಿಗಳಿಗೆ "ನೀನು ಮಹಿಮಾಪುರುಷನಪ್ಪ ನೀನೇ ಇಲ್ಲೇ ಇದ್ದು ಲೋಕೋದ್ಧಾರ ಮಾಡು" ಎಂದು ಹೇಳಿ ಶರಣಾಗತಳಾಗಿ "ವಡ್ನಳ್ಳಿ" ಎಂಬ ಗ್ರಾಮಕ್ಕೆ ತೆರಳಿದಳು. ಇಲ್ಲಿ ನನ್ನ ಪ್ರಭಾವ ಕಡಿಮೆಯಾಗಿದೆ. ಈ ಕ್ಷೇತ್ರ ಮಹಾಪುಣ್ಯಕ್ಷೇತ್ರವಾಗಲಿದೆ. ನೀನು ಇಲ್ಲಿಂದ ಮುಂದೆ ವಡ್ನಳ್ಳಿಗೆ ಹೋಗು ಎಂದು ತಿಪ್ಪೇಸ್ವಾಮಿ ಹೇಳಿದರು. ವಡ್ನಳ್ಳಿ ಎಂಬ ಗ್ರಾಮ ಚಿತ್ರದುರ್ಗ ತಾಲೂಕಿನಲ್ಲಿ ಬರುತ್ತದೆ. ಆ ಭಾಗದಲ್ಲಿ ಮಾರಮ್ಮ ತುಂಬಾ ವಿಶೇಷವಾಗಿ ಆರಾಧಿಸಲ್ಪಡುತ್ತಾಳೆ.

ಮಾರಮ್ಮ ಗುರುಗಳನ್ನು ಕೇಳಿಕೊಂಡಿದ್ದು ಇಷ್ಟೆ ೩೧ ವರ್ಷದಲ್ಲಿ ಒಂದು ಸಾರಿ ನನ್ನನ್ನು ಕರೆಸಿ ೯ ದಿನಗಳವರೆಗೆ ವೈಭವಯುತವಾಗಿ ಆರಾಧನೆಮಾಡಬೇಕು ಎಂದು ಒಪ್ಪಂದ ಮಾಡಿಕೊಂಡರಂತೆ. ಮಾರಮ್ಮನ ಜಾತ್ರೆ ನಡೆಸಲು ಊರಿಗೆ ಸಂಬಂಧಿಸಿದ ಗೌಡ, ಗೊಂಚಿಗಾರ, ಛಲವಾದಿಗಳು, ದಲಿತರು ಹೀಗೆ ಎಲ್ಲ ವರ್ಗದ ಜನರನ್ನು ಕರೆಸಿ ಅವರಿಂದ ಜಾತ್ರೆ ನಡೆಸಲು ಅನುಮತಿ ಪಡೆಯಬೇಕು. ನಂತರ ನಾಯಕನಹಟ್ಟಿಗೆ ಸೇರುವ ಸುತ್ತ ಮುತ್ತ ಎಲ್ಲ ಜನರನ್ನು ಸೇರಿಸಿ ಜಾತ್ರೆಯನ್ನು ನಡೆಸುವ ಬಗ್ಗೆ ಒಪ್ಪಿಗೆಯನ್ನು ಪಡೆಯಬೇಕು ಎಂಬ ಪದ್ಧತಿ ಹಾಗೆಯೇ ಮುಂದುವರಿದುಕೊಂಡು ಬಂದಿದೆ. ಜಾತ್ರೆ ನಡೆದು ಈಗ ೩೧ವರ್ಷ ತುಂಬುತ್ತ ಬಂತು ೧೯೭೭ರಲ್ಲಿ ನಾಯಕನಹಟ್ಟಿಗೆ ಮಾರಮ್ಮನನ್ನು ಕರೆಸಿದ್ದರಂತೆ.

ವಡ್ಡನಹಳ್ಳಿ ಮಾರಮ್ಮ ಒಬ್ಬರನ್ನೆ ಕರೆಸುವುದಿಲ್ಲ. ಸುಮಾರು ೧೨ ದೇವರು ಅಂದರೆ ೧೨ ಪೆಟ್ಟಿಗೆಗಳು ಬರುತ್ತವೆ. ಒಂದೊಂದು ಊರಿನಿಂದ ಒಂದೊಂದು ಪೆಟ್ಟಿಗೆ ಬರುತ್ತವೆ. ಅವುಗಳಲ್ಲಿ ಉತ್ಸವಕ್ಕೆ ಹೋಗುವ ಅಮ್ಮಗಳು ಬೇರೆಯಿದ್ದಾವೆ. ಹೊರಬೀಡು ಹೋಗುವಂತಹ ದೇವತೆಗಳು ಬೇರೆಯಿವೆ. ಅಂತಹ ದೇವತೆಗಳನ್ನು ಮತ್ತು ೧೨ ಪೆಟ್ಟಿಗೆಗಳನ್ನು ಕರೆಸಬೇಕು. ೧೨ ದೇವತೆಗಳಿಗೂ ಒಂದೊಂದು ಹೆಜ್ಜೆಯಿಡಲು ಒಂದೊಂದು ಪ್ರಾಣಿಬಲಿ ಕೇಳುತ್ತವೆ. ೧೨ ದೇವತೆಗಳಿಗೂ ಬಲಿಕೊಡಬೇಕು. ದೇವತೆಗಳಿಗೆ ಸರಗ ಚೆಲ್ಲಬೇಕು ಅನಂತರ ಊರಿಗೆ ಯಾರು ಹೊಸಬರು ಬರುವಂತಿಲ್ಲ ಮತ್ತು ಊರಿನಿಂದ ಹೊರಗೆ ಹೋಗುವಂತಿಲ್ಲ.

ದೇವತೆಗಳು ಊರಿನ ಮುಖ್ಯದ್ವಾರದಲ್ಲಿ ಬಂದು ನಿಲ್ಲುತ್ತವೆ. ಅಂದರೆ ಒಳಮಠದ ಹೆಬ್ಬಾಗಿಲ ಮುಂದೆ ಮಾರಮ್ಮ ನೆಲೆಸುತ್ತಾಳೆ. ಇಡೀ ಒಳಮಠದ ಸುತ್ತಲು ೧೨ ಜನ ದೇವತೆಗಳು ಸುತ್ತ ನೆಲೆ ನಿಲ್ಲುತ್ತವೆ. ಅಂತಹ ಸಂದರ್ಭದಲ್ಲಿ ಒಳಮಠದ ಹೆಬ್ಬಾಗಿಲನ್ನು ತೆರೆಯುವ ಹಾಗಿಲ್ಲ. ತಿಪ್ಪೇಸ್ವಾಮಿಗೆ ಯಾವುದೇ ರೀತಿಯ ಪೂಜೆ ನಡೆಯುವಂತಿಲ್ಲ. ೧೨ ದಿನದ ನಂತರ ದೇವಾಲಯದ ಬಾಗಿಲನ್ನು ತೆರೆಯಬೇಕು. ಈ ಪದ್ಧತಿ ಪಟೇಲ ಪಾಪನಾಯಕ ಅವರ ಮುಂದಾಳತ್ವದಲ್ಲಿ ೧೯೭೭ರಲ್ಲಿ ನಡೆಸಿದ್ದರಂತೆ. ಇಲ್ಲಿಗೆ ೩೧ ವರ್ಷ ಮುಗಿತು. ಮುಂದೆ ಯಾರಾದರೂ ಮಹಾನುಭಾವರು ಹುಟ್ಟಿಕೊಂಡರೆ ಮಾಡಬಹುದು. ಅದಕ್ಕೆ ತುಂಬಾ ಪ್ರಾಣಿ ಬಲಿ ನಡೆಯುತ್ತವೆ. ಅದಕ್ಕೆ ಈಗಿನ ಸರ್ಕಾರಗಳು ಒಪ್ಪುವುದಿಲ್ಲ, ಅದನ್ನೆಲ್ಲ ನಿಷೇಧಮಾಡುತ್ತಿವೆ. ಅದನ್ನು ಮಾಡಲು ತುಂಬಾ ಖರ್ಚಾಗುತ್ತದೆ. ಆದ್ದರಿಂದ ಸಾರ್ವಜನಿಕ ಸ್ಥಳದಲ್ಲಿ

ಪ್ರಾಣಿವಧೆ ಮಾಡುವುದು ತುಂಬಾ ಕಷ್ಟಕರ ಮುಂದೆ ಏನಾಗುತ್ತದೆ ಎಂಬುದನ್ನು ನೋಡಬೇಕು. ಊರಿನ ಯಜಮಾನರ ಮೇಲೆ ಮತ್ತು ದೇವಿಯ ಮಹಿಮೆಗೆ ಬಿಟ್ಟದ್ದು ಎಂಬುದನ್ನು ಹೇಳುತ್ತಾರೆ.

ಪರಸ್ತ್ರೀ, ಪರಧನವನ್ನು ನಿವಾರಣೆ ಮಾಡುವಂತಹದ್ದು ಸಾಮಾಜಿಕ ಸಮಸ್ಯೆಯ ನಿರ್ಮೂಲನೆ ಮತ್ತು ಜಿಡ್ಡುಗಟ್ಟಿದ ಸಮಾಜಕ್ಕೆ ಒಳಿತನ್ನು ನೀಡುವ ನಿಟ್ಟಿನಲ್ಲಿ ದಾರ್ಶನಿಕ ಹುಟ್ಟು ಸಾರ್ಥಕ ಎಂದುಕೊಳ್ಳಬಹುದು. ಅಂತರಂಗ ಬಹಿರಂಗ ಶುದ್ಧಿಯಾಗಿ ಅನುಭಾವಿಗಳ ಆತ್ಮದಲ್ಲಿರಬೇಕು. ನಿಯಮಾಚಾರಗಳೆಂಬ ಗೊಡ್ಡು ಸಂಪ್ರದಾಯಗಳನ್ನು ಕೈಬಿಟ್ಟು ಮನೆಗೆ ಬಂದ ಅತಿಥಿಗಳನ್ನು ಸತ್ಕರಿಸಬೇಕು ಎಂಬ ಆದರ್ಶ ತತ್ವಗಳನ್ನು ಪ್ರಚಾರಮಾಡಿದರು. ಪಂಚಗಣಾಧೀಶ್ವರರು ಕಲ್ಯಾಣ, ಕೂಡ್ಲಿಗಿ, ಕುಪ್ಪಿನಕೇರಿ, ಬಾಗಳಿ, ಕೊಟ್ಟೂರು, ಹರಪನಹಳ್ಳಿ, ರಾಯದುರ್ಗ, ನಾಯಕನಹಟ್ಟಿ ಮುಂತಾದ ಸ್ಥಳಗಳಲ್ಲಿ ಪ್ರವಾಸಮಾಡಿ ಸರ್ವಧರ್ಮಗಳನ್ನು ಸಮನಾಗಿ ಕಾಣುತ್ತಾ ಸರ್ವರಲ್ಲಿಯೂ ಶಿವನಿರುವುದನ್ನು ಜ್ಞಾನದ ದೃಷ್ಟಿಯಿಂದ ತಿಳಿದುಕೊಂಡು ಅಜ್ಞಾನ-ಅಂಧಕಾರಗಳನ್ನು ತೊಡೆದು ಹಾಕಿ, ಸುಜ್ಞಾನವನ್ನು ಬೋಧಿಸಿ, ಸರ್ವರಿಗೂ ಮಾನವರಾಗಿ ಬದುಕಲು ತಿಳಿಸಿದ ಮಹಾ ಮಹಿಮಪುರುಷ ತಿಪ್ಪೇರುದ್ರಸ್ವಾಮಿಗಳು.

ಕಾಯಕ ತತ್ವ

ಕಾಯಕ ಎಂದೊಡನೆಯೇ ಅನೇಕರು ತಪ್ಪು ಅರ್ಥ ಕಲ್ಪಿಸಿಕೊಳ್ಳುವುದುಂಟು. ಕಾಯಕ ಎಂದರೆ ಕೆಲಸ ಎಂಬುದು ಆದರೆ ನಿಜವಾದ ನೆಲೆಯಲ್ಲಿ ಯೋಚಿಸಿದಾಗ ಕಾಯಕ ಎಂದರೆ ಲೋಕಸೇವೆ. ನಿಷ್ಕಾಮಸೇವೆ, ತನಗಾಗಿ ತನ್ನವರಿಗಾಗಿ ಪ್ರತಿಫಲದ ಅಪೇಕ್ಷೆಯಿಲ್ಲದೆ ಮಾಡುವ ಕೆಲಸವೂ ಕಾಯಕವಲ್ಲ. ತನ್ನ ಸ್ವಾರ್ಥವನ್ನು ಕಿಂಚಿತ್ತು ಬಗೆಯದೆ ಬಿರುದು ಪ್ರಶಸ್ತಿಗಳ ಹಂಬಲವಿಲ್ಲದೆ ನಿಸ್ವಾರ್ಥದಿಂದ ಪ್ರಾಮಾಣಿಕತೆಯಿಂದ, ಅಹಿಂಸೆಯಿಂದ, ಸತ್ಯ, ಧರ್ಮಗಳ ಸನ್ಮಾರ್ಗದಲ್ಲಿ ಲೋಕದ ಇಡೀ ಶ್ರಮವೇ ಕಾಯಕ. ಈ ಶ್ರಮದಲ್ಲಿ ಕೈಲಾಸ ಅರ್ಥಾತ್ ದೈವೀಗುಣವಿದೆ. ಬುದ್ಧ, ಮಹಾವೀರ, ಬಸವ, ಗಾಂಧಿ ಮುಂತಾದ ಮಹನೀಯರು ಮಾಡಿದ ಲೋಕಸೇವೆಯು ಕಾಯಕವಾಗಿದೆ. ಸಂತರೂ, ಶರಣರೂ, ಮಹಾನುಭಾವಿಗಳು ಮಾಡುವ ಲೋಕೋದ್ಧಾರದ ಸೇವೆಯು ಕಾಯಕವಾಗಿದೆ. ಶ್ರೀ ತಿಪ್ಪೇರುದ್ರಸ್ವಾಮಿಯವರು ಮಾಡಿದ ಜನಸೇವೆಯು ನಿಜಕ್ಕೂ ಉತ್ತಮವಾದ ಕಾಯಕವಾಗಿದೆ. ಕಾಯಕ ತತ್ವವನ್ನು ಸಾರುವ ಜನಪದ ವೀರರ ಸಾಂಸ್ಕೃತಿಕ ನಾಯಕನಾಗಿ ತಿಪ್ಪೇಸ್ವಾಮಿ ಕಂಡುಬರುತ್ತಾರೆ.

ತಿಪ್ಪೇಸ್ವಾಮಿಯವರನ್ನು ಬೇಡರ ನಾಯಕ ಎಂದು ಕರೆದರು. ಮತ್ತೆ ಕೆಲವರು ಇವರು ೧೨ನೇ ಶತಮಾನದ ಶಿವಶರಣ ಸಂಪ್ರದಾಯದ ಪರಿಚ್ಛಾರಕರು ಎಂದು ಕರೆದರು ೧೪-೧೫ನೇ ಶತಮಾನದಲ್ಲಿ ಪಂಚಗಣಾಧೀಶ್ವರರಲ್ಲಿ ಒಬ್ಬರಾಗಿದ್ದ ತಿಪ್ಪೇಸ್ವಾಮಿಯವರು ಸಂಚಾರಿಯುತರಾದವರು. ಆಗಿನ ಕಾಲದ ಶಿವ ಶರಣರಿಗೆ ಮಠ ಮಾನ್ಯಗಳಿರಲಿಲ್ಲ. ಶಿವಶರಣರಿಗೆ ನಿಶ್ಚಿತ ಸ್ಥಳ ಇರಲಿಲ್ಲ. ಗ್ರಾಮಕ್ಕೆ ಒಂದು ರಾತ್ರಿ ಪಟ್ಟಣಕ್ಕೆ ೫ ರಾತ್ರಿ ಎಂಬುದೇ ಅವರ ವೃತ್ತಿಯಾಗಿತ್ತು. ಎಲ್ಲೆಲ್ಲಿ ಹೋಗುತ್ತಾರೋ ಅಲ್ಲಿ ಭಿಕ್ಷೆಯನ್ನು ಬೇಡಿ ಜನತೆಗೆ ಉಪಕಾರವನ್ನು ಮಾಡಿ ರೋಗರುಜಿನಗಳನ್ನು ಪರಿಹರಿಸಿ ಮನಸ್ಸಿಗೆ ಶಾಂತಿಯನ್ನು ನೀಡಿ ಮತ್ತೊಂದು ಊರಿಗೆ ಪ್ರಮಾಣ ಬೆಳೆಸುವುದು ಸದಾ ಸಂಚಾರದಲ್ಲಿ ತೊಡಗುವುದೇ ಇವರ ಪದ್ಧತಿಯಾಗಿತ್ತು.

ಹೀಗೆ ಬಂದವರಲ್ಲಿ ತಿಪ್ಪೇಸ್ವಾಮಿ ದೇವರಾಗಿ ದೇವಲೋಕದಿಂದ ಇಳಿದು ಬಂದು ಶಂಖ ಊದಿಸಿಕೊಂಡು, ಮಂಗಳಾರತಿ ಮಾಡಿಸಿಕೊಳ್ಳುವ ದೇವರಾಗಲಿಲ್ಲ. ಅವರು ಮಾನವ ಸ್ವರೂಪಿ ಆಗಿದ್ದರು. ಮಾನವ ಸ್ವರೂಪಿಯಾಗಿ ಈ ಪ್ರದೇಶಕ್ಕೆ ಬಂದರು. ರಾಜ ಮಹಾರಾಜರಾಗಿ ಬರಲಿಲ್ಲ. ಕಾಹಿಲರಾಗಿ ಬಂದರು. ಬರೀ ಖಾಲಿ ಕೈಯಲ್ಲಿ ಬಂದರು. ಜನಗಳಿಗೆ ಬಗೆ ಬಗೆಯ ಉಪಕಾರ ಮಾಡಿದರು. ಇಲ್ಲಿಯ ಜನಗಳಿಗೆ ಪಶುಪಾಲನೆಯನ್ನು ಹೇಗೆ ಮಾಡಬೇಕು ಎಂಬುದನ್ನು ಹೇಳಿಕೊಟ್ಟರು. ಪಶುಗಳನ್ನು ಕಟ್ಟಿ ಅವುಗಳನ್ನು ಸಾಕಿ ಹಾಲು ಹೈನುಗಳ ಮೂಲಕ ಬದುಕನ್ನು ಹೇಗೆ ಕಟ್ಟಿಕೊಳ್ಳಬೇಕು ಎಂಬುದನ್ನು ಹೇಳಿಕೊಟ್ಟರು.

* ಅಸ್ಪೃಶ್ಯತೆಯನ್ನು ಹೋಗಲಾಡಿಸಿದರು.
* ಆತ್ಮೀಯವಾಗಿ ಬದುಕಿದರು.
* ಮೂಢನಂಬಿಕೆಯನ್ನು ತೊಡೆದುಹಾಕಿದರು.
* ಅಂದಾನುಕರುಣೆಗಳನ್ನು ನಿವಾರಣೆ ಮಾಡಿದರು.
* ನಿಮ್ಮ ಬಡತನಕ್ಕೆ ರೋಗರುಜಿನೆಗಳಿಗೆ ನೀವು ಕೆಲಸ ಮಾಡದಿರುವುದೇ ಕಾರಣ ಕಷ್ಟಪಟ್ಟು ದುಡಿಮೆ ಮಾಡುವುದನ್ನು ಹೇಳಿಕೊಟ್ಟರು.
* ಕಾಯಕ ಯೋಗಿಯಾದರು.
* ಪೂಜೆ ಪುನಸ್ಕಾರಕ್ಕಿಂತ ಹಸಿದವನಿಗೆ ಅನ್ನ ಮುಖ್ಯ ಎಂಬುದನ್ನು ತೋರಿಸಿಕೊಟ್ಟರು.

ಜನಗಳ ಸುಖಿ ಜೀವನಕ್ಕೆ ಕಾರಣವಾದಂತಹ ಸ್ವಾಮಿಯೇ ತಿಪ್ಪೇಸ್ವಾಮಿ. ಇವರನ್ನು ಜನರು ಜಾತ್ರೆಯ ರೂಪದಲ್ಲಿ ಕೃತಜ್ಞತೆ ಸಲ್ಲಿಸುವುದನ್ನು ಕಾಣಬಹುದು.

ಶೈವ-ನಾಥ ಸಿದ್ಧರ ಪ್ರಭಾವ

ನಾಯಕನಹಟ್ಟಿ ತಿಪ್ಪೇಸ್ವಾಮಿ ಸಿದ್ಧಪರಂಪರೆಯವನೆನ್ನಲು ನಮಗೆ ಸಾಕಷ್ಟು ಆಧಾರಗಳು ದೊರೆಯುತ್ತವೆ. ಜಾತ್ರೆಯ ಸಂದರ್ಭದಲ್ಲಿ ಹೊರಮಠದ ಆವರಣದಲ್ಲಿ ಅಪಾರವಾದ ಪ್ರಮಾಣದಲ್ಲಿ ಸಿದ್ಧರು ಜೋಗಿಗಳು ಬಂದು ಸೇರುತ್ತಾರೆ. ಕರ್ನಾಟಕವಲ್ಲದೆ ಮಹಾರಾಷ್ಟ್ರ, ಆಂಧ್ರ, ತಮಿಳುನಾಡುಗಳಿಂದಲೂ ಇಲ್ಲಿಗೆ ಬರುತ್ತಾರೆ. ಭಂಗಿಯನ್ನು ಸೇದುತ್ತಾ ತಿರುಗುವ ಈ ಜೋಗಿಗಳು ಮೂರರಿಂದ ಐದು ದಿನಗಳ ತನಕ ಅಲ್ಲಿಯೇ ಬೀಡುಬಿಡುತ್ತಾರೆ. ನಾಥಸಿದ್ಧ ಸಂಪ್ರದಾಯದಲ್ಲಿ ಭಂಗಿ ಸೇವನೆ ಸಾಮಾನ್ಯ. ಜಾತ್ರೋತ್ಸವದ ಸಂದರ್ಭದಲ್ಲಿ ನಾಯಕನಹಟ್ಟಿಯ ಹೊರಮಠದ ಹತ್ತಿರ ಸಾಧು ಸಂತರು ಮಾತ್ರವಲ್ಲದೆ ಎಲ್ಲ ಕುಲದವರು ಬಂದು ಕೂಡುತ್ತಾರೆ. ಅವರಲ್ಲಿ ಕುರುಬರು ಮತ್ತು ಬೇಡ ಸಮುದಾಯದವರೇ ಹೆಚ್ಚು. ಈ ಎರಡೂ ಸಮುದಾಯಗಳು ಮಧ್ಯೆ ಕಾಲದುದ್ದಕ್ಕೂ ನಾಥಸಿದ್ಧ ಶೈವಸಿದ್ಧ ಪರಂಪರೆಗೆ ನಡೆದುಕೊಂಡು ಬಂದಿರುವುದನ್ನು ಕಾಣಬಹುದು. ಹೊರಮಠದಲ್ಲಿನ ಪೂಜಾರಿಗಳು ಬೇಡ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಈ ಕುರಿತು ಜನಪದ ಗೀತೆಯೊಂದು,

ಲಿಂಗ ಜಂಗಮರಿಗೆ ಒಳಮಠವೇ ಇರಲೆಂದು

ಬ್ಯಾಡರ ಸಂಗಾಕೆ ಹೋದಾನೆ ತಿಪ್ಪಯ್ಯ

ಹೊರಮಠದಲ್ಲದವರು ಇರಲೆಂದು

ಬ್ಯಾಡಾರ ಸಂಗಾಕೆ ಹೋದಾನೆ ತಿಪ್ಪಯ್ಯ

ಮದ್ಯ ಮಾಂಸಗಳ ಮಾಡಂದ ಹೊರಮಠಕೆ

ಎಡಿಯೇ ತಿಪ್ಪಯ್ಯಗೆ ಇರಲೆಂದ

ಬ್ಯಾಡರ ಸಂಗವೇ ಇರಲೆಂದು ಹೊರಮಠಕ್ಕೆ ಹೋದ ತಿಪ್ಪಯ್ಯ ಅಲ್ಲೇ ನೆಲೆಗೊಂಡು ಸಮಾಧಿಯಾದುದು ಅದನ್ನು ಇಂದಿಗೂ ಬೇಡರ ಪೂಜಾರಿಗಳೇ ಪೂಜಿಸುತ್ತಿರುವುದು ಅಲ್ಲದೆ ಮದ್ಯ-ಮಾಂಸಗಳನ್ನು ಎಡೆಯಾಗಿ ಕೊಡುವುದು ಏನನ್ನು ಸೂಚಿಸುತ್ತಿದೆ?

ಸಿದ್ಧಪಂಥದಲ್ಲಿನ ಯೋಗಿಗಳು ಸಾಮಾನ್ಯವಾಗಿ ವೈದಿಕ ವಿರೋಧ ನೀತಿಯನ್ನು ಅನುಸರಿಸುತ್ತಾ ಬಂದವರು. ಅದರಲ್ಲೂ ಹೆಚ್ಚಾಗಿ ನಿಮ್ನವರ್ಗದಿಂದ ಬಂದವರು. ಹಾಗಾಗಿ ಅವರು ನಿತ್ಯ ಬದುಕಿನಲ್ಲಿ ತುಚ್ಛೀಕರಿಸಲ್ಪಟ್ಟ ಕೀಳೆಂದು ಪರಿಗಣಿಸಲ್ಪಟ್ಟ ಅಂಶಗಳನ್ನು ತೆಗೆದುಕೊಂಡು ಮೌಲೀಕರಿಸುವ ಪ್ರಯತ್ನವನ್ನು ಮಾಡುತ್ತಾರೆ.

ಇಂತಹ ಸಿದ್ಧ ಪರಂಪರೆಯಲ್ಲಿ ಬೆಳೆದಿರುವ ನಾಯಕನಹಟ್ಟಿ ತಿಪ್ಪೇಸ್ವಾಮಿ ಮಾಂಸಹಾರವನ್ನು ಒಪ್ಪಿಕೊಳ್ಳುವುದರ ಮೂಲಕ ಆ ಜೀವನ ಪದ್ಧತಿಗೆ ಮಾನ್ಯತೆಯನ್ನು ನೀಡುತ್ತಾನೆ. ಒಟ್ಟು ನಾಯಕನಹಟ್ಟಿ ತಿಪ್ಪೇಸ್ವಾಮಿ ಜೀವನವೇ ಇಂತಹ ಕೀಳನ್ನು ಮೌಲೀಕರಿಸುವ ಪ್ರಯತ್ನದಿಂದ ಕೂಡಿದೆ.

ಹೀಗೆ ಸಿದ್ಧಪರಂಪರೆಯಲ್ಲಿ ತಿಪ್ಪೆ, ಮಾಂಸ, ಭಂಗಿ, ಹೆಂಡ ಇವುಗಳು ಮೌಲ್ಯಯುತವಾಗಿ ಬಿಡುತ್ತವೆ. ವೈದಿಕ ಪರಂಪರೆ ಕೀಳುಗೊಳಿಸಿದ ಇವುಗಳನ್ನು ಸಿದ್ಧಪರಂಪರೆಯು ಹಠದಿಂದ ಮೌಲೀಕರಿಸುತ್ತವೆ. ವೈದಿಕ ಪರಂಪರೆಯ ಮೌಲ್ಯಗಳ ಪಾವಿತ್ರ್ಯನಾಶ ಆಶಯಗಳು ಸಿದ್ಧಪರಂಪರೆಯಲ್ಲಿನ ಪ್ರಧಾನಕಾರ್ಯವಾಗಿದೆ. ನಾಯಕನಹಟ್ಟಿ ತಿಪ್ಪೇಸ್ವಾಮಿ ಇರಬಹುದು, ಹಾಗೂ ಎಲ್ಲರೂ ಕೀಳನ್ನು ಮೌಲೀಕರಿಸುತ್ತಾರೆ.

ಪಂಚಗಣಾಧೀಶ್ವರರು ಈ ವ್ಯವಸ್ಥೆಯ ನಡಾವಳಿಗಳನ್ನು ಪ್ರಶ್ನಿಸುತ್ತಾರೆ. ನಾಯಕನಹಟ್ಟಿ ತಿಪ್ಪೇಸ್ವಾಮಿ ಮತ್ತು ಕೊಟ್ಟೂರು ಗುರುಬಸವರ ಪವಾಡಗಳು ಆಶ್ಚರ್ಯದಿಂದ ಕೂಡಿದ್ದು ಅವು ಶೋಷಿತರ, ಬಡವರ ಪರವಾಗಿ ವ್ಯವಸ್ಥೆಗೆ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾರೆ. ಸಂತರ ಹುಟ್ಟಿನ ಪವಾಡಗಳು ಅವರ ಜನಪ್ರಿಯತೆಯನ್ನು ಹೆಚ್ಚಿಸಿವೆ. ವಾಸ್ತವವಾಗಿ ಹುಟ್ಟಿನ ಅಂಶವು, ಅನುಭಾವಿ ಪಂಥಗಳಲ್ಲಿ ಸಾಮಾನ್ಯ ಯೋಗದ ಮೂಲಕ ಪರ್ರ್ಹಾ (Trans) ಸ್ಥಿತಿಗೆ ಹೋಗುವುದು ಮೈಮರೆಯುವುದು, ಉನ್ಮತ್ತರಾಗಿ ಹಾಡಿ ಕುಣಿಯುವುದು ಇದಕ್ಕೆ ಉತ್ತೇಜನ ಪಡೆಯಲು ಭಂಗಿಯಂತಹ ಮಾದಕಗಳನ್ನು ತೆಗೆದುಕೊಳ್ಳುವುದು.

ಇವು ಹುಟ್ಟಿಗೆ ಪೂರಕ ಸಂಗತಿಗಳು. ಅವರು ಧಾರ್ಮಿಕ, ಸಾಮಾಜಿಕ, ಶಿಷ್ಟಾಚಾರಗಳನ್ನು ಮೀರಿ ನಿರಂಕುಶಮತಿಗಳಾಗಿ ದಾರ್ಶನಿಕ ಸ್ಥಿತಿಯನ್ನು ಪಡೆಯುತ್ತಿದ್ದರು.

ಮುಖ್ಯವಾಗಿ ತಿಪ್ಪೇಸ್ವಾಮಿಯ ಜೀವನವನ್ನು ನೋಡಿದರೆ ಆತ ಅಪ್ರತಿಷ್ಠವಾದ ಅಂಶಗಳನ್ನು ಮೌಲೀಕರಿಸುವುದನ್ನು ಕಾಣುತ್ತೇವೆ. ತಿಪ್ಪೆ ಮೇಲೆ ಪವಾಡ ಮಾಡುವುದು, ಹರಳಯ್ಯನ ಮನೆಯಲ್ಲಿ ಊಟ ಮಾಡುವುದು, ಹಾಗೆಯೇ ಬೇಡರ ಸಂಗಕ್ಕೆ ಹೋಗುವ ತಿಪ್ಪೇಸ್ವಾಮಿ ಕೀಳೆಂದು ಪರಿಗಣಿಸಲ್ಪಟ್ಟ ಅವರನ್ನು ಒಪ್ಪಿಕೊಳ್ಳುವುದಕ್ಕೆ ಮುಖ್ಯವಾಗಿ ೩ ಕಾರಣಗಳಿವೆ.

೧. ತನ್ನ ಜೀವನದ ಮೂಲಕ ಬೇಟೆಯಾಡುತ್ತಿದ್ದ ಇಲ್ಲವೆ ಅಲೆಮಾರಿಗಳಾಗಿ ಬದುಕುತ್ತಿದ್ದ ಜನಾಂಗವನ್ನು ಕೆರೆಗಳನ್ನು ಕಟ್ಟುವ ಮೂಲಕ ನೆಲೆಗೊಳ್ಳುವಂತೆ ಮಾಡಿದ್ದ. ಆ ರೀತಿ ನೆಲೆಗೊಂಡ ಜೀವನ ಪದ್ಧತಿಯನ್ನು ಪವಿತ್ರೀಕರಿಸುವುದು ಅವಶ್ಯಕವಾಗಿತ್ತು. ಅವರ ಆಹಾರವನ್ನು ಸ್ವೀಕರಿಸುವ ಮೂಲಕ ಅವರ ಒಟ್ಟು ಜೀವನ ಪದ್ಧತಿಯನ್ನು ಮಾನ್ಯ ಮಾಡುತ್ತಾನೆ.

೨. ನಾಯಕನಹಟ್ಟಿ ಪರಿಸರದಲ್ಲಿ ಸಾಮಾಜಿಕ, ಆರ್ಥಿಕ. ರಾಜಕೀಯ ಬದಲಾವಣೆಗಳಿಂದಾಗಿ ಬೇಡ ಜನಾಂಗ ಪ್ರಭಾವಿತವಾಗುತ್ತಿತ್ತು. ಸುತ್ತಮುತ್ತಲಿನ ಪಾಳೆಯಗಾರರೆಲ್ಲ ಬೇಡರಾಗಿದ್ದರು. ಅವರ ಜೀವನ ಪದ್ಧತಿಯನ್ನು ಮಾನ್ಯ ಮಾಡುವುದು ಈತನಿಗೆ ಅನಿವಾರ್ಯವಾಗಿರಬಹುದು.

೩. ಮಾಂಸಾಹಾರವನ್ನು ತಿನ್ನುವುದು ಕೆಳವರ್ಗವಾದ ಬೇಡಜನಾಂಗದಲ್ಲಿ ಅಂತರ್ಗತವಾಗಿದೆ. ಬೇಟೆಯಾಡಿಯೇ ಬದುಕುತ್ತಿದ್ದ ಇವರಿಗೆ ಮಾಂಸಾಹಾರ ಅನಿವಾರ್ಯವೂ ಹೌದು. ಬೇಡರು ಮತಾಂತರ ಅಥವಾ ಧಾರ್ಮಿಕ ಪ್ರಭಾವಕ್ಕೆ ಒಳಗಾಗಿ ತಿಪ್ಪೇಸ್ವಾಮಿಯನ್ನು ಅನುಸರಿಸಿದರೂ ಕೂಡ ಹಳೆ ನಂಬಿಕೆ, ಆಹಾರ ಪದ್ಧತಿಯನ್ನು ಹೊಸ ಜೀವನ ಪದ್ಧತಿಯೊಂದಿಗೆ ಬೆರೆಸಿ ಬದುಕುತ್ತಿದ್ದಾರೆ. ಒಟ್ಟಾರೆ ಈ ಪದ್ಧತಿ ಒಂದು ಸಮುದಾಯದ ಬದುಕು ಸ್ಥಿತ್ಯಂತರಗೊಂಡಾಗ ಉಂಟಾಗುವ ತಲ್ಲಣಗಳಿಗೆ ಸಾಕ್ಷಿಯಾಗಿದೆ.

ಅಧ್ಯಾಯ - ೩

ನಾಯಕನಹಟ್ಟಿ ತಿಪ್ಪೇಸ್ವಾಮಿ ಮಠ : ಒಂದು ಪರಿಚಯ

ನಾಯಕನಹಟ್ಟಿ ತಿಪ್ಪೇಸ್ವಾಮಿ ಮಠ : ಒಂದು ಪರಿಚಯ

ಭವ್ಯ ಭಾರತದ ಸಂಸ್ಕೃತಿ, ಪರಂಪರೆಯ ಹಿನ್ನಲೆಯಲ್ಲಿ ಭಾರತೀಯ ಧರ್ಮಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಪ್ರತಿ ಧರ್ಮ, ಮತಗಳಲ್ಲಿ ಎರಡು ಪರಸ್ಪರ ಸಂಬಂಧಿ ಮುಖಗಳಿರುವುದನ್ನು ಕಾಣಬಹುದು. ಸಮಾಜದ ಮೌಲ್ಯಗಳ ರಕ್ಷಕನ ಪಾತ್ರವಹಿಸಿರುವ ಮುಖ್ಯ ಮತ್ತು ಕನಿಷ್ಟ ತನ್ನ ನಂಬಿಕೆಗಳ ಸಮುಚ್ಛಯ, ಮತೀಯನೀತಿ, ನಿಯಮಗಳ ಮತ್ತು ತತ್ವಜ್ಞಾನಿಗಳಿಗೆ ಸಂಬಂಧಿಸಿದ ವಿಚಾರಗಳಲ್ಲಿ ಸಮಾಜದ ಯಾವ ವಿಭಾಗಗಳಿಂದ ಬೆಂಬಲ ಪಡೆಯುವುದೊ ಆ ಗುಂಪು.

ಚಿತ್ರದುರ್ಗ ಜಿಲ್ಲೆ ಇಡೀ ಕರ್ನಾಟಕದಲ್ಲಿಯೇ ಅತ್ಯಂತ ಮಹತ್ವವನ್ನು ಪಡೆದ ಸ್ಥಳ. ಇಲ್ಲಿಯ ಇತಿಹಾಸ ಅಧ್ಯಯನ ಯೋಗ್ಯವಾದದ್ದು. ಕೇವಲ ಇದು ಇಂದು ನಿನ್ನೆಯದಲ್ಲ. ಇಲ್ಲಿಯ ಚರಿತ್ರೆ, ಕಾಲದಿಂದ ಕಾಲಕ್ಕೆ ತನ್ನದೇ ಆದ ಮಹತ್ವದ ಮೈಲುಗಲ್ಲಿನಂತೆ ಗುರುತಿಸಲ್ಪಟ್ಟ ಪ್ರದೇಶ ಹಿಂದಿನ ಪ್ರಾಗೈತಿಹಾಸಿಕ ಕಾಲದಿಂದ ಇಂದಿನ ಪ್ರಸ್ತುತದವರೆಗೂ ತನ್ನ ಕಾಲಗರ್ಭದಲ್ಲಿ ಹುದುಗಿಸಿಕೊಂಡಿದ್ದ ಘಟನಾವಳಿಗಳನ್ನು ಬಿಚ್ಚಿ ಹಂಚಿಕೊಳ್ಳುತ್ತಾ, ಕೆದಕಿದಷ್ಟು ಆಳಕ್ಕಿಳಿಯುತ್ತ, ಹುಡುಕಿದಷ್ಟು ಎತ್ತರಕ್ಕೇರುತ್ತ ಪ್ರತಿ ಹೆಜ್ಜೆ ಹೆಜ್ಜೆಗೂ ಕುತೂಹಲ ಕೆರಳಿಸುತ್ತಾ ಹುಡುಕಾಟ ಹಚ್ಚುತ್ತಿವೆ. ಏನಾದರೂ ಸಿಗಬಹುದು ಎಂದು ಹುಡುಕುತ್ತಾ ಹೊರಟಾಗ ಇಲ್ಲಿಯ ಭೌಗೋಳಿಕ ಹಿನ್ನೆಲೆ, ಇಲ್ಲಿಯ ಇತಿಹಾಸ ಈ ನೆಲದಲ್ಲಿ ಆಳಿ ಬಾಳಿದವರ ಬದುಕಿನ ರುದ್ರ ರಮಣೀಯತೆಯತ್ತ ಕೊಂಡೊಯ್ಯುತ್ತವೆ. ಜಿಲ್ಲೆಯ ಉದ್ದಗಲಕ್ಕೂ ಹರಡಿ ಹಬ್ಬಿರುವ ಬೆಟ್ಟ, ಗುಡ್ಡಗಳ ಸಾಲು, ಕಣಿವೆ, ಕೊಳ್ಳಗಳು, ಇಲ್ಲಿಯ ಕೋಟೆ, ಕೊತ್ತಲಗಳು, ಸಾವಿರಾರು ಗುಡಿ, ಗುಂಡಾರಗಳು, ಮಠ, ಮಾನ್ಯಗಳು, ವಾಸ್ತುಶಿಲ್ಪ ಕಲೆ, ಇಲ್ಲಿಯ ಶಾಸನ ಸಂಪತ್ತು ದಾಖಲಾತಿಗಳು, ಸ್ಮಾರಕಗಳು, ಪ್ರಾಚೀನ, ಅರ್ವಾಚೀನ, ಸಂಸ್ಕೃತಿಗಳ ಭವ್ಯ ಇತಿಹಾಸವನ್ನು ತೆರೆದಿಡುತ್ತಾ ಸಾಮಾನ್ಯರಿಂದ ಮೊದಲಾಗಿ ಸಂಶೋಧಕನವರೆಗೂ ಮೂಕ ವಿಸ್ಮಿತರನ್ನಾಗಿ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ನಾಯಕನಹಟ್ಟಿಯನ್ನು ಗಮನಿಸಿದರೆ ಈ ಅಂಶಗಳು ಗೊತ್ತಾಗುತ್ತವೆ.

ಮೊಟ್ಟಮೊದಲು ಕಾಣುವುದು ಎತ್ತ ನೋಡಿದರು ಹಸಿರಿನ ನೋಟ. ಈ ಊರಿನ ಸುತ್ತಲು ಎತ್ತ ನೋಡಿದರು ಬಾನೆತ್ತರಕ್ಕೆ ತಲೆಯೆತ್ತಿ ನಿಂತಿರುವ ತೆಂಗಿನ ತೋಟಗಳು. ಊರಿನ ಮಧ್ಯದಲ್ಲಿ ಬೇವು, ಹುಣಸೆ ಮರಗಳಿಂದ ಕೂಡಿರುವ ಹಸಿರಾಗಿರುವ ಈ ಊರು ಕುಗ್ರಾಮವೇನಲ್ಲ, ದೊಡ್ಡ ಊರು. ಹೋಬಳಿ

ಕೇಂದ್ರ. ಈ ಹೋಬಳಿಗೆ ಸೇರಿರುವ ೪೭ ಗ್ರಾಮಗಳಿವೆ. ಕೃಷಿ, ಆರೋಗ್ಯ, ಶಿಕ್ಷಣ, ಧಾರ್ಮಿಕ ಕೇಂದ್ರವಾಗಿದೆ. ಐತಿಹಾಸಿಕ ಕೇಂದ್ರವು ಹೌದು. ೧೬೨೦-೧೬೨೫ರ ಶಾಸನಗಳಲ್ಲಿ ನಾಯಕನಹಟ್ಟಿಯ ಹೆಸರು ಸ್ಪಷ್ಟವಾಗಿ ಉಲ್ಲೇಖವಾಗಿದೆ. 'ಹಟ್ಟಿ ಪಾಳೆಗಾರ' ಆಡಳಿತ ಕೇಂದ್ರ ಎಂಬುದಾಗಿ ಕರೆಯಲಾಗಿದೆ. ಇದರ ಮೊಟ್ಟ ಮೊದಲು ಪಾಳೆಗಾರ ಕೋಟೆ ಮಲ್ಲಪ್ಪ ನಾಯಕ.

ಇವರು ಶ್ರೀಶೈಲದಿಂದ ಈ ಕಡೆಗೆ ಬಂದರು ೩ ಸಾವಿರ ಒಳ್ಳೆಯ ಜಾತಿಯ ದನಕರುಗಳನ್ನು ಹೊಡೆದುಕೊಂಡು ಅವುಗಳಿಗೆ ಮೇವು ನೀರು ಹುಡುಕುತ್ತ ಹುಡುಕುತ್ತ ಈ ಪ್ರದೇಶಕ್ಕೆ ಬಂದರು. ಸುತ್ತ ಮುತ್ತಲಿರುವ ಕಾಡನ್ನು ಕಡಿದು ಒಂದು ಹಟ್ಟಿಯನ್ನಾಗಿ ಮಾಡಿದರು. ವಿಜಯನಗರದ ಆಳ್ವಿಕೆಯ ಕಾಲವಾದ ಕಾರಣ ಅವರ ಅಪ್ಪಣೆಯನ್ನು ಪಡೆದು ಇಲ್ಲೊಂದು ಜರಾಳ ಭೂತಿಯನ್ನು ನಿರ್ಮಾಣ ಮಾಡಿಕೊಂಡರು. ವಿಜಯನಗರ ಅರಸರಿಗೆ ಆನಂದವಾಗಿ ಕುಂದುರ್ಪಿ ಆಡಳಿತವನ್ನು ಮಲ್ಲಪ್ಪನಾಯಕನಿಗೆ ಕೊಟ್ಟು ಹಟ್ಟಿ ಮಲ್ಲಪ್ಪನಾಯಕನೆಂದು ಕರೆದು ಈ ಪ್ರದೇಶವನ್ನು 'ನಾಯಕನಹಟ್ಟಿ' ಎಂದು ಕರೆಯಲಾಯಿತು. ಹೀಗೆ ನಾಯಕನಹಟ್ಟಿ ಅಸ್ತಿತ್ವಕ್ಕೆ ಬಂತು.

ಒಳಮಠ

ನಾಯಕನಹಟ್ಟಿ ಶ್ರೀ ತಿಪ್ಪೇರುದ್ರಸ್ವಾಮಿಯ ದೇವಸ್ಥಾನವು ಭವ್ಯವಾಗಿದೆ. ಸುಮಾರು ೬೫ ಅಡಿ ಎತ್ತರ ೭೦ ಅಡಿ ಅಗಲ ಹಾಗೂ ವಿಸ್ತಾರವಾದ ಪ್ರಕಾರ, ನವರಂಗ, ರಾಜಗೋಪುರ, ಗರ್ಭಗುಡಿ ಹೊಂದಿರುವ ಈ ದೇವಸ್ಥಾನವು ಭಕ್ತರಿಗೆ ಕೈಲಾಸ ಸಾದೃಶ್ಯವಾಗಿದೆ. ದಿವ್ಯವೂ, ಭವ್ಯವೂ ಆಗಿದೆ. ರಾಜಗೋಪುರವು ವಿವಿಧ ಪುತ್ಥಳಿಗಳನ್ನೊಳಗೊಂಡಿದೆ. ಕಲಾತ್ಮಕವಾಗಿದೆ. ಗರ್ಭಗುಡಿಯ ಚಿಕ್ಕ ಗೋಪುರವೂ ೩೫ ಅಡಿ ಎತ್ತರ ೪೫ ಅಡಿ ಅಗಲವಿದೆ. ರಾಜಗೋಪುರವನ್ನು ದಾಟಿ ಮುಂದೆ ಹೋದರೆ ನವರಂಗದ ವಿಶಾಲ ಮಂಟಪ, ಅನಂತರ ಕಪ್ಪು ಶಿಲೆಯ ೪ ಕೆತ್ತನೆಯ ಕಂಬಗಳ ಮೇಲೆ 'ಭುವನೇಶ್ವರಿ ಕಮಲ ಶಿಲ್ಪ ನಯನ ಮನೋಹರ ಇದರಲ್ಲಿ ಗಿರಿಜಾ ಕಲ್ಯಾಣ ತ್ರಿಪುರ ಸಂಹಾರ ಶಿಲ್ಪಗಳನ್ನು ಕೆತ್ತಲಾಗಿದೆ. ಸುಮಾರು ೩೫೦ ವರ್ಷಗಳ ಹಿಂದೆ ಈ ದೇವಸ್ಥಾನಕ್ಕೆ ಅರ್ಧ ಹರಿದಾರಿ ದೂರದಲ್ಲಿದ್ದ ಕೆಮ್ಮಣ್ಣು ದಿಬ್ಬದಲ್ಲಿ ಭೂಗರ್ಭದಲ್ಲಿತ್ತೆಂದೂ, ಶ್ರೀ ಸ್ವಾಮಿಯ ಸ್ವಪ್ನಾದೇಶದಂತೆ ಇದನ್ನು ಇಲ್ಲಿ ತಂದು ಸ್ಥಾಪಿಸಿದ್ದಾರೆಂದು ಪ್ರತೀತಿ.

ಒಳಮಠ ಇದು ಮೂಲಗದ್ದುಗೆ. ಪ್ರತಿಯೊಂದು ವಿಶೇಷ ಕಾರ್ಯಕ್ರಮಗಳು ಈ ದರ್ಬಾರು ಮಠದಿಂದ ಆರಂಭವಾಗುತ್ತದೆ. ಇದು ಒಳಮಠ. ಒಳಮಠದಲ್ಲಿ ವಿಶೇಷ ಮಂಟಪಯಿದೆ. ಅದು 'ಭುವನೇಶ್ವರಿ ಕಮಲ' ಎಂದು ಹೆಸರು. ಒಂದೊಂದು ಶತಮಾನಕ್ಕೆ ಒಬ್ಬೊಬ್ಬರು ಜೀರ್ಣೋದ್ಧಾರ ಮಾಡೋ ಕಾಲಕ್ಕೆ ಒಂದೊಂದು ಶತಮಾನದವರು ವಿಶೇಷವಾಗಿ ಕಟ್ಟಿಸಬೇಕು ಎಂದು ಯೋಜನೆ ಹಾಕಿದರು. ಒಳ್ಳೆ ಕಲ್ಲಿಗೆ ತುಂಬಾ ಬೇಡಿಕೆ ಎಷ್ಟು ದುಡ್ಡು ಕೊಟ್ಟರೂ ಸಿಗುವುದಿಲ್ಲ. ಹೀಗಿರುವ ಸಂದರ್ಭದಲ್ಲಿ ಕೆಲಸವನ್ನು ಹಾಗೆ ಅರ್ದಕ್ಕೆ ನಿಲ್ಲಿಸಿದಾಗ ರಾತ್ರಿ ವೇಳೆಯಲ್ಲಿ ಸ್ವಾಮೀಜಿಯವರು ಕೆಮ್ಮಣ್ಣಿನ ದಿಬ್ಬದಲ್ಲಿ

ಕರಿಕಲ್ಲಿನ ಮಂಟಪಯಿದೆ ಎಂದು ಹೇಳಿದರು. ಅದನ್ನು ಹಾಗೆಯೇ ಯತಾವತ್ತಾಗಿ ತಂದು ಪ್ರತಿಷ್ಠಾಪನೆ ಮಾಡಿರುವುದು ಇಲ್ಲಿನ ಇನ್ನೊಂದು ವಿಶೇಷತೆ. ಇದರ ಒಳಗಡೆ ಒಂದು ಕಮಲ ಬರುತ್ತೆ. ಇದೇ ಭುವನೇಶ್ವರಿ ಕಮಲ ಅಂಥ ಇದರ ಒಳಗಡೆ ಒಂದು ಗೊಂಚಲು ೪ ಅಡಿಯಿದೆ.

ನಮ್ಮ ಭಾರತದಲ್ಲಿ ವಾಸ್ತುಶಿಲ್ಪ ಏನುಬರುತ್ತೋ ಅದು ತುಂಬಾ ವಿಶೇಷವಾದುದು. ಈ ತರಹದ ಚಿತ್ರ ಎಲ್ಲೂ ಸಿಗೋಲ್ಲ. ಇದನ್ನು ಬಿಟ್ಟರೆ ಸೋಮೇಶ್ವರದಲ್ಲಿದೆ. ಶಿವ ಪುರಾಣ, ಮತ್ತು ಗಿರಿಜ ಪುರಾಣದಲ್ಲಿ ಎರಡು ಕಥೆಗಳಿವೆ. ಆ ಕಥೆಯನ್ನು ಆಧಾರವಾಗಿಟ್ಟುಕೊಂಡು ದೇವಾಲಯ ರಚನೆ ಮಾಡಿದ್ದಾರೆ. ಆ ಕಲ್ಪನೆಯ ಹಿನ್ನೆಲೆಯಲ್ಲಿ ದೇವಾನುದೇವತೆಗಳು ಇಲ್ಲಿ ನೆಲೆಸಿದ್ದಾರೆ ಎಂಬುದು ಪ್ರತೀತಿ. ಆ ಹಿನ್ನಲೆಯಲ್ಲಿ ದೇವಾಲಯದ ಸುತ್ತ ಕೆತ್ತನೆ ಕೆಲಸ ಮಾಡಲಾಗಿದೆ. ಎಲ್ಲಾ ದೇವಾನುದೇವತೆಗಳು ನೆಲೆಸಿರುವ ಕಾರಣಕ್ಕಾಗಿ ಏನೇ ಕೆಲಸ ಕಾರ್ಯಗಳು ನಡೆದರು ಈ ಮಂಟಪದ ಕೆಳಗೆ ನಡೆಯುತ್ತವೆ. ಉದ್ದೇಶ ಇಷ್ಟೆ ಅಷ್ಟ ದೇವತೆಯ ಅನುಗ್ರಹವಿದೆ ಎಂಬ ಕಾರಣಕ್ಕಾಗಿ ಜಾತ್ರೆಯ ಕಾರ್ಯದಿಂದ ಹಿಡಿದು ವಾರದ ಉತ್ಸವದ ತನಕ ಎಲ್ಲವೂ ಆ ಮಂಟಪದ ಕೆಳಗೆ ನಡೆಯುತ್ತವೆ.

ಈ ಕೆತ್ತನೆಯ ಕಂಬಗಳನ್ನು ನೋಡಿ ಮುಂದೆ ಸಾಗಿದರೆ ಶಿವಲಿಂಗದ ಶ್ರೀಮುಖ ಹಾಗೂ ಶ್ರೀ ಪಾದುಕೆಗಳ ಆನಂದಮಯ ದೃಶ್ಯ ಬೆಳ್ಳಿಯ ಮಂಟಪ, ವಜ್ರದ ಹಾರ, ಕಣ್ಣನ್ನು ಕೋರೈಸುತ್ತವೆ. ಭವ್ಯವಾದ ಗದ್ದುಗೆಯ ಮೇಲೆ ಶ್ರೀ ಶಿವಲಿಂಗ, ಮೂಲಗದ್ದುಗೆಯ ಮೇಲಿರುವುದನ್ನು (ಕದಲಿಸುವುದಿಲ್ಲ) ಕಾಣಬಹುದು. ಉತ್ಸವ ಮೂರ್ತಿಯನ್ನು ಎಲ್ಲಾ ಉತ್ಸವಗಳಿಗೆ ಕೊಂಡೊಯ್ಯುವುದುಂಟು. ಫಣಿಯಪ್ಪನಿಗೆ ಶ್ರೀ ಶ್ರೀಗಳು ಶಿವಪೂಜೆಗಾಗಿ ನೀಡಿದ್ದ ಮಹಾಂತೇಶ್ವರಲಿಂಗವು ಇಂದಿಗೂ ಫಣಿಯಪ್ಪನ ವಂಶಜರ ಮನೆಯಲ್ಲಿ ನಿತ್ಯಪೂಜೆಗೊಳ್ಳುತ್ತದೆ.

ವಿಸ್ತಾರವಾದ ಸುತ್ತಣ ಪ್ರಕಾರದ ಒಳಗಡೆ ರುದ್ರಾಭಿಷೇಕ ನಡೆಯುವ ಪೂಜಾ ಸನ್ನಿಧಿ, ತೂಗುಮಂಟಪದ ಶ್ರೀ ಸ್ವಾಮಿ ಸನ್ನಿಧಿ, ಉಗ್ರಾಣ, ಅಡುಗೆಮನೆ, ಊಟದ ಮನೆ, ದೇವಸ್ಥಾನದ ಆಡಳಿತ ಕಛೇರಿ ಇತ್ಯಾದಿಗಳಿವೆ. ಹೊರಗಡೆ ರಸ್ತೆಯ ಪಕ್ಕದಲ್ಲಿ ಯಾತ್ರಿಕರು ತಂಗುವುದಕ್ಕಾಗಿಯೇ ಮುಜರಾಯಿ ಇಲಾಖೆ ನಿರ್ಮಿಸಿದ ವಸತಿ ಗೃಹಗಳಿವೆ. ಶ್ರೀ ದೇವಸ್ಥಾನದ ಹತ್ತಿರದಲ್ಲಿ ವೀರಭದ್ರಸ್ವಾಮಿಯ ದೇಗುಲವೂ ಇದೆ. ರಾಜಗೋಪುರವನ್ನು ಒಂದೂವರೆ ಶತಮಾನದ ಹಿಂದೆ ನಿರ್ಮಿಸಿದ್ದಾರೆ. ಅವರು ಕೆತ್ತುವಾಗ ದಿನಾಂಕ ಹಾಕಿದ್ದರಂತೆ. "ಕುಂಚಿ ತಿಪ್ಪಯ್ಯ ಕೂನುಬೇವಿನವರು" ಅವರು ಕಳಸ ಪ್ರತಿಷ್ಠಾಪನೆ ಮಾಡಿದ್ದಾರೆ. ಉಳಿದ ಗೋಪುರವನ್ನು ಎಲ್ಲ ಭಕ್ತರು ಸೇರಿ ಕಟ್ಟಿಸಿದ್ದಾರಂತೆ ಸರಿಯಾದ ದಾಖಲೆಗಳಿಲ್ಲ.

ಶಿಲಾಮಂಟಪವನ್ನು ದಾಟಿ ಮುಂದೆ ಬಂದಾಗ ೧೯೯೪ ರಲ್ಲಿ ನೂತನವಾಗಿ ನಿರ್ಮಿತವಾದ ಅಲಂಕೃತ ಮುಖ ಮಂಟಪದೊಳಗಿನ ಸಿಮೆಂಟಿನಲ್ಲಿ ಮಾಡಿರುವ ಪುಷ್ಪಾಲಂಕಾರದ ಮೇಲ್ಛಾವಣಿ ಮತ್ತು ಕಂಬಗಳು ಕಂಗೊಳಿಸುತ್ತವೆ. ಈ ಮಂಟಪದ ಸೇವೆಯನ್ನು ಚಳ್ಳಕೆರೆಯ ಶ್ರೇಷ್ಠದಾನಿ ಶ್ರೀ ಟಿ.ಎ.ತಿಪ್ಪೇಸ್ವಾಮಿ ಇವರದಾಗಿರುತ್ತದೆ. ಈ ಮುಖಮಂಟಪದ ಮೇಲು ಮುಖದ ಮೇಲೆ ಶ್ರೀಗಳ ವಿವಿಧ ಪವಾಡಗಳನ್ನು

ಬಿಂಬಿಸುವ ವಿಷಯಗಳನ್ನು ಒಳಗೊಂಡ ಚಿಕ್ಕ-ಚಿಕ್ಕ ಮಂಟಪಗಳನ್ನು ನಿರ್ಮಿಸಲಾಗಿದೆ. ಮಠದ ಇಕ್ಕೆಲಗಳ ಗೋಡೆಗಳ ಮೇಲೆ ಹೆಸರಾಂತ ಕಲಾವಿದರಾದ ಶ್ರೀ ವಿ.ಬಿ.ಹಿರೇಗೌಡರು ಇವರಿಂದ ರಚಿತವಾದ ತೈಲವರ್ಣದ ಸ್ವಾಮಿಗಳ ವಿವಿಧ ಪವಾಡಗಳ ದೃಶ್ಯಗಳು ಭಕ್ತಾದಿಗಳಿಗೆ ಶ್ರೀಗಳ ಚರಿತ್ರೆಯನ್ನು ತಿಳಿಯಲು ಸಹಕಾರಿಯಾಗಿದೆ.

ರಾಜಗೋಪುರ

ಆಗಸದೆತ್ತರದ ಸುಂದರವಾದ ರಾಜಗೋಪುರ ಶ್ರೀಕ್ಷೇತ್ರಕ್ಕೆ ಭಕ್ತಾದಿಗಳನ್ನು ದೂರದಿಂದಲೇ ಸ್ವಾಗತಿಸುತ್ತದೆ. ೨೦೦ ವರ್ಷಗಳ ಹಿಂದೆ ನಿರ್ಮಿಸಲಾಗಿದೆಯೆಂದು ಹೇಳಲಾಗುತ್ತಿರುವ ಈ ರಾಜಗೋಪುರ ೬೫ ಅಡಿಗಳಿಗಿಂತ ಎತ್ತರವಾಗಿದ್ದು ೫ ಅಂತಸ್ತುಗಳನ್ನು ಹೊಂದಿವೆ. ೧೯೯೮ ರಲ್ಲಿ ಸದರಿ ರಾಜಗೋಪುರವನ್ನು ನವೀಕರಿಸಲಾಗಿದೆ.

ಒಳಮಠದ ಪ್ರಕಾರದ ರಾಜಗೋಪುರವು ಇಟ್ಟಿಗೆ ಗಾರೆಯಿಂದ ಕಟ್ಟಲಾಗಿದ್ದು ಹೊರಗೋಡೆಗಳ ಮೇಲೆ ಇರುವ ಗಾರೆಶಿಲ್ಪಗಳಲ್ಲಿ ಯೂರೋಪಿಯನ್ನರ ಗಾರೆ ಶಿಲ್ಪವು ಮನಮೋಹಕವಾಗಿದೆ. ಈ ಶಿಲ್ಪದ ಸನ್ನಿವೇಶವೊಂದರಲ್ಲಿ ಒಬ್ಬ ಫ್ರೆಂಚ್ ಅಧಿಕಾರಿಯನ್ನು ಮತ್ತು ಅವನ ಕುಟುಂಬದವರನ್ನು ನಮ್ಮ ದೇಶಿಯರು ಸ್ವಾಗತಿಸುತ್ತಿರುವ ಚಿತ್ರವಿದ್ದಂತಿದೆ. ಏಕೆಂದರೆ ಅವರು ಧರಿಸಿರುವ ಉಡುಪು ಸೊಂಟದಲ್ಲಿ ಇರುವ ಕಿರುಗತ್ತಿ ಮುಂತಾದವು ಫ್ರೆಂಚರು ೧೮ನೇ ಶತಮಾನದಲ್ಲಿ ಧರಿಸುತ್ತಿದ್ದ ಉಡುಪುಗಳನ್ನು ಹೋಲುತ್ತವೆ. ಅಂದಿನ ದೇಶಿಯ ಉಡುಪಿನ ವಿವರಗಳನ್ನು ತಿಳಿಯಲು ಸಹಕಾರಿಯಾಗಿದೆ.

ಪೌರಾಣಿಕ ಸನ್ನಿವೇಶಗಳನ್ನು ತಿಳಿಸುವಂತೆ ಮಹಿಷಮರ್ದಿನಿ, ವಿಷ್ಣು ಅವತಾರ, ಉಗ್ರನರಸಿಂಹ, ಸೀತರಾಮಾಂಜನೇಯ, ಗಣೇಶ, ಆಂಜನೇಯ ಹಾಗೂ ಯುದ್ಧದ ಸನ್ನಿವೇಶಗಳು ಬಹಳ ಸುಂದರವಾಗಿವೆ. ಲೈಂಗಿಕ ಶಿಕ್ಷಣದ ಜ್ಞಾನವನ್ನು ನೀಡುವಂತಹ ಹಲವಾರು ಭಂಗಿಯ ಸನ್ನಿವೇಶಗಳಿವೆ. ಗಾರೆ ಶಿಲ್ಪಗಳನ್ನು ಹೊಂದಿರುವುದನ್ನು ಕಾಣಬಹುದು.

೨. ಹೊರಮಠ

ಚಿಕ್ಕಕೆರೆಯ ಪಕ್ಕದಲ್ಲಿರುವ ಭವ್ಯ ಮಂದಿರವೇ ಹೊರಮಠ. ಶ್ರೀ ಶ್ರೀಗಳು ಜೀವಂತ ಸಮಾಧಿ ಸ್ವೀಕರಿಸಿದ ಪುಣ್ಯಸ್ಥಳ, ಗದ್ದುಗೆಯಿದೆ. ಇದು ಉತ್ತರಾಭಿಮುಖವಾಗಿದೆ. ಈ ಕಟ್ಟಡದ ರಚನೆ, ಗೋಪುರ ನಿರ್ಮಾಣ ಮುಸ್ಲಿಂ ಶೈಲಿಯಲ್ಲಿದೆ. ಹೈದರನ ಕಾಣಿಕೆಯಿಂದ ಪಾಳೆಯಗಾರರು ಇದನ್ನು ನಿರ್ಮಿಸಿದ್ದಾರೆ. ಈ ಮಠದ ಸುತ್ತಲೂ ಹಿಂದೂ-ಮುಸ್ಲಿಂರ ಭಾವೈಕ್ಯತೆಯ ಸಂದೇಶ ಸಾರುವ ಸಂಕೇತವಾಗಿದೆ. ಇಂಡೋ-ಇಸ್ಲಾಮಿಕ್ ಶೈಲಿಯ ಗುಮ್ಮಟವಿದೆ. ೧೮ನೇ ಶತಮಾನದಲ್ಲಿ ನಿರ್ಮಿಸಲಾಗಿದೆ.

ಹೊರಮಠದ ನಿರ್ಮಾಣ ಶಾಲಿವಾಹನ ಶಕೆ ೧೯೪೩ ರಲ್ಲಿ ಬಹುಳ ನಾಮ ಸಂವತ್ಸರ ಜ್ಯೇಷ್ಠ ಮಾಸ ಕ್ರಿ.ಶ. ೧೭೨೧ ರಲ್ಲಿ ಚಿತ್ರದುರ್ಗವನ್ನು ಕ್ರಿ.ಶ.೧೬೮೯ ರಿಂದ ೧೭೨೧ ರ ವರೆಗೆ ಆಳಿದ ಧರ್ಮಾಭಿಮಾನಿ ಬಿಚ್ಚುಗತ್ತಿ ಭರಮಣ್ಣ ನಾಯಕರು ಮಾಡಿದ ಧಾರ್ಮಿಕ ಕಾರ್ಯಗಳಲ್ಲಿ ಇದು ಸಹ ಒಂದಾಗಿದೆ.

(ಪ್ರೊ.ಡಿ.ಟಿ.ರಂಗಸ್ವಾಮಿಯವರು ವ್ಯಕ್ತಪಡಿಸಿರುತ್ತಾರೆ) ಚಿಕ್ಕಕೆರೆಯ ಮೇಲಿಂದ ಹೊರಮಠದ ಪ್ರವೇಶದ ದ್ವಾರ ಕಮಾನಿನಲ್ಲಿ ಹಾಯ್ದು ಮೆಟ್ಟಿಲುಗಳನ್ನು ಇಳಿದು ಬೃಂದಾವನ ಶೈಲಿಯ ಮಾರ್ಗದಲ್ಲಿ ಹಾಯ್ದು ಹೊರಮಠದ ಒಳಗೆ ಪ್ರವೇಶ ಮಾಡುವ ಸಲುವಾಗಿ (ಕ್ರಿ.ಶ.೨೦೦೦) ನಿರ್ಮಿಸಿದ ದಾರಿ ತುಂಬಾ ಸುಂದರವಾಗಿದೆ. ಪೂಜೆ ಕಾರ್ಯಗಳು ನಡೆಯುತ್ತವೆ. ಸ್ವಾಮಿಯ ಪಲ್ಲಕ್ಕಿ ಉತ್ಸವ ಪ್ರತಿ ಸೋಮವಾರ ಸಾಯಂಕಾಲ ಇಲ್ಲಿಗೆ ಬರುತ್ತದೆ. ಎಲ್ಲಾ ವಿಶೇಷ ಕಾರ್ಯಕ್ರಮದಂದು ಹೊರಮಠಕ್ಕೆ ಬಂದು ಹೋಗುವುದನ್ನು ಕಾಣಬಹುದು.

ಮಠದ ಸುತ್ತಲು ವಸತಿ ಗೃಹಗಳಿವೆ. ಇತ್ತೀಚಿಗೆ ಮುಜರಾಯಿ ಇಲಾಖೆಯ ವತಿಯಿಂದ ನಿರ್ಮಿತವಾದ ದೊಡ್ಡ ಮಂಟಪಗಳು, ವಸತಿಗೃಹಗಳಿವೆ. ಪ್ರವಾಸಿ ಮಂದಿರಗಳಿವೆ. ಭಕ್ತರು ನಿರ್ಮಿಸಿದ ಕಲ್ಯಾಣ ಮಂಟಪವಿದೆ. ಬಯಲು ರಂಗಮಂದಿರವಿದೆ. ಹೊರಮಠ ತುಂಬಾ ವಿಶಾಲವಾದ ಪ್ರದೇಶವಾಗಿದೆ.

ಏಕಾಂತೇಶ್ವರ ಮಠ

ಸ್ವಾಮಿಗಳು ಇಲ್ಲಿರುವ ಜನತೆಯನ್ನು ತಿದ್ದಲು ಅಂಧಕಾರದಿಂದ ದೂರಮಾಡಲು ಹೆಚ್ಚಿನ ಜ್ಞಾನ ತಿಳಿಸುವ ಸಲುವಾಗಿ ಸ್ವಾಮಿಗಳಿಗೆ ಹೆಚ್ಚಿನ ಶಕ್ತಿ ಬೇಕಾಗಿರುವುದರಿಂದ ಏಕಾಂತವಾಗಿ ತಪಸ್ಸು ಮಾಡಿದ ಸ್ಥಳವೇ ಏಕಾಂತಮಠ. ಇದು ಇಲ್ಲಿಂದ ೨.ಕಿ.ಮೀ. ದೂರದಲ್ಲಿದೆ. ಸ್ವಾಮಿಗಳು ಏಕಾಂತವಾಗಿ ತಪಸ್ಸು ಮಾಡಿದ ಸ್ಥಳ ಈಗಲೂ ಸಹ ದರ್ಶನ ಮಾಡಿ ಬರಬಹುದು. ಸುಮಾರು ೧೫ ಅಡಿ ಆಳದಲ್ಲಿ ಗುಹೆಯಿದೆ. ಅಲ್ಲಿ ಸ್ವಾಮೀಜಿಗಳು ಏಕಾಂತವಾಗಿ ತಪಸ್ಸು ಮಾಡಿ ಶಕ್ತಿ ಪಡೆದಂತಹ ಸ್ಥಳ ಪುಣ್ಯನೆಲೆ ಏಕಾಂತ ಮಠಕ್ಕೆ ಸ್ವಲ್ಪ ದೂರದಲ್ಲಿ ಕಾಲಭೈರವನ ಮೂರ್ತಿ ಮತ್ತು ದೇಗುಲವಿದೆ. ಈ ಮೂರ್ತಿಯನ್ನು ಶ್ರೀಗಳು ನಿತ್ಯಪೂಜಿಸುತ್ತಿದ್ದರು. ಪ್ರತಿ ತಿಂಗಳು ಅಮವಾಸ್ಯೆಯ ಹಿಂದಿನ ದಿನದ ರಾತ್ರಿ ಶ್ರೀಗಳ ಆರಾಧನೆ ನಡೆಯುತ್ತದೆ. ಕಾರ್ತಿಕ ಮಾಸದಲ್ಲಿ ಕಾರ್ತೀಕೋತ್ಸವದಂದು ರಥೋತ್ಸವ ನಡೆಯುತ್ತದೆ.

ಗುಹಾಂತರ ದೇವಾಲಯ

ನಾಯಕನಹಟ್ಟಿಯಿಂದ ದಕ್ಷಿಣಕ್ಕೆ ಸುಮಾರು ಆರೇಳು ಕಿ.ಮೀ. ದೂರದ ಹೊಸಗಡ್ಡ ಎಂಬಲ್ಲಿ ಒಂದು ಗುಹಾಂತರ ದೇವಾಲಯವಿದೆ. ಇದಕ್ಕೆ ಎರಡು ಸುತ್ತಿನ ಕೋಟೆಯಿದೆ. ಒಂದೇ ಕಲ್ಲಿನಲ್ಲಿ ಈ ಗುಹಾಂತರ ದೇವಾಲಯ ನಿರ್ಮಾಣವಾಗಿದೆ. ಇಲ್ಲಿ ಶಿವಲಿಂಗವನ್ನು ಕಾಣಬಹುದು. ಮತ್ತು ಬಸವಣ್ಣನ ವಿಗ್ರಹವಿದೆ. ಅತ್ಯಂತ ಸುಂದರವಾಗಿದೆ. ಬಸವಣ್ಣನ ವಿಗ್ರಹದ ಹಿಂದೆ ಆಲದ ಮರವಿದೆ. ಬಸವಣ್ಣನ ಪಾದದಿಂದ ಲಿಂಗಕ್ಕೆ ನೀರು ಹರಿದು ಬರುತ್ತಿತಂತೆ. ಈಗ ಅದು ಹಾಳಾಗಿದೆ. ನೀರು ಬರುತ್ತಿಲ್ಲ. ಅಲ್ಲಿ ವರ್ಷದಲ್ಲಿ ೩ ಬಾರಿ ವಿಶೇಷ ಪೂಜೆ ನಡೆಯುತ್ತದೆ. ಕಾರ್ತೀಕ ಮಾಸದಲ್ಲಿ, ಮಹಾಶಿವರಾತ್ರಿಯಂದು, ಯುಗಾದಿಯ ದಿನದಂದು ತುಂಬಾ ವಿಶೇಷ ಪೂಜೆ ನಡೆಯುವುದನ್ನು ಕಾಣಬಹುದು.

ಅಧ್ಯಾಯ - ೪

ನಂಬಿಕೆ, ಹರಕೆ ಮತ್ತು ಪವಾಡಗಳು

ನಂಬಿಕೆ, ಹರಕೆ ಮತ್ತು ಪವಾಡಗಳು

ನಮ್ಮ ಜನವರ್ಗದಲ್ಲಿ ಅನೇಕ ನಂಬಿಕೆಗಳು ಪರಂಪರಾಗತವಾಗಿ ರೂಢಿಯಲ್ಲಿ ಉಳಿದುಕೊಂಡು ಬಂದಿವೆ. ಇಂತಹ ನಂಬಿಕೆಗಳನ್ನು ನಿಜವಾದುವೆಂದು ಒಪ್ಪಲು ಬರುವುದಿಲ್ಲ. ಹಾಗೆಂದು ಸಾರಾಸಗಟಾಗಿ ಅಲ್ಲಗಳೆಯಲೂ ಸಾಧ್ಯವಿಲ್ಲ. ಯಾಕೆಂದರೆ ಇವು ನಮ್ಮನ್ನು ಮಾನಸಿಕವಾಗಿ ಕೆದಕಬಲ್ಲಂತಹವು. ನಂಬಿಕೆಗಳು ಜೀವನದ ಅವಿಭಾಜ್ಯ ಅಂಗವಾಗಿರುವುದನ್ನು ನಾವು ನಮ್ಮ ಸುತ್ತಲಿನ ಪರಿಸರದಲ್ಲೆಲ್ಲ ಕಾಣುತ್ತೇವೆ. ಶಾರೀರಿಕ ಮತ್ತು ಮಾನಸಿಕ ನೆಮ್ಮದಿಯನ್ನು ಕೊಡುವ ಅನೇಕ ನಂಬಿಕೆಗಳು ತಲೆಮಾರಿನಿಂದ ತಲೆಮಾರಿನವರೆಗೆ ಆಚರಣೆಗಳ ಮೂಲಕ ಉಳಿದುಬಂದಿವೆ. ನಂಬಿಕೆಗಳ ಉಗಮದ ಬಗ್ಗೆ ಅವು ಯಾಕೆ ಹುಟ್ಟಿದವು? ಎಂಬುದರ ಬಗ್ಗೆ ಸರಿಯಾದ ಮಾಹಿತಿಯಿಲ್ಲ. ಸಂಪ್ರದಾಯಕ್ಕೆ ಬದ್ಧರಾದವರು ಇವುಗಳನ್ನು ಧಾರ್ಮಿಕತೆಯ ನೆಲೆಗಟ್ಟಿನಲ್ಲಿ ನೋಡಲು ಪ್ರಯತ್ನಿಸಿದ್ದಾರೆ.

ನಂಬಿಕೆಗಳ ಹುಟ್ಟು

ನಂಬಿಕೆಗಳು ಮಾನವನ ಸಾಮೂಹಿಕ ಬದುಕಿನ ಸಂದರ್ಭದಲ್ಲೇ ಹುಟ್ಟಿರಬೇಕು. ಇವುಗಳ ಹುಟ್ಟಿನ ಹಿಂದೆ ಜೀವನಾನುಭವವಿದೆ. ಪ್ರಕೃತಿಯಲ್ಲಿ ನಡೆಯುವ ಅನೇಕ ಘಟನೆಗಳ ಕುರಿತಾದ ಅಪೂರ್ವ ಕಲ್ಪನೆ ಅತಿಮಾನುಷ ಶಕ್ತಿಯ ಭಯ ಇತ್ಯಾದಿಗಳು ನಂಬಿಕೆಗಳ ಹುಟ್ಟಿಗೆ ಕಾರಣವಾಗಿರಬಹುದು. ಕೆಲವು ಸಲ ನಂಬಿಕೆಗಳು ಪ್ರಾಯಶ್ಚಿತ ರೂಪವಾಗಿ ಹುಟ್ಟಿಕೊಂಡಿರಲೂಬಹುದು. ಉದಾ: ಜನಸಾಮಾನ್ಯರು ತಮ್ಮ ತಪ್ಪಿಗೆ ಜ್ಞಾನಿಗಳಲ್ಲಿಗೆ ಹೋಗಿ "ಪಾಪಕ್ಕೆ ಪರಿಹಾರವೇನು? ಎಂದು ಕೇಳಿ ತಿಳಿದುಕೊಳ್ಳುತ್ತಿದ್ದರು. ಆ ಕಾರಣಕ್ಕಾಗಿ ಮಕ್ಕಳಾಗದವರಿಗೆ ಅಶ್ವಥ ಮರವನ್ನು (ವೃಕ್ಷ) ಪೂಜಿಸಿದರೆ ಮಕ್ಕಳಾಗುತ್ತವೆ ಎಂಬ ನಂಬಿಕೆಗಳು ಈ ಹಿನ್ನೆಲೆಯಲ್ಲಿ ಹುಟ್ಟಿರಬಹುದು. ಜನಪದ ನಂಬಿಕೆಗಳು ಹೇಗೆ ಹುಟ್ಟಿದವು ಎಲ್ಲಿ ಹುಟ್ಟಿದವು ಮತ್ತು ಸಂಸ್ಕೃತಿಯ ಯಾವ ಘಟ್ಟದಲ್ಲಿ ಹುಟ್ಟಿದವು, ಏಕೆ ಹುಟ್ಟಿದವು ಎಂದು ಹೇಳಲು ಸಾಧ್ಯವಾಗದೇ ಹೋಗಬಹುದು. ನಂಬಿಕೆಯು ಒಂದು ಮಾನಸಿಕ ಒಪ್ಪಿಗೆಯಾಗಿದ್ದು, ಜನಪದರು ಅದನ್ನು ಪರಂಪರಾನುಗತವಾಗಿ ನಂಬಿ ಅದರಂತೆ ನಡೆದುಕೊಂಡು ಬಂದಿರುವ ಭಾವರೂಪ ನಂಬಿಕೆಗಳು ಕ್ರಿಯೆಗಳಾಗಿವೆ. ಇದು ಒಬ್ಬರಿಂದ ಇನ್ನೊಬ್ಬರಲ್ಲಿ ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಹೇಳಿದ ಜನಪದರು ನಡೆಯಲ್ಲಿ ತಂದರು. ಮುಂದಿನವರೂ ಮತ್ತೊಬ್ಬರೂ ಅವುಗಳನ್ನು ಕಣ್ಣಾರೆ ಕಂಡು ಸುಖದ ಆಸೆ ತಾಳಿಯೋ,

ಮನಸ್ಸಿನ ಸಮಾಧಾನಕ್ಕೋ ಅನುಸರಿಸಿದರು. ಇವುಗಳನ್ನು ಜೀವನ ಮೌಲ್ಯಗಳೆಂದು ನಂಬಿ ಆಚರಣೆಯಲ್ಲಿ ರೂಢಿಸಿಕೊಂಡು ಬಂದರು. ಹೀಗೆ ಬಾಳಿನ ಒಂದಂಗವೆಂಬಂತೆ ಇವು ಜೀವನದಲ್ಲಿ ಹಾಸು ಹೊಕ್ಕಾಗಿ ಸಮಷ್ಟಿ ಪ್ರಜ್ಞೆಯಲ್ಲಿ ಮೂಡಿದವು.

ಈ ನಂಬಿಕೆ ಹಿಡಿಯಾಗಿ ಒಂದು ಸಮುದಾಯದ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವಲ್ಲಿ ಸಹಾಯಕವಾಗಿದೆ. ನಂಬಿಕೆ, ಸಂಪ್ರದಾಯ, ಆಚರಣೆಗಳು ಪರಸ್ಪರ ಸೋದರ ಸಂಬಂಧಿಯಾದವುಗಳು. ಸಂಪ್ರದಾಯದ ಬೀಜರೂಪದಲ್ಲಿ ಒಂದು ನಂಬಿಕೆ ಇದ್ದೇ ಇರುತ್ತದೆ. ಅಂದರೆ ಸಂಪ್ರದಾಯಗಳೆಲ್ಲವೂ ಬಹುತೇಕ ನಂಬಿಕೆಗಳಾಗಿರುತ್ತವೆ. ಒಟ್ಟಿನಲ್ಲಿ ನಂಬಿಕೆ ಬದುಕಿನ ಎಲ್ಲಾ ಮಗ್ಗುಲಲ್ಲಿ ಹಾಗೂ ಎಲ್ಲಾ ಚಟುವಟಿಕೆಗಳಲ್ಲಿ ಇರುವಂತಹವುದಾಗಿದೆ. ಒಬ್ಬ ವ್ಯಕ್ತಿ, ಒಂದು ಸ್ಥಳ, ಒಂದು ಘಟನೆಗೆ ಮಾತ್ರವಷ್ಟೇ ಈ ನಂಬಿಕೆಗಳು ಸೀಮಿತವಾಗಿ ಇಲ್ಲವೆಂದೂ ಇದು ಸಾರ್ವಕಾಲಿಕವಾಗಿ ಅಂದರೆ ಎಲ್ಲಾ ಕಾಲಕ್ಕೂ ಇದ್ದು, ಮೌಖಿಕವಾಗಿ ಒಬ್ಬರಿಂದ ಒಬ್ಬರಿಗೆ ಹರಡುವ ಮೂಲಕ ಜೀವಂತವಾಗಿದೆ. ಆಚರಣೆಗಳ ಅರ್ಥದಲ್ಲಿ ಇಂದಿಗೂ ನಂಬಿಕೆಗಳು ಉಳಿದಿದ್ದು ಇಂದಿನ ಪೀಳಿಗೆಗೆ ಪರಂಪರೆಯನ್ನು ಕಟ್ಟಿಕೊಡುವ ಕೆಲಸವನ್ನು ಇವು ನಿರ್ವಹಿಸುತ್ತಿವೆ. ಆ ಮೂಲಕ ಮಾನವನ ಬದುಕು ಸಾಫಲ್ಯದ ಕಡೆಗೆ ಹೋಗಲು ನೆರವಾಗುತ್ತದೆ.

ನಂಬಿಕೆ

ಶಿವಪುರಾಣದಲ್ಲಿ ಮತ್ತು ಗಿರಿಜ ಪುರಾಣದಲ್ಲಿ ಎರಡು ಕಥೆಗಳಿವೆ. ಆ ಕಥೆಯನ್ನು ಆಧಾರವಾಗಿಟ್ಟುಕೊಂಡು ಎಲ್ಲ ದೇವಾನುದೇವತೆಗಳು ನೆಲೆಸಿದ್ದಾರೆ ಎಂದು ದೇವಸ್ಥಾನದ ಸುತ್ತ ಕೆತ್ತನೆ ಕೆಲಸ ಮಾಡಲಾಗಿದೆ. ಎಲ್ಲಾ ದೇವಾನುದೇವತೆಗಳು ನೆಲೆಸಿರುವ ಕಾರಣಕ್ಕಾಗಿ ಏನೇ ಕೆಲಸ ಕಾರ್ಯಗಳು ಆ ಮಂಟಪದ ಕೆಳಗೆ ನಡೆಯುತ್ತವೆ. ಅಷ್ಟ ದೇವತೆಯ ಅನುಗ್ರಹವಿದೆ ಎಂಬ ನಂಬಿಕೆ, ಜಾತ್ರೆಯ ಕಾರ್ಯದಿಂದ ಹಿಡಿದು ವಾರದ ಉತ್ಸವದ ತನಕ ಎಲ್ಲವು ಆ ಮಂಟಪದ ಕೆಳಗೆ ನಡೆಯುತ್ತವೆ. ಮಂಟಪದ ಕೆಳಗೆ ಎರಡು ವಿಗ್ರಹಗಳಿವೆ. ಅದೊಂದು ವಿಶೇಷ ಒಂಭತ್ತು ನಾರಿಯರಿಂದ ಒಂದು ಆನೆ ಪ್ರತಿಷ್ಠಾಪನೆ ಮಾಡಿರುವುದು (ನವನಾರಿ ಕುಂಜರ) ವಿಶೇಷ. ಮೇಲಿರುವ ವಿಗ್ರಹವನ್ನು ಮನ್ಮಥ ಆರೋಹಣ ಮಾಡಿರುವಂತಹದ್ದು. ಇದರ ಉದ್ದೇಶ ಮೊದಲು ಹಳ್ಳಿಗಳಲ್ಲಿ ಹೆರಿಗೆಗಳು ಮನೆಯಲ್ಲಿ ಆಗುತ್ತಿದ್ದವು. ಆಸ್ಪತ್ರೆಯ ಸೌಕರ್ಯಗಳಿರಲಿಲ್ಲ. ಆದ್ದರಿಂದ ಹೆರಿಗೆಯ ಸಂದರ್ಭದಲ್ಲಿ ದೇವಸ್ಥಾನಕ್ಕೆ ಬಂದು ಮನ್ಮಥ ಆರೋಹಣ ವಿಗ್ರಹಕ್ಕೆ ಎಣ್ಣೆಯನ್ನು ಹಾಕುತ್ತಿದ್ದರು. ಹರಕೆಯ ರೂಪದಲ್ಲಿ ಎಣ್ಣೆ ಹಾಕಿ ಆ ಎಣ್ಣೆಯನ್ನು ತೆಗೆದುಕೊಂಡು ಹೋಗಿ ಮನೆಯಲ್ಲಿ ದೇವರ ದೀಪಕ್ಕೆ ಹಾಕುತ್ತಿದ್ದರು. ಹೀಗೆ ಮಾಡುವುದರಿಂದ ಯಾವ ತೊಂದರೆಯಿಲ್ಲದೆ ಬೇಗ ಹೆರಿಗೆಯಾಗುತ್ತದೆ ಹಾಗೂ ತಾಯಿ, ಮಗು ಆರೋಗ್ಯದಿಂದಿರಲಿ ಎಂಬ ನಂಬಿಕೆ ಆ ಕಾಲದ ಜನರಲ್ಲಿತ್ತು.

೨. ಸ್ವಾಮಿಗಳು ಜನರ ಕಲ್ಪನೆಗೆ ಅಥವಾ ನಂಬಿಕೆಗೆ ತಕ್ಕಂತೆ ಕನಸಿನಲ್ಲಿ ಹೋಗುವುದನ್ನು ಕಾಣಬಹುದು. ಚಿತ್ತ, ದೇವಾಲಯ, ಸಮಾಧಿ, ಲಿಂಗ ಹೀಗೆ ಅವರು ಕನಸಿನ ರೂಪದಲ್ಲಿ ಕಾಣಿಸಿಕೊಳ್ಳುತ್ತಾರೆ

ಎಂಬುದೊಂದು ನಂಬಿಕೆಯಿದೆ. ಇಲ್ಲಿ ಇರುವುದೆಲ್ಲವು ಭಕ್ತರ ಕನಸಿನಲ್ಲಿ ಗೋಚರಿಸುತ್ತದೆಯಂತೆ. ಉದಾ: "ಆಂಧ್ರದ ಧರ್ಮವರಂ ನಲ್ಲಿ ಶಾಂತಲಾ ೬೦ ವರ್ಷ ಎಂಬುವವರಿಗೆ ಸು.೩ವರ್ಷ ಕನಸಿನಲ್ಲಿ ಹೋಗಿ ನನ್ನ ಸನ್ನಿಧಿಗೆ ಬಾ" ಎಂದು ಹೇಳುತ್ತಿದ್ದರಂತೆ. ಅವರಿಗೆ ಇಲ್ಲಿಯ ಭಾಷೆಗೊತ್ತಿರಲಿಲ್ಲ. ಹಾಗೆ ಸ್ಥಳಗೊತ್ತಿರಲಿಲ್ಲ. ಆಗ ಅವರಿಗೆ ಇಲ್ಲಿರುವ ಕೆರೆ, ಮಸೀದಿ, ದೇವಸ್ಥಾನ, ಬಾವಿ, ತೋಟ ಇಲ್ಲಿರುವುದೆಲ್ಲವು ಕನಸಿನಲ್ಲಿ ಗೋಚರವಾಯಿತಂತೆ. ಅವರು ದೇವಾಲಯವನ್ನು ಬಂದು ನೋಡಿ ಚಿಕ್ಕಮಕ್ಕಳು ಯಾವ ತರಹ ಸಂತೋಷದಿಂದ ಕುಣಿದಾಡುತ್ತಾರೋ ಹಾಗೆ ಕುಣಿದಾಡಿದರಂತೆ.

೩. ಹೊಸಗುಡ್ಡದಲ್ಲಿ, ರಾಮಲಿಂಗ ದೇವಾಲಯವಿದೆ. ಅದು ಏಕಶಿಲಾ ಬಂಡೆಯಿಂದ ನಿರ್ಮಿಸಿದಂತಹ ದೇವಾಲಯ. ಅದು ಎರಡು ಸುತ್ತಿನ ಕೋಟೆ ಅಲ್ಲಿ ಮಲ್ಲಪ್ಪ ನಾಯಕ ಆಳ್ವಿಕೆ ಮಾಡುತ್ತಿದ್ದ. ಕೋಟೆಯ ಒಳಗಡೆ ಎರಡು ಹೊಂಡಗಳಿವೆ. ಅವುಗಳನ್ನು ಅಕ್ಕ ತಂಗಿ ಹೊಂಡ ಎಂದು ಕರೆಯುತ್ತಾರೆ. ಅಕ್ಕ, ತಂಗಿ ಹೊಂಡದಲ್ಲಿ ವಿಶೇಷವೆಂದರೆ ಅಕ್ಕನ ಹೊಂಡದಲ್ಲಿ ನಿಂಬೆಹಣ್ಣನ್ನು ಹಾಕಿದರೆ ತಂಗಿ ಹೊಂಡದಲ್ಲಿ ಬಂದು ತೇಲುತ್ತಿತಂತೆ. ಇದು ತುಂಬಾ ವಿಶೇಷ. ಈಗಲೂ ಸಹ ಹೊಂಡಗಳಿವೆ. ಅದರಲ್ಲಿ ಸ್ವಲ್ಪ ಪ್ರಮಾಣದಲ್ಲಿ ನೀರಿವೆ. ಪಾಚಿ ಕಟ್ಟಿವೆ. ಈಗ ಅದು ತನ್ನ ಮೊದಲಿನ ನೈಜತೆಯನ್ನು ಉಳಿಸಿಕೊಂಡಿಲ್ಲ. ಅದು ಕಾರ್ಯನಿರ್ವಹಿಸುತ್ತಿಲ್ಲ. ಹಾಗೆಯೇ ದೇವಾಲಯದ ಸುತ್ತಲು ಕೋಟೆಯ ತುಂಬೆಲ್ಲಾ ಕಲ್ಲಿನಿಂದ ನಿರ್ಮಿಸಿದಂತಹ ಗುಡ್ಡೆಗಳನ್ನು ಮಾಡಿದ್ದಾರೆ. ೩ ಕಲ್ಲಿನಿಂದ ಗುಡ್ಡೆಯನ್ನು ಮಾಡಿದರೆ ಅವರ ಮನೋನಿಷ್ಠೆಗಳು ಪೂರೈಸುತ್ತವೆ ಎಂಬ ನಂಬಿಕೆ.

ಹೊಸಗುಡ್ಡದಲ್ಲಿ ಏಕಶಿಲಾ ದೇವಾಲಯದಲ್ಲಿ ಲಿಂಗವನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಲಿಂಗದ ಎದುರು ಒಂದು ಬಸವಣ್ಣನ ವಿಗ್ರಹವಿದೆ. ದೇವಾಲಯದ ಮುಂದೆ ಒಂದು ಆಲದಮರವಿದೆ. ಆ ಮರಕ್ಕೆ ಹರಕೆ ಕಲ್ಲನ್ನು ಕಟ್ಟುತ್ತಾರೆ. ಹಾಗೆ ಮಾಡುವುದರಿಂದ ಅವರ ಇಷ್ಟಾರ್ಥ ನೆರವೇರುತ್ತದೆ ಎಂಬುದು ಆ ಭಾಗದ ಜನರ ನಂಬಿಕೆಯಾಗಿದೆ.

ಹರಕೆಗಳು

ಜನಪದ ಆಚರಣೆಗಳಲ್ಲೊಂದು. ಒಳ್ಳೆಯದಾಗಲಿ ಎಂದು ದೇವರಲ್ಲಿ ಬೇಡಿಕೊಳ್ಳುವಿಕೆಯೇ ಹರಕೆ. ಪ್ರಕೃತಿಯ ಅನಂತಶಕ್ತಿಯನ್ನು ಒಲಿಸಿಕೊಳ್ಳಲು ಅಥವಾ ಪ್ರಸನ್ನಗೊಳಿಸಿಕೊಳ್ಳಲು ಜನಪದರು ನಡೆಸುತ್ತ ಬಂದ ಹಲವು ಬಗೆಯ ಆಚರಣೆಗಳಲ್ಲಿ ಇದು ಒಂದು. ಹರಕೆ ನಿತ್ಯದ ಪ್ರಾರ್ಥನೆಯಿಂದ ಭಿನ್ನವಾದುದು ಹಾಗೂ ವಿಶಿಷ್ಟವಾದುದು. ನಿತ್ಯದ ಪ್ರಾರ್ಥನೆ ಬಹುಪಾಲು ವ್ಯಕ್ತಿಗತವಾಗಿರುತ್ತದೆ. ಹರಕೆಯಲ್ಲಿ ವ್ಯಕ್ತಿಗತವಾದ ಅಂಶ ಭಾಗಶಃ ಇದ್ದರೂ ಸಾರ್ವತ್ರಿಕ ಅಥವಾ ಸಾಮೂಹಿಕ ಇಲ್ಲವೆ ಕೌಟುಂಬಿಕ ಹಿತ ಪ್ರಧಾನವಾಗಿರುತ್ತದೆ ಎನ್ನಬಹುದು.

ಪ್ರತಿಯೊಂದು ಮನೆಗೂ ಒಂದು ಹೆಣ್ಣು, ಒಂದು ಗಂಡು ಹೀಗೆ ಎರಡು ದೇವರಿರುತ್ತವೆ. ಮನೆಯಲ್ಲಿ ಯಾರಿಗಾದರೂ ಕೇಡಾದರೆ, ಕಾಯಿಲೆಯಾದರೆ ಬಂದಿರುವ ಕೇಡನ್ನೂ ಅಥವಾ ರೋಗವನ್ನು ನಿವಾರಿಸಿದರೆ

ಮನೆದೇವರಿಗೆ ಬಲಿಕೊಡುತ್ತೇನೆ. ಅಭಿಷೇಕ ಮಾಡಿಸುತ್ತೇನೆ. ತೀರ್ಥಯಾತ್ರೆ ಮಾಡುತ್ತೇನೆ ಎಂದು ತಮ್ಮ ಶಕ್ತ್ಯಾನುಸಾರ ಮನೆಯ ಯಜಮಾನ ಇಲ್ಲವೆ ಯಜಮಾನಿ ರೋಗಿಯ ಪರವಾಗಿ ಹರಕೆ ಮಾಡಿಕೊಳ್ಳುತ್ತಾರೆ. ತಮ್ಮ ಮಾತಿಗೆ ಪ್ರಮಾಣ ಎಂಬ ಅರ್ಥದಲ್ಲಿ ಶುಭ್ರವಾದ ಒಂದು ತುಂಡು ಬಿಳಿಯ ಬಟ್ಟೆಯನ್ನು ತುಂಬಿದ ಕೊಡದಲ್ಲಿ ಅದ್ದಿ ಒದ್ದೆ ಮಾಡಿ, ಅದಕ್ಕೆ ಅರಿಶಿನ ಹಚ್ಚಿ ಅದರಲ್ಲಿ ನಾಣ್ಯವನ್ನು ಕಟ್ಟಿ ಅದನ್ನು ದೇವರ ಮುಂದಿಟ್ಟು ಪೂಜಿಸುತ್ತಾರೆ. ಕೆಲವೊಮ್ಮೆ ಇದನ್ನು ನೆಲುವಿಗೆ ಕಟ್ಟಿರುತ್ತಾರೆ. ಇಲ್ಲವೆ ಮನೆಯ ಮುಂದಿನ ಸೂರಿಗೆ ಕಟ್ಟುವುದು ಉಂಟು. ಹೀಗೆ ಕಟ್ಟುವುದನ್ನು ಮುಡುಪು ಕಟ್ಟುವುದು ಎನ್ನುತ್ತಾರೆ.

ಹರಕೆ ಕಟ್ಟಿಕೊಂಡ ವ್ಯಕ್ತಿ ಕಷ್ಟಗಳು ದೂರವಾದಾಗ ತಾನು ಹರಕೆ ಹೊತ್ತ ದೇವರ ಹಬ್ಬದ ದಿನ ದಂದು ಹರಕೆಯನ್ನು ತೀರಿಸುತ್ತಾನೆ. ಹರಕೆಯಲ್ಲಿ ವೈಯಕ್ತಿಕ ಹರಕೆ, ಕೌಟುಂಬಿಕ ಹರಕೆ, ಊರ ಹರಕೆ ಎಂಬ ಹಲವಾರು ವಿಧಗಳಿವೆ. ವೈಯಕ್ತಿಕ ಹರಕೆ, ವ್ಯಕ್ತಿಗತವಾದ ಕುಂದುಕೊರತೆಗಳನ್ನು ಸಂಕಷ್ಟಗಳನ್ನು ಹೋಗಲಾಡಿಸು ಎಂದು ದೇವರಲ್ಲಿ ಹರಕೆ ಮಾಡಿಕೊಂಡು, ಹರಕೆಯನ್ನು ತೀರಿಸುವುದು. ಕೌಟುಂಬಿಕವಾದ ಹರಕೆ ಕುಟುಂಬದಲ್ಲಿ ಶಾಂತಿ, ಸುಖ, ಆರೋಗ್ಯ ನೆಲೆಸಲೆಂದು ಮನೆಯ ಯಜಮಾನ ಹರಕೆ ಹೊತ್ತು ಅದನ್ನು ತೀರಿಸುವುದು ತಮಗೆ ಯಾರಿಂದಲಾದರೂ ಅನ್ಯಾಯವಾಗಿವೆ ಎಂದು ಕಂಡು ಬಂದರೆ ಅಂತಹವರ ವಿರುದ್ಧ ಅವರಿಗೆ ಸರಿಯಾದ ಶಿಕ್ಷೆಯಾಗುವಂತೆ ಅಥವಾ ತಮ್ಮ ವಸ್ತು ಹಿಂದಿರುಗಿ ಬರುವಂತೆ ದೇವರಿಗೆ ಹರಕೆ ಹೊರುವುದುಂಟು. ಊರ ಹರಕೆ ಸಾಮಾನ್ಯವಾಗಿ ಊರಿಗೆ ಕಾಲರ, ಸಿಡುಬು, ಪ್ಲೇಗು ಇತ್ಯಾದಿ ರೋಗ ರುಜಿನಿಗಳು ಬಂದಾಗ, ಕಾಲಕ್ಕೆ ಸರಿಯಾಗಿ ಮಳೆಯಾಗದೆ ಹೋದಾಗ ದೇವರಿಗೆ ಹರಕೆ ಮಾಡಿಕೊಳ್ಳುವುದು ಮತ್ತು ಶುಭವಾದಾಗ ದೊಡ್ಡ ಹಬ್ಬವನ್ನು ಆಚರಿಸುವುದು. ಸಾಮಾನ್ಯವಾಗಿ ಊರಿನ ಹರಕೆಯನ್ನು ಆಯಾ ಊರಿನ ಪ್ರಮುಖರಾದ ಪಟೇಲ, ಶಾನುಭೋಗ ಮತ್ತು ಗಣ್ಯವ್ಯಕ್ತಿಗಳು ಮಾಡಿಕೊಳ್ಳುತ್ತಾರೆ. ಊರಿನ ಜನರ ಸಹಕಾರದಿಂದ ಊರೊಟ್ಟಿನ ಹರಕೆಯನ್ನು ತೀರಿಸುತ್ತಾರೆ.

ಮದುವೆಯಾಗಿ ಕೆಲವು ವರ್ಷಗಳು ಕಳೆದರೂ ಮಕ್ಕಳಾಗದಿದ್ದಾಗ ಮಕ್ಕಳಾದರೆ ಜಾತ್ರೆ ಮಾಡುತ್ತೇನೆ ಎಂದು ಹರಕೆ ಹೊರುವುದುಂಟು. ವಂಶಾಭಿವೃದ್ಧಿಯಾಗದಿದ್ದಾಗ ಗಂಡು ಮಗುವಾದರೆ ಆ ದೇವರ ಹೆಸರನ್ನು ಮಗುವಿಗಿಡುವುದಾಗಿ ಮತ್ತು ಮಗುವಿನ ಮುಡಿ ಕೊಡುವುದಾಗಿ ಹರಕೆ ಮಾಡಿಕೊಳ್ಳುತ್ತಾರೆ. ಬಸವಣ್ಣನವರು ತಮ್ಮ ವಚನವೊಂದರಲ್ಲಿ ಹಬ್ಬಕ್ಕೆ ತಂದ ಹರಕೆಯ ಕುರಿ ತೋರಣಕ್ಕೆ ತಂದ ತಳಿರ ಮೇಯಿತು ಎಂದು ಹರಕೆಯ ವಿಷಯ ಸೂಚಿಸಿದರು. (ಪು.೧೨೪೮-೪೯, ಕನ್ನಡ ವಿಷಯ ವಿಶ್ವಕೋಶ, ಸಂಪುಟ ೨, ಪ್ರಸಾರಾಂಗ ಮಾನಸ ಗಂಗೋತ್ರಿ, ೨೦೦೭). ನಾಯಕಹಟ್ಟಿಯಲ್ಲಿ ಮಕ್ಕಳಾಗದವರು "ತೊಟ್ಟಿಲನ್ನು ತೂಗಿದರೆ ಮಕ್ಕಳಾಗತ್ತವೆ" ಎಂಬುದು ನಂಬಿಕೆ. ಆ ಕಾರಣದಿಂದ ಇಲ್ಲಿ ತೊಟ್ಟಿಲು ಸೇವೆಯನ್ನು ಆಚರಿಸುತ್ತಾರೆ.

ಹೂವಿನ ಹಾರಗಳನ್ನು ಭಕ್ತರು ಹರಕೆಯ ರೂಪದಲ್ಲಿ ದೇವರಿಗೆ ಸಮರ್ಪಿಸುತ್ತಾರೆ. ಹೂವಿನಹಾರವನ್ನು ಹತ್ತಾರು ಜನ ಹಿಡಿದುಕೊಂಡು ಓಲಗದ ಸಮೇತ ಬಂದು ಹರಕೆಯನ್ನು ಅರ್ಪಿಸುತ್ತಾರೆ. ಹೂವಿನಹಾರ

ಸು.೨ ಅಡಿ ವ್ಯಾಸವಿರಬಹುದು. ೩೦ ಅಡಿ ಉದ್ದದ ಸೇವಂತಿಗೆ ಹಾರವನ್ನು ಹತ್ತಾರು ಜನ ಭಕ್ತರು ತಂದು ಅರ್ಪಿಸುತ್ತಾರೆ. ಎಷ್ಟು ದೊಡ್ಡಹಾರ ಎಂದರೆ ಅದನ್ನು ಹೆಂಗೆ ಮೇಲಕ್ಕೆ ಎತ್ತಿ ಕಟ್ಟಬೇಕೆಂಬುದೆ ಭಯಂಕರ ಸಮಸ್ಯೆಯಾಗಿದೆ. ೧೦೦ ಜನರು ಎತ್ತಿ ಹಿಡಿದರು ಅದನ್ನು ಎತ್ತಿ ಕಟ್ಟಲಿಕ್ಕೆ ಆಗುವಂತಿಲ್ಲ. ಅಂತಹ ದೊಡ್ಡ ಪ್ರಮಾಣದ ಹೂವಿನ ಹಾರವನ್ನು ಭಕ್ತರು ತಂದು ಹರಕೆಯ ರೂಪದಲ್ಲಿ ರಥಕ್ಕೆ ಸಮರ್ಪಿಸುತ್ತಾರೆ.

ಪಾನಕ ಸೇವೆ

ಇಷ್ಟಾರ್ಥಗಳು ನೆರವೇರಿದ ಜನರು ಎತ್ತಿನಗಾಡಿಯಲ್ಲಿ ದೊಡ್ಡ ಡ್ರಮ್‌ಗಳಲ್ಲಿ ಬೆಲ್ಲ, ನೀರು, ಕಾಮ್‌ಕಸ್ತೂರಿ ಮುಂತಾದವನ್ನೆಲ್ಲಾ ಹಾಕಿ ಬೆರೆಸಿ ಪಾನಕ ತಯಾರಿಸಿ ಪೂಜೆ ಮಾಡಿ ದೇವಸ್ಥಾನದಿಂದ ಊರಿನ ಮುಖ್ಯ ಬೀದಿಯಲ್ಲಿ ಮೆರವಣಿಗೆಯ ರೂಪದಲ್ಲಿ ಪಾನಕವನ್ನು ಜನತೆಗೆ ಅರ್ಪಿಸುತ್ತಾರೆ. ಅವರು ಅದನ್ನು ಹರಕೆಯ ರೂಪದಲ್ಲಿ ಆಚರಿಸುವುದನ್ನು ಕಾಣಬಹುದು.

ಕೊಬ್ಬರಿ ಸುಡುವುದು

ಜಾತ್ರೆಯಲ್ಲಿ ಕೊಬ್ಬರಿಯನ್ನು ಸುಡುವುದು ಇಲ್ಲಿ ವಿಶೇಷವಾಗಿದೆ. ವಿದ್ಯುತ್ ದೀಪಗಳಿಲ್ಲದಿದ್ದ ಹಿಂದಿನ ಕಾಲದಲ್ಲಿ ಸ್ವಾಮಿಗಳನ್ನು ಒಳಮಠದಿಂದ ಹೊರಮಠಕ್ಕೆ ಕರೆತರುವಾಗ ಕತ್ತಲಿನಲ್ಲಿ ಕಬ್ಬಿಣದ ಸರಳಿಗೆ ಕೊಬ್ಬರಿಯನ್ನು ಸಿಕ್ಕಿಸಿಕೊಂಡು ಬೆಳಕಿಗಾಗಿ ಸುಡುತ್ತಿದ್ದಿರಬಹುದೆಂದು ಕೆಲವರ ಅಭಿಪ್ರಾಯ. ಜಾತ್ರೆಯ ಕಾಲದಲ್ಲಿ ಭಕ್ತರು ಎಲ್ಲೆಲ್ಲಿ ಬಿಡಾರ ಹಾಕಿಕೊಂಡುರುತ್ತಾರೋ ಅಲ್ಲಲ್ಲಿ ರಾಶಿರಾಶಿ ಕೊಬ್ಬರಿಯನ್ನು ಕರ್ಪೂರ ಹಚ್ಚಿದಂತೆ ಇಂದಿಗೂ ಸುಡುತ್ತಾರೆ. ಇದೊಂದು ವಿಶೇಷ ಹರಕೆಯೂ ಆಗಿದೆ. ಹವೆಯನ್ನು ಶುದ್ಧೀಕರಣಗೊಳಿಸುವುದಕ್ಕೂ ಇದು ಆರಂಭವಾಗಿರಬಹುದು. ಈ ಹೊತ್ತಿಗೂ ಸಹ ದೇವಸ್ಥಾನದ ಬೇರೆ ಬೇರೆ ಸ್ಥಳಗಳಲ್ಲಿ ಕೊಬ್ಬರಿಯನ್ನು ಸುಡುವುದು ಕೊಬ್ಬರಿಯ ಬಟ್ಟಲಲ್ಲಿ ಕರ್ಪೂರದ ಆರತಿಯನ್ನು ಬೆಳಗುವ ಪದ್ಧತಿ ರೂಢಿಯಲ್ಲಿದೆ.

ದೇವಸ್ಥಾನದ ಆವರಣದಲ್ಲಿ ಮಾತ್ರವಲ್ಲ ಯಾತ್ರಿಕರು ಎಲ್ಲೆಲ್ಲಿ ನೆಲೆಸಿ ಡೇರೆ ಹಾಕಿಕೊಂಡಿರುತ್ತಾರೋ ಅಲ್ಲೆಲ್ಲ ಕೊಬ್ಬರಿ ಸುಡುವ ಹರಕೆಯನ್ನು ಕಾಣಬಹುದು. ಕೊಬ್ಬರಿಯ ಬೆಳಕಿನಲ್ಲಿ ಫಣಿಯಪ್ಪನು ತಿಪ್ಪೇಸ್ವಾಮಿಯನ್ನು ನಾಯಕನಹಟ್ಟಿಗೆ ಕರೆತಂದರು. ಅವರು ಕೊಬ್ಬರಿ ಸುಟ್ಟಿದ್ದು ಬೆಳಕಿಗಾಗಿ ಮತ್ತು ರಾತ್ರಿಯ ಹಾದಿಯನ್ನು ಸವೆಸುವ ಸಲುವಾಗಿ ಕೊಬ್ಬರಿಯ ಬೆಳಕಿನಲ್ಲಿ ಊರನ್ನು ಪ್ರವೇಶಿಸಿದ್ದನ್ನು ಕಾಣಬಹುದು. ಅದು ಜನಗಳಲ್ಲಿ ಒಂದು ಆಚರಣೆಯ ವಿಧಿಯಾಗಿ ರೂಢಿಯಲ್ಲಿರುವುದನ್ನು ಕಾಣಬಹುದು. ಕೊಬ್ಬರಿ ಸುಡುವ ಹರಕೆಯು ಎಂತಹ ಗಾಢವಾದ ಪರಿಣಾಮ ಬೀರಿದೆ ಎಂದರೆ ರಾಶಿಗಟ್ಟಲೆ ಕೊಬ್ಬರಿಯನ್ನು ಹರಕೆಯ ಹೆಸರಿನಲ್ಲಿ ಸುಡುವುದನ್ನು ಕಾಣಬಹುದು. ಕೊಬ್ಬರಿ ಸುಟ್ಟರೆ ಒಳ್ಳೆಯದು ಎಂಬ ನಂಬಿಕೆ ಜನರಲ್ಲಿದೆ.

ತೊಟ್ಟಿಲು ಸೇವೆ

ನಾಯಕನಹಟ್ಟಿಯಲ್ಲಿ ಒಳಮಠದ ಒಳಗಡೆ ರುದ್ರಅಭಿಷೇಕ ನಡೆಯುವ ಸ್ಥಳದಲ್ಲಿ ತೊಟ್ಟಿಲು ಇದೆ.

ತೊಟ್ಟಿಲಿನಲ್ಲಿ ತಿಪ್ಪೇಸ್ವಾಮಿಯ ಮೂರ್ತಿಯಿದೆ. ಆ ತೊಟ್ಟಿಲು ಯಾವಾಗಲು ತೂಗುತ್ತಿರುತ್ತದೆ. ತೊಟ್ಟಿಲನ್ನು ತೂಗಿದರೆ ಮಕ್ಕಳಾಗುತ್ತವೆ ಎಂಬುದು ನಂಬಿಕೆ. ಆ ಕಾರಣಕ್ಕಾಗಿ ಜನರು ತೊಟ್ಟಿಲನ್ನು ತೂಗುತ್ತಾರೆ. ಸಂತಾನವನ್ನು ಪಡೆಯುವವರು ಮಾತ್ರ ಅಲ್ಲಿ ಹೋಗಿ ೩ ಸಾರಿ ತೊಟ್ಟಿಲನ್ನು ತೂಗಬೇಕು. ಬೇರೆಯವರಿಗೆ ಅಲ್ಲಿ ಪ್ರವೇಶವಿಲ್ಲ. ಹೀಗೆ ತೊಟ್ಟಿಲು ತೂಗಿ ಹೋದ ನಂತರ ಮಕ್ಕಳಾದ ದಂಪತಿಗಳು ಉರುಳುಸೇವೆ ಮುಡಿಪು ಕಾಣಿಕೆ ಹಾಕತೀವಿ ಎಂದು ಹರಕೆ ಮಾಡಿಕೊಳ್ಳುತ್ತಾರೆ. ಇಲ್ಲಿ ತೊಟ್ಟಿಲು ಸೇವೆ ಆಚರಣೆಯನ್ನು ಮಾಡುತ್ತಾರೆ.

ಮಳೆ ಬಾರದೆ ಹೋದಾಗ ೩೬ ಗ್ರಾಮಗಳ ಜನರು ಸೇರಿ ಡಂಗುರ ಸಾರುತ್ತಾರೆ. ಆಗ ಹರಕೆಯನ್ನು ಕಟ್ಟಿಕೊಳ್ಳುತ್ತಾರೆ. ಹರಕೆ ನೆರವೇರಿದಾಗ ತೆಪ್ಪೋತ್ಸವವನ್ನು ನಡೆಸುತ್ತಾರೆ. ಆಗ ತೆಪ್ಪೋತ್ಸವದ ಸಂದರ್ಭದಲ್ಲಿ ಜೋಗಿಹಟ್ಟಿಯ ಗೊಲ್ಲ ಸಮುದಾಯದವರು ಕರಿ ಕುರಿ ಮರಿಯನ್ನು ಬಲಿಕೊಡುವಂತಹದ್ದು ಪರಂಪರೆಯಾಗಿ ನಡೆದುಕೊಂಡು ಬಂದಿದೆ.

ಹೂವಿನ ಹಾರಗಳನ್ನು ಭಕ್ತರು ಹರಕೆಯ ರೂಪದಲ್ಲಿ ದೇವರಿಗೆ ಸಮರ್ಪಿಸುತ್ತಾರೆ. ಹೂವಿನಹಾರವನ್ನು ಹತ್ತಾರು ಜನ ಹಿಡಿದುಕೊಂಡು ಒಲಗದ ಸಮೇತ ಬಂದು ಹರಕೆಯನ್ನು ಅರ್ಪಿಸುತ್ತಾರೆ. ಹೂವಿನಹಾರ ಸುಮಾರು ಎರಡು ಅಡಿ ವ್ಯಾಸವಿರಬಹುದು. ೩೦ ಅಡಿ ಉದ್ದದ ಸೇವಂತಿಗೆ ಹಾರವನ್ನು ಹತ್ತಾರು ಜನ ಭಕ್ತರು ತಂದು ಅರ್ಪಿಸುತ್ತಾರೆ.

ಈವೊಂದು ಪೂಜಾ ಕಾರ್ಯದಲ್ಲಿ ಜನ ಎಷ್ಟೊಂದು ತಲ್ಲೀನರಾಗಿದ್ದಾರೆ ಎಂದರೆ ತದೇಕ ಚಿತ್ತದಿಂದ ಈ ದೃಶ್ಯವನ್ನು ನೋಡುತ್ತಿದ್ದಾರೆ. ಯಾರು ಸಹ ಅಲುಗಾಡದೆ ಏಕದೃಷ್ಟಿಯಿಂದ ಸ್ವಾಮಿಯ ತೇರನ್ನು ನೋಡುತ್ತಾರೆ. ಹರಾಜಿನ ಪ್ರಕ್ರಿಯೆ ೫ ಲಕ್ಷ ಹಣಕೊಟ್ಟು ಕೊಳ್ಳುವ ಪ್ರಕ್ರಿಯೆ ನಿಜಕ್ಕೂ ಸಹ ಎಲ್ಲಾ ದಾಖಲೆಯನ್ನು ಮುರಿದಿದೆ. ಭಕ್ತರ ಹರ್ಷೋದ್ಗಾರ ಸ್ವಾಮಿಯನ್ನು ಆರಾಧಿಸುವ ರೀತಿ ನಿಜಕ್ಕೂ ಆಶ್ಚರ್ಯಕರ ಎಂದು ಹೇಳಬಹುದು. ಪರ್ವತ ಕ್ಷೇತ್ರಗಳಲ್ಲಿ ಉತ್ಸವರಾಜನೆಂದೆ ಕರೆಯಲ್ಪಡುವ ತೇರು ಈಗ ಹೊಸರೂಪವನ್ನು ಪಡೆದಿದೆ. ಈ ಬಾರಿ ಭಕ್ತರೊಬ್ಬರು ಎಲ್ಲಾ ಪಟಗಳನ್ನು ಹೊಸ ಬಟ್ಟೆಯಿಂದ ಹೋಲಿಸಿ ತಂದು ಒಪ್ಪಿಸಿದ್ದಾರೆ. ಪಟದ ಹರಾಜಿನಲ್ಲಿ ಜನರು ಪಾಲುಗೊಂಡಿದ್ದಾರೆ. ನಿಜಕ್ಕೂ ಸಹ ಇದು ಹಿಂದೆಂದಿಗಿಂತಲೂ ಹೊಸ ದಾಖಲೆಯೆಂದೆ ಹೇಳಬಹುದು. ೨೬ ಲಕ್ಷ ರೂಪಾಯಿಗಳಿಗೆ ಪಟದ ಹರಾಜಾಗಿರುವುದನ್ನು ಕಾಣಬಹುದು. ಲಕ್ಷಗಟ್ಟಲೆ ಜನಗಳು, ವಿಭಾಗಾಧಿಕಾರಿಗಳು ಹಾರವನ್ನು ಹಾಕಿ ಅವರಿಗೆ ಗೌರವವನ್ನು ಸಲ್ಲಿಸುತ್ತಾರೆ. ಬಹಳ ಎತ್ತರದ ಮನುಷ್ಯನಾಗಿ, ದಾನಿಯಾಗಿ, ಉದಾರಿಯಾಗಿ ಕಾಣುತ್ತಾರೆ. ಅವರನ್ನು ರಥದ ಮೇಲೆ ಹತ್ತಿಸಿ ಸ್ವಾಮಿಯ ಸನ್ನಿಧಿಯಲ್ಲಿ ನಿಗಧಿಯಾದ ಸ್ಥಳದಲ್ಲಿ ಸಂಸ್ಥಾಪಿಸಿ ಮೆರವಣಿಗೆ ಮಾಡುತ್ತಾರೆ. ಸ್ವಾಮಿ ಸೇವೆಯನ್ನು ಮಾಡಿದೆ ಎನ್ನುವ ತೃಪ್ತಿಯನ್ನು ಪಡೆದು ಹಿಂತಿರುಗುತ್ತಾ

ಚೌರಿ ಬೀಸುವುದು

ಚೌರಿ ಬೀಸುವ ಸಂಪ್ರದಾಯ ಮೊದಲಿತ್ತು ಈಗ ಆ ಸಂಪ್ರದಾಯ ಚೌಮರಿ ಎನ್ನುವ ಪ್ರಾಣಿ

ಭಾರತದ ಹಿಮಾಲಯ ಪರ್ವತದಲ್ಲಿದೆ. ಆ ಪ್ರಾಣಿ ಮೈಯೆಲ್ಲ ಗಂಟು ಗಂಟುಯಿರುತ್ತೆ. ಅಗಂಟಲಿ ಎಷ್ಟೋ ಗ್ರಾಂ ಲೆಕ್ಕದಲ್ಲಿ ಕೂದಲು ಮಾರುತ್ತಾರಂತೆ. ಆ ಪ್ರಾಣಿಯ ಕೂದಲಿನ ವಾಸನೆ ಶಿವನಿಗೆ ಬಹಳ ಅಪ್ತವಾದದ್ದು. ಆ ಪ್ರಾಣಿ ಪೂಜೆಗೆ ಯೋಗ್ಯವಾದದ್ದು. ಅದರ ರೋಮ ಏನಿದೆ ಅದು ಶಿವನಿಗೆ ತೃಪ್ತಿಯಾದದ್ದು ಎಂಬ ವಾಡಿಕೆಯಿದೆ. ಹೀಗಾಗಿ ಸ್ವಾಮೀಜಿಗಳು ಶಿವನ ಸ್ವರೂಪ, ಲಿಂಗ ಸ್ವರೂಪ ಆದ್ದರಿಂದ ಅದರ ರೋಮದಿಂದ ಚಾಮರವನ್ನು ಮಾಡುತ್ತಾರೆ. ಆದ್ದರಿಂದ ರಾಜ ಮರ್ಯಾದೆಯನ್ನು ತೋರುವಂತಹದ್ದು ಎಂಬ ಕಾರಣಕ್ಕೆ ಚಾಮರ ಬೀಸುವುದು ಒಂದು ಪದ್ಧತಿಯಾಗಿದೆ.

ಪವಾಡಗಳು

ದೇವರು ಮಹಾತ್ಮರಿಂದ ನೈಸರ್ಗಿಕ ಕಟ್ಟಳೆಗಳಿಗೆ ಅನುಗುಣವಾಗಿ ಕೆಲವು ಅದೃಶ್ಯ ಘಟನೆಗಳನ್ನು ಮೂಡಿಸುವಂತೆ ಪ್ರಚೋದಿಸುವುದೇ "ಪವಾಡ"ಗಳಾಗಿವೆ. ಈ ಪವಾಡಗಳು ಅಸಾಮಾನ್ಯವುಗಳಾಗಿದ್ದು ಹಾಗೂ ಐತಿಹ್ಯದಲ್ಲಿ ಬರುವಂತಹ ಅತಿಮಾನುಷ ವ್ಯಕ್ತಿಗಳ ಮಹಿಮೆಯ 'ಕುರುಹು'ವನ್ನು ಸಾರುವ ಘಟನೆಗಳು ಭಕ್ತರಿಗೆ 'ಪವಾಡ'ಗಳಾಗಿ ಪರಿಣಮಿಸುತ್ತವೆ. ಪವಾಡಗಳು ಸತ್ಯಘಟನೆಯನ್ನು ನಿರೂಪಿಸಿ ಜನರ ನಂಬಿಕೆಯಲ್ಲಿ ಪರಂಪರೆಯನ್ನು ಕಾಪಾಡಿಕೊಂಡು ಬರುತ್ತಿವೆ. ಈ ಶಬ್ದವು ಸಂಸ್ಕೃತದ 'ಪ್ರವಾದ' ಎಂಬ ಶಬ್ದದಿಂದ ನಿಷ್ಪತ್ತಿಯಾದರೆ ಇಂಗ್ಲೀಷನ Miracle ಎನ್ನುವ ಶಬ್ದಕ್ಕೆ ಸಮಾನ ಹೋಲಿಕೆ ನೀಡುತ್ತದೆ.

ಮಹಾತ್ಮರ ಅವತರಣ ಸಿದ್ಧಿ ಸಾಧನೆಗಳು ಅದ್ಭುತವಾಗಿರುತ್ತವೆ. ಎಲ್ಲರಿಗೂ ಆತ್ಮವುಂಟು. ಆದರೆ ಮಹಾತ್ಮರೆನಿಸಿಕೊಂಡವರು ಮಹಾತ್ಮರಲ್ಲ. ಮಹಾತ್ಮರು ಕೇವಲ ಬೆರಳೆಣಿಕೆಯಲ್ಲಿರುತ್ತಾರೆ. ಇವರ ಪುಣ್ಯಸ್ಮರಣೆ ನಿಜಕ್ಕೂ ಪುಣ್ಯಪ್ರದ. ಇವರು ತ್ರಿಕಾಲ ಜ್ಞಾನಿಗಳು. ಅವಧೂತರು, ಮಹಾಯೋಗಿಗಳು ಆಗಿರುತ್ತಾರೆ. ಇವರು ತುಳಿದ ಭೂಮಿ ಪಾವನ. ಇಲ್ಲಿ ಜಲಸಮೃದ್ಧಿ ಅಪಾರ ಭಕ್ತರ ಪರಮ ಪುಣ್ಯೋದಯಕ್ಕೆ ಇವರು ಕಾರಣ. ಅಂತೆಯೇ ಇವರನ್ನು ಭಕ್ತರು ದೃಡ ಮನಸ್ಸಿನಿಂದ ಆರಾಧಿಸಿ ಅವರ ಸಂತ ಜೀವನದ ಮಾರ್ಗದರ್ಶನದಿಂದ ಶಾಂತಿ, ಸಮೃದ್ಧಿಯನ್ನು ಪಡೆಯಬಹುದಾಗಿದೆ.

ಮಹಾತ್ಮರು ಧರಿಸಿದ ರುದ್ರಾಕ್ಷಿಯು ಸಾಕ್ಷಾತ್ ರುದ್ರನನ್ನು ನೋಡುವ ಕಣ್ಣು, ಕಾವಿಯು ಅಗ್ನಿಯುಂಡೆ, ಮಾತು ಜ್ಯೋತಿರ್ಲಿಂಗ ಇವರ ಪರಿಶ್ರಮ ಅಪಾರ ಅನುಭವವು ಅನುಭಾವ, ವಿಚಾರ ವೈಚಾರಿಕ ಇವರ ಸಾಧನೆ ಸಿದ್ಧಿಗಳು ಅದ್ಭುತವಾಗಿರುತ್ತವೆ. ಇವರಿದ್ದಲ್ಲಿ ಜಾತಿ ವೈರುದ್ಯವಿಲ್ಲ. ತಪಸ್ಸು/ಪೂಜೆ, ಧರ್ಮೋಪದೇಶ, ಕಾಯಕ ಇವುಗಳೇ ಇವರ ಚಟುವಟಿಕೆಗಳು. ಜೀವನದಲ್ಲಿ ಉತ್ತಮವಾದ ನೀತಿ, ನಿಯಮಗಳ ಪಾಲನೆಯು ಬಹುಮುಖ್ಯವಾಗಿರುತ್ತದೆ. ಜೀವನವು ಸುಶ್ರಾವ್ಯವಾದ ಸಂಗೀತದಂತಿರಬೇಕು. ರಾಗದ್ವೇಷಾದಿಗಳು ಮಿಡಿಯುತ್ತವೆ. ಆದ್ದರಿಂದ ನೀತಿ ನಿಯಮಗಳನ್ನು ಯಾರು ಎಂದು ಉಲ್ಲಂಘಿಸಬಾರದು. ಮಹಾತ್ಮರ ದಿವ್ಯೋಪದೇಶವನ್ನು ಕಿವಿಗೊಟ್ಟು ಕೇಳಿ ಅದರಂತೆಯೇ ನಡೆಯಬೇಕು. ಅಂತರಂಗ ಶುದ್ಧಿ ಮತ್ತು ಬಹಿರಂಗ ಶುದ್ಧಿ ಸೂಕ್ತವಾದ ಅವರ ದಿವ್ಯೋಪದೇಶ ಚಿರಂತನವಾಗಿವೆ. ಸ್ವಾಮಿಗಳು ಅದ್ಭುತವಾದ ಶಕ್ತಿಯಿಂದ ಜನರ ಮನಸ್ಸನ್ನು ಸೂರೆಗೊಂಡು ಜನಮಾನಸದಲ್ಲಿ ನೆಲೆನಿಂತಿರುವುದನ್ನು ಕಾಣಬಹುದು. ಪವಾಡಗಳು

ಇಂದ್ರಿಯಾನುಭವಗಳಿಗೆ ಮಾತ್ರ ಗೋಚರವಾಗುವಂತಹವು. ಆಧುನಿಕ ವಿಜ್ಞಾನದ ವಿವೇಚನೆಗೆ ನಿಲುಕಲಾರವು. ದೈವೀಪುರುಷರು, ನಿರ್ಮಲ ಮನಸ್ಸಿನವರು ಮಾತ್ರ ಎಂದೆಂದಿಗೂ ಜಗತ್ತನ್ನಾವರಿಸುವ ಇಂದ್ರಿಯಗಳಿಗೆ ಅಗೋಚರವಾಗದ ಪರಬ್ರಹ್ಮನನ್ನು ಅರಿಯಲು ಸಾಧ್ಯ. ಯಾವುದೋ ಅಗೋಚರ ಬಾಂಧವ್ಯ ಶಕ್ತಿಪವಾಡಗಳನ್ನು ಸೃಜಿಸಿ ಅನುಭವ ವೇದ್ಯವಾಗುವಂತೆ ಮಾಡಬಲ್ಲದು. ಅನುಭವಗಳ ವಾಸ್ತವ ಮತ್ತು ಮೌಲ್ಯಗಳು, ಇಲ್ಲವೆ ಧ್ಯೇಯ ಧೋರಣೆಗಳ ಒಂದು ಮಾನಸಿಕ ಸ್ಥಿತಿ ಅಥವಾ ವ್ಯಕ್ತಿಯ ಒಂದು ಹೇಳಿಕೆ ಎಂದಾಗ ಪವಾಡಗಳನ್ನು ಕರೆಯಬಹುದು. ಪವಾಡಗಳನ್ನು ಅನುಭವ ಗೋಚರ ಪರಂಜ್ಯೋತಿಯ ಸಾಕ್ಷಾತ್ಕಾರದಿಂದ ಸೃಜಿಸಲು ಸಾಧ್ಯ.

ತಿಪ್ಪೇರುದ್ರಸ್ವಾಮಿಗಳು ಅನೇಕ ಪವಾಡಗಳನ್ನು ಮಾಡಿದ್ದಾರೆ. ಅವುಗಳನ್ನು ಮೌಖಿಕ ಪರಂಪರೆಯ ನೆಲೆಯಲ್ಲಿ ಗುರುತಿಸಬಹುದು. ಸ್ವಾಮಿಗಳು ಮೊಟ್ಟ ಮೊದಲಬಾರಿಗೆ ಆಂಧ್ರಪ್ರದೇಶದ ರಾರ್ಯದುರ್ಗದಿಂದ ಕರ್ನಾಟಕವನ್ನು ಪ್ರವೇಶ ಮಾಡಿದರು. ಇಲ್ಲಿ "ನಿಡುಗಲ್ಲು" ಎಂಬ ಸಂಸ್ಥಾನವಿತ್ತು. ನಿಡುಗಲ್ಲು ಸಂಸ್ಥಾನದಲ್ಲಿ ಆಗಿನ ದಳವಾಯಿ ಕಾಯಕವನ್ನು ಅಂದರೆ ಕೆಲಸವನ್ನು ಹಂಚುತ್ತಾ ಇರುತ್ತಾನೆ. ತಿಪ್ಪೇಸ್ವಾಮಿಯು ಕೂಡ ಪ್ರವೇಶ ಪಡೆಯಲು ಬರುತ್ತಾರೆ. ಎಲ್ಲರಿಗೂ ಕೆಲಸವನ್ನು ವಹಿಸುತ್ತಾರೆ. ಆಗ ತಿಪ್ಪೇಸ್ವಾಮಿಗಳು ಯೋಚಿಸಿ ನನಗೂ ಕೆಲಸವನ್ನು ಕೊಡಿ ನಾನು ಮಾಡಲು ಸಿದ್ಧನಿದ್ದೇನೆ ಎಂದು ಸ್ವಾಮಿಗಳು ಹೇಳಿದರು. ತಿಪ್ಪೇಸ್ವಾಮಿಯ ವೇಷ ಸಾಧುಸಂತರ ವೇಷವಾಗಿರುತ್ತದೆ. ಋಷಿಗಳಾಗಿ, ಗಡ್ಡದಾರಿಗಳಾಗಿರುತ್ತಾರೆ. ನೀವು ಋಷಿಗಳ ತರಹ ಇದ್ದೀರಾ ನಿಮಗೆ ಕೆಲಸ ಹಂಚುವ ಅವಶ್ಯಕತೆಯಿಲ್ಲ. ನಿಮಗೆ ಯಾರು ಬೇಕಾದರು ಭಿಕ್ಷೆ ಹಾಕುತ್ತಾರೆ. ದಾಸೋಹವನ್ನು ಮಾಡುತ್ತಾರೆ. ನೀವು ಬೇಕಾದರೆ ಅರಮನೆಗೆ ಹೋಗಿ ಎಂದು ದಳವಾಯಿ ಹೇಳುತ್ತಾರೆ. ಆಗ ತಿಪ್ಪೇಸ್ವಾಮಿಯವರು ಇಲ್ಲಪ್ಪ ಭಿಕ್ಷೆ ಎನ್ನುವಂತಹದ್ದು ಯಾರು ಅಂಗವಿಕಲಾಗಿರುತ್ತಾರೋ ಅಥವಾ ಅಸಹಾಯಕರಾಗಿರುತ್ತಾರೋ., ಅಥವಾ ಕೈಲಾಗದವರು ಇರುತ್ತಾರೋ ಅಂತಹವರಿಗೆ ಭಿಕ್ಷೆಯನ್ನು ನೀಡಬೇಕು. ಕಾಯಕದ ಮೂಲಕವೇ ಹೊಟ್ಟೆಯನ್ನು ತುಂಬಿಸಿಕೊಳ್ಳಬೇಕು. ಜಂಗಮ ಆದರೇನು, ಜನಾರ್ಧನ ಅದರೇನು ಎಂದು ತಿಪ್ಪೇಸ್ವಾಮಿಗಳು ದಳವಾಯಿಯವರಿಗೆ ಹೇಳಿದರು.

ಸರಿ ಎಂದು ಹೇಳಿ ದಳವಾಯಿಗಳು ಕೆಲಸವನ್ನು ಕೊಡುತ್ತಾರೆ. ಆಗ ಸ್ವಾಮೀಜಿಗಳು ವಹಿಸಿದ ಕೆಲಸವನ್ನು ಕೆಲವೇ ಸಮಯದಲ್ಲಿ ಮಾಡಿ ಮುಗಿಸಿ ಬಿಡುತ್ತಾರೆ. ಅದನ್ನು ನೋಡಿ ದಳವಾಯಿಗೆ ಆಶ್ಚರ್ಯವಾಗುತ್ತದೆ. ಎರಡು ಮೂರು ದಿನದಲ್ಲಿ ಮುಗಿಸುವ ಕೆಲಸವನ್ನು ಕೆಲವೇ ಕ್ಷಣಗಳಲ್ಲಿ ಮಾಡಿ ಮುಗಿಸಿ ಬಿಟ್ಟಿದ್ದಾರೆ ಎಂದು ಆಶ್ಚರ್ಯಪಡುತ್ತಾರೆ. ದಳವಾಯಿ ಸ್ವಾಮಿಯವರನ್ನು ಕಂಡು ಇವರು ತುಂಬಾ ಶಕ್ತಿಶಾಲಿಗಳು ಎಂದು ಕೊಳ್ಳುತ್ತಾರೆ.

ದಳವಾಯಿಗೆ ರಾಜ ಕಾಲುವೆ ತೆಗೆಯುವ ಕೆಲಸವನ್ನು ಹೇಳಿರುತ್ತಾರೆ. ಅದು ತುಂಬಾ ದೊಡ್ಡ ಕೆಲಸ ಕಾಲುವೆಯ ಕೆಲಸ ಮುಗಿಯಲು ತುಂಬಾ ಸಮಯಬೇಕಾಗುತ್ತದೆ. ಆ ಕೆಲಸವನ್ನು ಸ್ವಾಮಿಗಳ ಕೈಯಿಂದ ಮಾಡಿಸಬೇಕೆಂದು ಯೋಚಿಸಿ ಸ್ವಾಮೀಜಿಗಳಿಗೆ ಕೆಲಸ ಮಾಡಲು ಹೇಳಿದಾಗ ಅದನ್ನು ಸ್ವಾಮಿಗಳು

ನಿರಾಕರಿಸುತ್ತಾರೆ. ಆಗ ದಳವಾಯಿಗೆ ಕೋಪಬರುತ್ತದೆ. ದಳವಾಯಿ ಸುತ್ತಮುತ್ತಲಿರುವ ಕೆಲಸಗಾರರನ್ನು ಕರೆಸಿ ಚಾಟಿಏಟನ್ನು ಹೊಡೆಸುತ್ತಾನೆ. ಏನಾದರೂ ಮಾಡಿ ನಾವು ಈ ಕೆಲಸವನ್ನು ಮುಗಿಸಿಕೊಳ್ಳಬೇಕು ಎಂಬುದು ದಳವಾಯಿಯ ಯೋಜನೆಯಾಗಿರುತ್ತದೆ. ಕಾಲುವೆ ತುಂಬಾ ಉದ್ದದ ಕೆಲಸವಾಗಿರುತ್ತದೆ. ಇದನ್ನು ಮುಗಿಸಿಕೊಡು ಎಂದು ದಳವಾಯಿ ಚಾಟಿಯಿಂದ ಹೊಡೆಸುತ್ತಾನೆ. ಅವರು ಹೊಡೆಯುವ ಸಂದರ್ಭದಲ್ಲಿ ಶಿವ ಶಿವ ಎಂದು ಹೇಳಿ ಸ್ವಾಮಿಗಳು ಹೊಡೆಸಿಕೊಳ್ಳುತ್ತಾರೆ. ಆಗ ಹೊಡೆಯುವಂತಹ ಸಂದರ್ಭದಲ್ಲಿ ಯಾರೋ ರಾಜ ಬಂದ ಎಂದು ಹೇಳಿದಾಗ ಇವರು ಅವರೇ ತೋಡಿದ ಗುಂಡಿಯಲ್ಲಿ ಸ್ವಾಮಿಗಳನ್ನು ಹಾಕಿ ಮಣ್ಣನ್ನು ಮುಚ್ಚುತ್ತಾರೆ. ರಾಜ ಬರುತ್ತಾರೆ ಎಂದು ಚಾವಡಿಯ ಹತ್ತಿರ ಹೋದರೆ ಆ ಚಾವಡಿಯ ಹತ್ತಿರ ತಿಪ್ಪೇಸ್ವಾಮಿಯವರು ಕೂತಿರುವುದನ್ನು ಕಂಡು ದಳವಾಯಿಗೆ ಆಶ್ಚರ್ಯವಾಗುತ್ತದೆ. ದಳವಾಯಿಗಳು ಸ್ವಾಮಿಯ ಹತ್ತಿರ ಹೋಗಿ ನಾವು ತಪ್ಪು ಮಾಡಿಬಿಟ್ಟೆವು ನಮ್ಮನ್ನು ಕ್ಷಮಿಸು ಎಂದಾಗ ಸ್ವಾಮಿಗಳು ಶಾಪ ಹಾಕುತ್ತಾರೆ. "ನೀವು ಮಾಡಿರುವಂತಹ ಪಾಪಕ್ಕೆ ಫಲ ಅನುಭವಿಸುತ್ತೀರಾ" ಎಂದು ಶಾಪ ಕೊಟ್ಟರಂತೆ. ಈಗಲೂ ಸಹ ನಾಯಕನಹಟ್ಟಿಯಲ್ಲಿ ಶಾಪ ಕೊಟ್ಟಂತಹ ಜಾಗವನ್ನು ನಿಡುಗಲ್ಲಿನಲ್ಲಿ ಕಾಣಬಹುದು.

ಸತ್ತೆಮ್ಮೆ ಹಾಲು ಕರೆದುದು

ಶ್ರೀಗಳು ಒಂದು ದಿನ ಶಿವಾರ್ಚನೆಯನ್ನು ಮುಗಿಸಿ "ಬಾ ತಾಯಿ ಎಂದು ಮಾಳಮ್ಮನನ್ನು ಕರೆದು "ಇಂದೇಕೋ ಹಸಿವಿಲ್ಲ ಸ್ವಲ್ಪ ಹಾಲು ಕೊಟ್ಟುಬಿಡಮ್ಮ" ಎಂದು ಹೇಳಿದಾಗ ಮಾಳಮ್ಮನ ಮನಸ್ಸಿನಲ್ಲಿ ಸಂಕುಚಿತತೆಯ ಸುಳಿ ಸುತ್ತಲಾರಂಭಿಸುತ್ತವೆ ಎಂದೂ ಕೇಳದ ಸ್ವಾಮಿ, ಇಂದು ಹಾಲು ಕೇಳುತ್ತಿದ್ದಾರೆ. ಇವತ್ತೊಂದು ದಿನ ಕೊಟ್ಟಬಿಟ್ಟರೆ ದಿನವೂ ಕೇಳುತ್ತಾರೆ ಎಂದು ಯೋಚಿಸಿ ಅದಕ್ಕೆ ಏನ್ ದೊಡ್ಡರೋಗ ಆಗಿತ್ತೋ ಏನೋ ಇವತ್ತು ಹಾಲೇ ಕರೆದಿಲ್ಲ" ಎಂದು ಹೇಳಿದಳು. ಸ್ವಾಮಿಗಳು "ಹಾಗೆ ಆಗಲಿ ಬಿಡಮ್ಮ" ಎಂದು ಹೇಳಿ ಹೋದರು ಸ್ವಲ್ಪ ಸಮಯದ ಬಳಿಕ ಕೊಟ್ಟಿಗೆಯಲ್ಲಿ ಕಟ್ಟಿದ್ದ ಎಮ್ಮೆ ಇದ್ದಕ್ಕಿದಂತೆ ಕೆಳಗೆ ಬಿದ್ದು ಪ್ರಾಣ ಬಿಡುತ್ತದೆ. ಸತ್ತ ಎಮ್ಮೆಯನ್ನು ಕಂಡ ಫಣಿಯಪ್ಪನ ಹೆಂಡತಿಗೆ ಆಶ್ಚರ್ಯವಾಗುತ್ತದೆ. ಇದೇನು ಗ್ರಹಚಾರ ಬಂತು ಎಂದು ಹೇಳಿ ಆಗ ಸ್ವಾಮಿಯ ಪಾದಕ್ಕೆರಗಿ ಗೋಳಾಡುತ್ತಾಳೆ. ನನ್ನನ್ನು ಕ್ಷಮಿಸಿ ಸ್ವಾಮಿ ಎಂದು ಆಗ ಸ್ವಾಮಿ "ಬಾಯಲ್ಲಿ ಅಂದದ್ದು ಬೆನ್ನಿಗೇ ಮುಳುವಾಯಿತೇ" ಎಂದು ಪರಿತಪಿಸುತ್ತಾಳೆ. ಆಗ ಸ್ವಾಮಿಗಳು ಸತ್ತು ಬಿದ್ದಿದ್ದ ಆ ಎಮ್ಮೆಯನ್ನು ತಮ್ಮ ತಪೋಬಲದಿಂದ ಪುನಃ ಬದುಕಿಸಿ ಹಾಲು ಕರೆಯುತ್ತಾರೆ. ಗುರುವಿನ ಪೂಜೆಗೆ ಸುಳ್ಳು ಹೇಳಬಾರದೆಂಬುದಕ್ಕೆ ಎಚ್ಚರಿಕೆಯೂ ಆಗಿದೆ. ಈ ಘಟನೆಯ ಬಗ್ಗೆ ಇಲ್ಲಿಯ ಜಾನಪದ ಮತ್ತು ಪುರಾಣ ಸಾಹಿತ್ಯದಲ್ಲಿ

"ಹಟ್ಟಿಯ ತಿಪ್ಪೇಸ್ವಾಮಿ ಸತ್ಯವಂತ ಕಾಣೆ

ಸತ್ತೆಮ್ಮೆ ಹಾಲು ಕರೆದುಂಡ

ಸತ್ತೆಮ್ಮೆ ಹಾಲು ಕರೆದು ಪಾಯಸ ಮಾಡಿ

ಸುತ್ತೆಂಟು ಮಠಕೆ ಕಳಿಸ್ಯಾನೆ"

"ದುರುಳು ಬುದ್ದಿಯ ಪಿಡಿದುಕೊಳ್ಳುತೆ

ಭರದಿ ಮಠದೊಳು ಸೇವೆಗೈಯದೆ

ಮರುಳತನಗಿಂ ಕೆಟ್ಟೆನೆನ್ನುತೆ ತಾಪಗೊಳ್ಳುತ

ಅರಿಯದಾಡಿದ ನುಡಿಯ ಮರೆಯುತ

ಕರುಣಿಪುದು ನೀವೆಂದು ಪೂಜ್ಯರ

ಚರಣಕೆರಗುತ ಬೇಡಿಕೊಂಡಳು ಫಣಿಯನಾ ಸತಿಯು"

ಅಕ್ಷಯ ಬುತ್ತಿ

ಊರಿನ ಜನ ಎಲ್ಲರೂ ಸ್ವಾಮೀಜಿಯ ಪವಾಡ ಮಾಡುತ್ತಾರೆ. ಬಂದ ಭಕ್ತರಿಗೆಲ್ಲ ಕೇಳಿದ್ದೆಲ್ಲ ಕೊಡುತ್ತಾರೆ. ಇಷ್ಟಾರ್ಥ ಸಿದ್ಧಿಯಾಗುತ್ತದೆ ಎಂದು ಜನ ತಂಡೋಪ ತಂಡವಾಗಿ ಬರತೊಡಗಿದರು. ಹೀಗೆ ಬಂದಂತಹ ಭಕ್ತರಿಗೆ ಊಟದ ವ್ಯವಸ್ಥೆಯಿಲ್ಲ. ಆಗ ಫಣಿಯಪ್ಪನವರಿಗೆ ಭಕ್ತರಿಗೆ ಊಟದ ವ್ಯವಸ್ಥೆ ಮಾಡುವ ಜವಾಬ್ದಾರಿ ಬಿತ್ತು. ಫಣಿಯಪ್ಪ ಜವಾಬ್ದಾರಿಯನ್ನು ತೆಗೆದುಕೊಂಡರು. ಆ ಸಂದರ್ಭದಲ್ಲಿ ಬರಗಾಲದ ಬವಣೆಯನ್ನು ನೀಗಲು ಮನೆಯಲ್ಲಿದ್ದಂತಹ ದವಸ ಧಾನ್ಯಗಳೆಲ್ಲ ಖಾಲಿಯಾದವು. ದಿನೇ ದಿನೇ ಭಕ್ತರ ಸಂಖ್ಯೆ ಅಧಿಕವಾಗತೊಡಗಿತು. ಆದರೆ ಮನೆಯಲ್ಲಿದ್ದಂತಹ ಸಾಮಾನುಗಳೆಲ್ಲ ಖಾಲಿಯಾಯಿತು. ಏನು ಮಾಡಬೇಕೆಂದು ಸ್ವಾಮೀಜಿಗಳನ್ನು ಕೇಳಿದಾಗ ಅವರ ಮನೆಯಲ್ಲಿದ್ದಂತಹ ವಾಡೇವು ಅದರಲ್ಲಿ ದವಸ ಧಾನ್ಯಗಳನ್ನೆಲ್ಲ ಇಟ್ಟರೆ ಕೆಡುತ್ತಿರಲಿಲ್ಲ. ಇಂತಹ ವಾಡೇವಿಗೆ ಸ್ವಾಮಿಗಳು ಮಂತ್ರ ಪಠನೆ ಮಾಡಿ ವಾಡೇವನ್ನು ಮುಚ್ಚಿದರಂತೆ. ಫಣಿಯಪ್ಪನ ಮನೆಯಲ್ಲಿ ವಾಡೇವು ಒಂದನ್ನು ಅಕ್ಷಯ ಮಾಡುತ್ತಾರೆ. ಇದರಿಂದ ಫಣಿಯಪ್ಪನ ಮನೆಯಲ್ಲಿ ಧಾನ್ಯದ ಹೊಳೆ ಹರಿಯುತ್ತದೆ. ಹಾಗಾಗಿ ಬೇಡಿದವರಿಗೆಲ್ಲ ಧಾನ್ಯ ನೀಡುತ್ತಿದ್ದುಂಟು.

ಯಾವುದೇ ಕಾರಣಕ್ಕೂ ಇದನ್ನು ತೆರೆಯಬೇಡಿರಿ ಎಂದು ಸ್ವಾಮಿಗಳು ಹೇಳಿದರು. ಇದನ್ನು ಕೇಳಿಕೊಂಡರೆ ನವಧಾನ್ಯ ಬರುತ್ತದೆ ಎಂದು ಆಶೀರ್ವಾದ ಮಾಡಿದರಂತೆ. ಎಷ್ಟು ಜನ ಭಕ್ತರು ಬರುತ್ತಾರೋ ಅವರೆಲ್ಲ ಇಂತಹ ಧಾನ್ಯ ಬೇಕೆಂದರೆ ಅಂತಹ ಧಾನ್ಯ ಬರುತ್ತಿತ್ತಂತೆ. ಅದು ಅಕ್ಷಯ ವಾಡೇವು. ಅಲ್ಲಿ ಪೂಜೆ ಪುನಃಸ್ಕಾರ ನಡೆಯುತ್ತಿರವಾಗ ಅನ್ನದಾಸೋಹ ಶುರುವಾಯಿತು.

ಈ ಕಾರ್ಯಕ್ರಮ ನಡೆಯುತ್ತಿರುವ ಸಂದರ್ಭದಲ್ಲಿ ಫಣಿಯಪ್ಪನ ಹೆಂಡತಿ ಗಂಗಮಾಳವ್ವ ಧಾನ್ಯವನ್ನು ಪರೀಕ್ಷಿಸುವ ಸಲುವಾಗಿ ವಾಡೇವಿನ ಕೆಳಗೆ ಇಷ್ಟರಮಟ್ಟಿಗೆ ಧಾನ್ಯ ಬರುತ್ತಿರುವಾಗ, ವಾಡೇವಿನ ಒಳಗೆ ಹೇಗಿರಬಹುದು ಎಂದು ನೋಡಲು ವಾಡೇವಿನ ಮುಚ್ಚಳ ತೆಗೆದು ಬಿಡುತ್ತಾಳೆ. ಆಗ ಅದರಲ್ಲಿದ್ದಂತಹ ಶಕ್ತಿಯೆಲ್ಲ ಕಳೆದುಹೋಯಿತು. ಆಗ ವಾಡೇವಿನ ಒಳಗಿನಿಂದ ವಿಪರೀತವಾದ ಹೊಗೆ ಬರುತ್ತದೆ. ಅಂದರೆ

ಅದರಲ್ಲಿ ಅಡಕವಾಗಿದ್ದ ದವಸ ಧಾನ್ಯ ನಶಿಸಿ ಹೋಯಿತು. ಗಂಗಿಮಾಳವ್ವ, ಗುರುವಿನ ಆಜ್ಞೆ ಮೀರಿದ್ದರಿಂದ ಈ ಘಟನೆ ನಡೆಯಿತು. ಈಗಲೂ ಸಹಿತ ಆ ವಾಡೇವು ಘಣೆಯಪ್ಪನವರ ಮನೆಯಲ್ಲಿದೆ ಅದು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿದೆ.

ಕರಡಿಗೆಗಳಲ್ಲಿ ಲಿಂಗಮಾಯವಾದದ್ದು

ಒಮ್ಮೆ ಧಣಿಯವರ ಮನೆಯಲ್ಲಿ ಆರಾಧನೆ ನಡೆಯುತ್ತಿದ್ದಿತು. ನೂರಾರು ಮಂದಿ ಜಂಗಮರಲ್ಲಿ ಇವರು ಒಬ್ಬರಾಗಿದ್ದರು. ಪೆದ್ದನಂತಿದ್ದ ಈ ಸ್ವಾಮಿಯನ್ನು ಭಕ್ತ ಸಮೂಹ ಸರಿಯಾಗಿ ಆದರಿಸಲಿಲ್ಲ. ಶಿವ ಪೂಜೆಯ ಸಮಯದಲ್ಲಿ ಅವರು ತಮ್ಮ ಕರಡಿ ತೆರೆದು ನೋಡುತ್ತಾರೆ. ಅವು ಲಿಂಗರಹಿತವಾಗಿದ್ದವು. ಆಗ ಅವರಿಗಾದ ನೋವು, ದುಃಖ, ಆಶ್ಚರ್ಯ ಹೇಳತೀರದು ಆಗ ಅವರೆಲ್ಲರೂ ಆ ಮಹಾಸ್ವಾಮಿಯ ಶ್ರೀಪಾದಗಳಿಗೆರಗಿ ಭಕ್ತಿಯಿಂದ ಗೌರವಿಸುತ್ತಾರೆ. ಆಗ ಇವರ ಕರಡಿಗೆ ಲಿಂಗ ಸಹಿತವಾಗುತ್ತವೆ. ಗುರು-ಲಿಂಗ-ಜಂಗಮ ಪೂಜೆ ಎಂಬುದು ಕೇವಲ ಆಡಂಬರದ ನೋಟ. ಅದು ಅಸಹಜ ರೀತಿಯ ಪ್ರದರ್ಶನವಾಗಬಾರದು ಎಂಬುದಕ್ಕೆ ಇದೊಂದು ನಿದರ್ಶನ.

ಕೆರೆ ಕಟ್ಟಿಸಿದ್ದು

ಹಟ್ಟಿ ಮಲ್ಲಪ್ಪನಾಯಕ ದೊಡ್ಡ ಹಳ್ಳದ ಸಾಲಿನಲ್ಲಿ ಒಡ್ಡುಹಾಕಿ ಕೆರೆ ನಿರ್ಮಾಣ ಮಾಡಬೇಕು. ನೀರನ್ನು ಸಂಗ್ರಹಿಸಬೇಕು. ಜನರಿಗೆ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂಬ ಮಹಾದಾಸೆಯಿಂದ ಹಟ್ಟಿ ಮಲ್ಲಪ್ಪನಾಯಕ ದೊಡ್ಡ ಯೋಜನೆಯನ್ನು ಹಾಕಿಕೊಂಡಾಗ ಆನೆಗೊಂದಿ ಸಂಸ್ಥಾನದಲ್ಲಿ ಯುದ್ಧವಾಗಿದ್ದ ಕಾರಣ ಇವರ ರಾಜ್ಯ ಬೊಕ್ಕಸದಲ್ಲಿದ್ದ ಹಣವೆಲ್ಲ ಬರಿದಾಗಿತ್ತು. ಏನು ಮಾಡುವುದೆಂದು ಯೋಚಿಸುವ ಹೊತ್ತಿಗೆ ಕೆಲಸವನ್ನು ಹಾಗೆ ಅರ್ಧಕ್ಕೆ ನಿಲ್ಲಿಸಿದ್ದರಂತೆ. ಆಗ ತಿಪ್ಪೇಸ್ವಾಮಿ ವಾಯುವಿಹಾರಕ್ಕೆ ಬಂದಾಗ ಮಲ್ಲಪ್ಪನಾಯಕನನ್ನು ತಿಪ್ಪೇಸ್ವಾಮಿ ಕರೆದು ಕೇಳಿದರಂತೆ ಯಾಕೆ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿದ್ದೀರಾ ಏನು ಕಾರ್ಯಕ್ರಮವಿದು ಎಂದು ಕೇಳಿದಾಗ, ಮಲ್ಲಪ್ಪನಾಯಕ ತಿಪ್ಪೇಸ್ವಾಮಿಗೆ ಸ್ವಾಮಿ ನಾವು ಕೆರೆಕಟ್ಟ ಬೇಕೆಂದಿದ್ದೀವಿ ರಾಜ್ಯದ ಬೊಕ್ಕಸ ಖಾಲಿಯಾಗಿದೆ. ಆದಕಾರಣ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿದ್ದೀವಿ ಎಂದು ಹೇಳಿದಾಗ ತಿಪ್ಪೇಸ್ವಾಮಿ ಇಲ್ಲ ಈ ಹೊತ್ತಿನಿಂದ ಕೆಲಸದ ಏರ್ಪಾಡು ಮಾಡಿ ಕೂಲಿ ಏರ್ಪಾಟು ನಾನು ಮಾಡುತ್ತೀನಿ ಎಂದು ತಿಪ್ಪೇಸ್ವಾಮಿ ಹೇಳಿದರು. ಮಲ್ಲಪ್ಪನಾಯಕ ಅವರ ಮಾತಿಗೆ ಸಮ್ಮತಿ ಸೂಚಿಸಿದರು.

ಆ ಹೊತ್ತಿನ ಸಂದರ್ಭದಲ್ಲಿ ತುಂಬಾ ಬರಗಾಲ. ಆ ಕಾರಣ ಅಲ್ಲಿಯ ಜನ ಮುದ್ದೆ ಕೊಟ್ಟರೆ ಸಾಕು ಕೆಲಸ ಮಾಡುವಂತಹ ಕಾಲವದು. ದುಡ್ಡು ಕೊಡುತ್ತಾರೆ ಅಂದ್ರೆ ಜನ ತಂಡೋಪ, ತಂಡವಾಗಿ ಕೆಲಸಕ್ಕೆ ಬರತೊಡಗಿದರು. ಹೀಗೆ ಬಂದಂತಹ ಜನರಿಗೆ ಕೆಲಸವನ್ನು ಕೊಟ್ಟರು. ಕೆಲಸ ಬಹಳ ಜೋರಾಗಿ ಭರದಿಂದ ಸಾಗಿತು. ದಿನ ಸಂಜೆ ಸ್ವಾಮೀಜಿಗಳು ಹೋಗಿ ಕೆಲಸವನ್ನು ನೋಡಿಕೊಂಡು ಬಂದು ಅಲ್ಲಿಯ ಜನರಿಗೆ ಸಂಜೆಯ ಹೊತ್ತಿಗೆ ಕೆಲಸ ಮಾಡಿದ ಜಾಗದಲ್ಲಿ ಮರಳಿನ ಕುಪ್ಪೆ ಮಾಡಲಿಕ್ಕೆ ಹೇಳುತ್ತಿದ್ದರು. ಆಗ

ಮರಳಿನ ಕುಪ್ಪೆ ಮೇಲೆ ಸ್ವಾಮೀಜಿಗಳು ಬೆತ್ತವನ್ನು ಇಟ್ಟು ಮಾಡಿದವರಿಗೆ ನೀಡುಭಿಕ್ಷೆ ಎಂದು ೩ ಬಾರಿ ಹೇಳುತ್ತಿದ್ದರು. ಬೆತ್ತವನ್ನು ಮರಳಿನ ಕುಪ್ಪೆಗೆ ಮುಟ್ಟಿಸುತ್ತಿದ್ದರು. ಅವರ ಶ್ರಮ ಮತ್ತು ದುಡಿಮೆಗೆ ತಕ್ಕ ಪ್ರತಿಫಲವು ಅವರು ಮಾಡಿದ ಕೆಲಸದ ಮೇಲೆ ಕೂಲಿ ಸಿಗುತ್ತಿತ್ತು.

ಗರ್ಭಿಣಿ ಹೆಣ್ಣುಮಗಳಿಗೆ ಎರಡು ಪಟ್ಟು ಹಣ ಸಿಗುತ್ತದೆ. ಆಗ ಆಕೆ ಸ್ವಾಮಿ ನನಗೆ ಎರಡು ಪಟ್ಟು ಕೂಲಿ ಸಿಕ್ಕಿದೆ ಎಂದಾಗ ನೀನೊಬ್ಬಳೆ ಕೆಲಸ ಮಾಡಿಲ್ಲಮ್ಮ ನಿನ್ನ ಜೊತೆಗೆ ಹೊಟ್ಟೆಯಲ್ಲಿರುವ ಮಗುವು ಕಷ್ಟಪಟ್ಟಿದೆ ಎಂದು ಸ್ವಾಮಿಗಳು ಹೇಳುತ್ತಾರೆ. ಈಗಲೂ ಸಹ ಈ ಭಾಗದ ಗರ್ಭಿಣಿ ಹೆಣ್ಣು ಮಕ್ಕಳಿಗೆ ಎರಡುಪಟ್ಟು ಕೂಲಿ ಕೊಡುವುದು ಒಂದು ಪದ್ಧತಿಯಾಗಿದೆ.

ಕೆಲವು ಸೋಮಾರಿಗಳು ರಾಜರು ಬಂದಾಗ ಅಥವಾ ಮೇಸ್ತ್ರಿಯಿದ್ದಾಗ ಮಾತ್ರ ಕೆಲಸ ಮಾಡುವುದು. ಬೇರೆ ಸಮಯದಲಿ ಸುಮ್ಮನೆ ಕೂರುವುದು ಹೀಗೆ ಮಾಡುತ್ತಿರುವಾಗ ಅಂತಹವರಿಗೆ ಏನು ಸಿಗದೆ ಹೋಯ್ತಂತೆ. ಅಂದಿನಿಂದ ಜನರು ಸ್ಪರ್ಧೆಯ ರೀತಿಯಲ್ಲಿ ಕೆಲಸ ಮಾಡತೊಡಗಿದರು. ನನಗೆ ಹೆಚ್ಚು ಹಣ ಸಿಗಬೇಕು ಎಂದು ಎಲ್ಲರು ಕೆಲಸ ಮಾಡುತ್ತಿದ್ದರಂತೆ. ಈ ರೀತಿ ಕಟ್ಟಿಸಿರುವ ಕೆರೆ ಹಿರೇಕೆರೆ. ಇಲ್ಲಿಂದ ೬ ಕಿ.ಮೀ.ದೂರದಲ್ಲಿದೆ. ಕೆರೆಯ ಏರಿಯ ಮೇಲೆ ಒಂದೇ ಬಾರಿಗೆ ೪ ಬಸ್ಸುಗಳು ಪ್ರಯಾಣ ಬೆಳಸಬಹುದು. ಏರಿ ಹೆದ್ದಾರಿಯ ರೀತಿಯಲ್ಲಿದೆ. ಈ ಏರಿ ಕಟ್ಟಿಸಿ ಸು.೮೦೦ ವರ್ಷಗಳಾದರು ಇದುವರೆಗೂ ತೊಂದರೆಯಾಗಿಲ್ಲ. ರಿಪೇರಿಯಾಗಿಲ್ಲ. ಇದುವರೆಗೂ ಕೆರೆಯನ್ನು ಹೂಳೆತ್ತಲು ಆಗುತ್ತಿಲ್ಲವಂತೆ. ಕೆರೆ ಒಂದು ಸಾರಿ ತುಂಬಿದರೆ ಇಡೀ ನಾಯಕನಹಟ್ಟಿ ಜನತೆಗೆ ೭ ವರ್ಷ ನೀರು ತುಂಬಿರುತ್ತದೆಯಂತೆ. ಜನತೆಗೆ ಸಂಮೃದ್ಧಿಯಾದ ನೀರಾವರಿ ವ್ಯವಸ್ಥೆಯನ್ನು ಒದಗಿಸುತ್ತದೆ. ೨ ವರ್ಷ ನೀರು ಸಂಗ್ರಹವಾಗುವಂತಹ ಸ್ಥಳ ಹೂಳುಕೊಂಡು ಬಿಟ್ಟಿದೆಯಂತೆ. ೫ ವರ್ಷಕ್ಕೆ ಬಂದು ನಿಂತಿದೆ. ೫ ವರ್ಷದವರೆಗೂ ಜನತೆ ಯಾವುದೇ ತೊಂದರೆಯಿಲ್ಲದೆ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದಾಗಿದೆ.

ಇದನ್ನೆಲ್ಲಾ ರಾಜ ನೋಡುತ್ತಾನೆ. ಸ್ವಾಮಿ ನೀವೆಂತಹ ಆಗಾಧ ಪುರುಷರು. ನಾವು ರಾಜಾಧಿರಾಜ ನಾವು ನಿಮ್ಮ ಪಾದಗಳಿಗೆ ಸಮಾನರಲ್ಲ ಎಂದು ಹೇಳಿ ರಾಜ್ಯ ಅಧಿಕಾರವೆಲ್ಲ ಇಟ್ಟುಕೊಂಡು ಏನು ಸಾಧನೆ ಮಾಡಿದ್ದಾಯ್ತು ಎಂದು ಹೇಳಿ ಇದ್ಯಾವುದು ನನಗೆ ಬೇಕಾಗಿಲ್ಲ. ಇಡೀ ಸಮಸ್ತ ಸಾಮ್ರಾಜ್ಯ, ಕಿರೀಟ ೭೭ ಬಿರುದಾವಳಿ, ಛತ್ರ, ಚಾಮರ ಎಲ್ಲವನ್ನು ಸ್ವಾಮಿಯ ಪಾದಗಳಿಗೆ ಅರ್ಪಿಸಿಬಿಟ್ಟು ಸ್ವಾಮಿಯ ಪಾದ ಸೇವಕನಾಗಿ ಬಿಡುತ್ತಾನೆ.

ಸ್ವಾಮಿಗಳು ಬೇಡವೆಂದರು ಸಹಿತ ಅವರ ಮಾತನ್ನು ನಿರಾಕರಿಸುತ್ತಾರೆ. ನಿನ್ನ ವಂಶ ಕೊನೆಯಾಗುತ್ತದೆ ಎಂದರು ಸಹಿತ ಮಲ್ಲಪ್ಪನಾಯಕ ಸ್ವಾಮಿ ನನ್ನ ವಂಶ ಅಳಿದು ಹೋದರು ಪರವಾಗಿಲ್ಲ ನಿಮ್ಮ ಪಾದಸೇವೆ ನನಗೆ ಸಾಕು ಸ್ವಾಮಿ ಎಂದಾಗ ಸ್ವಾಮಿಗಳು ಹಾಗೆಯೇ ಆಗಲಿ ಎಂದು ಹೇಳಿ ಸ್ವಾಮಿಯ ಪಾದ ಸೇವಕನಾಗುತ್ತಾನೆ.

ಸ್ವಾಮಿಗಳು ಹೀಗೆ ಏಳು ಕೆರೆ, ಏಳುಪುರ ಕಟ್ಟಿಸಿದರೆಂದು ಪ್ರತೀತಿ. ತಿಪ್ಪೇಸ್ವಾಮಿಗಳು ಮಾನವರಾಗಿ ಅವತರಿಸಿ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು ಕರ್ಮದ ಸಾರವನ್ನು ಬಿತ್ತಿ ದೈವತ್ವಕ್ಕೇರಿದ ಮಹಿಮಪುರುಷ ತಿಪ್ಪೇಸ್ವಾಮಿಗಳು ಮಾಡಿದಂತಹ ಜನೋಪಯೋಗಿ ಕಾರ್ಯಗಳಲ್ಲಿ ಏಳು ಕೆರೆಯನ್ನು ಕಟ್ಟಿಸಿದರೆಂದು ಹೇಳುತ್ತಾರೆ. ಏಳು ಕೆರೆಗಳಿಗೆ ಶಿಲನ್ಯಾಸ ನೆರವೇರಿಸಿದರು.

ಭೀಮನ ಕೆರೆ

ನಾಯಕನ ಕೆರೆ

ರಾಮಸಾಗರ ಕೆರೆ

ಚಿಕ್ಕಕೆರೆ

ಹಿರೇಕೆರೆ

ಹೊಸಕೆರೆ

ಹೊರವಿನ ಕೆರೆ.

ಹಾಗೆಯೇ ಏಳು ಪುರಗಳ ನಿರ್ಮಾಣ

ಕಾಶಿಪುರ

ಕುದಪುರ

ಮಲ್ಲಾಪುರ

ಜಟಾಪುರ

ಮಹಾದೇವಪುರ

ಗೌರಿಪುರ

ಬಸಾಪುರ

ಹೈದರ್‌ಗೆ ಪುತ್ರ ಸಂತಾನ

೧೨ನೇ ಮತ್ತು ೧೩ನೇ ಶತಮಾನದ ನಂತರ ೧೭-೧೮ನೇ ಶತಮಾನದಲ್ಲಿ ಚಿತ್ರದುರ್ಗ ಸಂಸ್ಥಾನದ ಮೇಲೆ ಹೈದರಾಲಿ ದಂಡೆತ್ತಿ ಬಂದ. ಆಗ Devoleping on the wayನಲ್ಲಿ ಏನು ಅಭಿವೃದ್ಧಿಯಾಗಿತ್ತೋ ಅದನ್ನು ಕೊಳ್ಳೆ ಹೊಡೆದುಕೊಂಡು ಹೋಗುವುದು ಒಂದು ಪದ್ಧತಿ. ಆ ಹೊತ್ತಿಗೆ ಚಿತ್ರದುರ್ಗ ಕ್ಯಾಂಪಿಗೆ ನಾಯಕನಹಟ್ಟಿ ಕೊಳ್ಳೆ ಹೊಡೆದರೆ ಹೇರಳವಾದ ದವಸ ಧಾನ್ಯಗಳು ಸಿಗುತ್ತವೆ ಎಂಬ ಮಾಹಿತಿ ಮೇಲೆ ನಾಯಕನಹಟ್ಟಿ ಕೊಳ್ಳೆ ಹೊಡೆಯಲು ಬರುತ್ತಿರುವಾಗ ನಾಯಕನಹಟ್ಟಿ ಹೆಬ್ಬಾಗಿಲಿನ ಚಿಕ್ಕೇರಿ ಮೈದಾನಕ್ಕೆ

ಬರುವ ಹೊತ್ತಿಗೆ ತುಂಬಾ ದಣಿವಾಯಿತು. ಸೈನಿಕರಿಗೆ ಬೇಕಾದ ನೀರಿನ ವ್ಯವಸ್ಥೆಯಿತ್ತು. ಪಕ್ಕದಲ್ಲಿ ಕೆರೆಯಿತ್ತು. ಡೇರೆ ಹೊಡೆಯಲು ಎಲ್ಲಾ ರೀತಿಯ ಅನುಕೂಲಗಳಿದ್ದವು. ಸರಿ ರಾಜಾಜ್ಞೆ ಮಾಡಿದರಂತೆ. ಹೈದರ ಈ ರಾತ್ರಿ ಇಲ್ಲಿಯೇ ವಿಶ್ರಾಂತಿ ಪಡೆದು ಬೆಳಿಗ್ಗೆ ಪ್ರಯಾಣ ಮಾಡಿದರಾಯ್ತು ಎಂದು ಹೇಳಿ ಎಲ್ಲರೂ ಮರದ ಕೆಳಗೆ ಸೈನಿಕರು ಬಿಡಾರ ಹೂಡಿದರು. ಆ ರಾತ್ರಿ ಗುರುಗಳು ಹೈದರಾಲಿಯ ಡೇರೆಯನ್ನು ತಿಪ್ಪೇಸ್ವಾಮಿಯ ಗದ್ದುಗೆಯ ಪಕ್ಕ ಡೇರೆ ಹೊಡೆಯುತ್ತಾರೆ. ಆ ರಾತ್ರಿ ಗುರುಗಳು ಹೈದರಾಲಿಯ ಕನಸಿನಲ್ಲಿ ಹೋಗಿ ಹೈದರ್ ನಿನಗೆ ಕಾಲ ಕ್ರಮೇಣ ಒಂದು ಗಂಡು ಮಗುವಾಗುತ್ತೆ ನಿಮ್ಮ ರಾಜ್ಯದಲ್ಲಿ ತುಂಬಾ ಹೆಸರು ಮಾಡುತ್ತದೆ ಎಂದು ಆರ್ಶೀವಾದ ಮಾಡಿದರಂತೆ.

ಸ್ವಾಮೀಜಿ ಅದಕ್ಕೆ ಪ್ರತಿಯಾಗಿ ನಿನಗೆ ಏನು ಕೊಡಲಿ ಎಂದು ಕೇಳಿದಾಗ ನಿಮ್ಮ ಬಿಡಾರದ ಪಕ್ಕ ಗದ್ದುಗೆಯಿದೆ ಅಲ್ಲಿ ಒಂದು ಗೋರಿ ಕಟ್ಟಿಸಿಕೊಡಿ ಎಂದು ಹೇಳಿದರು. ಸರಿ ಹಾಗೆಯೇ ಆಗಲಿ ಎಂದು ಹೇಳಿದರು. ಸ್ವಲ್ಪ ದಿನಗಳು ಕಳೆದ ನಂತರ ಹೈದರನ ಕನಸುಗಳೆಲ್ಲ ನಿಜವಾಯಿತಂತೆ. ಏನು ಇಲ್ಲಿ ಸ್ಥಳ ಪುರಾಣದ ಮಹಿಮೆ ಎಂದು ಗ್ರಾಮದ ಹಿರಿಯರನ್ನು ವಿಚಾರಿಸಿದಾಗ ಊರಿನ ಜನರು ಒಬ್ಬ ಸಾಧುಗಳಿದ್ದರು. ಎಲ್ಲರ ಮಧ್ಯೆಯಿದ್ದು ಸಾಮಾನ್ಯ ಜನರಲ್ಲಿ ಅವರು ಬೆರೆತು ಹೋಗಿದ್ದರು. ಜನರ ಮೌಢ್ಯವನ್ನು ತಿದ್ದಿದರು. "ನಡೆದುಕೊಂಡೆ ಪಡೆದುಕೊಂಡೆ" ಎಂದು ಹೇಳಿದರಂತೆ.

ಹೈದರಾಲಿಗೆ ತುಂಬಾ ಸಂತೋಷವಾಯಿತು. ಸ್ವಾಮಿಯ ಅನುಗ್ರಹ ನಮಗಾಯ್ತು ಫಲ ಕೇಳದಲೆ ಸ್ವಾಮಿ ಫಲನಮಿಗೆ ಕೊಟ್ಟ ಎಂದು ಬೇಕಾದಷ್ಟು ಸೈನ್ಯದ ತುಕಡಿ ಅದರಲ್ಲಿ ಒಂದು ತುಕಡಿಯ ಸೈನ್ಯವನ್ನು ಗೋರಿ ಕಟ್ಟಲು ಬಿಟ್ಟನಂತೆ. ಹೀಗೆ ಗೋರಿಕಟ್ಟಲು ಏರ್ಪಾಡು ನಡೆಯುವಲ್ಲಿ ಹೈದರನಿಗೆ ಒಂದು ಸಂದೇಶ ಬಂತಂತೆ. ಹೈದರ ನಿನಗೆ ಗಂಡು ಮಗುವಾಗಿದೆ. ತಾಯಿ, ಮಗ ಇಬ್ಬರು ಆರೋಗ್ಯವಾಗಿದ್ದಾರೆ ಎಂಬ ಸಂದೇಶ ಬಂದಿತ್ತು. ವಿಷಯವನ್ನು ಕೇಳಿ ಹೈದರಾಲಿ ಸಂತೋಷವಾಯಿತು. ಹೈದರಾಲಿ ಆ ಮಗುವಿಗೆ ಸ್ವಾಮಿಯ ಹೆಸರಿಡಬೇಕೆಂದು ತಿಪ್ಪೇಸ್ವಾಮಿ ಹೇಳಿದಾಗ ಆಗ ಸ್ವಾಮಿಗಳು "ತಿಪ್ಪ"ಸಾಬ್ ಎಂದು ಹೆಸರಿಟ್ಟರು. ಅದು ಬ್ರಿಟಿಷರ ಆಡಳಿತ ಭಾಷೆಯಲ್ಲಿ "ಟಿಪ್ಪುಸಾಬ್" ಎಂದು ಕರೆಯಲ್ಪಟ್ಟಿತು.

ಹಾಗಾಗಿ ಇಲ್ಲಿ ಹೆಚ್ಚಾಗಿ ಮುಸ್ಲಿಂ ಬಾಂಧವರು ತುಂಬಾ ನಡೆದುಕೊಳ್ಳುತ್ತಾರೆ. ಅದೊಂದು ವಿಶೇಷ ಹೊರಮಠ ನೋಡುವುದಕ್ಕೆ ಮಸೀದಿ ತರಹ ಇದೆ. ಹೊರಾಂಡ, ಮುಖದ್ವಾರ, ಮಹಾದ್ವಾರ, ಗರ್ಭಗುಡಿ ಮುಸ್ಲಿಂ ಶೈಲಿಯಲ್ಲಿದೆ. ಇದು ಸ್ವಾಮಿಯವರ ಜೀವಸಮಾಧಿ ಮಠವಾಗಿದೆ.

ಹರಿಜನ ಕೇರಿಗೆ ಹೋಗುವುದು

ಹುಟ್ಟಿದ ಪ್ರತಿಯೊಬ್ಬರು ಕಾಯಕ ಮಾಡಬೇಕು. ಇಲ್ಲವಾದರೆ ಮುಕ್ತಿ ಸಿಗುವುದಿಲ್ಲ ಎಂದು ಹೇಳಿ ಸ್ವಾಮಿಗಳು ಪ್ರತಿನಿತ್ಯ ಭಕ್ತನ ತೋಟಕ್ಕೆ ಕಪಿಲೆಬಾನಿಯ ಮೂಲಕ ನೀರನ್ನು ಎರೆಯುತ್ತಾರೆ. ಗಿಡ, ಮರಗಳಿಗೆ ನೀರೆರುಸುತ್ತಾರೆ. ಆ ಸಮಯದಲ್ಲಿ ಕಪಿಲೆ ಬಾನೆ ಹರಿದು ಹೋಗುತ್ತೆ. ಆಗ ಫಣಿಯಪ್ಪ ಸ್ವಾಮಿ ಅಜ್ಜನ ಹತ್ತಿರ ಹೋಗಿ ಹೋಲಿಸಿಕೊಂಡು ಬನ್ನಿ. ನಾನು ಶಿವ ಪೂಜೆಗೆ ತಯಾರಿ ಮಾಡುತ್ತೀನಿ

ಎಂದು ಹೇಳಿದರು. ಆಗ ಸ್ವಾಮಿಗಳು ಆಯ್ತು ಎಂದು ಕಪಿಲೆಬಾನೆ ಹೊಲಿಸಿಕೊಂಡು ಬರಲು ಹೋದಾಗ ಸ್ವಾಮಿ ಹಟ್ಟಿ ಒಳಗೆ ಬಂದೀರ ಹಾಗೆ ಮನೆಗೆ ಬನ್ನಿ ಪ್ರಸಾದ ಸ್ವೀಕರಿಸಿ ನಮ್ಮ ಮನೆ ಪಾವನವಾಗುತ್ತೆ ಎಂದು ಹೇಳಿದಾಗ ಆಯಿತು ಎಂದು ಹೇಳಿ ಅವರ ಮನೆಯಲ್ಲಿಯೇ ಶಿವಪೂಜೆಗೆ ಕುಳಿತುಕೊಳ್ಳುತ್ತಾರೆ. ಫಣಿಯಪ್ಪ ಸ್ವಾಮಿಗಳು ಇಷ್ಟೊತ್ತಾದ್ರು ಬರಲಿಲ್ಲ ಎಂದು ಹಟ್ಟಿಗೆ ಹೋದಾಗ ಸ್ವಾಮಿಗಳು ಶಿವಪೂಜೆಗೆ ಕುಳಿತಿರುವುದನ್ನು ಕಂಡು ಆಶ್ಚರ್ಯವಾಗುತ್ತಾರೆ. ಫಣಿಯಪ್ಪ ಯಾಕಯ್ಯ ಬಾನೆ ಹೊರಗೆ ಹಾಕಿದ್ದೀಯ ಎಂದಾಗ ಇಲ್ಲ ಸ್ವಾಮಿಗಳು ಒಳಗೆ ಶಿವಪೂಜೆಗೆ ಕುಳಿತಿದ್ದಾರೆ ಎಂದಾಗ ಫಣಿಯಪ್ಪನಿಗೆ ಸಿಟ್ಟು ಬರುತ್ತದೆ. ಸ್ವಾಮಿಗಳು ಹೆಂಗೆ ನಿಮ್ಮ ಕೀಳು ಜಾತಿಯ ಮನೆಯಲ್ಲಿ ಕುಳಿತುಕೊಳ್ಳುತ್ತಾರೆ ಎಂದಾಗ ಇಲ್ಲ ಸ್ವಾಮಿ ನೋಡಿ ಎಂದು ಹೇಳಿದಾಗ ಸ್ವಾಮೀಜಿಗಳು ಪೂಜೆಗೆ ಕುಳಿತಿರುವುದನ್ನು ಕಂಡು ಆಶ್ಚರ್ಯವಾಗಿ ಫಣಿಯಪ್ಪನಿಗೆ ಸ್ವಾಮಿಯ ಬಗ್ಗೆ ಬೇಸರವಾಗುತ್ತದೆ. ಅದನ್ನು ಹೆಂಡತಿ ಹತ್ತಿರಹೋಗಿ ಹೇಳುತ್ತಾನೆ.

ಸ್ವಾಮಿಗಳು ಬಂದರೆ ಒಳಗೆ ಬಿಟ್ಟುಕೋ ಬೇಡ. ಹಾಳಾದವನು ಮಾದಿಗರ ಮನೆಯಲ್ಲಿ ಕುಳಿತು ಶಿವಪೂಜೆ ಮಾಡುತ್ತಾನೆ. ನಮ್ಮ ಜಾತಿಗೆ ಕಳಂಕ ತಂದುಬಿಟ್ಟ ಎಂದು ಬೈಯುತ್ತಿರುವಾಗ ಗಂಗೆಮಾಳವ್ವ ಇದೇನು ಸ್ವಾಮಿಗಳು ಒಳಗೆ ಪೂಜೆ ಮಾಡಿ ಪ್ರಸಾದ ಸ್ವೀಕರಿಸಿದರು ಎಂದು ಹೇಳಿದ್ದನ್ನು ಕೇಳಿದಾಗ ಆಶ್ಚರ್ಯವಾಗುತ್ತದೆ. ಆಗ ಫಣಿಯಪ್ಪನಿಗೆ ಜ್ಞಾನೋದಯವಾಗುತ್ತದೆ. ಎಲ್ಲಾ ಕಡೆಗೂ ದೇವರಿದ್ದಾನೆ. ಆ ಜಾತಿ, ಈ ಜಾತಿ ಯಾವುದು ಇಲ್ಲ ಎಂದು ಹೇಳಿ ಸಮಾನತೆಯನ್ನು ತೋರಿಸುತ್ತಾನೆ.

ಜೀವ ಸಮಾಧಿ

ಫಣಿಯಪ್ಪನಿಗೆ ಸ್ವಾಮಿಗಳು ಜೀವಸಮಾಧಿಯಾಗುವುದು ಗೊತ್ತಾಗುತ್ತದೆ. ಫಣಿಯಪ್ಪ ಮಾಳವ್ವನಿಗೆ ನಾಳೆ ಸ್ವಾಮಿಗಳು ಜೀವ ಸಮಾಧಿ ಆಗುತ್ತಾರೆ (ಪಾಲ್ಗುಣ ಬಹುಳ ಚಿತ್ತ ನಕ್ಷತ್ರದಲ್ಲಿ) ಎಂದು ಹೇಳಿದಾಗ ತುಂಬಾ ದುಃಖ ಪಡುತ್ತಾರೆ. ಸ್ವಾಮಿ ನೀವು ಇಷ್ಟು ದಿನಗಳ ಕಾಲ ನಮ್ಮ ಜೊತೆಗಿದ್ದು ನಮ್ಮ ಬದುಕಿಗೆ ದಾರಿದೀಪವಾಗಿದ್ದೀರಿ. ಈಗ ನಮ್ಮನ್ನು ಯಾರು ರಕ್ಷಿಸುತ್ತಾರೆ. ನಮಗೆ ಯಾರು ದಿಕ್ಕು. ನಮ್ಮನ್ನು ಮುಂದೆ ನಡೆಸುವವರ್ಯಾರು ಎಂದಾಗ ಸ್ವಾಮಿಗಳು ಜೊತೆಯಲ್ಲಿ ಕರೆದುಕೊಂಡು ಹೋಗಿ ಸಂಜೆ ಸ್ನಾನ ಮಾಡುವಾಗ ಫಣಿಯಪ್ಪ ನನ್ನ ಬೆನ್ನು ಉಜ್ಜು ಎಂದು ಹೇಳಿದರು. ಫಣಿಯಪ್ಪ ಬೆನ್ನುಜ್ಜಿದಾಗ ಸ್ವಾಮಿಗಳ ಬೆನ್ನಿನಿಂದ ಒಂದು ತೆಂಗಿನಕಾಯಿ ಗಾತ್ರದಷ್ಟು ಮಣ್ಣು ಬರುತ್ತದೆ. ಆಗ ಭಕ್ತನಾದ ಫಣಿಯಪ್ಪನಿಗೆ ಆಶ್ಚರ್ಯವಾಗುತ್ತದೆ. ಇದೇನು ಸ್ವಾಮಿ, ನಿಮ್ಮ ಮೈಯಲ್ಲಿ ಇಷ್ಟು ಮಣ್ಣು ಎಂದಾಗ ಅದನ್ನು ಲಿಂಗ ಮಾಡಿ ಕೊಟ್ಟು 'ಇದು ನನ್ನ ಪ್ರತಿರೂಪ' ಮಹಾಂತೇಶ್ವರ ಲಿಂಗ ಶೈತಿಕಲಿಂಗ ಎಂದು ಕರೆಯುತ್ತಾರೆ. ಇಷ್ಟು ದಿನ ನನಗೆ ಯಾವ ತರಹ ನಡೆದುಕೊಳ್ಳುತ್ತಿದಿಯೋ ಅದೇ ಭಕ್ತಿಯಿಂದ ಪೂಜೆ ಮಾಡು. ಎಷ್ಟು ನಡಕೊಳ್ಳುತ್ತಿಯೋ ಅಷ್ಟು ಪಡಕೊಳ್ಳುತ್ತಿಯ ಎಂದು ಹೇಳಿದರು. ಆ ಶಿವಲಿಂಗವನ್ನು ಪ್ರಧಾನ ಮಾಡಿಬಿಟ್ಟು ಊರ ಹೊರಗೆ ಬಂದು ಜೀವಸಮಾಧಿಯಾಗುತ್ತಾರೆ.

(ಫಣಿಯಪ್ಪಗೆ ಸಮಾಧಿಯಾಗಿ ೩ ದಿನಗಳವರೆಗೆ ಯಾರು ಸಮಾಧಿಯನ್ನು ತೆರೆಯಬಾರದು. ಮುಟ್ಟಬಾರದು) ಎಂದು ಹೇಳಿರುತ್ತಾರೆ. ಫಣಿಯಪ್ಪ ಸ್ವಾಮಿಯ ಜೊತೆ ಯಾವಾಗಲೂ ಇರುತ್ತಿರುವುದರಿಂದ

ಅವರ ಅಗಲುವಿಕೆ ನೋವು ತಾಳಲಾರದೆ ಸ್ವಾಮಿಗಳು ಏನಾಗಿದ್ದರೋ ಏನೋ ಎಂದು ನೋಡಬೇಕು ಎಂದು ಹೋಗಿ ಸಮಾಧಿಯ ಬಾಗಿಲನ್ನು ತೆರೆದಾಗ ಸ್ವಾಮಿಗಳು ಧ್ಯಾನಾಸಕ್ತರಾಗಿರುವಾಗ ಶಾಪ ಕೊಡುತ್ತಾರೆ. ನಿನ್ನವಂಶ ನಿರ್ವಂಶವಾಗಲಿ ಎಂದು ಶಾಪ ಕೊಡುತ್ತಾರೆ. ಆಗ ನನ್ನ ಶಾಪ ಎಂದು ಹುಸಿಯಾಗುವುದಿಲ್ಲ. ಆದ್ದರಿಂದ ನಿನ್ನ ವಂಶ ಪೂರ್ತಿ ವೃದ್ಧಿಸುವುದು ಬೇಡ ನಾಶವಾಗುವುದು ಬೇಡ ವಂಶಕ್ಕೆ ಒಬ್ಬ ಪುತ್ರ ಸಾಕು ಎಂದು ಹೇಳುತ್ತಾರೆ.

ಕೆಲ ದಿನಗಳ ನಂತರ ಸ್ವಾಮಿಯ ಚಿಂತೆಯಲ್ಲಿ ಫಣಿಯಪ್ಪನಿಗೆ ಆರೋಗ್ಯ ಸರಿಯಿರುವುದಿಲ್ಲ. ಆಗ ಕೆಲಸ ಮಾಡಲು ಫಣಿಯಪ್ಪ ಬೇಡ ಜನಾಂಗದವರನ್ನು ಮನೆಯಲ್ಲಿ ಕೆಲಸಕ್ಕೆ ನೇಮಿಸಿಕೊಂಡಿರುತ್ತಾನೆ. ಫಣಿಯಪ್ಪ ಸಮಾಧಿ ಕಡೆ ಹೋಗಿ ನೋಡಿಕೊಂಡು ಬಾ ೩ ದಿನವಾಯ್ತು ದೀಪ ಆರಿದಿಯೋ ಉರಿಯುತಿದಿಯೋ ಎಂದು ಹೇಳಿದಾಗ ಆಗಲಿ ಎಂದು ಬಂದು ನೋಡಿದಾಗ ದೀಪ ಆರಿಹೋಗುವ ಸ್ಥಿತಿಯಲ್ಲಿತ್ತು. ದೀಪಕೆ ಎಣ್ಣೆ ಹಾಕಿ ಸ್ವಾಮಿ ನನತಾಕಿರೋ ದೇವರು ಒಬ್ಬನೆ ನಿನ್ನತಾಕಿರೋ ದೇವರು ಒಬ್ಬನೇ ಎಂದಿದ್ದೀಯ. ಆದ್ದರಿಂದ ದೀಪವನ್ನು ಅಂಟಿಸಿದೆ ತಪ್ಪಾದರೆ ಕ್ಷಮಿಸು ಎಂದು ಹೇಳಿದಾಗ ತಿಪ್ಪೆಸ್ವಾಮಿಯವರು ನನ್ನ ಸಮಾಧಿ ಸೇವೆ ನಿನಗೆ ಮೀಸಲು ಎಂದು ಹೇಳಿದರು. ಅಂದಿನಿಂದ ಇಂದಿನವರೆಗೆ ಬೇಡ ಜನಾಂಗದ ವಂಶಸ್ಥರು ಸಮಾಧಿ ಪೂಜೆಯನ್ನು ಮಾಡುತ್ತಾ ಬಂದಿದ್ದಾರೆ.

ಸ್ವಾಮಿಗಳು ಜೀವಸಮಾಧಿಯಾಗುವುದಕ್ಕೂ ಒಂದು ಕಾರಣವಿದೆ. ಹಾಗೆಲ್ಲ ತುಂಬಾ ಸಂತೃಪ್ತಿಯಾದ ಕಾಲವಾಗಿತ್ತು. ಮಳೆ ತುಂಬಾ ಚೆನ್ನಾಗಿತ್ತು. ಸ್ವಾಮಿಗಳು ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿಸಿರುತ್ತಾರೆ ಮೊದಲು ಊರು ಆ ಕಡೆಯಿತ್ತು. (ದೊಡ್ಡ ರಥಯಿರುವ ಸ್ಥಳದಿಂದ ಆ ಕಡೆ ಊರಿತ್ತು) ಊರು ಚಿಕ್ಕದಿತ್ತು. ಸ್ವಾಮಿ ಇಷ್ಟು ದೊಡ್ಡ ಕೆರೆ ಕಟ್ಟಿಸಿದ್ದೀರಾ ಕೆರೆ ಒಡೆದು ಹೋದರೆ ನಮ್ಮನ್ನು ಯಾರು ಕಾಪಾಡುತ್ತಾರೆ ಎಂದಾಗ ಸ್ವಾಮಿಗಳು ಹಾಗಾದರೆ ಊರಿನ ರಕ್ಷಣೆಗಾಗಿ ನಾನೇ ಇರುತೀನಿ ಎಂದು ಹೇಳಿ ಚಿಕ್ಕಕೆರೆ ಹಿಂಭಾಗದಲ್ಲಿ ಬಂದು ಸಮಾಧಿಯಾದರು. ಮೊದಲೆಲ್ಲ ಆ ಸ್ಥಳ ಪೂರ್ತಿ ಗಿಡಮರಗಳಿಂದ ತುಂಬಿ ಹೋಗಿತ್ತು. ಆದ್ದರಿಂದ ಸ್ವಾಮಿಗಳು ಕೆರೆಯ ಹಿಂದೆ ಊರಿನ ರಕ್ಷಣೆಗಾಗಿ ಇಲ್ಲಿ ಜೀವಸಮಾಧಿಯಾಗಿದ್ದಾರೆ.

ಶ್ರೀ ತಿಪ್ಪೇರುದ್ರಸ್ವಾಮಿಯವರು ಮತ್ತು ಫಣಿಯಪ್ಪ ಶಿವನ ಭಕ್ತರಾಗಿದ್ದರಿಂದ ಪೂಜೆ ಮಾಡುವುದು ಇವರ ವಾಡಿಕೆ. ಆ ಕಾರಣಕ್ಕಾಗಿ ದಾರಿಗಳ ಮಧ್ಯೆ ವಿಶ್ರಾಂತಿ ಧಾಮಗಳನ್ನು ನಿರ್ಮಿಸಿಕೊಂಡು ಪೂಜೆ ಮಾಡುತ್ತಿದ್ದರು. ಪೂಜೆ ಮುಗಿಸಿಕೊಂಡು ಸ್ವಾಮಿಗಳು ಬೇಟಿಯಾದರು. (ಇವರೆಲ್ಲರು ರಾಯದುರ್ಗದಲ್ಲಿ ಇಬ್ಭಾಗವಾದರು. ಪಂಚಗಣಾಧೀಶ್ವರರೆಲ್ಲ ಒಬ್ಬೊಬ್ಬರೆಲ್ಲ ಒಂದೊಂದು ಕಡೆ ಹೋದರು. ೪ ಜನರು ಬಳ್ಳಾರಿ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟರೆ ಶ್ರೀ ತಿಪ್ಪೇರುದ್ರಸ್ವಾಮಿಯವರು ಚಿತ್ರದುರ್ಗದ ಕಡೆ ಬಂದು ನೆಲೆಸಿದರು ಎಂಬುದು ವಾಡಿಕೆ. ಇವರು ೪೫ ಕಡೆ ಅಂದರೆ ಎಲ್ಲೆಲ್ಲಿ ಅವರೆಲ್ಲ ಕೂತು ಎದ್ದರೋ ಅವೆಲ್ಲ ಪವಿತ್ರ ಸ್ಥಳಗಳಾಗಿವೆ. ಗುಡಿ ಗೋಪುರಗಳಿವೆ. ಇವರದು ಕೇರಳದಲ್ಲಿಯೂ ಮಠಗಳು ಇರಬಹುದು ಎಂಬ

ಪ್ರತೀತಿ. ಅಲ್ಲಿ ಕೂಡ ಧರ್ಮ ಪ್ರಚಾರಕ್ಕೆ ಹೋಗಿದ್ದರು. ಅಂತ್ಯ ಕಾಲಕ್ಕೆ ನಾಯಕನಹಟ್ಟಿಯನ್ನು ಆಯ್ಕೆ ಮಾಡಿಕೊಂಡರು.

ಮಾರಮ್ಮನಿಗೆ ಬಹಳ ಸಿಟ್ಟುಬಂತು. ಏನಿದು? ದೇವಾಲಯವೇ ಬೆತ್ತ ಜೋಳಿಗೆಯಿಂದ ತುಂಬಿ ಹೋಗಿವೆ ಎಂದಾಗ ಸೂರ್ಯೋದಯ ಸಮಯದಲ್ಲಿ ನೋಡಿದರೆ ಗುಡಿಯ ತುಂಬೆಲ್ಲಾ ಬೆತ್ತ ಜೋಳಿಗೆಗಳೇ ಆಗ ಮಾರಿದೇವತೆ ಅವರನ್ನು ಕುರಿತು "ನೀನು ಮಹಿಮಾಪುರುಷನಪ್ಪ ನೀನೇ ಇಲ್ಲಿ ಇದ್ದು ಲೋಕೋದ್ಧಾರ ಮಾಡು" ಎಂದು ಹೇಳಿ ಶರಣಾಗತಳಾಗಿ ವಡ್ಡನಹಳ್ಳಿಗೆ ತೆರಳಿದಳು. ಇದೇನಪ್ಪ ಸ್ವಾಮಿ ಎಂದು ಕೇಳಿದಾಗ ಇಲ್ಲಿ ನಿನ್ನ ಪ್ರಭಾವ ಕಡಿಮೆಯಾಗಿದೆ. ಈ ಕ್ಷೇತ್ರ ಮಹಾ ಪುಣ್ಯಕ್ಷೇತ್ರವಾಗಲಿದೆ. ನೀನು ಇಲ್ಲಿಂದ ಮುಂದೆ ವಡ್ಡನಹಹಳ್ಳಿಗೆ ಹೋಗು ಎಂದು ಶ್ರೀ ತಿಪ್ಪೇಸ್ವಾಮಿ ಹೇಳಿದರು. ವಡ್ಡನಹಳ್ಳಿ ಎಂಬ ಗ್ರಾಮ ಚಿತ್ರದುರ್ಗ ತಾಲೂಕಿನಲ್ಲಿ ಬರುತ್ತದೆ. ಜಗಳೂರು ಮಾರ್ಗವಾಗಿ ಚಿತ್ರದುರ್ಗಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ವಡ್ಡನಹಳ್ಳಿ ಸಿಗುತ್ತದೆ. ಅಲ್ಲಿ ವಡ್ಡನಹಳ್ಳಿ ಮಾರಮ್ಮ ಎಂದು ತುಂಬಾ ವಿಶೇಷವಾಗಿ ಆರಾಧನೆ ನಡೆಯುತ್ತದೆ.

ಮಾರಮ್ಮನನ್ನು ಊರು ಬಿಟ್ಟು ಕಳುಹಿಸಿ ಮುಂದೆ ಸ್ವಾಮೀಜಿಗಳು ಮಠ ಮಾಡಿಕೊಂಡು ಬಂದ ಭಕ್ತರಿಗೆ ಆರ್ಶೀವಾದ ಮಾಡಿಕೊಂಡಿದ್ದರು. ಇದನ್ನು ದರ್ಬಾರು ಮಠ ಮಾಡಿಕೊಂಡಿದ್ದರು. ಇದರಲ್ಲಿ ಸುಮಾರು ೩ ಮಠ ಬರುತ್ತವೆ. ಈಗಿರುವ ಮಠ ದರ್ಬಾರು ಮಠ, ಒಳಮಠ.

ಅಧ್ಯಾಯ - ೫

ಆಚರಣೆಗಳು

ಆಚರಣೆಗಳು

ಮಾನವ ಬದುಕಿನುದ್ದಕ್ಕೂ ಹಲವಾರು ಸಂಪ್ರದಾಯಗಳಿಗೆ ಬದ್ಧನಾಗಿ ಬದುಕುತ್ತಾನೆ. ಅನೇಕ ಸಂಪ್ರದಾಯದ ಕೊಂಡಿಗಳು ಅವನ ಜೀವಿತಾವಧಿಯಲ್ಲಿ ಆತನನ್ನು ಬೆಳೆಸುತ್ತವೆ. ದೇವರ ಸೇವೆಗಳು, ಹರಕೆಗಳು ಹಾಗೂ ನಂಬಿಕೆಯ ಫಲವೇ ಆಚರಣೆ. ಈ ಆಚರಣೆಗಳು ಮಾನವನಿಗೆ ಕಷ್ಟನಷ್ಟ ಒದಗಿಸಿದಾಗ ಪರಿಹಾರಾರ್ಥವಾಗಿ ದೇವತೆಗೆ ಕಟ್ಟಿದ ಮುಡುಪಿನ ಅಥವಾ ಹರಕೆಯ ಕಾರಣಕ್ಕೆ ನಡೆಸಲ್ಪಡುತ್ತವೆ. ಆಚರಣೆಗಳು ದೈವ ಹಾಗೂ ಮಾನವನ ನಡುವಿನ ಸಂಬಂಧವನ್ನು ಮತ್ತಷ್ಟು ಗಾಢಗೊಳಿಸಿವೆ. ಒಂದೊಂದು ಸಂಸ್ಕಾರದಲ್ಲೂ ಹಲವು ವಿಧಿ ಆಚರಣೆಗಳಿರುವುದನ್ನು ನಾವು ಗಮನಿಸಬಹುದು. ಧರ್ಮ-ಸಂಪ್ರದಾಯ, ನಂಬಿಕೆ-ಆಚರಣೆಗಳ ನಡುವಿನ ಸಂಬಂಧವನ್ನು ಹೀಗೆ ವಿವರಿಸಬಹುದು. "ಯಾವುದೇ ಧರ್ಮ ಅನೇಕ ಸಂಪ್ರದಾಯ"ಗಳಿಂದ ಕೂಡಿರುತ್ತದೆ. "ಸಂಪ್ರದಾಯಗಳು" ಆಚರಣೆಗಳ ರೂಪದಲ್ಲಿ ಕಂಡುಬರುತ್ತವೆ. "ಆಚರಣೆಗಳು" ಅನೇಕ 'ವಿಧಿ'ಗಳಿಂದ ಕೂಡಿರುತ್ತವೆ. ವಿಧಿಗಳು ನಂಬಿಕೆಗಳಿಂದ ಸುತ್ತುವರೆದಿರುತ್ತವೆ. ಈ ಎಲ್ಲದರ ಕ್ರಿಯಾತ್ಮಕ ಅಭಿವ್ಯಕ್ತಿಯೇ "ನಡವಳಿಕೆ ಎನಿಸುತ್ತದೆ". ಹೀಗೆ ಧರ್ಮ, ವಿಧಿ, ಸಂಪ್ರದಾಯ, ನಂಬಿಕೆ, ಹರಕೆಗಳೇ ಆಚರಣೆಗೆ ಪ್ರೇರಕಶಕ್ತಿಗಳಾಗಿವೆ. ಸಮಷ್ಟಿಯ ಹಿತರಕ್ಷಣೆಗಾಗಿ ಸಾಮಾನ್ಯವಾಗಿ ವರ್ಷಕ್ಕೊಂದು ಸಲ ವಿಶೇಷ ಸಂದರ್ಭದಲ್ಲಿ ಆಚರಿಸುವ ಸಂಪ್ರದಾಯ, ಆಚರಣೆಗಳನ್ನು ಹಬ್ಬ ಎಂದು ಕರೆಯಬಹುದು. ಹೀಗೆ ಆಚರಣೆಗಳಲ್ಲಿ ಕಂಡುಬರುವ ವಿಶಿಷ್ಟ ಮಹತ್ವಗಳ ಅರಿವಾಗುತ್ತದೆ.

ಆಚರಣೆಗಳು

ಮತಧರ್ಮಗಳಿಗೆ ಸಂಬಂಧಿಸಿದಂತೆ ನಡೆಸುವ ಕ್ರಿಯೆ ಹಾಗೂ ವಿಧಿಗಳಿಗೆ ಆಚರಣೆ ಎನ್ನಬಹುದು. ಆಚರಣೆ ಒಂದು ಸಂಸ್ಕೃತಿಯ ಪ್ರತಿಬಿಂಬ. ಒಂದು ಸಂಸ್ಕೃತಿಯನ್ನು ಅರಿತುಕೊಳ್ಳಬೇಕಾದರೆ ಆ ಸಂಸ್ಕೃತಿಗೆ ಸಂಬಂಧಿಸಿದ ಆಚರಣೆಯನ್ನು ತಿಳಿದುಕೊಳ್ಳುವ ಅಗತ್ಯವಿದೆ. ಆಚರಣೆಗಳು ಕಾಲದಿಂದ ಕಾಲಕ್ಕೆ ವ್ಯಕ್ತಿಗೆ ಹರಿದುಬಂದು ಆಚರಿಸಲ್ಪಡುತ್ತವೆ. ಜನಪದ ಧರ್ಮ, ನಂಬಿಕೆ, ಪುರಾಣಕಲ್ಪನೆ ಇವುಗಳೆಲ್ಲವೂ ಆಚರಣೆಯ ಆಧಾರದಿಂದಲೇ ಇಂದಿನವರೆಗೂ ನಡೆದುಕೊಂಡು ಬಂದಿವೆ.

ಆಚರಣೆಗಳನ್ನು ಈ ಮುಂದೆ ಸೂಚಿಸಿದಂತೆ ವಿಭಾಗಿಸಬಹುದು.

ವೈಯಕ್ತಿಕ ಆಚರಣೆ: ವೈಯಕ್ತಿಕವಾದ ಕಾರಣದಿಂದ ಅಂದರೆ ವ್ಯಕ್ತಿಗತ ನಂಬಿಕೆಯಿಂದ ನಡೆಯುವ ಆಚರಣೆಗಳು ವೈಯಕ್ತಿಕ ಆಚರಣೆಗಳು. ಉದಾ: ಬಾಯಿಬೀಗ

ಕೌಟುಂಬಿಕ ಆಚರಣೆಗಳು: ಕುಟುಂಬದ ಯೋಗಕ್ಷೇಮದ ಕಾರಣಕ್ಕಾಗಿ ನಡೆಸುವ ಆಚರಣೆಗಳಿಗೆ ಕೌಟುಂಬಿಕ ಆಚರಣೆಗಳು ಎನ್ನುತ್ತಾರೆ. ಉದಾ: ಮುಡಿಕೊಡುವುದು.

ಸಾಮೂಹಿಕ ಆಚರಣೆ: ಎಲ್ಲಾ ಸಮುದಾಯದವರು ಸೇರಿ ಒಟ್ಟಿಗೆ ಆಚರಿಸುವ ಆಚರಣೆಗೆ ಸಾಮೂಹಿಕ ಆಚರಣೆ ಎನ್ನುತ್ತಾರೆ. ಉದಾ: ದೀಪಾರತಿ ಮತ್ತು ಅಭಿಷೇಕ.

ಸಾಮಾಜಿಕ ಆಚರಣೆ: ಒಂದು ನಿರ್ದಿಷ್ಟ ಸಮಾಜದ ಹಾಗೂ ಒಂದು ನಿರ್ದಿಷ್ಟ ವರ್ಗದ ಜನರಿಗೆ ಸೀಮಿತವಾದ ಆಚರಣೆಗಳು ಸಾಮಾಜಿಕ ಆಚರಣೆ. ಉದಾ: 'ಬಲಿ'.

ಧಾರ್ಮಿಕ ಆಚರಣೆ: ಧರ್ಮ ಸಂಬಂಧಿ ಆಚರಣೆಗಳೇ ಧಾರ್ಮಿಕ ಆಚರಣೆಗಳು. ಇವು ನಿಗದಿತ ಧರ್ಮ ಹಾಗೂ ನಂಬಿಕೆಗೆ ಸಂಬಂಧಿಸಿರುವಂತಹ ಆಚರಣೆಗಳು. ಉದಾ. ಹರಕೆ.

ಬಹುತೇಕ ಆಚರಣೆಗಳಿಗೆ 'ಹರಕೆ' ಹಾಗೂ ನಂಬಿಕೆಗಳು ಮೂಲ ಕಾರಣವಾಗಿವೆ. ಹರಕೆ ಆಚರಣೆಯ ಪ್ರಮುಖ ಅಂಗವಾದರೆ ನಂಬಿಕೆ ಹರಕೆಯ ಅಡಿಪಾಯ ಅಥವಾ ತಳಹದಿ.

ಒಟ್ಟಿನಲ್ಲಿ ಮಾನವ ನಂಬಿಕೆಯ ಆಧಾರದ ಮೇಲೆ ಹರಕೆಯನ್ನು ಕಟ್ಟುತ್ತಾನೆ. ಆ ಹರಕೆಯನ್ನು ಹಬ್ಬ ಹರಿದಿನಗಳಲ್ಲಿ ಅಥವಾ ಜಾತ್ರೆಗಳಲ್ಲಿ ಆಚರಣೆಗೆ ತರುತ್ತಾನೆ. ಹೀಗೆ ಆಚರಣೆಗಳು ಅಸ್ತಿತ್ವಕ್ಕೆ ಬರುತ್ತವೆ. ಹೀಗೆ ಹರಕೆ ಹೊರುವುದು ಅಪರೂಪವಾದ ಮತ್ತು ವಿಶೇಷವಾದ ಸಂದರ್ಭಗಳಲ್ಲಿ ಮಾತ್ರ. ಸಂಪ್ರದಾಯ, ಹಬ್ಬ, ಆಚರಣೆಗಳನ್ನು ಒಳಗೊಂಡು ಮೂರಕ್ಕೂ ನಂಬಿಕೆಯೇ ಜೀವದಾತು. ಆಚರಣೆಗಳು ಬಹುತೇಕ ಧಾರ್ಮಿಕ ಮತ್ತು ದೈವಿಕ ಸಂಸ್ಪರ್ಶವನ್ನು ಪಡೆದಿರುತ್ತವೆ. ನಿತ್ಯ ಜೀವನದಲ್ಲಿ ವ್ಯಕ್ತಿಗತ ಬದುಕು ಅನೇಕ ಸಂಕ್ರಮಣಗಳಿಗೆ ಒಳಗಾಗುತ್ತವೆ. ಇಂತಹ ಸಂಕ್ರಮಣಗಳು ಜೀವನದಲ್ಲಿ ನಡೆಯದಿರುವಂತೆ ಮಾನವ ಎಚ್ಚರವಹಿಸುತ್ತಾನೆ. ಇಂತಹ ಎಚ್ಚರಗಳು, ಕಾಳಜಿಗಳೇ ಅನೇಕ ಆಚರಣೆಗಳ ಹುಟ್ಟಿಗೆ ಕಾರಣವಾಗಿವೆ.

ಈ ಆಚರಣೆಗಳು ವಿಶೇಷವಾದ ಸಂದರ್ಭಗಳಲ್ಲಿ ಆಚರಿಸಲ್ಪಟ್ಟಾಗ ಹಬ್ಬಗಳಾಗುತ್ತವೆ. ಈ ಹಬ್ಬಗಳಿಗೆ ವ್ಯಾಪಾರ ವಾಣಿಜ್ಯದ ಸ್ಪರ್ಶವಾದಾಗ ಅದು ಜಾತ್ರೆಯ ಸ್ವರೂಪ ಬರುತ್ತದೆ. ಜನಪದ ನಂಬಿಕೆಯನ್ನು ಹೊಂದಿರುವ ಗ್ರಾಮೀಣರು ಆಚರಣೆಗಳನ್ನು ನಂಬಿಯೇ ಜೀವನ ನಡೆಸುತ್ತಾರೆ.

ಸಮಾಜದ ಒಳತಿಗಾಗಿ ಸಾಮಾಜಿಕ ಹೊಂದಾಣಿಕೆಗಾಗಿ ವಿಶೇಷ ದಿನಗಳಲ್ಲಿ ಜನರು ಸಂಭ್ರಮೋತ್ಸಾಹಗಳಿಂದ ನಡೆಸುವ ಸಂಪ್ರದಾಯಾಚರಣೆಗಳೇ ಹಬ್ಬ, ಜಾತ್ರೆಗಳು. ಈ ಜಾತ್ರೆಯಲ್ಲಿ ದೈವ ಹಾಗೂ ಧರ್ಮ ಸಂಬಂಧಿ ಆಚರಣೆಗಳು ಮುಖ್ಯ. ದೈವ ಸಂಬಂಧವಾದ ಆಚರಣೆಗಳು ಧಾರ್ಮಿಕವಾಗಿ ಅನುಷ್ಠಾನಗೊಳ್ಳಬೇಕು. ಇದರಿಂದ ಸಾಮಾಜಿಕ, ರಾಜಕೀಯ ಭಾಂದವ್ಯಗಳು ಉತ್ತಮಗೊಳ್ಳುತ್ತವೆ. ಅನೇಕ ಮಂದಿ ಒಟ್ಟಿಗೆ ಒಂದೆಡೆ ಕಲೆತು ವಿಚಾರ ವಿನಿಮಯ ನಡೆಸಲು ಸುಖ ದುಃಖಗಳನ್ನು ಹಂಚಿಕೊಳ್ಳಲು ಈ ಜಾತ್ರೆ ಒಂದು ಸಾಧನ. ಹೀಗೆ ಸೇರುವುದರಿಂದ ಅನ್ಯರ ಧರ್ಮ ಆಚರಣೆಗಳ ಅರಿವು ಇತರರಿಗೂ

ಆಗುವುದಲ್ಲದೆ, ಎರಡು ಮತದವರ ನಡುವೆ ಬಾಂಧವ್ಯ ಏರ್ಪಡಿಸಲು ಕಾರಣವೂ ಆಗುತ್ತದೆ. ಆಚರಣೆಗಳು ವಿಶಿಷ್ಟವಾದ್ದರಿಂದ ಅವುಗಳಿಗೆ ಸ್ಥಳೀಯ ಮಹತ್ವವಿದೆ.

ಒಟ್ಟಿನಲ್ಲಿ ಅಗೋಚರವಾದ ಶಕ್ತಿಗಳನ್ನು ವಶಪಡಿಸಿಕೊಳ್ಳಲು ಅವುಗಳ ಕ್ರೂರ ದೃಷ್ಟಿಯಿಂದ ಪಾರಾಗಲು ಆಚರಣೆಗಳಲ್ಲಿ ನಂಬಿಕೆಯಿಟ್ಟಿದ್ದಾನೆ. ಸಮಾಜದ ಎಲ್ಲಾ ಸ್ತರಗಳಲ್ಲೂ ನಂಬಿಕೆ ಹಾಗೂ ಆಚರಣೆಗಳು ಅಸ್ತಿತ್ವದಲ್ಲಿವೆ. ಆಚರಣೆಗಳಲ್ಲಿ ಕೆಲವು ನೈತಿಕವಾಗಿ ಕೆಲವು ಶಾಸ್ತ್ರೋಕ್ತವಾಗಿ ಮತ್ತೆ ಕೆಲವು ಮೂಢನಂಬಿಕೆಗಳ ಆಧಾರದ ಮೇಲೆ ಬೆಳೆದುಬಂದಿವೆ.

* ರೋಗ ನಿವಾರಕ ಆಚರಣೆಗಳು
* ಮಳೆ, ಬೆಳೆ, ಭೂಮಿಗಳಿಗೆ ಸಂಬಂಧಿಸಿದ ಆಚರಣೆಗಳು.
* ಹಬ್ಬ, ಜಾತ್ರೆ, ಉತ್ಸವ, ತೇರುಗಳಿಗೆ ಸಂಬಂಧಿಸಿದ ಆಚರಣೆಗಳು
* ಇನ್ನು ಕೆಲವು ವಿಶಿಷ್ಟ ಆಚರಣೆಗಳು

ಆಚರಣೆಗಳ ಬಗ್ಗೆ ಹೇಳಿದಷ್ಟು ಸಾಲದು. ಮಾನವ ಜನನದಿಂದ ಮರಣದವರೆಗೆ ಅನೇಕ ಆಚರಣೆಯ ವಿಧಾನಗಳನ್ನು ಅನುಸರಿಸುವುದನ್ನು ಕಾಣಬಹುದು. ಆಚರಣೆಯ ಉದ್ದೇಶ ಭಿನ್ನವಾಗಿರುತ್ತದೆ. ವೈಯಕ್ತಿಕ ಕಾರಣಗಳನ್ನು ಮೊದಲುಗೊಂಡು ಮಳೆ, ಬೆಳೆಗಳಿಗಾಗಿ ನಡೆಸುವ ಈ ಆಚರಣೆಗಳಲ್ಲಿ ಊರುಕೇರಿಯ ಒಳಿತಿಗೆ ಸಂಬಂಧಿಸಿದ ಧ್ಯೇಯೋದ್ದೇಶಗಳಿವೆ. ಪ್ರಾದೇಶಿಕವಾಗಿ ಆಚರಣೆಗಳು ಭಿನ್ನವಾಗಿದ್ದರೂ ಉದ್ದೇಶ ಒಂದೇ. ಪ್ರತಿಯೊಂದು ಆಚರಣೆಯೂ ಸಾಂಕೇತಿಕವಾದ ಅರ್ಥವನ್ನು ಹೊಂದಿರುತ್ತದೆ. ಸಂಸ್ಕೃತಿ ಭಿನ್ನವಾದರೂ, ಭಾಷೆ ಭಿನ್ನವಾದರೂ ಆಚರಣೆಗಳ ಮಹತ್ವ ಇಂದಿಗೂ ಪ್ರಸ್ತುತವಾಗಿದೆ.

ಆಚರಣೆಗಳು ಹಲವಾರು ಕಾರಣಗಳಿಂದ ಬೇಸಿಗೆ ಕಾಲದ ಏಪ್ರಿಲ್ ಹಾಗೂ ಮೇ ತಿಂಗಳಲ್ಲಿ ನೆರವೇರುತ್ತವೆ. ಈ ತಿಂಗಳು ಹಬ್ಬ ಹಾಗೂ ಜಾತ್ರೆಗಳಿಗೆ ಪ್ರಾಶಸ್ತ್ಯವಾಗಿದ್ದು, ಬಹುತೇಕ ಆಚರಣೆಗಳು ಹುಣ್ಣಿಮೆಯ ರಾತ್ರಿಯಲ್ಲಿ ನಡೆಯಲ್ಪಡುತ್ತವೆ. ಹುಣ್ಣಿಮೆ ಬೆಳದಿಂಗಳು ಸುಖ, ಸಮೃದ್ಧಿ, ಶಾಂತಿಯ ಸಂಕೇತವಾಗಿದೆ. ಹಳ್ಳಿಯ ಜನ ಸುಗ್ಗಿಯಾಚರಿಸುವ ಕಾಲವಿದು. ವರ್ಷವೆಲ್ಲ ದುಡಿದು ಫಸಲನ್ನು ಪಡೆದ ಶ್ರಮಿಕ ತನ್ನ ಶ್ರಮದಾಹ ಹಿಂಗಿಸಿಕೊಳ್ಳಲು ನಡೆಸುವ ಆಚರಣೆಗಳಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಚರಣೆಗಳೇ ಹೆಚ್ಚು. ಇವು ಸಂಸ್ಕೃತಿಯನ್ನು ಬಿಂಬಿಸುವ ಜೊತೆಗೆ ಮನೋಲ್ಲಾಸವನ್ನು ನೀಡುತ್ತ ಬಂದಿವೆ. ದೇವರ ಸ್ಮರಣೆಯ ಜೊತೆ ಜೊತೆಗೆ ಬಂಧು ಬಾಂಧವರ ಸಾಮೀಪ್ಯವನ್ನು ಒದಗಿಸುತ್ತವೆ. ಹಬ್ಬ ಮತ್ತು ಆಚರಣೆಗಳು ನಿಗಧಿತ ಸಮಯದಲ್ಲಿ ಆಚರಿಸಲ್ಪಡುತ್ತವೆ. ಆಚರಣೆಗಳಿಂದ ಮಾನಸಿಕ ತೃಪ್ತಿ ದೊರಕುವುದಲ್ಲದೆ ಇಡೀ ವರ್ಷ ದಣಿದ ಮನಸ್ಸುಗಳಿಗೆ ಸುಗ್ಗಿಯ ಕಾಲ ಇದಾಗಿದೆ. ಸ್ತ್ರೀ ಪುರುಷರು ಸಂತೃಪ್ತಿಯಿಂದ ಕೂಡಿ ನಲಿದು ಈ ಆಚರಣೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಹೀಗೆ ಆಚರಣೆಗಳು ಮಾನವನ ಮಾನಸಿಕ, ಭೌತಿಕ ಅಗತ್ಯವಾಗಿ ಬೆಳೆದು ಉಳಿದುಕೊಂಡಿವೆ.

ನಾಯಕನಹಟ್ಟಿ ತಿಪ್ಪೇಸ್ವಾಮಿ ಆಚರಣೆಗಳು

ಸೋಮವಾರದ ಪೂಜೆ ತುಂಬಾ ವಿಶೇಷವಾಗಿರುತ್ತದೆ. ವಿಶೇಷವೆಂದರೆ ಪಲ್ಲಕ್ಕಿ ಉತ್ಸವವೊಂದೆ. ಪ್ರತಿದಿನ ವಿಶೇಷ ಕಾರ್ಯಕ್ರಮವಿರುತ್ತದೆ. ನಿತ್ಯ ರುದ್ರಾಭಿಷೇಕವಿರುತ್ತದೆ. ಅಂದರೆ ಮೊದಲು ೧೦೦೧ ರೂಪಾಯಿತ್ತು. ಈಗ ೧೫೦೧ ರೂಪಾಯಿ. ಒಂದು ಸಾರಿ ಕಟ್ಟಿದರೆ ಭಕ್ತರು ಇಷ್ಟಪಟ್ಟ ದಿನಾಂಕಕ್ಕೆ ಆ ಹಣವನ್ನು ಠೇವಣಿ ಮಾಡಿಕೊಳ್ಳುತ್ತಾರೆ. ಪ್ರತಿವರ್ಷ ಅದರ ಬಡ್ಡಿ ಹಣದಲ್ಲಿ ಅಭಿಷೇಕ ನಡೆಯುತ್ತದೆ. ಈ ತರಹದ ಅಭಿಷೇಕಗಳು ಪ್ರತಿದಿನ ೩೦-೪೦ ಅಭಿಷೇಕಗಳು ನಡೆಯುತ್ತವೆ. ಭಕ್ತರು ಮೊದಲು ಬಂದು ಅಭಿಷೇಕಕ್ಕೆ ಸಿದ್ಧತೆ ಮಾಡಿಕೊಳ್ಳಲು ಸಾಧ್ಯವಾಗದೆ ಹೋದರೆ ಅಭಿಷೇಕದ ದಿನವೇ ಬಂದು ಅಭಿಷೇಕ ಮಾಡುವುದಕ್ಕೂ ವ್ಯವಸ್ಥೆಯಿರುತ್ತದೆ. ಅದಕ್ಕೆ ೧೫೦ ರೂ ಕೊಟ್ಟು ರಶೀದಿ ಹಾಕಿಸಬೇಕು. ಪ್ರತಿದಿನ ರುದ್ರಾಭಿಷೇಕ ೮-೩೦ ರಿಂದ ೧೦-೩೦ಕ್ಕೆ ಮುಗಿಯುತ್ತದೆ. ಅಭಿಷೇಕ ಮುಗಿಯುತ್ತಿದ್ದ ಹಾಗೆ ದಾಸೋಹ ಆರಂಭವಾಗುತ್ತದೆ. ಬೆಳಿಗ್ಗೆ ೧೦-೩೦ರಿಂದ ಮಧ್ಯಾಹ್ನ ೨-೩೦ರ ವರೆಗೆ ನಡೆಯುತ್ತದೆ.

ಬೆಳಿಗ್ಗೆ ೬ಘಂಟೆಗೆ ಪಾದಪೂಜೆಯಿರುತ್ತದೆ. ನಂತರ ೮-೩೦ರಿಂದ ೧೦-೩೦ಕ್ಕೆ ವಿಶೇಷ ಪೂಜೆ ಮುಗಿಯುತ್ತದೆ. ಆ ನಂತರದಿಂದ ಮೂಲ ಮೂರ್ತಿ ಏನಿದೆಯೋ ಅದಕ್ಕೆ ಮಾತ್ರ ಕರ್ಪೂರದಾರತಿ ನಡೆಯುತ್ತದೆ. ಯಾವುದೇ ರೀತಿಯ ಅರ್ಚನೆ ಮಾಡುವುದಿಲ್ಲ. ಹೆಸರಿನ ಮೇಲೆ ಅರ್ಚನೆಯಾಗಲಿ ಆ ತರಹದ ಪದ್ಧತಿಯೇನು ಇಲ್ಲಿ ನಡೆಯುವುದಿಲ್ಲ. ಅದಕ್ಕೋಸ್ಕರ ಬೇರೆ ವಿಭಾಗವೇ ಮಾಡಿದ್ದಾರೆ. ರುದ್ರಾಭಿಷೇಕದ ಕೊಠಡಿಯಲ್ಲಿ ಮಾತ್ರ ಹೆಸರಿನ ಮೇಲೆ ಅರ್ಚನೆ ನಡೆಯುತ್ತದೆ.

ಮತ್ತೆ ರಾತ್ರಿ ೮ ಗಂಟೆಗೆ ಮಹಾಪೂಜೆಯಿರುತ್ತದೆ. ಸ್ವಾಮಿಗಳದು ಆ ದಿನದ ಕೊನೆಯ ಪೂಜೆ ೮.೩೦ಕ್ಕೆ ಪೂಜೆಮುಗಿಯುತ್ತದೆ. ಪ್ರತಿ ಸೋಮವಾರ ಪಲ್ಲಕ್ಕಿಯಲ್ಲಿ ಉತ್ಸವ ನಡೆಯುತ್ತದೆ.

ಕಾರ್ತಿಕ ಮಾಸ

ಈ ಮಾಸದ ಆಚರಣೆ ಮೊದಲನೆ ಶನಿವಾರ ಶ್ರೀ ಬಂಡೆರಂಗಸ್ವಾಮಿ ದೇವರಿಗೆ ದೀಪ ಹಚ್ಚುವುದರ ಮೂಲಕ ಕಾರ್ತಿಕ ದೀಪೋತ್ಸವವು ಪ್ರಾರಂಭವಾಗುತ್ತದೆ. ಆ ನಂತರ ಬರುವ ಕಾರ್ತಿಕ ಪೂಜೆ, ೨ನೇ ಗುರುವಾರ ಬಿದಿಗೆಯೆಂದು ತಾಳ್ಯದವರ ಕಾರ್ತೀಕ ಪೂಜೆ, ೩ನೇ ಗುರುವಾರ ಪಂದೇಶ ಕಾರ್ತಿಕ ಪೂಜೆ ನಂತರದ ಗುರುವಾರ ಬಹುಳ ದಶಮಿಯಂದು ಬಸವನ ಉಚ್ಚಾಯ (ಸಣ್ಣತೇರು). ಆ ನಂತರದ ಮರುದಿನ ಶುಕ್ರವಾರ ಮಧ್ಯಾಹ್ನ ೩ ಗಂಟೆಗೆ ಈ ಸಣ್ಣತೇರಿನ ಮೇಲೆ ಶ್ರೀ ಸ್ವಾಮಿಯನ್ನು ಬಿಜಯಂಗೈಸಿ ಈ ತೇರನ್ನು ತೇರು ಬೀದಿಯಲ್ಲಿ ಸ್ವಲ್ಪ ದೂರ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತದೆ. ಇದು ಸಣ್ಣ ಕಾರ್ತಿಕಪೂಜೆ ಪದ್ಧತಿಯ ಪ್ರಕಾರ ನಡೆದುಕೊಂಡು ಬಂದಿದೆ. ಈ ಸಣ್ಣ ಕಾರ್ತಿಕ ಮಾಸದ ಪೂಜೆಯ ಸೇವಾಕರ್ತರು ಈ ಗ್ರಾಮದ ಆರ್ಯ ಈಡಿಗ ವಂಶಸ್ಥರು.

ಸಣ್ಣ ಕಾರ್ತಿಕೋತ್ಸವ ನೆರವೇರಿದ ಮುಂದಿನ ಗುರುವಾರ ಅಷ್ಟಮಿಯಂದು "ದೊಡ್ಡ ಕಾರ್ತಿಕೋತ್ಸವ" ನಡೆಯುತ್ತದೆ. ಇದನ್ನು ಏಕಾಂತೇಶ್ವರ ಕಾರ್ತಿಕವೆಂದು ಹೇಳುವುದುಂಟು. ಇದರ ಸೇವಾಕರ್ತರು ಶಿವಪ್ಪಳಿ

ಬಸವರಾಜಪ್ಪನವರು. ಅಂದು ಪೂಜೆಯಾಗುತ್ತಿದ್ದಂತೆಯೇ ೭ ಗಂಟೆಯಿಂದ ಒಳಮಠ, ಹೊರಮಠ, ಏಕಾಂತಮಠ, ಈಶ್ವರ ದೇವಸ್ಥಾನ, ತೇರುಬೀದಿ ಮೊದಲಾದ ಕಡೆಗಳಲ್ಲಿ ದೀಪಗಳ ಜಾಜ್ವಲ್ಯಮಾಸ ಸಂಭ್ರಮವು, ವೈಭವಪೂರಿತವಾಗಿ ರಾರಾಜಿಸುತ್ತವೆ. ಹಿಂದಿನ ದಿನಗಳಲ್ಲಿ ಎಣ್ಣೆಯಿಂದ ದೀಪವನ್ನು ಹಚ್ಚಿ "ಲಕ್ಷದೀಪೋತ್ಸವ"ದ ಆಚರಣೆಯಿತ್ತು. ಇಂದು ಜಾಗತೀಕರಣ, ಆಧುನೀಕರಣದ ಪ್ರಭಾವಕ್ಕೆ ಒಳಗಾಗಿ ಎಣ್ಣೆ ದೀಪಗಳ ಸ್ಥಾನದಲ್ಲಿ ವಿದ್ಯುತ್‌ದೀಪಗಳ ಅಲಂಕಾರವನ್ನು ಕಾಣಬಹುದು. ಅಲಂಕಾರಗಳ ವೈಭವವೂ ದೇವಲೋಕದ ವೈಭವವನ್ನು ನಮ್ಮ ಲೋಕಕ್ಕೆ. ತರುವುದುಂಟು. ಅಷ್ಟು ಮನಸ್ಸಿಗೆ ಆನಂದವನ್ನುಂಟು ಮಾಡಿ ನೋಡುವ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ.

ಅಲಂಕಾರ ಮಾಡಿಕೊಂಡು ರಾಜಮರ್ಯಾದೆಯಿಂದ ಸಕಲ ವಾದ್ಯಗೋಷ್ಠಿಯೊಂದಿಗೆ ಇಲ್ಲಿಂದ ಹೊರಮಠಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಪೂಜೆ ಮಾಡಿ ಪ್ರಸಾದ ಹಂಚಿ ಮತ್ತೆ ಅಲ್ಲಿಂದ ತಿರುಗಿ ವಾಪಸ್ಸು ಒಳಮಠಕ್ಕೆ ಬರುತ್ತದೆ. ನಂತರ ಇಲ್ಲಿ ಪೂಜೆ ಮಾಡಿ ದೇವರನ್ನು ಗುಡಿ ತುಂಬಿಸಿಕೊಳ್ಳುತ್ತಾರೆ. ಇದು ವಾರದ ಉತ್ಸವ. ಪ್ರತಿ ಉತ್ಸವದಲ್ಲಿ ಇದೇ ತರಹದ ಆಚರಣೆಗಳನ್ನು ಮಾಡುತ್ತಾರೆ. ಪ್ರತಿ ಸೋಮವಾರ ಗುರುಗಳ ವಾರ ನಾಯಕನಹಟ್ಟಿ ಹೋಬಳಿ ಮತ್ತು ಚಳ್ಳಕೆರೆ ತಾಲೂಕು ದೊಡ್ಡ ಹೋಬಳಿ ಮತ್ತು ಪರಶುರಾಂಪುರ ಎರಡು ಸಹ ದೊಡ್ಡ ಹೋಬಳಿ. ನಾಯಕನಹಟ್ಟಿ ಹೋಬಳಿಗೆ ೩೨ ಹಳ್ಳಿಗಳು ಸೇರಿಕೊಳ್ಳುತ್ತವೆ. ಪ್ರತಿ ಸೋಮವಾರ ೩೨ ಹಳ್ಳಿಗಳಲ್ಲಿ ಹಬ್ಬದ ವಾತಾವರಣವಿರುತ್ತದೆ.

ಉಳಿದಂತಹ ದಿನಗಳಲ್ಲಿ ಅಥವಾ ಹಬ್ಬಗಳಲ್ಲಿ ಅಂತಹ ಅದ್ದೂರಿಯಾದ ಸಡಗರ ಸಂಭ್ರಮಗಳಿರುವುದಿಲ್ಲ. ಸ್ವಾಮೀಜಿಗಳ ಏನು ಕಾರ್ಯಕ್ರಮಗಳಿವೆಯೋ ಅವುಗಳು ತುಂಬಾ ವಿಶೇಷವಾಗಿ ಸಂಭ್ರಮದಿಂದ ನಡೆಯುತ್ತವೆ. ಉತ್ಸವಗಳೇನಿದೆಯೋ ಅವು ದೇವಾನುದೇವತೆಗಳಿಗೆ ಸಮಾನವಾಗಿ ಅಂದರೆ ಗುರುಗಳು ದೇವರುಗಳಿಗಿಂತ ದೊಡ್ಡವನು ಎಂಬ ಕಲ್ಪನೆ. "ಹರ ಮುನಿದರೆ ಗುರು ಕಾಯ್ವನು" ದೇವರು ಮುನಿಸಿಕೊಂಡರು ಗುರುಗಳು ನಮ್ಮನ್ನು ರಕ್ಷಿಸುವರು ಎಂದು ತಿಳಿದು ಗುರುಗಳಿಗೆ ಅಷ್ಟು ದೊಡ್ಡ ಸ್ಥಾನವನ್ನು ನೀಡಿದ್ದಾರೆ. ಉತ್ಸವಾದಿ ದೇವತೆಗಳಿಗೆ ಏನುಸ್ಥಾನ ಕೊಟ್ಟಿದ್ದಾರೋ ಹಾಗೆ ದೇವತೆಗಳಿಗೆ ಒಂದೊಂದು ವಾಹನಗಳನ್ನು ಗುರುಗಳಿಗೆ ಅರ್ಪಿಸಿದ್ದಾರೆ.

ಗುರುಗಳಿಗೆ ಯಾವುದೇ ವಾಹನಗಳಿಲ್ಲ ಎಲ್ಲಾ ದೇವತೆಗಳ ವಾಹನಗಳು ಗುರುಗಳಿಗೆ ವಾಹನಗಳಾಗಿವೆಯಂತೆ. ಅವುಗಳೆಲ್ಲವು ಒಂದೊಂದು ದಿನ ಒಂದೊಂದು ವಾಹನೋತ್ಸವವಾಗಿ ೭ ದಿನಗಳು ಆಚರಿಸಲ್ಪಡುತ್ತವೆ.

* ಅಶ್ವ ವಾಹನೋತ್ಸವ

* ಗಜ ವಾಹನೋತ್ಸವ

* ಮಯೂರ ವಾಹನೋತ್ಸವ

ಅಂದು ರಾತ್ರಿ ೭ಗಂಟೆಯಿಂದ ಕ್ಷೇತ್ರದ ಒಳಮಠ, ಹೊರಮಠ, ಏಕಾಂತಮಠ, ಈಶ್ವರ ದೇವಸ್ಥಾನ ಒಳಗೊಂಡಂತೆ ಇಡೀ ಕ್ಷೇತ್ರದಲ್ಲಿ "ಲಕ್ಷ ದೀಪೋತ್ಸವ" ಕಾರ್ಯಕ್ರಮ ನಡೆಯುತ್ತದೆ. ಲಕ್ಷದೀಪೋತ್ಸವ ನಡೆಯುವ ದಿನದಂದು ಕೆಲವೊಮ್ಮೆ ತೆಪ್ಪೋತ್ಸವ ಕಾರ್ಯಕ್ರಮವಿರುತ್ತದೆ. ಈ ತೆಪ್ಪೋತ್ಸವ ಕಾರ್ಯಕ್ರಮ ನಡೆಯುವ ಹಿನ್ನೆಲೆ ಹೀಗಿದೆ.

ಈ ಭಾಗದಲ್ಲಿ ಮಳೆ ಬಾರದಿದ್ದಾಗ ಶ್ರಾವಣ ಮಾಸದಲ್ಲಿ ಗ್ರಾಮದ ಆದಿ ದೈವಕ್ಕೆ ಪೂಜೆ ಸಲ್ಲಿಸಿ ಮಳೆಗಾಗಿ ಪ್ರಾರ್ಥಿಸಿಕೊಳ್ಳುವ ಪದ್ಧತಿಯು "ಕೆರೆ ಗಂಗಮ್ಮನ" ಮಾಡುವ ಮೂಲಕ "ಕೋಡಿ ಬಸವಣ್ಣನ ಪರಮ" "ಏಕಾಂತ ಸ್ವಾಮಿಯ ಆರಾಧನೆ" "ಆಲದ ಮರಕ್ಕೆ ಅಭಿಷೇಕ" ಹೀಗೆ ಹಲವಾರು ರೀತಿಯಿಂದ ಪೂಜೆ ಸಲ್ಲಿಸಲಾಗುವುದು. ಇದಾವುದಕ್ಕೂ ವರುಣ ದೇವ ಮಣಿಯದಿದ್ದಾಗ ಉಪಯೋಗಿಸುವ ಕೊನೆ "ಅಸ್ತ್ರ ನಗಾರಿಯ ಮೇಲೆ ಕೈ ಹಾಕುವುದು"

೩೭ ಹಳ್ಳಿಯ ಜನರು ಸೇರಿ ಒಳಮಠದಲ್ಲಿರುವ ನಗಾರಿಯ ಪೂಜೆ ಮಾಡಿ ಶ್ರೀ ಸ್ವಾಮಿಯಲ್ಲಿ ಭಕ್ತಿಪೂರ್ವಕವಾಗಿ ಪೂಜೆ ಸಲ್ಲಿಸಿ, ಮಳೆ ಬಂದು ಕೆರೆ ಕೋಡಿ ಬಿದ್ದರೆ ನಿನಗೆ "ತೆಪ್ಪೋತ್ಸವ" ಮಾಡಿಸುತ್ತೇವೆಂಬ ಸಂಕಲ್ಪ ಹೊಂದಿ ನಗಾರಿಯ ಮೇಲೆ ಕೈಹಾಕುವ ಪದ್ಧತಿ ಸಂಕಲ್ಪಿಸಿದಂತೆ ಹರಕೆ ನೆರವೇರಿದಾಗ ಶ್ರೀಸ್ವಾಮಿಗೆ ಕೃತಜ್ಞತೆಯನ್ನು ಅರ್ಪಿಸುವ ಸಲುವಾಗಿ ಚಲನ ಪ್ರತೀಕವಾದ ತೆಪ್ಪೋತ್ಸವದ ನಿರ್ಮಾಣ ಕಾರ್ಯಕ್ಕೆ ಕಂಕಣಬದ್ಧರಾಗಿರುತ್ತಾರೆ. ಈ ತೆಪ್ಪದ ನಿರ್ಮಾಣಕ್ಕಾಗಿ ಅತ್ತಿ ಮತ್ತು ಬುರುಗದ ಮರಗಳನ್ನು ಬಳಸುತ್ತಾರೆ. ನಾಲ್ಕು ನೆಲೆಯಲ್ಲಿ ನಿರ್ಮಿತವಾಗುವ ತೆಪ್ಪದ ಪ್ರತಿಯೊಂದು ನೆಲೆಯು ೨೧ ಅಡಿಯ ೮ ಮರದ ದಿಮ್ಮಿಗಳನ್ನು ಬಳಸಿ ಒಟ್ಟು ೩೨ ದಿಮ್ಮಿಗಳನ್ನು ಉಪಯೋಗಿಸಿ ೨೧ ಅಡಿ ಅಗಲ ೨೧ ಅಡಿ ಉದ್ದದ ಚೌಕಾಕಾರದಲ್ಲಿ ಸುಮಾರು ೫ ಅಡಿ ಮೇಲ್ಪಟ್ಟು ಎತ್ತರದಲ್ಲಿ ನಿರ್ಮಿಸುವ, ಪ್ರತಿಯೊಂದು ನೆಲೆಯ ಮಧ್ಯದಲ್ಲಿ ಸುಮಾರು ೧ ಅಡಿಯ ಅಂತರವಿದ್ದು ಅದರ ಮಧ್ಯದಲ್ಲಿ ಬಾಳೆಯ ದಿಂಡುಗಳನ್ನು ಚಾಪೆಯಂತೆ ಹೊಂದಿಸಿ ಕಟ್ಟಲಾಗುತ್ತದೆ. ಈ ನಾಲ್ಕು ನೆಲೆಯ ಮೇಲಿನ ಮಧ್ಯಭಾಗದಲ್ಲಿ ಸು.೨.೫. ಅಡಿಯಿಂದ ೩ ಅಡಿಯ ಸುಂದರವಾದ ಮಂಟಪವನ್ನು ನಿರ್ಮಿಸಿ ಆ ಮಂಟಪದ ಮೇಲೆ ಕಳಸಾರೋಹಣ ಮಾಡಲಾಗುತ್ತದೆ.

ಈ ಮಂಟಪದ ಮಧ್ಯದಲ್ಲಿ ಗೋದಿಹಿಟ್ಟಿನಿಂದ ನಿರ್ಮಿಸಿದ ಹಣತೆಯಲ್ಲಿ ನಂದಾದೀಪ ಬೆಳಗಿಸಲಾಗುತ್ತದೆ. ಚಾಣಾಕ್ಷರಾದ ೧೦ ರಿಂದ ೧೫ ಜನರು ನಾವಿಕರಂತೆ ಉದ್ದವಾದ ಬಿದಿರಿನ ಕೋಲಿನಿಂದ ಹುಟ್ಟುಹಾಕುತ್ತಾರೆ. ಈ ತೆಪ್ಪೋತ್ಸವದಲ್ಲಿ ಮೇಕೆಯ ಮರಿಯೊಂದನ್ನು ಕಟ್ಟಿಹಾಕಿ ಉತ್ಸವದ ನಂತರ ಬಾಬುದಾರನಾದ ನೀರುಗಂಟಿಗೆ ಕೊಡಲಾಗುತ್ತದೆ. ಕೆರೆಯ ಮೇಲ್ಪಂಕ್ತಿಯಿಂದ ಕೆರೆಯ ತೂಬಿನತ್ತ ತೆಪ್ಪೋತ್ಸವ ಸಾಗಿ ಬರುವಾಗ, ನೀರಿನಲ್ಲಿ ಮೂಡಿದ ಮಾರ್ಗಗಳು ಹಾಗೆ ಉಳಿದುಕೊಳ್ಳುವ ಸನ್ನಿವೇಶ ಶ್ರೀಸ್ವಾಮಿಯ ಮಹಿಮಾ ಪವಾಡವಾಗಿದೆ. ಸ್ವಾಮಿಯತ್ತ ಸಾಗಿಬರುವ ತೆಪ್ಪೋತ್ಸವದ ಭಕ್ತಾದಿಗಳ ಶ್ರದ್ಧಾಭಕ್ತಿಪೂರ್ವದ ಹರ್ಷ ನೋಡುವಂತಿರುತ್ತದೆ. ತೆಪ್ಪ ಸಾಗಿಬರುವಾಗ ಸಜ್ಜೆ ತಂಬಿಟ್ಟು, ಚಿಗಳೆ, ಪ್ರಸಾದದ ಜೊತೆಗೆ ಬಲಿ

ಅನ್ನವನ್ನು ಕೆರೆಯಲ್ಲಿ ಬೀರುತ್ತಾ ಬರುವ ಸನ್ನಿವೇಶ ಅಷ್ಟೆ ಆಕರ್ಷಕವಾಗಿರುತ್ತದೆ. ಈ ಕಾರ್ಯಕ್ರಮ ದೊಡ್ಡಕೆರೆಯಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ನಡೆಯುತ್ತದೆ. ಈ ಕಾರ್ಯಕ್ರಮ ಮುಗಿಸಿಕೊಂಡು ಲಕ್ಷದೀಪೋತ್ಸವದಲ್ಲಿ ಭಕ್ತಾದಿಗಳು ಪಾಲ್ಗೊಳ್ಳುತ್ತಾರೆ.

ಮರುದಿನ ಶುಕ್ರವಾರ ಮಾರ್ಗಶಿರ ಶುದ್ಧ ನವಮಿಯಂದು "ಏಕಾಂತೇಶ್ವರನ ಕಾರ್ತೀಕ" ಎಂದು ಕರೆಯಲ್ಪಡುವ ದೊಡ್ಡ ಕಾರ್ತೀಕ ರಥೋತ್ಸವ ಮಧ್ಯಾಹ್ನ ೩ ಗಂಟೆಯಿಂದ ಎಳೆಯಲ್ಪಡುತ್ತದೆ. ಈ ರಥೋತ್ಸವದ ದಿನ ಹರಕೆ ಹೊತ್ತವರು ಅಸ್ತ್ರ ಹಾಕಿಸಿಕೊಂಡು ಹರಕೆ ತೀರಿಸುವ ದೃಶ್ಯ ರೋಮಾಂಚನಕಾರಿಯಾಗಿರುತ್ತದೆ. "ಲಕ್ಷದೀಪೋತ್ಸವ" ನೆರವೇರುವ ಮುನ್ನ ಮಳೆರಾಯನ ಕೃಪೆ ವಿಶೇಷವಾಗಿ ದೊರೆತು ಇಡೀ ಪ್ರದೇಶವು ಅತ್ಯಂತ ಸಂತೃಪ್ತಿ ಸಮೃದ್ಧಿಯಿಂದ ಕೂಡಿ ಚಿಕ್ಕಕೆರೆ, ದೊಡ್ಡಕೆರೆಗಳೆರಡೂ ತುಂಬಿ ತುಳುಕುತ್ತಿದ್ದಲ್ಲಿ ಅದೇ ದಿನ ದೊಡ್ಡಕೆರೆಯಲ್ಲಿ "ಶ್ರೀ ಸ್ವಾಮಿಯ ತೆಪ್ಪೋತ್ಸವ" ನಡೆಯುತ್ತದೆ.

ಧನುರ್ಮಾಸ ಪೂಜೆ

ಪ್ರತಿವರ್ಷ ಡಿಸೆಂಬರ್ ೧೫ ರಿಂದ ಜನವರಿ ೧೫ ಉತ್ತರಾಯಣ ಪುಣ್ಯಕಾಲ ಪೂರ್ತಿ ಧನುರ್ಮಾಸವೆನಿಸಿದೆಯಷ್ಟು ಎಲ್ಲಿ ಶೈವ-ವೈಷ್ಣವ ದೇವಸ್ಥಾನಗಳಲ್ಲಿಯೂ ಬ್ರಾಹ್ಮೀ ಮಹೋತ್ಸವದಲ್ಲಿಯೇ ದೇವರಿಗೆ ಅಭಿಷೇಕ ಪೂಜೆ ಮಹಾಮಂಗಳಾರತಿ ಇತ್ಯಾದಿಗಳು ನಡೆಯುತ್ತವೆ. ಇಲ್ಲಿಯೂ ಸಹ ಬೆಳಗಿನ ಜಾವ ೪ ಗಂಟೆಯಿಂದಲೇ ಧನುರ್ಮಾಸದ ವಿಶೇಷ ಪೂಜೆಗಳು ನಡೆಯುತ್ತವೆ.

ಉತ್ತರಾಯಣ ಪುಣ್ಯಕಾಲದ ದಿನ ಕೆಲವರು ಯಾತ್ರಿಕರಾಗಿ, ಹೋಗುವುದುಂಟು. ನಾಯಕನಹಟ್ಟಿ ಹೊರಮಠದ ಪುಷ್ಕರಣಿಯಲ್ಲಿ ಮಿಂದು ಮಡಿಯುಟ್ಟು ಶ್ರೀಸ್ವಾಮಿಯನ್ನು ಭಜಿಸಿದರೆ ಪುಣ್ಯಲಾಭ ಉಂಟೆಂಬುದು ಹಿರಿಯರ ಅಭಿಪ್ರಾಯವಾಗಿದೆ. ಅಂದು ಇಲ್ಲಿಯೂ ವಿಶೇಷ ದೀಪಾಂಲಕಾರ, ರುದ್ರಾಭಿಷೇಕ, ಮಹಾಮಂಗಳಾರತಿ ಪ್ರಸಾದ ವಿನಿಯೋಗವುಂಟು. ಕೊರೆಯುವ ಚಳಿಯ ನಡುವೆ ತಣ್ಣೀರಿನ ಕೃತ್ಯ ಇದ್ದರೇನು. ಭಕ್ತಿಯ ನಿಷ್ಠೆಯೊಂದಿರಲು ಎಲ್ಲವೂ ಸಾಧ್ಯ ಎನ್ನುವ ಮಾತಿನಂತೆ ಭಕ್ತರು ಬೇವು ಬೆಲ್ಲವನ್ನು ಪರಸ್ಪರ ಕೊಡುವ ಸ್ವೀಕರಿಸುವ ಸಂದರ್ಭ. ಇಂತಹ ಶುಭದಿನದಂದು ಸ್ವಾಮಿಯ ಸಂದರ್ಶನ ಭಾಗ್ಯ ಪಡೆದು ಬೇವು ಬೆಲ್ಲ ಸವಿಯುವುದು ಲೇಸು. ಭಕ್ತರು ಕೇವಲ ಬಹಿರ್ಮುಖಿಗಳಾಗದೆ ಅಂತರ್ಮುಖಿಗಳೂ ಆಗಬೇಕಾಗುತ್ತದೆ.

ಸೂರ್ಯ ಉದಯಿಸುವ ಮೊದಲು ಬೆಳಿಗ್ಗೆ ಬೇಗ ಎದ್ದು ಪೂಜೆ ಮಾಡಿದರೆ ಒಳ್ಳೆಯದು ಎಂದು ಭಾವಿಸಿಕೊಂಡಿದ್ದಾರೆ. ಭಕ್ತರ ಹವ್ಯಾಸಗಳು, ಭೋಗ ಭಾಗ್ಯಗಳು, ಐಶಾರಾಮಿ ಜೀವನದ ಕಡೆ ಎಳೆದುಕೊಂಡು ಹೋಗುತ್ತಿರುವುದನ್ನು ಮತ್ತು ದುಷ್ಟಶಕ್ತಿಯನ್ನು ನಿಗ್ರಹ ಮಾಡಲು ರುದ್ರಾಕ್ಷಿ ಮಾಲೆಯನ್ನು ಹಾಕಿಕೊಳ್ಳುತ್ತಿದ್ದಾರೆ.

ರುದ್ರಾಕ್ಷಿ ಮಾಲೆ ಹಾಕುವ ಉದ್ದೇಶ

ಐಶರಾಮಿ ಜೀವನ ಬೇಡ ಸಾಧಾರಣ ಜೀವನ ನಡೆಸುವ ನಿಟ್ಟಿನಲ್ಲಿ ಅವರು ಆಲೋಚನೆ ಮಾಡುತ್ತಾರೆ.

ಭಕ್ತರೇ ಆಲೋಚನೆ ಮಾಡಿಕೊಂಡು ರುದ್ರಾಕ್ಷಿ ಮಾಲೆಯನ್ನು ೯ ವರ್ಷಗಳಿಂದ ಹಾಕಿಕೊಂಡು ಆಚರಿಸುತ್ತಾರೆ. ಹೀಗೆ ಯಾವಾಗಲೂ ಸ್ವಾಮಿ ಧ್ಯಾನ್ಯವನ್ನು ಮಾಡುತ್ತಿರುವವರಿಗೆ ಹಿಂದೆ ಮಾಡಿದವರಿಗೆ ಒಳ್ಳೆಯದಾಗಿದೆ ಎಂದು ಹೇಳುತ್ತಾರೆ. ೯ ವರ್ಷ ತುಂಬಿದೆ ಆದ್ದರಿಂದ ಭಕ್ತರು ಇದನ್ನು ಒಂದು ವ್ರತದ ತರಹ ಆಚರಣೆ ಮಾಡಿಕೊಂಡು ಬಂದಿದ್ದಾರೆ. ಇವರುಗಳಿಗೆಲ್ಲ ಒಳ್ಳೆಯದಾಗಿದೆ ಎಂದು ಹೇಳುತ್ತಾರೆ. ಆಚರಿಸುವಂತಹವರು. ನಮಗೆ ಜೀವನವೇ ಕುಡಿಯುವುದು, ಇಸ್ಪೀಟು ಹೀಗೆ ಮೊದಲಾದ ಹವ್ಯಾಸದಿಂದ ರೋಸಿ ಹೋಗಿದ್ದೀವಿ ಇವೆಲ್ಲವುಗಳಿಂದ ಮುಕ್ತಿ ಪಡೆಯುವ ಸಲುವಾಗಿ ನಾವು ಮಾಲೆ ಹಾಕಿಸಿಕೊಂಡಿದ್ದೇವೆ. ಮಾಲೆ ಹಾಕಿದ ಮೇಲಿಂದ ತಿಳಿನೀರಿನ ಕಡೆ ಬಂದಿದ್ದೀವಿ ಎಂದು ಹೇಳುತ್ತಾರೆ.

ವ್ರತ ಮುಗಿಯುವ ಕಾಲಕ್ಕೆ ಬೆಳಿಗ್ಗೆ ೫ ಜನ ಮುತ್ತೈದೆಯರು ಒಂದು ಮಡಿಲಕ್ಕಿ ಹಾಕುತ್ತಾರೆ. ೩ ಪಾವು ಅಕ್ಕಿ, ಉತ್ತುತ್ತಿ, ಗೋಡಂಬಿ, ದ್ರಾಕ್ಷಿ, ಕೊಬ್ಬರಿ ಎಲ್ಲವನ್ನು ಒಂದು ಚೀಲದಲ್ಲಿ ಹಾಕಿ ಪೂಜೆ ಮಾಡುತ್ತಾರೆ. ಮನೆಯಲ್ಲಿ ನೆಂಟರು ಬಂಧುಗಳೆಲ್ಲರನ್ನು ಕರೆದು ಊಟ ಹಾಕಿಸಿ ಅನ್ನದಾನ ಮಾಡಿ ಅಲ್ಲಿಂದ ಅಕ್ಷಯ ಬುತ್ತಿಯನ್ನು ತರುತ್ತಾನೆ. ಹಾಗೆ ತಂದಂತಹ ಅಕ್ಷಯ ಬುತ್ತಿಯನ್ನಿಟ್ಟುಕೊಂಡು ರಾತ್ರಿಯೆಲ್ಲ ಭಜನೆ ಹಾಡುಗಳಿಂದ ರಾತ್ರಿ ಕಳೆದು ಬೆಳಗಿನ ಪೂಜೆ ೫-೩ಗಂಟೆಗೆ ಆರಂಭವಾಗುತ್ತದೆ. ಪೂಜೆಗೆ ಹೊರಮಠದಿಂದ ಸ್ವಾಮಿಗಳ ದರ್ಬಾರನ್ನು ಮಠಕ್ಕೆ ಮೆರವಣಿಗೆಯ ಮೂಲಕ ಕರೆದುಕೊಂಡು ಬರುತ್ತಾರೆ.

ಇಲ್ಲಿ ಸ್ವಾಮಿಯ ದರ್ಶನ ಮಾಡಿ ಅಕ್ಷಯ ಬುತ್ತಿಯನ್ನಿಟ್ಟು ಪೂಜೆಮಾಡಿ ದರ್ಬಾರು ಮಠದಲ್ಲಿ ಬಿಟ್ಟು ಇಲ್ಲಿ ಒಂದು ಜ್ಯೋತಿಯನ್ನು ಹಚ್ಚುತ್ತಾರೆ. ನಂತರ ದೇವಾಲಯದ ಸುತ್ತಲು ಅಂದು ವಿಶೇಷವಾಗಿ ಬೆಳ್ಳಿರಥವನ್ನು ಹರಿಸುತ್ತಾರೆ. ನಂತರ ಸ್ವಾಮಿಗಳ ಮಹಾಮಂಗಳಾರತಿ ಆಗುತ್ತದೆ. ಜ್ಯೋತಿಯ ದರ್ಶನ ಮಾಡಿ ಮಾಲೆಯನ್ನು ಮತ್ತು ಕಾವಿ ವಸ್ತ್ರವನ್ನು ತೆಗೆದುಹಾಕುತ್ತಾರೆ. ಈ ಆಚರಣೆ ಪ್ರಸ್ತುತ ಹೆಚ್ಚು ಪ್ರಭಾವಶಾಲಿಯಾಗಿ ಆಚರಿಸಲ್ಪಡುತ್ತಿದೆ.

ತಿಪ್ಪೇಸ್ವಾಮಿಗೆ ಮಾಂಸ ಎಡೆಕೊಡುವುದು

ತಿಪ್ಪೇಸ್ವಾಮಿಗೆ ಸಂಬಂಧಿಸಿದಂತೆ ಇರುವ ವಿಶಿಷ್ಟ ಆಚರಣೆ ಎಂದರೆ ಮಾಂಸ ಎಡೆಕೊಡುವುದು. ತಿಪ್ಪೇಸ್ವಾಮಿ ಜೀವಂತ ಸಮಾಧಿಯಾದ ಸ್ಥಳವೆಂದು ಹೇಳಲಾಗುವ ಹೊರಮಠದಲ್ಲಿ ಬೇಡ, ಕುರುಬ, ಕಾಡುಗೊಲ್ಲ, ಮಾದಿಗ ಮುಂತಾದ ಕೆಳವರ್ಗದ ಜನರು ಹೆಚ್ಚಾಗಿ ನಡೆದುಕೊಳ್ಳುತ್ತಿದ್ದು ಅವರು ತಿಪ್ಪೇಸ್ವಾಮಿಗೆ ಮಾಂಸವನ್ನು ಎಡೆಯಾಗಿ ಕೊಡುತ್ತಾರೆ.

ಒಳಮಠಕೆ ಜಂಗಮರು ಹೊರಮಠಕೆ ಭಕ್ತರು
ಕುಲಹನ್ನೆರಡು ಜಾತಿ ಕಲಿಯಾಲಿ ಹೊರಮಠದಾಗೆ
ಮದ್ದೂ ಮಾಂಸಗಳೇ ಬೇಸಾಲಿ ಹೊರಮಠದಲ್ಲಿ

ಅಪ್ಪಯ್ಗೆ ಈ ಎಡಿಯೇ ಏರಾಲಿ

ಒಪ್ಪೀದ ಕುರಿಗಾಳ ಮತ್ತಲ್ಲಿ ಕಡೀರಣ್ಣ

ಹೊರಮಠುದಾಗೆ ನೀವು ಮಾಡೀರಣ್ಣ ನಾಯಕನ್ನಟ್ಟಿ

ಹೊರಮಠುದಲ್ಲೀಗ ಎಡಿಯೇ ಏರಾಲಿ

(ಅನುಬಂಧ ೨ ತಿಪ್ಪೇಸ್ವಾಮಿ ಕಾವ್ಯ)

ಒಳಮಠವನ್ನು ಜಂಗಮರಿಗೆ ಬಿಟ್ಟು ಹೊರಮಠಕ್ಕೆ ಬರುವಂತೆ ತಿಪ್ಪೇಸ್ವಾಮಿಯನ್ನು ಒತ್ತಾಯಿಸಿದ ಸಂದರ್ಭಗಳಾವುವು ಎನ್ನುವುದನ್ನು ಅರಿತರೆ ಈಗಿರುವ ಮಾಂಸ ಎಡೆಕೊಡುವ ಆಚರಣೆಗೆ ಕಾರಣ ಏನು ಎನ್ನುವುದು ತಿಳಿದಂತಾಗುತ್ತದೆ. ಬೇಟೆ ಸಂಸ್ಕೃತಿಯಿಂದ ಬೇಡ ಸಮುದಾಯ ಕೃಷಿ ಸಂಸ್ಕೃತಿಯನ್ನಾಗಿ ಪರಿವರ್ತಿಸುವಲ್ಲಿ ತಿಪ್ಪೇಸ್ವಾಮಿ ಸಾಕಷ್ಟು ಶ್ರಮಿಸಿದರು. ಅದಕ್ಕಾಗಿ ಏಳು ಕೆರೆ ಕಟ್ಟಿಸಿದನೆಂದು ಹೇಳಲಾಗುತ್ತದೆ. ಈ ರೀತಿ ಜನಪರ ಕಾರ್ಯಗಳನ್ನು ಮಾಡುತ್ತಾ ಅವರನ್ನು ಶೈವೀಕರಣಗೊಳಿಸಿದನು. ತಿಪ್ಪೇಸ್ವಾಮಿ ಭಕ್ತರಾಗಿ ಶೈವೀಕರಣಗೊಂಡರೂ ತಮ್ಮ ಮೂಲ ಆಹಾರಪದ್ಧತಿಯನ್ನು ಬೇಡ ಸಮುದಾಯ ಒಳಗೊಂಡಂತೆ ಹೊರಮಠಕ್ಕೆ ಮಾಂಸ ಎಡೆಕೊಡುವ, ಯಾವ ಸಮುದಾಯಗಳು ಪೂರ್ತಿ ಕೈಬಿಡದೆ ಹಾಗೆ ಉಳಿಸಿಕೊಂಡುಬಂದಿವೆ.

ತಿಪ್ಪೇಸ್ವಾಮಿ ಕೆಳವರ್ಗಗಳ ಆಹಾರಪದ್ಧತಿಯನ್ನು ಒಪ್ಪಿಕೊಂಡಿದ್ದಾನೆ ಎನ್ನುವುದು ತಿಳಿದುಬರುತ್ತದೆ. ಈ ಭಾಗದಲ್ಲಿ ಹೆಚ್ಚಾಗಿ ವಾಸಿಸುವ ಬೇಡ ಸಮುದಾಯ ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಬಲವಾಗಿರುವುದು ಇದಕ್ಕೆ ಕಾರಣವಾಗಿದೆ. (ಸತೀಶ ಪಾಟೀಲ್ ಪಿಎಚ್.ಡಿ. ಪ್ರಬಂಧ, ೨೦೦೪ ಪು.೨೨೮) ಪಂಚಗಣಾಧೀಶ್ವರರು ತಿಪ್ಪೇಸ್ವಾಮಿ ಜಾತ್ರೆಯ ಸಂದರ್ಭದಲ್ಲಂತೂ ಮಾಂಸ ಎಡೆಕೊಡುವ ಪದ್ಧತಿಯನ್ನು ಬೃಹತ್ ಪ್ರಮಾಣದಲ್ಲಿ ಆಚರಿಸಲಾಗುತ್ತದೆ. ರಥೋತ್ಸವದ ಹಿಂದಿನ ದಿನವೇ ಹೊರಮಠದ ಆವರಣದಲ್ಲಿ ವಿವಿಧ ವರ್ಗದ ಜನರು ಬಂದು ಬೀಡು ಬಿಟ್ಟಿರುತ್ತಾರೆ. ತಾವು ಉಳಿದುಕೊಳ್ಳಲು ನಿರ್ಮಿಸಿದ ಬಿಡಾರದಲ್ಲಿಯೇ ತಿಪ್ಪೇಸ್ವಾಮಿಯ ಪೋಟೋವನ್ನು ಇಟ್ಟು ಪೂಜಿಸುತ್ತಾರೆ. ರಥೋತ್ಸವ ಜರುಗಿದ ನಂತರದಲ್ಲಿ ತಾವು ತಂದಿದ್ದ ಪ್ರಾಣಿಯನ್ನು (ಕುರಿ, ಕೋಳಿ)ಕೊಂದು ಅದರ ಮಾಂಸವನ್ನು ಬಿಡಾರದಲ್ಲಿಯೇ ಪ್ರತಿಷ್ಠಾಪಿಸಿದ್ದ ತಿಪ್ಪೇಸ್ವಾಮಿಗೆ ಎಡೆಯಾಗಿ ಅರ್ಪಿಸಿ ಪೂಜೆಸಲ್ಲಿಸುತ್ತಾರೆ. ನಂತರದಲ್ಲಿ ಹೊರಮಠಕ್ಕೆ ಒಯ್ದು ದೇವರಿಗೆ ಸಲ್ಲಿಸುತ್ತಾರೆ. ಅನಂತರದಲ್ಲಿ ಅವರು ಮಾಂಸ ಊಟ ಮಾಡುತ್ತಾರೆ. ಈ ಸಂದರ್ಭದಲ್ಲಿ ಮಹಾರಾಷ್ಟ್ರ, ಆಂಧ್ರ, ತಮಿಳುನಾಡುಗಳನ್ನೊಳಗೊಂಡಂತೆ ಕರ್ನಾಟಕದ ನಾನಾ ಪ್ರದೇಶಗಳಿಂದ ಬಂದ ಜೋಗಿಗಳಿಗೆ ಮಾಂಸದ ಊಟವನ್ನು ಹಾಕಲಾಗುತ್ತದೆ. ಅಂದು ಹೊರಮಠದ ಆವರಣದಲ್ಲಿ ಮಾಂಸ, ಭಂಗಿ, ಹೆಂಡದ ವಾಸನೆ ತುಂಬಿರುತ್ತದೆ. ಮಧ್ಯಕಾಲೀನ ಸಂದರ್ಭದಲ್ಲಿನ ಮೌಖಿಕ ಪರಂಪರೆಗಳ ನಾಯಕರು ಕೆಳವರ್ಗಗಳ ಆಹಾರಪದ್ಧತಿಯನ್ನು ಒಪ್ಪಿಕೊಂಡಿದ್ದರ ಸಂಕೇತವಾಗಿ ಈ ಆಚರಣೆಗಳು ಉಳಿದುಬಂದಿವೆ. (ಚಿತ್ರದುರ್ಗ ಜಿಲ್ಲಾ ದರ್ಶಿನ, ಟಿ.ಗಿರಿಜ ರೇಖಾ ಪ್ರಕಾಶನ, ದಾವಣಗೆರೆ).

ಜಾತ್ರೆ

ಒಕ್ಕಲು ಪ್ರಧಾನವಾದ ಬಹುಮುಖಿ ಸಂಸ್ಕೃತಿಯನ್ನು ಹೊಂದಿದ ಭಾರತ ದೇಶದಲ್ಲಿ ಜನರು ತಮ್ಮ ಬಿಡುವಿನ ಸಂದರ್ಭದಲ್ಲಿ ಗುಂಪುಗಳಾಗಿ ಸೇರಿ ತಮ್ಮ ಕಷ್ಟ ಸುಖಗಳನ್ನು ಹಂಚಿಕೊಳ್ಳುವುದು. ಒಂದು ನಿರ್ದಿಷ್ಟ ಕಾಲದಲ್ಲಿ ನಿಯಮಿತವಾಗಿ ಊರ ಜನರು ಸೇರಿ ನೆರವೇರಿಸುವ ಆಚರಣೆಗೆ "ಜಾತ್ರೆ" ಎನ್ನುತ್ತಾರೆ. "ಜಾತ್ರೆ" ಎಂಬ ಪದ "ಯಾತ್ರೆ"ಯ ತದ್ಭವ ಯಾತ್ರಾ ಸ್ಥಳಗಳೆಲ್ಲ ಜಾತ್ರೆಯ ಸ್ಥಳಗಳಾಗಲಿಕ್ಕಿಲ್ಲ. ಆದರೆ ಜಾತ್ರೆಯ ಸ್ಥಳಗಳೆಲ್ಲ ಸಾಮಾನ್ಯವಾಗಿ ಯಾತ್ರಾಸ್ಥಾನವಾಗಿರುತ್ತವೆ. "ಯಾನೇನ ತ್ರಾಯತ್ ಇತಿ ಯಾತ್ರಾ" ಇದರ ಅರ್ಥ ಪುಣ್ಯಕ್ಷೇತ್ರ ದರ್ಶನಕ್ಕೆ ಹೋಗುವವರ ರಕ್ಷೆಯ ಯಾತ್ರೆಯಾಗಿದೆ" (ಕರ್ನಾಟಕ ಜಾತ್ರೆಗಳು ಶಿವಕುಮಾರಸ್ವಾಮಿ ಪುಟ.೩).

ಜಾತ್ರೆ ಒಂದು ಧಾರ್ಮಿಕ ಆಚರಣೆಯ ಚೌಕಟ್ಟಿನಲ್ಲಿ ಒಂದು ಸಂಸ್ಕೃತಿಯ ವಿಶಿಷ್ಟತೆಯನ್ನು ಪ್ರತಿಬಿಂಬಿಸುವ ಅಭಿವ್ಯಕ್ತಿ ಮಾಧ್ಯಮ. ಒಂದು ಜಾತ್ರೆ ಕೇವಲ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಗಾಗಿ ಮಾತ್ರ ಜರುಗುವಂತಹುದಲ್ಲ. ಸ್ಥಳೀಯ ವಿಶೇಷತೆಯನ್ನು ಮೈಗೂಡಿಸಿಕೊಂಡು ಜಾತ್ರೆ ಅನನ್ಯತೆಯ ಸಂಕೇತವಾಗಿ ತನ್ನ ಛಾಪುಮೂಡಿಸುತ್ತದೆ. ಜಾತ್ರೆ ಮಾನವನ ದೈನಂದಿನ ಜೀವನ ಚಟುವಟಿಕೆಯಲ್ಲಿ ನಿರ್ಧಿಷ್ಟ ಕಾಲಾವಧಿಯಲ್ಲಿ ಪುನರ್ ಪ್ರಕಟಗೊಳ್ಳುತ್ತದೆ. ಜಾತ್ರೆಯ ಪೌರಾಣಿಕ ಹಿನ್ನೆಲೆ, ಅದರ ಐತಿಹ್ಯದ ನೆಲೆಗಟ್ಟು, ಚಾರಿತ್ರಿಕ ಮಹತ್ವ ಇವೆಲ್ಲವೂ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶಗಳು. ಆದರೆ ಕೇವಲ ಅವುಗಳನ್ನೆ ಆಧಾರವಾಗಿಟ್ಟುಕೊಂಡು ಅಧ್ಯಯನ ನಡೆಸಿದರೆ ಸಾಲದು. ಜಾತ್ರೆ ಇಂದೂ ಕೂಡ ಜನರಿಗೆ ಪ್ರಸ್ತುತ ಎನಿಸಿದೆ. ಅದಕ್ಕೆ ವ್ಯವಹಾರಿಕ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಉದ್ದೇಶಗಳಿವೆ. ಅದು ಇಂದಿನ ಸ್ವರೂಪ ಪಡೆಯುವಲ್ಲಿ ಅನೇಕ ಚಾರಿತ್ರಿಕ ಬೆಳವಣಿಗೆಯ ಹಂತಗಳನ್ನು ದಾಟಿ ಬಂದಿದೆ. ಹಾಗೆಯೇ ಹಲವೊಮ್ಮೆ ಕೆಲವು ಆಚರಣೆಗಳನ್ನು ಕಳೆದುಕೊಳ್ಳುತ್ತಲೋ ಅಥವಾ ತನ್ನ ಸ್ವರೂಪದಲ್ಲಿಯೇ ರೂಪಾಂತರಗೊಳ್ಳುತ್ತಲೋ ಬಂದಿವೆ. ಈ ಕೊಡುಕೊಳ್ಳುವ ಪ್ರಕ್ರಿಯೆಯಲ್ಲಿ ಗಟ್ಟಿಗೊಂಡು ನಿಂತಿರುವ ಅದರ ಮೂಲ ಸತ್ವ ಯಾವುದೆಂದು ವಿಶ್ಲೇಷಿಸಬೇಕಾಗಿದೆ. ನಾಯಕನಹಟ್ಟಿ ಜಾತ್ರೆಯ ಅಧ್ಯಯನದಲ್ಲಿ ಇಂತಹ ಪ್ರಯತ್ನ ನಡೆಸಲಾಗಿದೆ.

ಹಬ್ಬ ಮತ್ತು ಜಾತ್ರೆಗಳು ಜನಪದ ಸಂಪ್ರದಾಯಗಳು. ಅವುಗಳ ಹುಟ್ಟಿಗೆ ಕಾರಣ ಹೊಂದಿರುತ್ತವೆ. ಈ ಹಿನ್ನೆಲೆ ಭಯದ ಕಲ್ಪನೆಯಿಂದ ಅಥವಾ ಮಾನವ ಪ್ರಕೃತಿಯ ಸಹಜ ಹೊಂದಾಣಿಕೆಯ ಪ್ರವೃತ್ತಿಯಿಂದ ಅಥವಾ ಸಂಘರ್ಷದಿಂದ ಹುಟ್ಟಿರಬಹುದು. ಪ್ರತಿಯೊಂದು ಆಚರಣೆಯೂ ತನ್ನ ವ್ಯಾಪ್ತಿಯಲ್ಲಿ ಕಾಲ ಸಂದರ್ಭಕ್ಕೆ ಅನುಗುಣವಾದ ನೆಲೆ ಹೊಂದಿರುತ್ತದೆ. ಸಮಾಜ ಬದಲಾದಂತೆ ಒಂದು ಕಾಲಕ್ಕೆ ಅರ್ಥಪೂರ್ಣವಾಗಿದ್ದ ಆಚರಣೆಗಳು ಮತ್ತೊಂದು ಕಾಲಕ್ಕೆ ಅರ್ಥಹೀನವಾಗಿ ಕಾಣಬಹುದು.

ಆದರೆ ಅಸ್ತಿತ್ವದಲ್ಲಿ ಉಳಿದುಕೊಂಡಿದ್ದರೆ ಅದು ಕ್ರಿಯಾಶೀಲವಾಗಿರುತ್ತದೆ. ತನ್ನ ಮೇಲೆ ಉಂಟಾಗುವ ವಿವಿಧ ಪ್ರಭಾವಗಳ ನಡುವೆಯೂ ನಿರಂತರವಾಗಿ ಮುಂದುವರಿಯುತ್ತದೆ. ಅದಕ್ಕೆ ನಿರಂತರ ಚಲನಶೀಲತೆ

ಇರುವುದು ಗೊತ್ತಾಗುತ್ತದೆ. Folklore is a lively Fossial which refuse to die"[೧] ಎಂಬ ಫಾಟರ್ ಅವರ ಹೇಳಿಕೆ ಜಾನಪದದ ಗುಣವನ್ನೇ ಸೂಚಿಸುತ್ತದೆ. ಸಮಾಜದ ಒಳತಿಗಾಗಿ ಸಾಮಾಜಿಕ ಹೊಂದಾಣಿಕೆಗಾಗಿ ವಿಶೇಷ ದಿನಗಳಲ್ಲಿ ಜನರು ಸಂಭ್ರಮ, ಉತ್ಸಾಹಗಳಿಂದ ನಡೆಸುವ ಸಂಪ್ರದಾಯದ ಆಚರಣೆಗಳೇ ಹಬ್ಬ ಮತ್ತು ಜಾತ್ರೆಗಳು ಸಂಪ್ರದಾಯ, ರೂಢಿ ಹಾಗೂ ಕಲಾ ಪ್ರದರ್ಶನಗಳನ್ನು ನಡೆಸುವ ಒಂದು ವಿಶೇಷ ಸಂದರ್ಭ.

ಒಂದು ನಿರ್ದಿಷ್ಟ ಕಾಲದಲ್ಲಿ, ಜನಪದರು ಒಂದು ನಿರ್ದಿಷ್ಟ ದೈವವೊಂದಕ್ಕೆ ಸಾಂಪ್ರದಾಯಿಕ ಪೂಜೆ, ಆಚರಣೆಗಳಿಂದ ನಡೆದುಕೊಳ್ಳುವುದು ಜಾತ್ರೆಯ ಮುಖ್ಯ ಲಕ್ಷ್ಮಣ ಡಾ.ಅಂಬಳಿಕೆ ಹಿರಿಯಣ್ಣ ಅವರು ತಮ್ಮ ಲೇಖನದಲ್ಲಿ ಹೀಗೆ ಹೇಳಿದ್ದಾರೆ. "ಜನಸೇರಿದರೆ ಜಾತ್ರೆ" ಎಂಬ ನಾಣ್ಣುಡಿಯೆ ಇದೆಯಾದರೂ ಕೇವಲ ಜನರ ಗುಂಪು ಸೇರಿದ ಮಾತ್ರಕ್ಕೆ ಅದು ಜಾತ್ರೆಯಾಗುವುದಿಲ್ಲ. ಸಂತೆಯಲ್ಲೂ ಜನ ಸೇರುತ್ತಾರೆ. ಸಂತೆಯ ವ್ಯಾಪಾರ ವಹಿವಾಟುಗಳು ಜಾತ್ರೆಯಲ್ಲೂ ಕಂಡುಬರುತ್ತವಾದರೂ ಜಾತ್ರೆಯಲ್ಲಿನ ಜನರು ವ್ಯಾಪಾರಕ್ಕಾಗಿಯೇ ಕೂಡುವಂತಹವರಲ್ಲ (ಹೆಚ್.ಜೆ.ಲಕ್ಕಪ್ಪಗೌಡ, (ಸಂ), ೧೯೮೩-೧೨೯)[೨] ಕೇವಲ ಮನೋರಂಜನೆ ಕೂಡ ಜಾತ್ರೆಯ ಉದ್ದೇಶವಲ್ಲ, ಜಾತ್ರೆಯಲ್ಲಿ ದೈವ ಸಂಬಂಧವಾದ ಆಚರಣೆಗಳು ಅನುಷ್ಠಾನಗೊಳ್ಳುತ್ತವೆ. ಈ ದೃಷ್ಟಿಯಿಂದ ಜಾತ್ರೆ ವಿವಿಧ ಗುಂಪುಗಳ ನಡುವೆ ಸಂಬಂಧ ಕಲ್ಪಿಸುವ ಸೇತು ಬಂಧವಾಗಿದೆ.

೨. ಜಾತ್ರೆಗಳ ಉಗಮ, ವಿಕಾಸ ಮತ್ತು ಸ್ವರೂಪ : ವಿವಿಧ ವಿದ್ವಾಂಸರ ಅಭಿಪ್ರಾಯಗಳು

Mythology ಯ ಅಧ್ಯಯನ ನಡೆಸಿದ Jacob Grimm, Max Mullor, Anderew long, willem mann hardt ಮತ್ತು " James Fraser ಮೊದಲಾದವರು ಮಾನವನ ಆದಿಕಾಲದ ನಂಬಿಕೆ ಹಾಗೂ ಆಚರಣೆಗಳ ಬಗ್ಗೆ ಅರಿಯಲು ಅವರ ಕಾಲದ ಆಧುನಿಕ Festival ಅಧ್ಯಯನ ನಡೆಸಿದರು. ಜಾನಪದ ತಜ್ಞರ ದೃಷ್ಟಿಯಲ್ಲಿ ಅಂತಹ ಆಧುನಿಕ Festivalಗಳು ಆ ಸಮುದಾಯಗಳ Magical Ritualsಗಳ ಉಳಿಯುವಿಕೆಯ ಮಾರ್ಗಗಳು. ಅವು ಕೂಡ ಕೆಲವು ನಿಶ್ಚಿತ ಉದ್ದೇಶಗಳು ಉದಾಹರಣೆಗೆ: ಹಗಲು ಹೆಚ್ಚಲು, ಚಳಿಗಾಲವನ್ನು ಓಡಿಸಲು, ಕ್ಷೇತ್ರಗಳ ಹೊಲಗದ್ದೆಗಳ ದೇವತೆಗಳನ್ನು ತೃಪ್ತಿಪಡಿಸಲು, ಕಾಡು ಹಾಗೂ ಆಕಾಶದ ದೇವತೆಗಳನ್ನು ಸಂಪ್ರೀತಗೊಳಿಸಲು ಹಾಗೂ ಭೂ ಫಲವಂತಿಕೆ ಹೆಚ್ಚಿಸಲು ನಡೆಸುವ ಆಚರಣೆಗಳ ರಂಗವಾಗಿತ್ತು. ಆಚರಣೆಗಳಲ್ಲಿ ಉತ್ತಮ ಬೆಳೆ ಪಡೆಯುವ, ಸುಖ ಸಮೃದ್ಧಿಯನ್ನು ಬಯಸುವ ಆಚರಣೆಗಳಾಗಿ ಭಾವಿಸಲಾಯಿತು. ಇವುಗಳ ಹಿನ್ನೆಲೆಯಲ್ಲಿ ಬಹುಹಿಂದಿನ ಮಾನವನ ನಡೆ ನುಡಿ ಆಚರಣೆಗಳಿಂದ ಹಾಗೂ ಪುರಾಣ ಮತ್ತು ಆಚರಣೆಗಳಿಗಿರುವ ಸಂಬಂಧವನ್ನು ಮತ್ತು ಇಂದಿನ Festivalಗಳ ಸ್ವರೂಪವನ್ನು ವಿವರಿಸುವ ಪ್ರಯತ್ನಗಳು ನಡೆದವು.

ಇಂತಹ ಹೆಚ್ಚಿನ ಸಂಭ್ರಮೋತ್ಸಾಹದ ಆಚರಣೆಗಳು ಒಬ್ಬ ವ್ಯಕ್ತಿಯ ಅಥವಾ ಯಾವುದೇ ಒಂದು ನಿರ್ದಿಷ್ಟ ಘಟನಾವಳಿಯತ್ತಲೇ ಕೇಂದ್ರೀಕೃತಗೊಂಡಿರುತ್ತವೆ. ಅನೇಕ Festivalಗಳು ಇಂದಿಗೂ ಮೂಲ

ಉದ್ದೇಶಗಳನ್ನು ಸಂಪೂರ್ಣವಾಗಿ ಮರತೆ ಬಿಟ್ಟಿರುತ್ತವೆ. ಆದರೂ ಅವುಗಳ ಆಚರಣೆಯಲ್ಲಿ ಎಲ್ಲಿಯೋ ಅಂತಹ ಕೇಂದ್ರ ಉದ್ದೇಶವನ್ನು ಗುರುತಿಸಲು ಸಾಧ್ಯವಾಗುವ ಯಾವುದಾದರೊಂದು ಸುಳಿವಿನ ಬಗ್ಗೆ ತಿಳಿಸುತ್ತಾ Robert jerome smith ತಮ್ಮ ಲೇಖನದಲ್ಲಿ ಈ ಸುಳಿವಿನ ಬಗ್ಗೆ ತಿಳಿಸುತ್ತಾ This clue Should Suggest to the investigator that the ending significance of the Festival lies its avowed perprose or meaing than is the fact of celebration itself (Richard M Dorson (Ed) 1972, 159). ಬಹುಶಃ ಹಬ್ಬಗಳು ಮೂಲತ ವಿಜಯೋತ್ಸವಗಳಾಗಿರಬೇಕು. ದುಷ್ಟಶಕ್ತಿಯನ್ನು ದಮನ ಮಾಡಿದುದರ ಜ್ಞಾನಪಕಾರ್ಥವಾಗಿ ಇವು ಆಚರಣೆಯಲ್ಲಿ ಬಂದಿರಬೇಕು. (ಕನ್ನಡ ವಿಶ್ವಕೋಶ ಕರ್ನಾಟಕ ಸಂಪುಟ ಪುಟ. ೧೫೦).

ನಿಸರ್ಗವನ್ನು ನಿಯಂತ್ರಿಸುವ ಮತ್ತು ದೇವರನ್ನೊಲಿಸಿಕೊಳ್ಳುವ ಸತತ ಯತ್ನಗಳ ಫಲವಾಗಿ ಹಬ್ಬಗಳು ಹುಟ್ಟು ಪಡೆದವು. ಪ್ರಾರಂಭದಲ್ಲಿ ಯಾತ್ರೆ ಸುಪ್ರಸಿದ್ಧ ತೀರ್ಥ ಕ್ಷೇತ್ರಗಳಲ್ಲಿ ನಡೆಯುತ್ತಿತ್ತೆಂದು ತೋರುತ್ತದೆ. ಪಾಪ ಪರಿಹಾರಾರ್ಥವಾಗಿ ದೇಶದ ಮೂಲೆ ಮೂಲೆಗಳಿಂದ ಜನ ಅಂತಹ ಕ್ಷೇತ್ರಗಳಲ್ಲಿ ಅಪಾರ ಸಂಖ್ಯೆಯಲ್ಲಿ ಸೇರುತ್ತಿದ್ದರು. ಅನಂತರ ಕೆಲವು ಹಳ್ಳಿಗಳಲ್ಲಿ ನಿಯತ ಅಥವಾ ಅನಿಯತ ಕಾಲಗಳಲ್ಲಿ ಆದ್ದೂರಿಯಿಂದ ಜರುಗುತ್ತಿದ್ದ ದೊಡ್ಡ ಹಬ್ಬಗಳಲ್ಲಿ ನೆಂಟರಿಷ್ಟರ ಜೊತೆಗೆ ಶ್ರದ್ಧಾವಂತ ಜನರೂ ಬರಲಾರಂಭಿಸಿದರು. ದೇವರು ಪ್ರಭಾವಶಾಲಿ ಎನಿಸಿದರಂತೂ ಜನರ ಗದ್ದಲವೂ ಅಧಿಕವಾಗುತ್ತಿತ್ತು. ಹಬ್ಬಗಳು ೧,೨,೩ ಹೀಗೆ ಹೆಚ್ಚು ದಿನಗಳಿಗೆ ಹೆಚ್ಚುತ್ತಾ ಹೋಗಿ ಕುಣಿತ ಮರೆತಗಳು ಕೂಡಿಕೊಂಡು ಮದ್ದು ಪಟಾಕಿಗಳ ವೈಭವ ಆಕರ್ಷಕವಾಗಿದ್ದ ಅಂಗಡಿ ಮುಂಗಟ್ಟುಗಳು ಜಮಾಯಿಸಿ, ಜನ ಮರುಳಾಗಿ ಪರಿಷೆ ಸೇರಿದಾಗ ಅದು ಜಾತ್ರೆಯೆಂಬ ನಾಮಕರಣಕ್ಕೆ ಯೋಗ್ಯವಾಯಿತು. ಕೊನೆಗೆ ರೈತನ ಜೀವನಾಡಿಯಂತಿರುವ ದನಗಳ ನೆರವಿಯಾಗಿ ಸಂಘಟನೆಗೊಂಡಾಗ ಆ ಪದದ ಅರ್ಥ ತುಂಬಾ ವಿಶಾಲವಾಯಿತು. ಧಾರ್ಮಿಕ ಸ್ವರೂಪದ ಹಬ್ಬ ಕಾಲಕ್ರಮೇಣ ಸಾಂಸ್ಕೃತಿಕ ಮಹತ್ವವನ್ನು ಪಡೆದು ವಾಣಿಜ್ಯ ಮುಖವನ್ನು ರೂಪಿಸಿಕೊಂಡಾಗ ಜಾತ್ರೆಯಾಯಿತು. (ದೇ.ಜವರೇಗೌಡ, ೧೯೭೬, ೩೪೨).

ಜಾತ್ರೆಗಳ ಉದ್ದೇಶ ಮತ್ತು ಉಪಯೋಗ

ಜಾತ್ರೆಗಳನ್ನು ವಿವಿಧ ಉದ್ದೇಶಗಳು ಹಾಗೂ ಅಗತ್ಯಗಳ ಪೂರೈಕೆಗಾಗಿ ನಡೆಸಲಾಗುತ್ತದೆ. ಅವುಗಳ ಮೂಲ ಉದ್ದೇಶಗಳು ಹೀಗಿವೆ.

೧. ಧಾರ್ಮಿಕ ಕಾರಣಗಳು.

೨. ಸಾಮಾಜಿಕ ಕಾರಣಗಳು.

೩. ಸಾಂಸ್ಕೃತಿಕ ಕಾರಣಗಳು.

೪. ವ್ಯವಹಾರಿಕ ಕಾರಣಗಳು

೫. ವೈಯಕ್ತಿಕ ಕಾರಣಗಳು.

ಪ್ರತಿ ಜಾತ್ರೆಯು ಒಂದು ಧಾರ್ಮಿಕ ಚೌಕಟ್ಟಿನಲ್ಲಿ ನಡೆಯುತ್ತದೆ. ಆರಾಧನಾ ದೈವದ ಶ್ರೇಷ್ಠತೆಯ ಪುನರ್ ಪ್ರಕಟಣೆ ಹಾಗೂ ದೈವತ್ವದ ಸ್ಥಿರೀಕರಣ ಪ್ರಕ್ರಿಯೆಯಾಗಿ ಜಾತ್ರೆ ನಡೆಯುತ್ತದೆ. ಜನರ ಧಾರ್ಮಿಕ ಮನೋಭಾವನೆ ಉದ್ದೀಪನಗೊಳಪಡಿಸುವಂತೆ ಮಾಡಿ ತನ್ಮೂಲಕ ಪ್ರಚೋದಿತಗೊಂಡ ಭಕ್ತಿಯ ಭಾವಾವೇಶದ ಪ್ರಕಟಣೆಗೊಂದು ವೇದಿಕೆಯಾಗುತ್ತದೆ.

ಪ್ರತಿಯೊಂದು ಸಂಸ್ಕೃತಿಯೂ ತನ್ನದೇ ಆದ ಹಲವು ವೈಶಿಷ್ಟ್ಯಗಳನ್ನು ಹೊಂದಿರುತ್ತದೆ. ಅದನ್ನು ಹಾಗೆಯೇ ಉಳಿಸಿಕೊಂಡು ಬಂದು ಮುಂದಿನ ತಲೆಮಾರಿಗೆ ಸಾಗಿಸಬೇಕಾದ ಗುರುತರ ಜವಾಬ್ದಾರಿಯನ್ನು ಜಾತ್ರೆಗಳ ಮೂಲಕ ಸಾಧಿಸಲೆತ್ನಿಸುತ್ತವೆ. ಪ್ರತಿಯೊಂದು ಸಂಸ್ಕೃತಿಯೂ ಭಿನ್ನ ಕಾರಣಗಳಿಗಾಗಿ ತನ್ನ ಸಂಸ್ಕೃತಿಯ ಉಳಿವಿಗಾಗಿ ಹೋರಾಡಿದ "ಸಾಂಸ್ಕೃತಿಕ ವೀರ"ರನ್ನು ಸ್ಮರಿಸಿ ಅವರಿಗೆ ದೈವತ್ವಕ್ಕೆ ಏರಿಸಿದುದನ್ನು ಸ್ಥಿರೀಕರಿಸುವುದರ ಜೊತೆಗೆ ತನ್ನ ಸಾಂಸ್ಕೃತಿಕ ಮೌಲ್ಯಗಳ ಪುನರ್ ಸ್ಥಾಪನೆಗೆ ಪ್ರಯತ್ನಪಡುತ್ತದೆ. ಜಾತ್ರೆಗಳಲ್ಲಿ ಆಚರಣೆಗಳು ಹೀಗೆಯೇ ನಡೆಯಬೇಕು ಎಂಬ ನಿರ್ಬಂಧ ಇರುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ನಿರ್ದಿಷ್ಟ ವಂಶಕ್ಕೆ ಸೇರಿದವನೇ ಪೂಜಾರಿ ಆಗಿರಬೇಕು. ಇಂಥವರೇ ಸೇವೆ ಸಲ್ಲಿಸಬೇಕು; ಇವೇ ಮೊದಲಾದ ನಿಬಂಧನೆಗಳು ಇದನ್ನು ಸ್ಪಷ್ಟ ಪಡಿಸುತ್ತವೆ.

ಒಂದು ಜಾತ್ರೆ ಕೇವಲ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರಣಗಳಿಗಾಗಿ ಮಾತ್ರ ಜರುಗುವಂತಹುದಲ್ಲ. ಕೃಷಿ ನಿರತ ಜನರು ವರ್ಷಕ್ಕೊಮ್ಮೆ ಬಿಡುವು ಮಾಡಿಕೊಂಡು ಜಾತ್ರೆಯಲ್ಲಿ ಸೇರಿದಾಗ ತಮ್ಮ ಅಗತ್ಯ ವಸ್ತುಗಳನ್ನು ಕೊಳ್ಳುವ ಕ್ರಿಯೆಯಲ್ಲಿ ಮಗ್ನರಾಗುತ್ತಾರೆ. ಉಳುಮೆಗೆ ಬೇಕಾದ ಅಂದರೆ ನೇಗಿಲಿನಿಂದ ಹಿಡಿದು ಅಲಂಕಾರ ಸಾಮಾಗ್ರಿಗಳಾದ ಬಳೆ.....ಮೊದಲಾದ ವಸ್ತುಗಳವರೆಗೆ ಎಲ್ಲವೂ ಜಾತ್ರೆಯಲ್ಲಿ ದೊರೆಯುತ್ತವೆ. ಜಾನುವಾರು ಪರಿಷೆ ಜಾತ್ರೆಯ ಒಂದು ಅಂಗವಾಗಿದೆ. ಮನೋರಂಜನೆಯು ಜಾತ್ರೆಯ ಇನ್ನೊಂದು ಉಪಯೋಗವಾಗಿದೆ. ನಾಟಕದ ಟೆಂಟ್, ಸರ್ಕಸ್ ಡೇರೆ, ದೊಡ್ಡಗಾಲಿಯ ತೊಟ್ಟಿಲು.....ಹೀಗೆ ಅನೇಕ ಮನೋರಂಜನಾತ್ಮಕ ಚಟುವಟಿಕೆಗಳಿಗೆ ಜಾತ್ರೆಯಲ್ಲಿ ಅವಕಾಶವಿದೆ. ಗ್ರಾಮೀಣ ಜಾತ್ರೆಗಳಲ್ಲಿ ನಿರ್ದಿಷ್ಟ ಕುಲ ಅಥವಾ ವಂಶಕ್ಕೆ ಸೇರಿದ ಜನರು ಕಲೆತರು ಆ ಸ್ಥಳದ ವಿವಿಧ ಜಾತಿ ವರ್ಗಗಳಿಗೆ ಸೇರಿದ ಎಲ್ಲಾ ಜನರು ಅವರೊಂದಿಗೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ನಿರ್ದಿಷ್ಟ ದೈವ, ಧರ್ಮದೊಂದಿಗೆ ನೇರ ಸಂಬಂಧ ಇಲ್ಲದಿದ್ದರೂ ಜಾತಿಮತಗಳ ಭೇದವೆಣಿಸದೇ ಜಾತ್ರೆಗಳಲ್ಲಿ ಭಾಗವಹಿಸುತ್ತಾರೆ. ಹಾಗೆ ಭಾಗವಹಿಸುವವರು ಅನ್ಯ ದೈವವನ್ನು ತಮ್ಮದೆಂದೆ ತಿಳಿದು ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಇದರಿಂದ ಸಾಮಾಜಿಕ ಹೊಂದಾಣಿಕೆ ಸಾಧಿತವಾಗುತ್ತದೆ.

ತಮ್ಮ ಬದುಕಿನ ಏಕತಾನತೆಯನ್ನು ಹೋಗಲಾಡಿಸಿಕೊಳ್ಳಲು ಜನಪದರಿಗೆ ಹಬ್ಬ, ಜಾತ್ರೆಗಳು ಬೇಕು. ಅವು ದುಡಿಮೆಯ ಶ್ರಮವನ್ನು ಮರೆಸಿ ಮನಸ್ಸಿಗೆ ನೆಮ್ಮದಿ, ಶಾಂತಿ, ಸಮಾಧಾನಗಳನ್ನು ತಂದು ಕೊಡುತ್ತವೆ. ನೇಮ ನಿಷ್ಠೆಗಳನ್ನು ಜೀವಂತಗೊಳಿಸುವುದರ ಮೂಲಕ ಅವರಿಗೆ ಕಲಿಸಿಕೊಡುತ್ತವೆ. ಕುಟುಂಬ ಕುಟುಂಬಗಳ ನಡುವೆ ಸೌಹಾರ್ದ ಸಂಬಂಧ ಮೂಡಿಸಲು ಸಮಾಜದಲ್ಲಿ ಐಕ್ಯಭಾವನೆ ಮೂಡಲು ಇವು

ಸಹಾಯಕವಾಗಿವೆ. ಪರಸ್ಪರ ಕಷ್ಟ ಸಂಕಷ್ಟಗಳನ್ನು ತೋಡಿಕೊಳ್ಳಲು ಅವು ಸೂಕ್ತ ಸಂದರ್ಭಗಳು ಇನ್ನು ಮನೋವೈಜ್ಞಾನಿಕವಾಗಿ ವಿಶ್ಲೇಷಿಸುವುದಾದಲ್ಲಿ ಹಲವು ಜಾತ್ರೆಗಳು ವೈಯಕ್ತಿಕವಾಗಿ ಹಲವು ಸಮಸ್ಯೆಗಳಿಗೆ ಪರಿಹಾರ ಸೂಚಿಸುವ, ಒದಗಿಸುವ ಸ್ಥಳಗಳಾಗಿವೆ. ಉದಾ. ಸಿರಿ ಜಾತ್ರೆ.

ಜಾತ್ರೆಗಳಲ್ಲಿ ಜಾತಿಯ ಸಂಕೀರ್ಣ ಕಟ್ಟಳೆಗಳು ಸ್ವಲ್ಪ ಸಡಿಲಗೊಳ್ಳುತ್ತವೆ. ಜಾತ್ರೆಯಿಂದ ಸಾಮಾಜಿಕ ಸಾಮರಸ್ಯ ಸಾಧಿತವಾಗಲು ಸಾಧ್ಯವಿದೆ. ಬೇರೆ ಬೇರೆ ಸಂಸ್ಕೃತಿಯನ್ನು ರೂಪಿಸಿಕೊಂಡ ಸಾಮಾಜಿಕ ಗುಂಪುಗಳು ಒಟ್ಟಾಗಿ ಕಲಿತು ಪರಸ್ಪರರ ಸಂಬಂಧಗಳನ್ನು ದೃಢಪಡಿಸಿಕೊಳ್ಳುವುದರ ಜೊತೆಗೆ ಹೊಂದಾಣಿಕೆಯನ್ನು ಬೆಳೆಸಿಕೊಳ್ಳಲು ಜಾತ್ರೆ ಸಹಾಯಕವಾಗುತ್ತದೆ. ಈ ಐಕ್ಯಭಾವನೆ ಕೇವಲ ರಕ್ತ ಸಂಬಂಧಗಳಿಂದಷ್ಟೇ ಸಾಧಿತವಾಗದೆ ಬಹುಭಾಗ ಸಾಮುದಾಯಿಕ ಆಸಕ್ತಿ ಹಾಗೂ ಪರಂಪರಾಗತ ನಡವಳಿಕೆಯಿಂದ ಸಾಧಿತವಾಗುತ್ತದೆ. (ಮೈಲಾರದ ಜಾತ್ರೆಗಳು, ಎಂ.ಎನ್.ವೆಂಕಟೇಶ, ಅಭಿ ಆದರ್ಶ ಪ್ರಕಾಶನ, ಭದ್ರಾವತಿ, ದಿನಾಂಕ ೨೫.೬.೧೯೯೮).

ಜಾತ್ರೆಗಳ ಉಗಮ

ಜಾತ್ರೆಗಳ ಉಗಮದ ಬಗ್ಗೆ ನಿಖರವಾಗಿ ಹೇಳುವುದು ಕಷ್ಟದ ಕೆಲಸ. ಆದರೆ ಲಭ್ಯವಿರುವ ಇತಿಹಾಸ ಜ್ಞಾನದಿಂದಲೂ, ಊಹೆ ಮತ್ತು ಕಲ್ಪನೆಗಳಿಂದಲೂ ಇದರ ಕುರಿತು ಬಹುಮಟ್ಟಿಗೆ ಹೇಳಲು ಪ್ರಯತ್ನ ಮಾಡಲಾಗಿದೆ. ಪಾಶ್ಚಿಮಾತ್ಯರಲ್ಲಿ Feirac ಎಂಬ ಲ್ಯಾಟೀನ್ ಶಬ್ದದ ತದ್ಭವ Fair ಎಂದು ಪರಿವರ್ತನೆಗೊಂಡು ವ್ಯಾಪಾರ ಕೇಂದ್ರಗಳನ್ನಾಗಿ ಜನರು ಸೇರಿ ತಮ್ಮ ವಹಿವಾಟುಗಳನ್ನು ಸಾದರಪಡಿಸಿಕೊಳ್ಳುತ್ತಿದ್ದರು. "ಇವುಗಳು ವರ್ಷದ ನಿರ್ದಿಷ್ಟ ಕಾಲಾವಧಿಯಲ್ಲಿ ಜರುಗುವುದು ಕಂಡು ಪಾಶ್ಚಿಮಾತ್ಯ ಇತಿಹಾಸಕಾರರು ಇವುಗಳಿಗೆ ತಾತ್ಕಾಲಿಕ ಮಾರುಕಟ್ಟೆಗಳೆಂದು ವ್ಯಾಖ್ಯಾನಿಸಿದ್ದಾರೆ. ಆದರೆ ಪ್ರಾಚೀನ ಕಾಲದಲ್ಲಿ ಜಾತ್ರೆಗಳು ದೈವ ಸನ್ನಿಧಿಯಲ್ಲಿ ನಡೆಯುತ್ತಿದ್ದವು. ಮುಂದೆ ಅದೊಂದು ಧಾರ್ಮಿಕ ಸಂಪ್ರದಾಯವಾಗಿ ಬೆಳೆಯದೇ ಆರ್ಥಿಕ ಚಟುವಟಿಕೆಯಾಗಿ ಬೆಳೆಯಿತು" ಇಂತಹ ಸಂಪ್ರದಾಯಗಳು ಮಂದಗತಿಯಲ್ಲಿ ಸಾಗಿ ಬೆಳೆದು ಮುಂದೆ ಜಾತ್ರೆಯ ರೂಪ ತಾಳಿತು. ಇದು ಪಾಶ್ಚಿಮಾತ್ಯರಲ್ಲಿ ಜಾತ್ರೆಗಳ ಉಗಮದ ಬಗ್ಗೆ ಉಲ್ಲೇಖಿಸಿದರೆ ಭಾರತೀಯರಿಗೆ ಧರ್ಮವೇ ಮೂಲ ಪ್ರೇರಣೆ ಎನ್ನುವುದು ಸರಿಯಾದೀತು. ಇದರ ಹಿನ್ನೆಲೆಯಾಗಿ ಭಾರತೀಯ ಸಂಸ್ಕೃತಿ ಬೆಳೆದು ಬಂದ ಪರಂಪರೆ, ಇಲ್ಲಿ ವಾಸಿಸುವ ಜನ ಇವರ ಬದುಕಿನ ವೈಶಿಷ್ಟ್ಯಗಳ ಆಧಾರದ ಮೇಲೆ ಬೆಳೆದು ಬಂದಿದೆ.

ಜಾತ್ರೆಗಳ ಮಹತ್ವ

ಜಾತ್ರೆಗಳು ಗ್ರಾಮೀಣ ಜನರ ಬದುಕಿನ ಒಂದು ಪ್ರಮುಖ ಅಂಗವಾಗಿವೆ. ವರ್ಷದ ನಿರ್ದಿಷ್ಟ ಸಮಯದಲ್ಲಿ ಜಾತ್ರೆ ಜರುಗುವುದರಿಂದ ಆ ಗ್ರಾಮದ ಜನರಲ್ಲದೆ ನೆರೆ ಹಳ್ಳಿಗಳಿಂದ ಬರುವಂತಹ ಜನರು ಇದರಲ್ಲಿ ಭಾಗವಹಿಸಿ ಹಲವಾರು ಪ್ರಯೋಜನಗಳನ್ನು ಪಡೆಯುವುದನ್ನು ಗಮನಿಸಬಹುದಾಗಿದೆ.

ಜಾತ್ರೆಗಳು ಆಯಾ ದೇವರ ಭಕ್ತರನ್ನು ಅವಲಂಬಿಸಿ ಜರುಗುವುದರಿಂದ ಭಕ್ತರನ್ನಲ್ಲದೆ ಎಲ್ಲ ಧರ್ಮೀಯರನ್ನು ಒಂದು ಕಡೆ ಸೇರುವಂತೆ ಮಾಡುತ್ತವೆ. ಜನಪದರು ತಮಗೆ ಉದ್ಭವಿಸಿದ ಸಮಸ್ಯೆಗಳಾದ

ಕ್ಷಾಮ, ಬರಗಾಲ, ಕಾಯಿಲೆ, ಮಳೆಯ ಅಭಾವದಿಂದಾಗಿ, ಬಾವಿಗಳ ನೀರಿನ ಮಟ್ಟ ಕಡಿತಗೊಂಡಲ್ಲಿ ಇವುಗಳ ಪರಿಹಾರಕ್ಕಾಗಿ, ದೇವರ ಸನ್ನಿಧಿಯಲ್ಲಿ ಹರಕೆಗಳನ್ನು ಬೇಡಿಕೊಂಡು ಅವುಗಳನ್ನು ವಿಧಿವತ್ತಾಗಿ ಆಚರಿಸುವರು. ಈ ಮೇಲಿನ ಎಲ್ಲ ನಂಬಿಕೆಗಳಲ್ಲಿ ಜನಪದರು ಹೊಂದಿದ ಒಲುಮೆಯ ಸಹಕಾರದಿಂದ ಜಾತ್ರೆಗಳು ಜರುಗುತ್ತವೆ. ಜಾತ್ರೆಗಳು ಧರ್ಮವನ್ನು ಜನಪ್ರಿಯಗೊಳಿಸುವುದಲ್ಲದೇ ಇದರಿಂದ ಸಾರ್ವಜನಿಕ ಕ್ಷೇಮಾಭಿವೃದ್ಧಿಯು ಉಂಟಾಗುತ್ತದೆ.

ಜಾತ್ರೆಗಳು ಆರ್ಥಿಕ ವಹಿವಾಟನ್ನು ಪುಷ್ಠಿಗೊಸುತ್ತವೆಂದು ಹೇಳುವುದರಲ್ಲಿ ಯಾವ ಸಂದೇಹವಿಲ್ಲ. ಜಾತ್ರೆ ನೆರೆಯುವ ಸ್ಥಳದಲ್ಲಿ "ಗುಡಿಯ" ಸುತ್ತ ಮುತ್ತಲೂ ಜಾತ್ರೆ ಆರಂಭವಾಗುವುದಕ್ಕಿಂತ ಮುಂಚೆ ಹಲವಾರು ವ್ಯಾಪಾರಸ್ಥರು ಬೀಡು ಬಿಡುವುದು ಸಹಜ. ಬಟ್ಟೆ ಅಂಗಡಿಗಳು, ಕಂಚು, ಹಿತ್ತಾಳೆ, ತಾಮ್ರ, ಹೀಗೆ ಅಂಗಡಿಗಳು ಆಯಾ ದೇವರಿಗೆ ಸಂಬಂಧಪಟ್ಟ ಅಥವಾ ಬೇರೆ ದೇವರ ಮೂರ್ತಿ, ಭಾವಚಿತ್ರ ಮಾರಾಟ ಮಾಡುವ ಪುಸ್ತಕ, ಬಳೆ, ಮಿಠಾಯಿ ಮಳಿಗೆಗಳು, ಫೋಟೋ ಸ್ಟುಡಿಯೋಗಳು, ಸರ್ಕಸ್‌ಗಳು, ಅಲೆದಾಡುತ್ತಾ ಮಾರಾಟ ಮಾಡುವ ಪುಗ್ಗ, ರಿಬ್ಬನ್, ಕೊಳಲು ಇತ್ಯಾದಿ ಸಾಮಾಗ್ರಿಗಳ ಅಂಗಡಿಗಳಿಂದ ಆರ್ಥಿಕ ವಹಿವಾಟನ್ನು ಸರ್ವೆಸಾಮಾನ್ಯವಾಗಿ ಎಲ್ಲ ಜಾತ್ರೆಗಳಲ್ಲಿ ಕಾಣುತ್ತೇವೆ.

ಜಾತ್ರೆಯಲ್ಲಿ ದನಗಳ ಪ್ರದರ್ಶನ, ಮಾರಾಟ, ಆರ್ಥಿಕ ವಹಿವಾಟು ವೃದ್ಧಿಸುವುದಲ್ಲದೇ ಇದರಿಂದ ದೇವಸ್ಥಾನಕ್ಕೆ ಆರ್ಥಿಕ ನೆರವು ಒದಗುತ್ತದೆ. ಈ ಸಂದರ್ಭದಲ್ಲಿ ಉತ್ತಮ ಜಾನುವಾರುಗಳಿಗೆ ಪುರಸ್ಕಾರ ನೀಡುವುದು. ಇದರಿಂದ ರೈತವರ್ಗಕ್ಕೆ ಪುಷ್ಟಿ ದೊರಕಿಸಿದಂತಾಗುತ್ತದೆ. ವ್ಯಾಪಾರಸ್ಥರು ಅಥವಾ ಗ್ರಾಮೀಣರು ತಮ್ಮ ವಸ್ತುಗಳನ್ನು ಮಾರುವುದಕ್ಕಾಗಲೀ ಅಥವಾ ಕೊಳ್ಳುವುದಕ್ಕಾಗಲೀ ಜಾತ್ರೆ ಒಳ್ಳೆಯ ಸುಸಂಧಿ ಕಲ್ಪಿಸಿಕೊಡುತ್ತದೆ.

ಜಾತ್ರೆಗಳು ಜರುಗದಿದ್ದರೆ ಗ್ರಾಮೀಣರ ಹಲವಾರು ಕಲೆಗಳು ನಶಿಸಿ ಹೋಗುತ್ತಿದ್ದವೋ ಏನೋ? ಜಾತ್ರೆಗಳು ಸಾಂಸ್ಕೃತಿಕ ಕಲೆ ಹಾಗೂ ಸಾಹಿತ್ಯಕ್ಕೆ ನೀಡಿದ ಕೊಡುಗೆ, ಪ್ರೋತ್ಸಾಹ ಗಣನೀಯವಾಗಿದೆ. ಗ್ರಾಮೀಣ ಸ್ತ್ರೀಯರು ಒಡವೆಗಳಿಂದ ಶೃಂಗರಿಸಿಕೊಳ್ಳಲು ಇದೊಂದು ಸದಾವಕಾಶವಾದರೆ ಕುಸರಿಕೆಲಸ, ಜರಿಕೆಲಸ, ಮೂರ್ತಿ ಕೆತ್ತನೆಯ ಕೆಲಸ ಇವೆಲ್ಲವುಗಳಿಗೆ ಜಾತ್ರೆ ಜೀವ ತುಂಬಿದೆ ಎಂದರೆ ಅತಿಶಯೋಕ್ತಿಯೇನಲ್ಲ. ಈ ಸಂದರ್ಭದಲ್ಲಿ ಸಾಹಿತ್ಯಿಕ ಕಲೆಗಳಾದ ನಾಟಕ, ದೊಡ್ಡಾಟ, ಸಣ್ಣಾಟ ಇವುಗಳನ್ನು ಪ್ರದರ್ಶಿಸಲು ಕಲಾಕಾರರಿಗೆ ಜಾತ್ರೆಗಳು ಒಂದು ಒಳ್ಳೆಯ ಸುಸಜ್ಜಿತ ವೇದಿಕೆ ದೊರಕಿಸಿ ಕೊಡುವುದಲ್ಲದೇ ಕಲಾವಿದರಿಗೆ ಆರ್ಥಿಕ ಮಟ್ಟದಲ್ಲಿಯೂ ಸಹಕಾರಿಯಾಗುತ್ತವೆ.

ಈ ಸಂದರ್ಭದಲ್ಲಿ ಗ್ರಾಮೀಣ ಯುವಕರಲ್ಲಿಯು ಸಾಹಿತ್ಯಿಕ ಪ್ರತಿಭೆಯನ್ನು ಪ್ರೋತ್ಸಾಹಿಸಲು ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳುವುದು. ಇದರ ಅಂಗವಾಗಿ ಕುಸ್ತಿ, ಕಸರತ್ತು ಇತ್ಯಾದಿ ಸ್ಪರ್ಧೆಗಳು, ಮನೋರಂಜನೆ ಕಲೆಗಳು, ಜಾತ್ರೆಗಳಿರದಿದ್ದರೆ ಇವುಗಳನ್ನೆಲ್ಲ ಎಲ್ಲಿ ಪ್ರದರ್ಶಿಸಬೇಕು? ಎನ್ನುವ ಸಂಶಯದ ಬೇರುಗಳನ್ನು ಈ ಎಲ್ಲ ಕಲೆಗಳನ್ನು ಕಾಪಾಡಿಕೊಂಡು ಮುಂದುವರಿಸುತ್ತಾ ಬಂದಿವೆ.

“ಜಾತ್ರೆಗಳು ಊರಿನ ಒಕ್ಕಟ್ಟಿನ ಸಂಕೇತ. ದೇವರ ಜಾತ್ರೆ ಎಲ್ಲರದು. ಇಡೀ ಊರಿಗೆ ಪ್ರಯೋಜನವುಂಟು, ಯಶಸ್ಸುಗೊಳಿಸುವ ಜವಾಬ್ದಾರಿಯುಂಟು, ಊರ ಜಾತ್ರೆಯ ಕಾಲದಲ್ಲಿ ಪರವೂರಿನಲ್ಲಿರುವ ಬಂಧು-ಬಳಗದವರನ್ನು ಆಮಂತ್ರಿಸುವುದು ಧರ್ಮ, ಕರ್ತವ್ಯ ಅವರಿಗೆ ಉಣಿಸಿ ತಿನಿಸಿ ಕಳಿಸುವುದು ಎಲ್ಲರಿಗೂ ತೃಪ್ತಿ ತರುವ ಕೆಲಸ. ಬಳಗದವರನ್ನು ಹತ್ತಿರ ತರುವುದು ಮಾತ್ರವಲ್ಲ. ಇಡೀ ಊರಿನ ಜನರನ್ನು ಒಂದುಗೊಳಿಸಲು ಜಾತ್ರೆ ಒಳ್ಳೆಯ ಸಾಧನ”[೪] ಜಾತ್ರೆಗಳ ಸಂದರ್ಭದಲ್ಲಿ ಒಳ್ಳೆಯ ಧಾರ್ಮಿಕ ಕಾರ್ಯಗಳನ್ನು ಮಾಡುವುದು, ಆಪ್ತರಲ್ಲಿ ಹೊಸ ಸಂಬಂಧದ ಕುರಿತು ಮಾತುಕತೆ ಮಾಡುವುದು, ಪ್ರಿಯ-ಪ್ರೇಯಸಿಯವರಿಗೂ ಒಳ್ಳೆಯ ಸಂದರ್ಭ ಒದಗಿಸುವುದುಂಟು. ಇನ್ನುಳಿದ ಹಲವಾರು ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳಲು ಜಾತ್ರೆಗಳು ಸದಾವಕಾಶ ಕಲ್ಪಿಸಿಕೊಡುತ್ತವೆ.

“ಜಾನಪದ ಸಂದರ್ಭದಲ್ಲಿ ಮೋಕ್ಷದ ಬಗ್ಗೆ ಹೇಳುವುದು ಉತ್ಪ್ರೇಕ್ಷೆಯಾಗಬಹುದು. ಈಗಿನ ಜಾತ್ರೆಗಳಲ್ಲಿ. ಆದರೆ ಆಗಿನ ಜಾತ್ರೆಗಳು ಮೋಕ್ಷದಾಯಕ ಎಂಬ ಭಾವನೆ ಪ್ರಚಲಿತವಾಗಿತ್ತು. ಹಿಂದೂ ಆಗಿ ಹುಟ್ಟಿದವನು ತನ್ನ ಆಯುಷ್ಯದಲ್ಲಿ ಒಮ್ಮೆಯಾದರೂ ಯಾತ್ರೆಗೆ ಹೋಗಬೇಕು. ಮುಸಲ್ಮಾನರು ದೂರದ ‘ಹಜ್’ಯಾತ್ರೆಗೆ ಹೋಗಬೇಕು”[೫] ಯಾತ್ರೆಯಂತೆ ಜಾತ್ರೆಯೂ ಪುಣ್ಯ ಸಂಚಯನಕ್ಕೆ ದಾರಿ ಎಂಬುದು ಜನರ ನಂಬಿಕೆ” ಇಂತಹ ಹಲವಾರು ಪ್ರಯೋಜನಗಳು ಜಾತ್ರೆಯಿಂದ ಲಭ್ಯ. ಸಂಪ್ರದಾಯಗಳನ್ನು ಜಾತ್ರೆ ಉತ್ಸವಗಳಲ್ಲಿ ಕಾಣುತ್ತೇವೆ. ಈ ಎಲ್ಲ ಕಾರಣದಿಂದಾಗಿ ಜಾತ್ರೆ ಮಹತ್ವ ಪಡೆದಿದೆ.

ಪಾಲ್ಗುಣ ಶುದ್ಧ ಚಿತ್ತ ನಕ್ಷತ್ರದ ದಿನ ಸ್ವಾಮೀಜಿಯ ರಥೋತ್ಸವ ನಡೆಯುತ್ತದೆ. ಹೋಳಿ ಹುಣ್ಣಿಮೆಯಾಗಿ ೨ನೇ ದಿನ ನಡೆಯುತ್ತದೆ. ಸ್ವಾಮೀಜಿಗಳದು ಅದಕ್ಕಿಂತ ಎಂಟುದಿನದ ಹಿಂದೆ ಹೋಳಿ ಹುಣ್ಣಿಮೆಯಾಗಿ ೨ ದಿನದದಲ್ಲಿ ಚಿತ್ತ ನಕ್ಷತ್ರಕ್ಕೆ ಸಂಬಂಧಿಸಿದಂತೆ ೮ ದಿನದ ಹಿಂದೆ ಕಂಕಣ ಧಾರಣ ಮಹೋತ್ಸವ ನಡೆಯುತ್ತದೆ. ಅಂದು ಸಂಜೆಯಿರುತ್ತದೆ. ಪ್ರತಿದಿನ ಒಂದೊಂದು ರಥೋತ್ಸವ ನಡೆಯುತ್ತದೆ. ಅಂದು ಸಂಜೆ ವನಮಹೋತ್ಸವ ಅಂಥ ಎಂದರೆ ಏನು ಕಾರ್ಯಕರ್ತರಿದ್ದಾರೇ ಅವರಲ್ಲಿ ಮುಖ್ಯರಾದವರು ಯಾರ್‍ಯಾರಿದ್ದಾರೋ ಅವರಿಗೂ ಕಂಕಣಕಟ್ಟಿ ಅವರೆಲ್ಲರು ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಲಿ ಅಂತ ಕಂಕಣ ಕಟ್ಟಿಕೊಂಡು ಕಾರ್ಯಕ್ರಮ ನಡೆಸಿಕೊಡುತ್ತವೆ ಎಂಬುದು ಒಂದು ವಾಡಿಕೆ.

ಗುಗ್ಗರಿ ಹಬ್ಬ

ಶಿವರಾತ್ರಿಯ ನಂತರ ಜಾತ್ರೆಗೆ ನಾಂದಿಯಾದ ಕಂಕಣ ಪೂಜೆಯ ಒಂದುವಾರ ಮುನ್ನ ಬರುವ ಶುಭ ಸೋಮವಾರದಂದು “ಗುಗ್ಗರಿ ಹಬ್ಬ” ಆಚರಿಸಲಾಗುತ್ತದೆ. ಇದು ಜಾತ್ರೆಯ ಪ್ರಾರಂಭಕ್ಕೆ ನಾಂದಿ. ಅಂದು ಎರಡೂ ಮಠಗಳಲ್ಲಿ ವಿಶೇಷ ಪೂಜೆ ಇರುತ್ತದೆ. “ಕುರುಳಿನಿಂದ ಹುರುಳಿ” ಬೇಯಿಸಿ ತಯಾರಿಸಲಾದ ಗುಗ್ಗರಿಯನ್ನು ಪ್ರಸಾದದ ರೂಪದಲ್ಲಿ ವಿತರಿಸಲಾಗುವುದು. ಅಂದು ಸುಟ್ಟ ಕುರುಳಿನ ಭಸ್ಮವೇ ಪವಿತ್ರವಾದ ಧೂಳ್ತ. ಇದು ವರ್ಷವಿಡೀ ಎರಡು ಮಠಗಳಲ್ಲಿ ಭಕ್ತರ ಹಣೆಯನ್ನು ಅಲಂಕರಿಸುವ “ಪವಿತ್ರ ವಿಭೂತಿ”

ಪಾಲ್ಗುಣ ಮಾಸ

ಪ್ರತಿ ವರ್ಷ ಪಾಲ್ಗುಣ ಮಾಸದ ಶುದ್ಧ ದಶಮಿಯಂದು ಈ ಕ್ಷೇತ್ರದ ಅತ್ಯಂತ ಮಹತ್ವದ ವಾರ್ಷಿಕ ರಥೋತ್ಸವ ಕಾರ್ಯಕ್ರಮಗಳು ಪ್ರಾರಂಭ. ಮರಿ ಪರಿಷೆಯೊಂದಿಗೆ ಮುಕ್ತಾಯವಾಗುವ ಈ ಮಾಸದಲ್ಲಿಯ ಕಾರ್ಯಕ್ರಮಗಳು ಭಕ್ತಸಾಗರದ ಮಧ್ಯೆ ನಡೆಯುತ್ತವೆ.

ದಶಮಿಯಂದು ನಡೆಯುವ ಸ್ವಸ್ತಿವಾಹನ ಮಂಟಪ ಪೂಜೆ ಕಂಕಣಧಾರಣೆ, ಪ್ರಾರಂಭೋತ್ಸವಗಳು, ಬಾಬುದಾರ ಜೋಯಿಷರಿಂದ ಶಾಸ್ತ್ರೋಕ್ತವಾಗಿ ಆರಂಭಗೊಂಡು ಜಾತ್ರ್ಯೋತ್ಸವದ ವಿವಿಧ ಉತ್ಸವಗಳು ಪ್ರತಿದಿನ ನಡೆಯುತ್ತವೆ.

ಏಕಾದಶಿಯಂದು ಸರ್ವವಾಹನೋತ್ಸವ, ದ್ವಾದಶಿಯಂದು ಮಯೂರ ವಾಹನೋತ್ಸವ, ತ್ರಯೋದಶಿಯಂದು ರಥಕ್ಕೆ ಕಳಸ ಸ್ಥಾಪನೆ ಹಾಗೂ ಗಜವಾಹನೋತ್ಸವ ಚತುರ್ದಶಿಯಂದು ಸಿಂಹವಾಹನೋತ್ಸವ, ಪೌರ್ಣಮಿಯಂದು ವಾಹನೋತ್ಸವ ಹಾಗೂ ಅಶ್ವವಾಹನೋತ್ಸವಗಳು ಪಾದಗಟ್ಟೆಯವರೆಗೆ ಹೋಗಿ ಮರಳುತ್ತವೆ. ಈ ದಿನಗಳಂದು ಶ್ರೀ ಕ್ಷೇತ್ರದ ಎಲ್ಲಾ ದೇವಸ್ಥಾನಗಳಲ್ಲಿ ವಿಶೇಷ ಪೂಜಾ ವಿಧಿ-ವಿಧಾನಗಳಂತೆ ನಡೆಯುತ್ತವೆ. ಮರುದಿನ ಪಾಡ್ಯಮಿಯಂದು ರಥಕ್ಕೆ ತೈಲಾಭಿಷೇಕ ಮಾಡಲಾಗುತ್ತದೆ.

ರಥೋತ್ಸವ

"ರಾಜ್ಞೋ ರಾಷ್ಟ್ರಸ್ಯ ಸುಖದಂ ಆಯುರಾರೋಗ್ಯ ವರ್ಧನಂ |

ಪ್ರಜಾನಾಂವಾಸು ದೇವಸ್ಯ ರಥಾರೋಹಣ ಮುತ್ತಮಮ್ ||

ರಥೋತ್ಸವ ದೇಶವನ್ನಾಳುವ ರಾಜರಿಗೆ ರಾಷ್ಟ್ರದ ಸಮಗ್ರ ಪ್ರಜೆಗಳಿಗೆ ಸುಖವನ್ನು ನೀಡುವುದಲ್ಲದೆ, ಅವರ ಆಯುರಾರೋಗ್ಯವನ್ನು ಹೆಚ್ಚಿಸುವುದು. ಈ ದೃಷ್ಟಿಯಿಂದ ಭಗವಂತನ ರಥಾರೋಹಣ ಮಹತ್ತರವಾದದ್ದು.

ನಮ್ಮ ಮಾನಸಿಕ ಉಲ್ಲಾಸಕ್ಕಾಗಿ, ಧಾರ್ಮಿಕ ಶ್ರದ್ಧಾವರ್ಧನೆಗಾಗಿ, ಸಾಮಾಜಿಕ ಸಂಘಟನೆಗಾಗಿ, ಭಗವಂತನಲ್ಲಿ ಕಲಾವೃದ್ಧಿಗಾಗಿ, ನಿತ್ಯೋತ್ಸವ, ಮಾಸೋತ್ಸವ, ವರ್ಷೋತ್ಸವ, ರಥೋತ್ಸವಗಳನ್ನು ಹಿಂದಿನಿಂದಲೂ ನಡೆಸಿಕೊಂಡು ಬರಲಾಗುತ್ತದೆ. ಇಲ್ಲಿ ಸೇರಿದ ಜನ, ಜಾತಿ, ಮತ ಮರೆತು ಒಂದಾಗುತ್ತಾರೆ; ಪರಸ್ಪರ ಕಲೆತು ಸಂತೋಷಪಡುತ್ತಾರೆ. ನವ ಚೈತನ್ಯ ಸ್ಫೂರ್ತಿ ಪಡೆದು ದೈನಂದಿನ ಜೀವನದಲ್ಲಿ ಉಲ್ಲಾಸಿತರಾಗುತ್ತಾರೆ.

ದೇವಾಲಯವನ್ನು ಕಟ್ಟಿಸುವಾಗಲೇ ಆಗಮಿಕರು ಭಕ್ತರಿಂದ ಒಂದು ಪ್ರತಿಜ್ಞೆ ಮಾಡಿಸಿರುತ್ತಾರೆ. "ನಿತ್ಯಪೂಜಾರಿ ಚೋತ್ಸವಂಚ ಜೀರ್ಣೋದ್ಧಾರ ಮತಃ ಪರಮ್| ಕಾರಯಾವೋ ವಯಂ ದೇವ" ಅಂದರೆ ಹೇ ಭಗವಂತ ನಾವು ಕೇವಲ ದೇವಾಲಯ ಕಟ್ಟಿಸಿ ಕೈ ಬಿಡುವವರಲ್ಲ. ಇನ್ನು ಮುಂದೆ ದೈನಂದಿನ ಪೂಜೆ,

ವಾರ್ಷಿಕ ಉತ್ಸವ ಜೀರ್ಣೋದ್ಧಾರ ಇವುಗಳನ್ನೆಲ್ಲಾ ತಪ್ಪದೇ ಮಾಡಿಕೊಂಡು ಹೋಗಲು ಬದ್ಧರಾಗಿದ್ದೇವೆ ಎಂದು ನಿನ್ನ ಮುಂದೆ ನಿಂತು ಈಗಲೇ ಪ್ರತಿಜ್ಞೆ ಮಾಡಿ ಹೇಳುತ್ತೇವೆ ಇದಕ್ಕೆ ತಪ್ಪುವುದಿಲ್ಲ.

ಬಹುಶಃ ಈ ಪ್ರತಿಜ್ಞೆಯ ಫಲಶ್ರುತಿಯೋ ಎಂಬಂತೆ, ಸಾಮಾನ್ಯವಾಗಿ ಮಧ್ಯಮ ಹಾಗೂ ದೊಡ್ಡ ದೇವಾಲಯಗಳಲ್ಲೆಲ್ಲಾ 'ತೇರು' ಅಥವಾ "ರಥೋತ್ಸವ" ನಡದೇ ನಡೆಯುತ್ತದೆ.

ರಥದ ಕಲ್ಪನೆ

ವಾರ್ಷಿಕ ಉತ್ಸವದಲ್ಲಿ ಭಗವಂತನ ಮೂರ್ತಿಯನ್ನು ಕೂಡಿಸಿ ಮೆರವಣಿಗೆ ಮಾಡಲು ಬಳಸುವ ಕನಿಷ್ಟ ನಾಲ್ಕು ಗಾಲಿಯ ಸಾಲಂಕೃತ ವಾಹನವೇ ರಥ, ನವ-ನವ ವಿನ್ಯಾಸ ರಚನೆ, ಕಲಾ ಕೌಶಲಗಳಿಂದ ಕೂಡಿದ ರಥ ಅಥವಾ ತೇರು ಕಣ್ಮನ ಸೆಳೆಯುತ್ತದೆ. ರಥವು ಶಿಲ್ಪಿಯ ಲಲಿತಕಲಾ ವೈಭವೀಕರಣವನ್ನು ಸಾರುತ್ತದೆ. ದೇವರ ಮಹಿಮೆ ಹಾಗೂ ಐಶ್ವರ್ಯಕ್ಕೆ ಅನುಗುಣವಾಗಿ ರಥದ ಆಕಾರ, ಗಾತ್ರ ಭವ್ಯತೆಯಲ್ಲಿ ವ್ಯತ್ಯಾಸವಿರುವುದನ್ನು ಕಾಣುತ್ತೇವೆ.

ಎಲ್ಲಾ ದೇವಾಲಯಗಳ ತೇರಿನ ಮೇಲ್ಭಾಗದಲ್ಲಿ ಶೃಂಗಾರಗೋಪುರ, ಅದಕ್ಕೆ ಸುತ್ತುವ ಬಣ್ಣ ಬಣ್ಣದ ಬಟ್ಟೆ, ಸಾವಿರಾರು ಪಟಾಕೆಗಳು, ತುತ್ತ ತುದಿಗೆ ಬಂಗಾರ, ಬೆಳ್ಳಿ ಅಥವಾ ಹಿತ್ತಾಳೆಯ ಕಲಶ ಇವೆಲ್ಲಾ ನೋಡಲು ಕಣ್ಣಿಗೆ ನಯನ ಮನೋಹರವನ್ನುಂಟು ಮಾಡುತ್ತವೆ. ಜಗಧೀಶ್ವರನ ರಥವನ್ನು ಸಾಕ್ಷಾತ ಚತುರ್ಮುಖ ಬ್ರಹ್ಮನು ಎಳೆಯುವುದರಿಂದ ಅದು ಬ್ರಹ್ಮರಥ ರಥದ ರಚನಾಕಾರ್ಯ ಕೆಳಭಾಗದಿಂದ ಮೇಲಕ್ಕೆ ಅಂತಸ್ತುಗಳಲ್ಲಿ ನಡೆಯುತ್ತದೆ. ತೇರಿನ ಗಡ್ಡೆಯ ಹೊರಮೈ ಸುತ್ತಲೂ ದಶಾವತಾರ, ನವಗ್ರಹ, ಪುರಾಣೇತಿಹಾಸ, ರಾಮಾಯಣ, ಮಹಾಭಾರತ ಸನ್ನಿವೇಶಗಳು, ಗಂಧರ್ವ, ದೇವತೆ, ಸಿಂಹ, ಆನೆ, ಕುದುರೆ, ಮೊಸಳೆ, ಶರಭ, ನಾಗ, ಹನುಮಂತ, ಗರುಡ, ಪ್ರಾಣಿ, ಪಕ್ಷಿಗಳು ನಂದಿ ಮುಂತಾದ ಹಲವು ವಿಧವಾದ ಕುಸುರಿ ಕೆತ್ತನೆಯಿಂದ ಕೂಡಿದ ಕಲೆಯ ಬಲೆ ಅಥವಾ ಕಲೆಯ ನೆಲೆಯನ್ನು ರಥದಲ್ಲಿ ಕಾಣಬಹುದು. ಹೊರಮೈ ನಕ್ಷೆಗೆ ಬಂಗಾರದ ತಗಡು ಕೂರಿಸಿ, ವೈಭವೋಪೇತಗೊಳಿಸುವುದುಂಟು.

ರಥ, ದೇವತೆಗಳ ನೆಲೆ

ರಥವನ್ನು ಎಳೆಯುವ ಮುನ್ನ ಆಗಮಿಕರು, ಅದರ ಅಡಿಯಿಂದ ಮುಡಿಯವರೆಗೆ ಹಲವು ದೇವತೆಗಳನ್ನು ಅದರಲ್ಲಿ ಅವಾಹನೆ ಮಾಡುತ್ತಾರೆ. ರಥದ ಅಕ್ಕ ಪಕ್ಕಕ್ಕೆ ಸೂರ್ಯ, ಚಂದ್ರರನ್ನು ನಾಲ್ಕು ಚಕ್ರಗಳಲ್ಲಿ ನಾಲ್ಕು ವೇದಗಳನ್ನು, ಚಕ್ರದ ಹಲ್ಲುಗಳಲ್ಲಿ ವಾಯುದೇವತೆಯನ್ನು ಮುಖದಲ್ಲಿ ಸೂರ್ಯನ ಸಪ್ತಾಶ್ವಗಳನ್ನು, ರಂಧ್ರಗಳಲ್ಲಿ ಆಕಾಶದೇವತೆಯನ್ನು, ಪತಾಕೆಗಳಲ್ಲಿ ವಾಯುವನ್ನು, ಸಾರಥಿ ಸ್ಥಾನದಲ್ಲಿ ಬ್ರಹ್ಮನನ್ನು, ಶಿಖರದಲ್ಲಿ ವಾಸುದೇವನನ್ನು ಅಹ್ವಾನಿಸಲಾಗುತ್ತದೆ.

ಉತ್ಸವ ಏಕೆ?

ಮಹೋತ್ಸವಂ ಪ್ರಕುರ್ವೀತ ರಾಜಾ ರಾಷ್ಟ್ರಾಭಿವೃದ್ಧಯೇ |

ಧರ್ಮಯುಕ್ತೋಭವೇದ್ರಾಜಾ, ಜನಾಃ ಧರ್ಮ ಪರಾಯಣಾಃ |

ಭವಂತಿ ಸುಖಿನಸ್ಸರ್ವೇ. ಸರ್ವದುಃಖ ವಿವರ್ಜಿತಾಃ |

ಅಂದರೆ, ಆಡಳಿತ ಮಾಡುವವರು ರಾಷ್ಟ್ರಾಭಿವೃದ್ಧಿಗಾಗಿ ಮಹೋತ್ಸವವನ್ನು ಆಚರಿಸಬೇಕು. ಅದರಿಂದ ಆಡಳಿತದಾರರು ಹಾಗೂ ಪ್ರಜೆಗಳು, ಧರ್ಮಮಾರ್ಗ ನಿರತರಾಗುತ್ತಾರೆ. ಸ್ವರಾಜ್ಯ, ಸುರಾಜ್ಯಾಗುತ್ತದೆ. ಜನರ ದುಃಖ ದೂರವಾಗಿ ಸರ್ವರೂ ಸುಖಿಗಳಾಗುತ್ತಾರೆ.

ಹೀಗೆ ದೇಶದ ಕ್ಷಾಮ ದೂರವಾಗಿ ಕ್ಷೇಮ ನೆಲೆಸಲು, ನಾವು ವಾಸಿಸುವ ಈ ಕರ್ಮಕ್ಷೇತ್ರವು ಧರ್ಮಕ್ಷೇತ್ರವೂ ಆಗಲು, ನಮ್ಮ ಸಾಕ್ಷರರು, ರಾಕ್ಷಸರಾಗದಿರಲು, ಸಮಾಜದಲ್ಲಿ ಉತ್ತಮ ಬಾಂಧವ್ಯ ಸಾಮರಸ್ಯ ಮೂಡಲು, ಜನರಿಗೆ ಮನೋರಂಜನೆ ಲಭಿಸಲು, ವ್ಯಾಪಾರ, ವಾಣಿಜ್ಯ ವರ್ಧಿಸಲು ಆಸ್ತಿಕತೆ ನೆಲೆಸಲು, ರಥೋತ್ಸವ ಪೂರಕ ಪ್ರೇರಕವಾಗಿದೆ ಎನ್ನಬಹುದು. (ಭಾರತೀಯ ಹಬ್ಬಗಳ ವೈಶಿಷ್ಟ್ಯ, ಪ್ರೊಫೆಸರ್ ವಿದ್ವಾನ್ ವಿ.ಎಸ್.ಭಟ್, ಪ್ರಾ.ಚೀ.ಪ್ರಿಂಟರ್ಸ್, ಬೆಂಗಳೂರು, ೨೦೦೨). ತೇರು ದೇವಾಲಯಗಳಲ್ಲಿರುವ ಚರಮೂರ್ತಿಗಳನ್ನು ಕೂರಿಸಿ ಮೆರೆಸುವ ಒಂದು ವಾಹನ. ಇದನ್ನು ರಥ ಎಂದೂ ಕರೆಯುವುದುಂಟು.

ತೇರು ಒಂದು ದೇವಾಲಯವಿದ್ದಂತೆಯೇ. ದೇವಾಲಯಗಳಿಗೆ ವಿಮಾನಗಳಿರುವಂತೆ ತೇರುಗಳಿಗೂ ಉಂಟು. ತೇರುಗಳು ಸಾಮಾನ್ಯವಾಗಿ ಸುಂದರ ಮರದ ರಚನೆಗಳು, ರಥದ ನಾಲ್ಕು ಕಡೆಯಲ್ಲಿ ನಾನಾ ರೀತಿಯ ಮರದ ಕೆತ್ತನೆಗಳನ್ನು ಅಳವಡಿಸಲಾಗಿರುತ್ತದೆ. ಭಾರತೀಯ ಶಿಲ್ಪ ಪರಂಪರೆಯಲ್ಲಿ ಈ ದಾರು ಶಿಲ್ಪಗಳಿಗೆ ವಿಶಿಷ್ಟ ಸ್ಥಾನವಿದೆ.

ಕರ್ನಾಟಕದ ದೇಗುಲಗಳಲ್ಲಿ ರಥೋತ್ಸವ ಮೊದಲಾದವುಗಳಲ್ಲಿ ಬಳಸುವ ರಥ ಹಾಗೂ ಬಂಡಿಗಳ ಮಾದರಿಗಳನ್ನು ವಿಶೇಷವಾಗಿ ಕಾಣಬಹುದು. ರಥೋತ್ಸವದ ಸಂಪ್ರದಾಯ ಈ ನಾಡಿನಲ್ಲಿ ಬಹು ಹಿಂದಿನಿಂದ ಪ್ರಚಲಿತವಾಗಿರುವಂತೆ ತೋರುತ್ತದೆ. ನಾಯಕನಹಟ್ಟಿ ತಿಪ್ಪೇಸ್ವಾಮಿಯ ರಥೋತ್ಸವಕ್ಕೆ ೫ ಗಾಲಿಗಳುಳ್ಳ ಸುಂದರವಾದ ರಥವಿದೆ.

ಉತ್ಸವಕ್ಕೆ ತೇರುಗಳನ್ನು ಸಿದ್ಧಮಾಡುವ ಬಗೆಯೂ ಆಯಾ ಪ್ರದೇಶಗಳಿಗೆ ಅನುಗುಣವಾಗಿರುತ್ತದೆ. ತೇರು ಕಟ್ಟಲು ಕೆಲವು ಕಡೆ ಕತ್ತಾಳೆನಾರಿನ ಹಗ್ಗಗಳಿಂದ ಬಿಗಿಕೊಟ್ಟು ಹಂತಗಳ ಕಂಬಸಾಲನ್ನು ಬಿಗಿಪಡಿಸುತ್ತಾರೆ. ಕೊನೆಯ ಹಂತದಲ್ಲಿ ಬಿದಿರಿನ ಗೋಳಾಕಾರದ ಶಿಖರವನ್ನು ರಚಿಸಿ ತೇರಿಗೆ ಸೇರಿಸುತ್ತಾರೆ. ಅದರ ಮೇಲೆ ಬಣ್ಣದ ಬಟ್ಟೆಯನ್ನು ಅಳವಡಿಸುತ್ತಾರೆ. ಕಳಸವನ್ನು ಅದರ ಹೊಕ್ಕುಳ ಗೂಟಕ್ಕೆ ಸೇರಿಸುತ್ತಾರೆ. ಈ ಕಳಸ ಒಂದರಿಂದ ಐದರತನಕ ಇರಬಹುದು. ಇದು ಹಿತ್ತಾಳೆಯದಾಗಿರುತ್ತದೆ. ಇಲ್ಲವೆ ಸ್ವರ್ಣದ ಲೇಪನದಿಂದ ಕೂಡಿರುತ್ತದೆ. ಇದಕ್ಕೆ ಸೇರಿದಂತೆ ಕೆಲವು ಬಣ್ಣದ ನಿಶಾನಿ ಅಥವಾ ಛತ್ರಿಯನ್ನು ನಿಲ್ಲಿಸಿರುತ್ತಾರೆ.

ಪ್ರತಿಯೊಂದು ಅಂತಃಸ್ತಿನಲ್ಲೂ ನಾಲ್ಕು ಅಥವಾ ಎಂಟು ಮೂಲೆಗಳಲ್ಲೂ ವಿವಿಧ ವರ್ಣದ ಬಾವುಟಗಳನ್ನು (ದಾಳು) ಸೇರಿಸುತ್ತಾರೆ. ಹಂತದ ಬೋದಿಗೆಯ ಸುತ್ತಲೂ ಬಟ್ಟೆಯ ತೋರಣವಿರುತ್ತದೆ.

ಮೂಲೆಗಳಲ್ಲಿ ನಾಲ್ಕು ಐದು ಅಡಿ ಬಣ್ಣಗಳ ಪಟ್ಟಿಪಟ್ಟಿಯ ದಂಡೆ ನೇತು ಬಿಡುತ್ತಾರೆ. ಇದರ ಒಳಗೆ ಒಣಹುಲ್ಲು ಇಲ್ಲವೆ ಹೊಟ್ಟನ್ನು ತುಂಬಿರುತ್ತಾರೆ. ದೇವರನ್ನು ಕೂರಿಸಲು ಪಾಠವನ್ನು ಮೊದಲು ಅಂತಸ್ತಿನಲ್ಲಿ ನಡುಭಾಗದಲ್ಲಿ ನಿರ್ಮಿಸಿರುತ್ತಾರೆ. ದೇವರನ್ನು ಈ ಪೀಠಕ್ಕೆ ಸಾಗಿಸಲು ಮರದ ಅಥವಾ ಕಬ್ಬಿಣದ ಏಣಿಗಳನ್ನು ಬಳಸುತ್ತಾರೆ. ತೇರಿನ ವಸ್ತ್ರಾಲಂಕಾರದ ವೈಶಿಷ್ಟ್ಯ ಆಯಾ ಪ್ರದೇಶಗಳಿಗೆ ತಕ್ಕಂತೆ ಇರುತ್ತದೆ. ತೇರನ್ನು ಎಳೆಯಲು ನಾರಿನಿಂದ ಮಾಡಿದ ಹಗ್ಗವನ್ನು ಬಳಸುತ್ತಾರೆ.

ತೇರನ್ನು ಎಳೆಯುವ ಹಗ್ಗವನ್ನು ತಳುಕಿನವರು ಮಾಡಿಕೊಟ್ಟಿದ್ದಾರೆ. ಹಗ್ಗವನ್ನು ಎರಡು ಲಾರಿಯಲ್ಲಿ ಹೇರಿಕೊಂಡು ತರಲಾಯ್ತಂತೆ ಅಷ್ಟು ದಪ್ಪದ ಹಗ್ಗವನ್ನು ಒಳಗೊಂಡಿರುವುದನ್ನು ಕಾಣಬಹುದು. ಹಗ್ಗವನ್ನು ನೇಯುವವರು ಒಂದ್ಕೊತ್ತಿನಿಂದ ಹಗ್ಗವನ್ನು ನೇಯಿತ್ತಾರಂತೆ. ಇದಕ್ಕಿಂತ ಹಳೆಯದಾದ ಹಗ್ಗವನ್ನು ಧರ್ಮಸ್ಥಳದ ಮಂಜುಶ್ರಿ ಮ್ಯೂಸಿಯಂನಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಅಷ್ಟು ದೊಡ್ಡ ಪ್ರಮಾಣದಲ್ಲಿರುವುದನ್ನು ಕಾಣಬಹುದು.

ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ತೇರುಗಳು ಬಹಳ ಸುಂದರವಾಗಿರುತ್ತವೆ. ಹಾಗೆಯೇ ಕೊಟ್ಟೂರು, ಹಂಪೆ, ನಂಜನಗೂಡು, ಉಡುಪಿ, ನಾಯಕನಹಟ್ಟಿ ಮುಂತಾದ ಕಡೆಗಳಲ್ಲಿರುವ ತೇರುಗಳು ಬಹಳ ಎತ್ತರವಾಗಿದ್ದು ತುಂಬಾ ಸುಂದರ ವಾಗಿರುತ್ತವೆ.

ತೇರಿನ ವಿಸ್ತೀರ್ಣ

ನಾಯಕನಹಟ್ಟಿ ತಿಪ್ಪೇಸ್ವಾಮಿಯ ತೇರು ಸುಮಾರು ೩೦೦ ವರ್ಷಗಳ ಇತಿಹಾಸವನ್ನು ಹೊಂದಿರುವಂತಹದ್ದು. ತುಂಬಾ ಹಳೆಯದಾದಂತಹದ್ದು. ಇದರ ಶಿಲ್ಪಿ "ಎಂ.ಪರಮೇಶ್ವರಾಚಾರ್ಯ" ಇವರು ಶಿವಮೊಗ್ಗ ಜಿಲ್ಲಾ, ಚನ್ನಗಿರಿ ತಾ, ಗೋಪ್ಪೇನಹಳ್ಳಿ ಗ್ರಾಮವಾಸಿಯವರು. ಇವರು ವಿಶ್ವಬ್ರಾಹ್ಮಣ ಸಮುದಾಯಕ್ಕೆ ಸೇರಿದವರು ಇವರು ತಿಪ್ಪೇರುದ್ರಸ್ವಾಮಿ ರಥ ಪ್ರತಿಷ್ಠಾಪನೆಯನ್ನು ದಿನಾಂಕ ೧೫.೩.೧೯೮೪ನೇ ಇಸವಿಯಲ್ಲಿ ಪ್ರತಿಷ್ಠಾಪಿಸಿದ್ದಾರೆ.

ತೇರು ೬೫ ಅಡಿಗಳಷ್ಟು ಎತ್ತರವಾಗಿದೆ. ೧೧ ಅಂತಸ್ತುಗಳನ್ನು ಹೊಂದಿತ್ತು. ತುಂಬಾ ಹಳೆಯದಾದ ಕಾರಣ ತೇರು ಎತ್ತರವಿರುವುದರಿಂದ ಭಾರಕ್ಕೆ ವಾಲುತಿತ್ತು. ಆದ್ದರಿಂದ ತೇರಿನ ೨ ಅಂತಸ್ತನ್ನು ಕಡಿಮೆ ಮಾಡಲಾಗಿದೆ. ಪ್ರಸ್ತುತ ೯ ಅಂತಸ್ತುಗಳನ್ನು ಒಳಗೊಂಡಿದೆ. ೧೦ ಅಡಿ ಎತ್ತರದಲ್ಲಿ ದೇವರ ವಿಗ್ರಹ ಕಂಡು ಬರುತ್ತದೆ. ಇದರ ಗಾಲಿಗಳು ಸು.೧೦ ಅಡಿ ಎತ್ತರವಿದ್ದು ೩೦ ಅಡಿ ಸುತ್ತಳತೆಯನ್ನು ಹೊಂದಿವೆ. ಗಾಲಿಯ ಒಟ್ಟು ತೂಕ ೧೦೦ ಟನ್‌ಗಳನ್ನು ಒಳಗೊಂಡಿದೆ.

ನಾಯಕನಹಟ್ಟಿ ತಿಪ್ಪೇಸ್ವಾಮಿಗೆ ಎರಡು ತೇರುಗಳಿವೆ. ಒಂದು ದೊಡ್ಡತೇರು, ಚಿಕ್ಕತೇರು ಎಂದು ಕರೆಯುವುದು ವಾಡಿಕೆ. ಪ್ರತಿಯೊಂದು ಕ್ಷೇತ್ರಕ್ಕೂ ಸಂಬಂಧಿಸಿದಂತೆ ರಥೋತ್ಸವಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಭಕ್ತಾದಿಗಳು ಬಂದು ಸೇರುತ್ತಾರೆ. ಹರಕೆಯ ಜನ ತೇರಿನಲ್ಲಿ ಕುಳಿತ ಉತ್ಸವಮೂರ್ತಿಗೆ ಬಾಳೆಹಣ್ಣು, ಮೆಣಸು, ಪುರಿ, ಉತ್ತುತ್ತಿ, ಮುಂತಾದವುಗಳನ್ನು ತೂರಿ ಬಿಡುತ್ತಾರೆ. ಇದನ್ನು ಸೂರುಬೆಲ್ಲ

ಎನ್ನುತ್ತಾರೆ. ಕೆಲವೆಡೆ ಬಾಳೆಹಣ್ಣಿಗೆ ದವನವನ್ನು ಸಿಕ್ಕಿಸಿ ದೇವರ ಹತ್ತಿರ ತೂರಿ ಎಸೆಯುತ್ತಾರೆ. ಕರ್ನಾಟಕದ ಜನಜೀವನದಲ್ಲಿ ರಥೋತ್ಸವಗಳ ಪಾತ್ರ ಸಾಕಷ್ಟಿವೆ. ಜಾತ್ರೆಯ ದಿನಗಳು ಆ ಸುತ್ತಿನ ಜನರಿಗೆ ಪವಿತ್ರ ಹಾಗೂ ಸಂಭ್ರಮದ ದಿನಗಳಾಗಿರುವುದಲ್ಲದೆ ಬೇರೆ ಬೇರೆಡೆಗಳಿಂದ ಬರುವ ಜನರಿಗೆ ವ್ಯಾಪಾರ ಉದ್ಯಮಗಳನ್ನು ಬೆಳೆಸಲು ಸಹಾಯಕವಾಗಿರುತ್ತವೆ.

ದೊಡ್ಡ ರಥೋತ್ಸವ

ಧಾರ್ಮಿಕ ಕ್ಷೇತ್ರದಲ್ಲಿ ಉತ್ಸವಗಳ ರಾಜನೆಂದು ಕರೆಯಲ್ಪಡುವ ದೊಡ್ಡ ರಥೋತ್ಸವ ಫಾಲ್ಗುಣ ಮಾಸದ ಚಿತ್ತಾ ನಕ್ಷತ್ರದ ಮಧ್ಯಾಹ್ನ ೩ ಗಂಟೆಯಿಂದ ಜರುಗುತ್ತದೆ. ಇಲ್ಲಿ ಇಡೀ ಭಾರತದ ವೈವಿಧ್ಯಮಯವನ್ನು ಕಾಣಬಹುದು ದರುಶನ ಮಾಡಿದ ಜನಸಾಗರ, ಜಾತಿ, ಕುಲ, ಅಂತಸ್ತು, ವರ್ಣ, ಲಿಂಗ ಯಾವುದರ ಕ್ರೋಧವಿಲ್ಲದೆ, ನಿಶ್ಚಿಂತೆಯಿಂದ ಜನಸಾಗರವೇ ಇಲ್ಲಿ ನೆರೆದಿದೆ. ಜನ ಸಾಗರದ ಮಧ್ಯೆ ತಿಪ್ಪೇಸ್ವಾಮಿಯ ರಥ ೩ ಟನ್ ತೂಕದ ರಥ. ಅದು ಹೆಂಗೆ ನಿಂತಿದಿಯೋ ಅದಕ್ಕೆ ಹೇಗೆ ಹಗ್ಗವನ್ನು ಕಟ್ಟುತ್ತಾರೋ ಎಂಬುದೆಲ್ಲವು ಕೂಡ ಪರಮಾಶ್ಚರ್ಯವಾಗಿ ನೋಡುಗರ ಕಣ್ಮನ ಸೆಳೆಯುತ್ತದೆ.

ಜನರಲ್ಲಿ ಯಾವ ರೀತಿಯ ಕ್ರಾಂತಿಯಿಲ್ಲ, ಸ್ವಾರ್ಥವಿಲ್ಲ, ಅಹಂಯಿಲ್ಲ, ದೊಡ್ಡಸ್ತಿಕೆಯಿಲ್ಲ. ಇಲ್ಲಿ ಬಂದಿರುವವರೆಲ್ಲ ಸ್ವಾಮಿಯ ಭಕ್ತರು. ಒಂದು ಕಡೆ ವೈದಿಕ ಮಂತ್ರ ಮತ್ತೊಂದು ಕಡೆ ಶಿವಶರಣರ ವಚನಗಳನ್ನು ಹೇಳುವವರು ಮತ್ತು ಬುಡಕಟ್ಟು ಸಂಸ್ಕೃತಿಯ ಗೊರವರು ವೇಷ ಹಾಕಿಕೊಂಡು ಡಮರುಗಗಳನ್ನು ಬಾರಿಸುವಂತಹದು. ಇದನ್ನೆಲ್ಲಾ ನೋಡಿದಾಗ ನಾಸ್ತಿಕರು ಕೂಡ ಭಕ್ತಿ ಭಾವವನ್ನು ಹೊಂದುವುದನ್ನು ಕಾಣಬಹುದು. ಅವರ ದೇವರಿಲ್ಲ ಎಂಬಂತಹ ಕಲ್ಪನೆ ಹೊಳೆಯಲ್ಲಿ ಕೊಚ್ಚಿ ಹೋಗುತ್ತದೆ. ಇದನ್ನೆಲ್ಲಾ ಕಂಡಾಗ ವಿಶ್ವದ ಎಲ್ಲಾ ಕ್ರಿಯಗಳಿಗೆ ದೇವರೆ ಕಾರಣ ಎಂದು ಭಕ್ತಿಭಾವದಲ್ಲಿ ತೇಲಿ ಹೋಗುವುದನ್ನು ಕಾಣಬಹುದು.

ರಥದ ಬೀದಿಯಲ್ಲಿ ರಥೋತ್ಸವವನ್ನು ನೋಡಲು ಜನ ಬರುತ್ತಾ "ರೊಟ್ಟಿ ಬುತ್ತಿ ಕಟ್ಟಿಕೊಂಡು, ಸಾವಿರ ಬಂಡಿ ಹೂಡಿಕೊಂಡು ಜಾತ್ರೆಗೆ ಹೋಗೋಣ ಹಟ್ಟಿಯ ಜಾತ್ರೆಗೆ ಹೋಗೋಣ" ಎಂಬ ಜನಪದ ವಾಣಿಯಂತೆ ಜನಸಾಗರವೇ ನಾಯಕನಹಟ್ಟಿ ಕಡೆ ಹರಿದು ಬರುತ್ತದೆ.ಭಕ್ತರು ಬಿಸಿಲಿನಲ್ಲಿಯು ಭೇದವಿಲ್ಲದೆ ಸ್ವಾಮಿಯ ಸೇವೆ ಮಾಡಲು ಬರುತ್ತಾರೆ.

ಪರ್ವತ ಕ್ಷೇತ್ರಗಳಲ್ಲಿ ಉತ್ಸವ ರಾಜನೆಂದೆ ಕರೆಯಲ್ಪಡುವ ತೇರು ಈಗ ಹೊಸ ರೂಪವನ್ನು ಪಡೆದಿದೆ. ಈ ಬಾರಿ ಭಕ್ತರೊಬ್ಬರು ಎಲ್ಲಾ ಪಟ್ಟಗಳನ್ನು ಹೊಸ ಬಟ್ಟೆಯಿಂದ ಹೊಲಿಸಿ ತಂದು ಒಪ್ಪಿಸಿದ್ದಾರೆ. ರಥೋತ್ಸವದ ಸಂದರ್ಭದಲ್ಲಿ ರಕ್ಷಣ ವ್ಯವಸ್ಥೆಯ ಸಿಬ್ಬಂದಿ ೮೦೦ ಜನ ಪೋಲಿಸರು, ೪೦೦ ಗೃಹ ರಕ್ಷಕ ದಳದವರು, ೨ ಕೆ.ಎಸ್.ಆರ್.ಪಿ. ತುಕಡಿ, ನಕಸ ನಿಗ್ರಹದಳ, ೮೦ ಯೋಧರು, ೪ ಜನ ಡಿ.ವೈ.ಎಸ್.ಪಿ, ೧೦ ಸಿಪಿಐ, ೩೧ ಎಸ್‌ಐ, ೪೫ ಎಎಸ್‌ಐ, ೨೦೦ ಮುಖ್ಯಪೇದೆ, ೪೦೦ ಪೇದೆ, ೫೦ ಮಹಿಳಾ ಪೇದೆ ಹೀಗೆ ಇಲ್ಲಿ ರಕ್ಷಣ ವ್ಯವಸ್ಥೆ ನಡೆದಿದೆ. ಇಲ್ಲಿ ಜನರ ಮುಂದೆ ಎಲ್ಲವು ಗೌಣ ಎಂದೆನಿಸಿದೆ. ಬಿಸಿಲಿನ ಬೇಗೆ ಹೆಚ್ಚಿದ್ದರು ಸಹಿತ ಉತ್ಸಾಹ ನೂರ್ಮಡಿಯಾಗಿ ಹರಿಯುತ್ತಿದೆ.

ರಥ ಮುನ್ನಡೆಯಲು ಸಿದ್ಧವಾಗಿದೆ. ರಥೋತ್ಸವದ ಮುಂಭಾಗದಲ್ಲಿ ಬಲಿ ಅನ್ನ, ಫಣಿಯಪ್ಪನ ವಂಶಜರಾದ ಪೂಜಾರಿಗಳ ಮನೆಯಲ್ಲಿ ವಿಧಿವತ್ತಾಗಿ ತಯಾರಿಸುವಂತಹದ್ದು. 'ಬಲಿ ಅನ್ನ'ವನ್ನು ಹೊತ್ತ ಗೊಂಚಕಾರರು ಅಲಂಕೃತಗೊಂಡ ಬಸವ, ಬಸವಿಯರು, ಉತ್ಸವಮೂರ್ತಿ ಪ್ರತಿಷ್ಠಾಪಿಸಿ ವಿಶೇಷವಾಗಿ ಅಲಂಕರಿಸಿದ ಪಲ್ಲಕ್ಕಿಯೊಂದಿಗೆ ಮಂಗಳವಾದ್ಯ, ನಂದಿಕೋಲು, ಆಯಗಾರರ ದಂಡಿನೊಂದಿಗೆ ಭಕ್ತರ ಹಿಂಡು ತೇರಿನ ಬಿಳಿಮಡಿಯಲ್ಲಿ ಬರುತ್ತದೆ.

ಬಾಬುದಾರರಾದ ತಳವಾರನಾಯಕ, ಮಣೆಗಾರರು, ಜೋಗಿನಹಟ್ಟಿಯವರು, ದೈವದವರ ಹೆಸರಿನಲ್ಲಿ ೪ ನಿಟ್ಟಿನಲ್ಲಿ ೪ ಗಾಲಿಗಳಿಗೆ ಬಲಿ ಅನ್ನ ಹಾಕಿದ ನಂತರ ಶಾಸ್ತ್ರೋಕ್ತವಾಗಿ ಪೂಜೆ ಪುಣ್ಯಾಹ ಶಾಸ್ತ್ರಗಳಿಂದ ಮೊದಲು ಕುಪ್ಪಿನಕೆರೆ ಆಂಜನೇಯ ಸ್ವಾಮಿಗೆ ಮಹಾಮಂಗಳಾರತಿ ಸಲ್ಲಿಸಿದ ನಂತರ ಶ್ರೀ ತಿಪ್ಪೇಸ್ವಾಮಿಗೆ ಮಹಾಮಂಗಳಾರತಿ ಸಲ್ಲಿಸಿ ಮುಕ್ತಿ ಬಾವುಟ ಹರಾಜು ಮಾಡಲಾಗುವುದು. ತದನಂತರ "ಮಿಣೆ" ಕೊಡುವ ಭಕ್ತರಾದ ಮನ್ನೇಕೋಟೆ ತಳಕು ದೈವದವರು ಹೆಸರು ಕೂಗಿ ಕರೆದು ಮಿಣೆಗೆ ಕೈಹಾಕುತ್ತಿದ್ದಂತೆ ಸಾಂಪ್ರದಾಯಿಕ ಅಲಂಕಾರದ ಮನಮೋಹನಕವಾದ ರಥ ಭಕ್ತ ಸಾಗರದಲ್ಲಿ ಶ್ರೀ ತಿಪ್ಪೇರುದ್ರಸ್ವಾಮಿಗೆ ಜಯವಾಗಲಿ ಎಂಬ ಕೂಗು ಮುಗಿಲು ಮುಟ್ಟುತ್ತಲೆ ಬೃಹತ್ ರಥ ಮುಂದೆ ಚಲಿಸುತ್ತದೆ.

ತೇರು ಹರಿಯುವಾಗ ತೂರುವ ಬಾಳೆಹಣ್ಣುಗಳು ಹಕ್ಕಿಯ ಹಾರಾಟವನ್ನು ನೆನಪಿಸುತ್ತವೆ. ಆ ಸಮಯದಲ್ಲಿ ತೇರು ಬೀದಿ ಮತ್ತು ತೇರು ಹರಿಯುವ ಇಕ್ಕಡೆಗಳಲ್ಲಿ ಕಾಣುವ ಜನಸಾಗರದ ವರ್ಣಿಸಲಸದಳ. ಅವರನ್ನು ನೋಡಿಯೇ ಆಶ್ಚರ್ಯಚಕಿತರಾಗಬೇಕು. ತೇರಿನ ಹಿಂದೆ ತೂರಿದ ಚೂರು ಬೆಲ್ಲ ಮೆಣಸಿನಕಾಳು ಅಯ್ಯಾಭಕ್ತರ ದಂಡು, ಭಕ್ತಿಯ ಪರಾಕಾಷ್ಠೆಯ ಪ್ರತೀಕವಾಗಿರುತ್ತದೆ.

ಪಾದಗಟ್ಟೆಯವರೆಗೆ ಚಲಿಸಿ ರಥ ನಿಲ್ಲುತ್ತದೆ. ಪಾದಗಟ್ಟೆಗೆ ಹಾಗೂ ಗೋಪಾಲಸ್ವಾಮಿಗೆ ಪೂಜೆ ಸಲ್ಲಿಸಿದ ನಂತರ ಹಿಮ್ಮುಖವಾದ ಪಾದಗಟ್ಟೆಗೆ ಹಾಗೂ ಗೋಪಾಲಸ್ವಾಮಿಗೆ ಪೂಜೆ ಸಲ್ಲಿಸಿದ ನಂತರ ಹಿಮ್ಮುಖವಾಗಿ ಉತ್ಸವಮೂರ್ತಿಯೊಂದಿಗೆ ತೇರು ಸ್ವಸ್ಥಾನಕ್ಕೆ ತಲುಪುವುದು. ಸಂಜೆ ೫.೦೦ಗಂಟೆಯ ನಂತರ ಅಲ್ಲಿಂದ ಉತ್ಸವ ಮೂರ್ತಿಯನ್ನು ಹೊತ್ತ ಪಲ್ಲಕ್ಕಿ ಒಳಮಠವನ್ನು ಸೇರುತ್ತದೆ. ನಂತರ ರಥೋತ್ಸವದ ವಿಧಿ ವಿಧಾನಗಳಿಗೆ ತೆರೆ ಬೀಳುತ್ತದೆ.

ರಥೋತ್ಸವದ ಮರುದಿನ ರಾತ್ರಿ ವಸಂತೋತ್ಸವ. ಮಡಿವಾಳರು ಮತ್ತು ಬಸವಿಯರ ಓಕಳಿಯಾಟ ಮನೋಹರ ದೃಶ್ಯ ಅಲಂಕೃತಗೊಂಡ ಪಲ್ಲಕ್ಕಿಯಲ್ಲಿ ಉತ್ಸವ ಸ್ವಾಮಿಯನ್ನು ಪ್ರತಿಷ್ಠಾಪಿಸಿ, ಪಾದಗಟ್ಟೆಗೆ ಬಂದು ಅಂದುರಾತ್ರಿ ಅಲ್ಲಿಯೇ ತಂಗಿದ್ದು ಮರುದಿನ ಪ್ರಾತಃಕಾಲ ಹೊರಮಠಕ್ಕೆ ಬಂದು ಪೂಜೆ ಸಲ್ಲಿಸಿ ಓಕಳಿ ಆಟದೊಂದಿಗೆ ಒಳಮಠ ಸೇರುವ ಈ ವಸಂತೋತ್ಸವ ದೊಡ್ಡ ರಥೋತ್ಸವ ಹಾಗೂ ಜಾತ್ರಾ ವಿಧಿಗಳಿಗೆ ಮಂಗಳ ಹಾಡುತ್ತದೆ.

ರಥದ ಹಿಂದೆ ಮಾದಿಗ ಸಮುದಾಯದವರು ಚೀಲವನ್ನು ಕಟ್ಟಿಕೊಂಡು ಕಾಯಿಯನ್ನು ಒಡೆಯುವುದನ್ನು ಕಾಣಬಹುದು. ಅದು ಜಾತ್ರೆಯಲ್ಲಿ ವಿಶೇಷವಾದ ಆಚರಣೆಯಾಗಿದೆ. ಕಾಯಕ ತತ್ವವನ್ನು ಸಾರುವ

ಜನಪರ ವೀರ ಸಾಂಸ್ಕೃತಿಕ ನಾಯಕ ಜಾತ್ರೆಯ ರಥೋತ್ಸವದಲ್ಲಿ ಆರಾಧ್ಯ ದೈವವಾಗಿ ಆ ಭಾಗದ ಜನರಲ್ಲಿ ಕಂಡು ಬರುತ್ತಾನೆ. ಸ್ವಾಮಿ ಮಾಡಿದ ಕಾರ್ಯಕ್ಕೆ ಪ್ರತ್ಯಪಕಾರವಾಗಿ ಜಾತ್ರೆಯನ್ನು ಆಚರಿಸುವುದನ್ನು ಕಾಣಬಹುದು.

ಪಟದ ಹರಾಜು

ಪಟದ ಹರಾಜಿನ ಪ್ರಕ್ರಿಯೆ ಎಷ್ಟು ವ್ಯಾಪಕತೆಯನ್ನು ಮತ್ತು ಮಹತ್ವವನ್ನು ಪಡೆದಿದೆ ಹರಾಜಿನ ಪ್ರಕ್ರಿಯೆಯಲ್ಲಿ ೫ ಲಕ್ಷ ಹಣ ಕೊಟ್ಟು ಕೊಳ್ಳುವ ಪ್ರಕ್ರಿಯೆ ನಿಜಕ್ಕೂ ಸಹ ಎಲ್ಲಾ ದಾಖಲೆಯನ್ನು ಮುರಿದಿತ್ತು. ಆದರೆ ಅದೆಲ್ಲವನ್ನು ಮೀರಿಸುವ ನಿಟ್ಟಿನಲ್ಲಿ ಈ ಬಾರಿಯ ಪಟದ ಹರಾಜನ್ನು ಕಾಣಬಹುದು. ಭಕ್ತರ ಹರ್ಷೋದ್ಗಾರ ಸ್ವಾಮಿಯನ್ನು ಆರಾಧಿಸುವ ರೀತಿ ನಿಜಕ್ಕೂ ಆಶ್ಚರ್ಯಕರ ಎಂದು ಹೇಳಬಹುದು. ಪರ್ವತ ಕ್ಷೇತ್ರಗಳಲ್ಲಿ ಉತ್ಸವ ರಾಜನೆಂದೆ ಕರೆಯಲ್ಪಡುವ ತೇರು ಈ ಬಾರಿ ಹೊಸ ತಿರುವನ್ನು ಪಡೆದಿದೆ.

ಪಟದ ಹರಾಜು ನಿಜಕ್ಕೂ ಹಿಂದೆಂದಿಗಿಂತಲೂ ಹೊಸ ದಾಖಲೆಯೆಂದೆ ಹೇಳಬಹುದು. ೨೬ ಲಕ್ಷ ರೂಪಾಯಿಗಳಿಗೆ ಈ ಬಾರಿ ಪಟ ಹಾರಾಜಾಗಿರುವುದನ್ನು ಕಾಣಬಹುದು. ಭಕ್ತ ಸಮೂಹದ ಉದಾರತೆ ಏನೆಂಬುದು ಗೊತ್ತಾಗುತ್ತದೆ. ಸ್ವಾಮಿಯ ರಥದ ಆರಂಭದಿಂದ ಇಲ್ಲಿಯವರೆಗೆ ಅತಿ ಹೆಚ್ಚು ಬೆಲೆಗೆ ಪಟಹರಾಜಾದದ್ದು ಇದೇ ಮೊದಲ ಬಾರಿ ಎಂದೇ ಹೇಳಬಹುದು. ೨೬ ಲಕ್ಷ ರೂಪಾಯಿ ಹಣವನ್ನು ಸ್ವಾಮಿಗೆ ಒಪ್ಪಿಸಿ. ಈ ಹಣವನ್ನು ಸಮಾಜೋಪಯೋಗಿ ಕಾರ್ಯಗಳಿಗೆ ಬಳಕೆಯಾಗಲಿ ಎನ್ನುವ ಔದಾರ್ಯತೆಯನ್ನು ತೋರಿದಂತಹ ಮಹಾನೀಯರನ್ನು ಮೆಚ್ಚುವಂತಹದ್ದು. ತಮ್ಮನ್ನು ತಾವು ತೊಡಗಿಕೊಳ್ಳುತ್ತ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾದ ಹಿರಿಮೆ ನಾಡಿಗೆ ಸಾರಿಸುವುದನ್ನು ಮೆಚ್ಚುವಂತಹದ್ದು.

ಪಟವನ್ನು ಹರಾಜಿನಲ್ಲಿ ಪಡೆದಂತಹವರಿಗೆ ವಿಭಾಗಾಧಿಕಾರಿಗಳು ಹಾರವನ್ನು ಹಾಕಿ ಅವರಿಗೆ ಗೌರವವನ್ನು ಸಲ್ಲಿಸುತ್ತಾರೆ. ಈತ ಬಹಳ ಎತ್ತರದ ಮನುಷ್ಯನಾಗಿ, ದಾನಿಯಾಗಿ, ಉದಾರಿಯಾಗಿ ಕಾಣುವುದನ್ನು ನೋಡಬಹುದು. ಅವರನ್ನು ರಥದ ಮೇಲೆ ಹತ್ತಿಸಿ ಸ್ವಾಮಿಯ ಸನ್ನಿಧಿಯಲ್ಲಿ ನಿಗದಿಯಾದ ಸ್ಥಳದಲ್ಲಿ ಪಟವನ್ನು ಸಂಸ್ಥಾಪಿಸಿ ಸಾರ್ಥಕವನ್ನು ಪಡೆದು ಸ್ವಾಮಿ ಸೇವೆಯನ್ನು ಮಾಡಿದೆ ಎನ್ನುವ ತೃಪ್ತಿಯನ್ನು ಪಡೆದು ಹಿಂತಿರುಗಿದ್ದಾರೆ. ಇವರು ಸ್ವಾಮಿಯ ಅತ್ಯಂತ ಸನಿಹಕ್ಕೆ ಹೋಗಿದ್ದಾರೆ ಎಂದು ಹೇಳಬಹುದು.

ಹೋರಿಗಳ ಪ್ರದರ್ಶನ

ತಿಪ್ಪೇಸ್ವಾಮಿ ಜಾತ್ರೆಯಲ್ಲಿ ವಿಶೇಷವಾಗಿ ದೂರದ ಊರುಗಳಿಂದ ಜಾತ್ರೆಗೆ ಆಗಮಿಸಿದಂತಹ ಬಲಿಷ್ಠವಾದಂತಹ ಹೋರಿಗಳನ್ನು ಒಂದು ನಿಗದಿಯಾದ ಜಾಗದಲ್ಲಿ ಪ್ರದರ್ಶಿಸುತ್ತಾರೆ. ಅದರಲ್ಲಿ ತುಂಬಾ ದಷ್ಟಪುಷ್ಟವಾಗಿ ಕೊಬ್ಬಿದಂತಹ ಎತ್ತುಗಳಿಗೆ ಬಹುಮಾನ ನೀಡುವುದನ್ನು ಕಾಣಬಹುದು. ಸ್ವಾಮೀಜಿಯವರ ಪಾಲ್ಗುಣ ಶುದ್ಧ ಚಿತ್ತ ನಕ್ಷತ್ರದ ದಿನ ಸ್ವಾಮೀಜಿಯ ರಥೋತ್ಸವ ನಡೆಯುತ್ತದೆ. ಹೋಳಿ ಹುಣ್ಣಿಮೆಯಾಗಿ ೨ನೇ ದಿನ ರಥೋತ್ಸವ ನಡೆಯುತ್ತದೆ. ಅದಕ್ಕಿಂತ ೮ ದಿನದ ಹಿಂದೆ ಕಂಕಣಧಾರಣ ಮಹೋತ್ಸವ

ನಡೆಯುತ್ತದೆ. ಪ್ರತಿದಿನ ಒಂದೊಂದು ವಾಹನೋತ್ಸವ ನಡೆಯುತ್ತವೆ. ಕಂಕಣಧಾರಣ ಮಹೋತ್ಸವ ಎಂದರೆ, ದೇವಸ್ಥಾನದ ಕಾರ್ಯಕರ್ತರ್ಗಳಿದ್ದಾರೋ ಅವರಲ್ಲಿ ಮುಖ್ಯರಾದವರು ಯಾರ‍್ಯಾರಿದ್ದಾರೋ ಅವರೆಲ್ಲರಿಗೂ ಕಂಕಣಕಟ್ಟಿ, ಅವರುಗಳಲ್ಲಿ ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗಲಿ ಅಂತ ಕಂಕಣಕಟ್ಟಿಕೊಂಡು ಜಾತ್ರಾ ಮಹೋತ್ಸವಕ್ಕೆ ಅಥವಾ ಕಾರ್ಯಕ್ರಮ ನಡೆಸಿ ಕೊಡುತ್ತೇವೆ ಎಂಬುದು ಒಂದು ವಾಡಿಕೆ. ಕಂಕಣಧಾರಣೆ ಮದುಮಗ ಆಗುವುದು ಅಂದಿನಿಂದ ಉತ್ಸವಕ್ಕೆ ಚಾಲನೆ ನೀಡುತ್ತಾರೆ. ಮದುಮಗನಲ್ಲಿ ಉತ್ಸಾಹ ಹೇಗಿರುತ್ತೆ ಹಾಗೆ ಉತ್ಸಾಹ, ಸಡಗರ, ಸಂಭ್ರಮದಿಂದ ಕೂಡಿರುತ್ತದೆ ವನ ಮಹೋತ್ಸವವನ್ನು ಮದುಮಗನ ರೂಪದಲ್ಲಿ ಆಚರಿಸುತ್ತಾರೆ.

ಜಾತ್ರೆಯಲ್ಲಿ ಕೆಳವರ್ಗದವರ ಆಚರಣೆಗಳು

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ೧೨ನೇ ಶತಮಾನ ತನ್ನದೇ ಸ್ಥಾನವನ್ನು ಹೊಂದಿದೆ. ಮೊಟ್ಟಮೊದಲ ಬಾರಿಗೆ ಕೆಳವರ್ಗದವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವುದರ ಮೂಲಕ ಅವರಲ್ಲಿ ಆತ್ಮವಿಶ್ವಾಸವನ್ನು ಶರಣ ಚಳವಳಿ ತುಂಬಿತು. ಈ ಪ್ರಕ್ರಿಯೆ ೧೨ನೇ ಶತಮಾನದ ನಂತರವು ನಡೆದುಕೊಂಡು ಬಂದಿದೆ. ಕೆಳವರ್ಗದವರಿಗೆ ವಿಶೇಷ ಆದ್ಯತೆಯನ್ನು, ಸ್ಥಾನಮಾನವನ್ನು ನೀಡಿದ ಪಂಥಗಳಲ್ಲಿ ಪಂಚಗಣಾಧೀಶ್ವರರ ಪಂಥವು ಪ್ರಾಮುಖ್ಯತೆಯನ್ನು ಪಡೆದಿದೆ.

ನಾಯಕನಹಟ್ಟಿ ತಿಪ್ಪೇಸ್ವಾಮಿಗೆ ಸಂಬಂಧಿಸಿದಂತೆ ಕೆಳವರ್ಗ ಹೆಚ್ಚಿನ ಪ್ರಮಾಣದಲ್ಲಿ ಪಾಲ್ಗೊಂಡಿದ್ದಾರೆ. ಹೊರಮಠದಲ್ಲಿನ ಪೂಜಾರಿಗಳು ಮ್ಯಾಸಬೇಡರಾಗಿದ್ದಾರೆ. ಹೊರಮಠದಲ್ಲಿ ರಥೋತ್ಸವದ ಮರುದಿನ ನಡೆಯುವ ಓಕಳಿಯ ದಿನ ಹೊರಮಠಕ್ಕೆ ಸ್ವಾಮಿಯ ಉತ್ಸವ ಮೂರ್ತಿಯನ್ನು ತಂದು ಪೂಜೆಮಾಡಿಕೊಂಡು ಹೋಗುತ್ತಾರೆ. ಮ್ಯಾಸನಾಯಕರು ಹೊರಮಠಕ್ಕೆ ಸಂಬಂಧಿಸಿದ ಪೂಜಾ ವಿಧಾನಗಳ ಜವಾಬ್ದಾರಿಯನ್ನು ವಹಿಸಿಕೊಂಡಿರುತ್ತಾರೆ.

ಜಾತ್ರೆಯ ನಂತರ ಬಿಡುವಿನ ಸಮಯದಲ್ಲಿಯೂ ಇವರೇ ಅರ್ಚಕರಾಗಿರುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ರಥಕ್ಕೆ ಹಗ್ಗ ಬಿಗಿದು ಅಲಂಕಾರ ಮಾಡುವವರು ಇವರೇ ಆಗಿರುತ್ತಾರೆ. ನಾಯಕ ಸಮುದಾಯದ ಬಸವಿಯರು ಜಾತ್ರೆಯಲ್ಲಿ ಕಂಕಣ ಕಟ್ಟಿಸಿಕೊಳ್ಳುವುದರೊಂದಿಗೆ ಉತ್ಸವ ಮೂರ್ತಿಯು ರಥವನ್ನು ಪ್ರದಕ್ಷಿಣೆ ಹಾಕುವಾಗ ಚಾಮರ ಬೀಸುತ್ತಾರೆ. ಓಕುಳಿಯಾಡುವ ದಿನ ಬಸವಿಯರು ವಿಶೇಷವಾಗಿ ಭಾಗವಹಿಸುತ್ತಾರೆ. ಮಡಿವಾಳರು ಜಾತ್ರೆ, ಕಾರ್ತಿಕೋತ್ಸವ, ದೀಪೋತ್ಸವದ ಸಮಯದಲ್ಲಿ ಪಂಜು ಹಿಡಿಯುವುದು ನಡೆಮುಡಿ ಹಾಸುವುದು ಇವರ ಕರ್ತವ್ಯವಾಗಿದೆ. ಪ್ರತಿವರ್ಷ ಜಾತ್ರೆಯಲ್ಲಿ ಮಡಿವಾಳರ ಐದು ಕುಟುಂಬದ ಅಣ್ಣ ತಮ್ಮಂದಿರು ಸೇರಿಕೊಂಡು ಈ ಸೇವೆಯನ್ನು ಮಾಡುತ್ತಾರೆ. ಹಗಲಿನಲ್ಲಿ ನಡೆಯುವ ಉತ್ಸವಗಳಿಗೂ ಈ ರೀತಿ ಪಂಜನ್ನು ಹಿಡಿಯಲಾಗುತ್ತದೆ. ನಗಾರಿ ಪಂಜು, ನಂದಿಕೋಲು ಪಂಜು, ಬಸವನ ಪಂಜು, ಉಚ್ಚಾಯದ ಪಂಜು ಎಂದು ಒಟ್ಟು ಐದು ಪಂಜುಗಳನ್ನು ಅನುಕ್ರಮವಾಗಿ ನಗಾರಿಯ ಮುಂದೆ, ನಂದಿಕೋಲು ಮುಂದೆ ಹಿಡಿಯಲಾಗುತ್ತದೆ. ಉಚ್ಚಾಯದ ಪಂಜನ್ನು ಕಾರ್ತಿಕೋತ್ಸವದಲ್ಲಿ ಮುಖ್ಯವಾಗಿ ಹಿಡಿಯಲಾಗುತ್ತದೆ.

೨೦-೨೫ ಅಡಿ ಎತ್ತರ ಇರುತ್ತದೆ. ಅಲ್ಲದೆ ಮಡಿವಾಳರು ನಡೆಮುಡಿ ಆಚರಣೆಯನ್ನು ಆಚರಿಸುತ್ತಾರೆ. ಹೊರಮಠದಿಂದ ಒಳಮಠದವರೆಗೆ ನಡೆಮುಡಿ ಹಾಕಿಸಿಕೊಂಡು ಬರಲಾಗುತ್ತದೆ. ಇದನ್ನು ಮಡಿವಾಳರೇ ಮಾಡಬೇಕಾಗುತ್ತದೆ. ದೊಡ್ಡ ರಥೋತ್ಸವ ನಡೆಯುವ ಸಂದರ್ಭದಲ್ಲಿ ರಥದ ಒಂದು ಗಾಲಿಯ ಹತ್ತಿರ ನಿಂತಿರುತ್ತಾರೆ. ಅದರ ಮೇಲೆ ಬೀಳುವ ಹಣ್ಣು ಕಾಯಿ ಇವೆಲ್ಲವೂ ಮಡಿವಾಳರಿಗೆ ಸಲ್ಲುತ್ತವೆ.

ನಾಯಕನಹಟ್ಟಿಯಲ್ಲಿ ಸು ೧೫೦-೨೦೦ಮನೆಗಳನ್ನು ಹೊಂದಿರುವ ಮಣೆಗಾರರು ಪ್ರತಿವರ್ಷ ಜಾತ್ರೆಯ ಸಂದರ್ಭದಲ್ಲಿ ತೇರಿಗೆ ಕಟ್ಟುವ ಈಚಲು ಉರಿಗಳನ್ನು ತಂದುಕೊಡುತ್ತಾರೆ. ರಥೋತ್ಸವದ ಸಂದರ್ಭದಲ್ಲಿ ದೊಡ್ಡ ರಥದ ಮೇಲೆ ಕಟ್ಟಿರುವ ತಮ್ಮ ಪಾಲಿನ ಜೋಳಿಗೆಯಲ್ಲಿ ಬಿದ್ದಿರುವ ಬಾಳೆ ಹಣ್ಣು, ದವನ ಹೂವು, ಪತ್ರೆಗಳನ್ನು ಪ್ರಸಾದವನ್ನಾಗಿ ಪಡೆದುಕೊಂಡು ಇದನ್ನು ಹಟ್ಟಿಯ ಆಯಗಾರರೆಲ್ಲ ಹಂಚಿಕೊಳ್ಳುತ್ತಾರೆ. ಮೌಖಿಕ ಪರಂಪರೆಗಳು ಕೆಳವರ್ಗದೊಂದಿಗೆ ನಿಕಟ ಸಂಬಂಧವನ್ನು ಹೊಂದಿವೆ. ಕೆಳವರ್ಗ, ಮೇಲ್ವರ್ಗ ಎನ್ನುವ ಗಡಿ ಮುರಿದು ಎಲ್ಲರೂ ಒಂದೇ ಎನ್ನುವ ಭಾವನೆ ಈ ಆಚರಣೆ ಸೂಚಿಸುತ್ತದೆ.

ಜೀವನಾವರ್ತನ ಆಚರಣೆಗಳು

ನಾಮಕರಣ: ಮಗುವಿಗೆ ಸ್ವಾಮಿಯ ಸನ್ನಿಧಿಗೆ ಕರೆದುಕೊಂಡುಬಂದು ಪೂಜೆಗಳನ್ನು ಸಲ್ಲಿಸಿ ನಾಮಕರಣ ಮಾಡುವುದನ್ನು ಕಾಣಬಹುದು. ಸ್ವಾಮಿಯ ಹೆಸರುಗಳನ್ನು ಎತೇಚ್ಛವಾಗಿ ನಾಮಕರಣ ಮಾಡುತ್ತಾರೆ. ತಿಪ್ಪಯ್ಯ, ತಿಪ್ಪೇಸ್ವಾಮಿ, ತಿಪ್ಪೇರುದ್ರ, ಮಹಾಂತೇಶ ಹೀಗೆ ಮೊದಲಾದ ಹೆಸರುಗಳನ್ನು ನಾಮಕರಣ ಮಾಡುವುದನ್ನು ಕಾಣಬಹುದು.

ಮದುವೆ: ಸ್ವಾಮಿಯ ದೇವಸ್ಥಾನದ ಆವರಣ ತುಂಬಾ ವಿಶಾಲವಾಗಿರುವ ಕಾರಣ ಭಕ್ತರು ಸ್ವಾಮಿಯ ಸನ್ನಿಧಿಯಲ್ಲಿ ಹಲವಾರು ವಿವಾಹ ಕಾರ್ಯಕ್ರಮಗಳು ಜರುಗುವುದನ್ನು ಕಾಣಬಹುದು. ದೇವಸ್ಥಾನಕ್ಕೆ ೧೦೦೧. ಹೀಗೆ ಹಣವನ್ನು ಕೊಟ್ಟು ದೇವಸ್ಥಾನದ ದಾಸೋಹಕ್ಕೆ ಹಣವನ್ನು ನೀಡಿ ಅಲ್ಲಿ ದಾಸೋಹ ಮಾಡಿಕೊಂಡು ಮದುವೆಯ ಕಾರ್ಯವನ್ನು ನೆರವೇರಿಸಿಕೊಳ್ಳುತ್ತಾರೆ. ದೇವಸ್ಥಾನದಲ್ಲಿ ಮದುವೆ ಆಗುವುದರಿಂದ ದೇವರ ಆಶೀರ್ವಾದ ನವ ದಂಪತಿಗಳಿಗೆ ಲಭಿಸಿದಂತೆ ಆಗುತ್ತದೆ. ಮತ್ತು ಬಂದ ಸಂಬಂಧಿಕರಿಗೆ ದೇವರ ದರ್ಶನವನ್ನು ಪಡೆದ ಹಾಗೂ ಆಗುತ್ತದೆ. ಹೀಗೆ ದೇವಸ್ಥಾನದಲ್ಲಿ ಮಾಡುವುದರಿಂದ ಎರಡು ವಿಧವಾದ ಲಾಭವನ್ನು ಪಡೆಯಬಹುದು.

ಸಾವು: ಸತ್ತವರ ಮನೆಯಲ್ಲಿ ಸೂತಕ ಛಾಯೆಯಿರುತ್ತದೆ. ಆಗ ಸತ್ತವರ ಸಂಬಂಧಿಗಳು ಅಥವಾ ಹೆಣ್ಣು ಅಥವಾ ಗಂಡು ಅವರುಗಳು ಬಂದು ದೇವರ ಸನ್ನಿಧಿಯಲ್ಲಿ ಒಂದು ರಾತ್ರಿಯನ್ನು ಕಳೆಯಬೇಕು. ನಂತರ ಹೊಸಬಟ್ಟೆಯನ್ನು ಹಾಕಿಕೊಂಡು ದೇವರ ದರ್ಶನ ಪಡೆದು ಹಿಂತಿರುಗುತ್ತಾರೆ. ಹೀಗೆ ದೇವಸ್ಥಾನಕ್ಕೆ ಬಂದು ಪೂಜೆ ಸಲ್ಲಿಸಿ ರಾತ್ರಿಯನ್ನು ಅಲ್ಲೇ ದೇವರ ಸನ್ನಿಧಿಯಲ್ಲಿ ಕಳೆದು ಹೋದರೆ ಸೂತಕ ಬಗೆಹರಿಯುತ್ತದೆ. ಆ ಮನೆಗೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ.

ಮುಡಿ ಒಪ್ಪಿಸುವುದು

ಸಾಮಾನ್ಯವಾಗಿ ಮನೆ ದೇವರಿಗೆ ಮುಡಿ ಒಪ್ಪಿಸುವ ಆಚರಣೆ ನೆರವೇರುತ್ತದೆ. ಮಕ್ಕಳಿಗೆ ಹುಟ್ಟು ಕೂದಲು ತೆಗೆಯುತ್ತಾರೆ. ಇದಕ್ಕೂ ಮುನ್ನ ಹುಟ್ಟು ಕೂದಲು ತೆಗೆಸುವ ಎಲ್ಲಾ ಮನೆಯವರು ತಮ್ಮ ತಮ್ಮ ಮನೆಗಳಿಗೆ ಸುಣ್ಣ ಬಣ್ಣ ಬಳಿಯುವುದು ರೂಢಿಯಲ್ಲಿದೆ. ದೂರದ ಊರುಗಳಿಂದ ತಮ್ಮ ನೆಂಟರಿಷ್ಟರನ್ನು ಕರೆಸಿ ಮನೆದೇವರ ದೇವಾಲಯಕ್ಕೆ ಹೋಗಿ ಅಲ್ಲಿ ಮಕ್ಕಳಿಗೆ ಹುಟ್ಟು ಕೂದಲು ತೆಗೆಯುತ್ತಾರೆ. ಇದನ್ನು "ಮುಡಿ ಒಪ್ಪಿಸುವುದು" ಎಂದು ಕರೆಯುತ್ತಾರೆ. ಹೀಗೆ ಮುಡಿ ಕೊಡುವಾಗ ದೇವರಿಗೆ ಕುರಿ ಮತ್ತು ಕೋಳಿಯ ಬಲಿಯನ್ನು ಕೊಡುತ್ತಾರೆ. ಬಲಿಕೊಟ್ಟನಂತರ ಅಲ್ಲೆ ಅಡುಗೆ ಮಾಡಿ ಅದನ್ನು ಪ್ರಸಾದವೆಂದು ಎಲ್ಲರೂ ಸೇವಿಸುತ್ತಾರೆ. ಈ ಆಚರಣೆಯನ್ನು ಸಾಮಾನ್ಯವಾಗಿ ಹಿಂದುಳಿದ ವರ್ಗದ ಜನರೇ ಆಚರಿಸುವುದು ಕಂಡುಬಂದಿದೆ.

ಅಧ್ಯಾಯ - ೬

ಜನಪದ ಸಾಹಿತ್ಯ

ಜನಪದ ಸಾಹಿತ್ಯ

ಮನುಷ್ಯನು ಎಂದಿನಿಂದ ಆಚರಣೆಗಳನ್ನು ಮಾಡುತ್ತಾ ಬಂದನೋ ಅಂದಿನಿಂದಲೇ ಅವುಗಳಿಗೆ ಸಂವಾದಿಯಾಗಿ ಹಾಡುಗಳನ್ನು ಹಾಡುತ್ತಲೇ ಬಂದಿದ್ದಾನೆ. ಹಾಗೆಯೇ ಜನಪದ ಗೀತೆಯು ಯಾವುದನ್ನೇ ವಿವರಿಸಲಿ ಅದನ್ನು ನೇರವಾಗಿ ಹೇಳುತ್ತದೆ. ಅದನ್ನು ಪ್ರಯತ್ನಪೂರ್ವಕವಾಗಿ, ಕಲಾತ್ಮಕಗೊಳಿಸುವ ಅಥವಾ ಕಾವ್ಯದ ಪರಿಣಾಮಗಳನ್ನು ತರಲೇಬೇಕು ಎಂಬ ಉದ್ದೇಶವು ಆತನಿಗೆ ಇರಲಿಲ್ಲ. ಇಲ್ಲಿ ಸಾಹಿತ್ಯ ಮೌಲ್ಯಕ್ಕಿಂತ ಹೆಚ್ಚಾಗಿ ಸಾಮಾಜಿಕ, ಚಾರಿತ್ರಿಕ ಹಾಗೂ ಮಾನವಶಾಸ್ತ್ರೀಯ ಮೌಲ್ಯಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಇದರಿಂದ ಜನಪದರ ಮನೋಭಾವನೆಗಳನ್ನು ನಿರ್ಧರಿಸಲು ಸಾಧ್ಯವಾಗುತ್ತದೆ.

ಸಾಹಿತ್ಯವನ್ನು ಶಿಷ್ಟ ಮತ್ತು ಜನಪದ ಎಂದು ವಿಭಾಗಿಸಿಕೊಂಡು ಬಂದ ಕ್ರಮ ನಮ್ಮಲ್ಲಿ ರೂಢಿಯಲ್ಲಿದೆ. ಈ ವಿಭಾಗೀಕರಣಗಳು ಏನೇ ಇದ್ದರೂ ಅಂತಿಮವಾಗಿ ಸಾಹಿತ್ಯ ಸಾಮಾಜಿಕ ರಚನೆಯೇ ಆಗಿದೆ. ಹಾಗಾಗಿ ಮೇಲೆ ಚರ್ಚಿಸಿದ ವಿಷಯಗಳೆಲ್ಲಾ ಶಿಷ್ಟ ಸಾಹಿತ್ಯಕ್ಕೂ, ಮೌಖಿಕ ಸಾಹಿತ್ಯಕ್ಕೂ ಅನ್ವಯಿಸುವಂತ ವಿಚಾರಗಳೇ ಆಗಿವೆ. ಆದರೆ ಈ ಅಧ್ಯಯನವನ್ನು ಜಾನಪದಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿರುವ ಮೌಖಿಕ ಸಾಹಿತ್ಯದ ಕಡೆಗೆ ಮಾತ್ರ ಗಮನಹರಿಸಲಾಗಿದೆ.

ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಜನಪದ ಸಂಗ್ರಹದ ಕೆಲಸ ಸಾಕಾಷ್ಟಾಗಿದೆ. ಆದರೆ ಆ ಸಂಗ್ರಹಿತ ಪಠ್ಯಗಳನ್ನು ವಿಶ್ಲೇಷಿಸುವ ಮತ್ತು ನಿರ್ವಚಿಸುವ ಪ್ರಯತ್ನಗಳು ನಡೆದಿವೆಯಾದರೂ ತುಂಬಾ ವಿರಳ. ಅಕಾಡೆಮಿಕ್ ವಲಯದಲ್ಲಿ ಲಿಖಿತ ಆಕರಗಳಿಗೆ ದೊರೆತ ಆದ್ಯತೆ ಮತ್ತು ಮಾನ್ಯತೆಗಳು ಮೌಖಿಕ ಆಕರಗಳಿಗೆ ದೊರೆತಿಲ್ಲ. ಮೌಖಿಕ ಸಾಹಿತ್ಯ ಅಥವಾ ಜನಪದ ಸಾಹಿತ್ಯ ಎಂದು ಕರೆಯಲ್ಪಡುವ ಸಾಹಿತ್ಯ ಜಾನಪದದ ಒಂದು ಪ್ರಕಾರ. ಜನಪದರಿಂದ ಮೌಖಿಕ ರೂಪದಲ್ಲಿ ರಚನೆಗೊಂಡ ಪ್ರಕಟಿತ ಅಥವಾ ಅಪ್ರಕಟಿತ ರೂಪದಲ್ಲಿರುವ ಸಾಹಿತ್ಯವು ಗಾದೆ, ಗೀತೆ, ಒಗಟು, ಒಡಪು, ಲಾವಣಿ, ಖಂಡಕಾವ್ಯ, ಮಹಾಕಾವ್ಯ, ಐತಿಹ್ಯ, ಪುರಾಣ ಹೀಗೆ ಮುಂತಾದ ರೂಪದಲ್ಲಿರುತ್ತವೆ. ಜನಪದ ಸಾಹಿತ್ಯ ಎಂಬುದು ಜನರ ನಿತ್ಯ ಜೀವನದ ನೋವು ನಲಿವಿನ ಸಂಗತಿಗಳನ್ನು ದಾಖಲಿಸಿಕೊಂಡ ಆಕರವೇ ಆಗಿದೆ. ಈ ಕುರಿತು ಅನೇಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದುಂಟು. ಹಾಗಾಗಿ ವಿದ್ವಾಂಸರ ವಲಯದಲ್ಲಿ ಜನಪದ ಸಾಹಿತ್ಯ ಕುರಿತಂತೆ ಇರುವ ವಿಚಾರಗಳನ್ನು ತಿಳಿಯಬಹುದು.

ಜನಪದ ಸಾಹಿತ್ಯವೆಂದರೆ ಕೇವಲ ಹಾಡಲ್ಲ, ಅದರಲ್ಲಿ ಧ್ಯಾನ, ಭಕ್ತಿ, ಚಿಂತನೆಯಷ್ಟೇ ಇರುವುದಿಲ್ಲ. ಧಾರ್ಮಿಕ ಆಚರಣೆ, ನಡೆ, ನುಡಿ, ಕಲೆ, ಸಾಹಿತ್ಯ, ಸಂಗೀತಗಳಲ್ಲದೆ ಅದು ಒಂದು ಜನಾಂಗದ ಸಮಗ್ರ ಜೀವನದ ಜೀವಂತ ಚಿತ್ರಣವಾಗಿದೆ. ಪ್ರತ್ಯೇಕವಾಗಿ ಮನಸ್ಸಿನಲ್ಲಿ ಮೂಡಿನಿಲ್ಲಬಲ್ಲ ಚಿತ್ರಣವಾಗಿದೆ. ಕರುಳ ತಂತಿಯನ್ನು ಮೀಟಬಲ್ಲ ನಾದ ಮಾಧುರ್ಯ ಅದರಲ್ಲಿ ಅಡಕವಾಗಿದೆ. ಜನಸಾಮಾನ್ಯರ ಅಂತರಾಳದಿಂದ ಹೊರಹೊಮ್ಮಿದ ಸಹಜ ಅನುಭವವಾಗಿದೆ. ಜನಾಂಗದ ಸಂಸ್ಕೃತಿಯ ಸಮಗ್ರ ಚಿತ್ರಣಕ್ಕೆ ಹಿಡಿದ ಕನ್ನಡಿಯಾಗಿದೆ. (ಡಾ.ಅರ್ಜುನ ಗೊಳಸಂಗಿ ೨೦೦೦:೧) ಎಂದಿದ್ದಾರೆ.

ಜನಪದ ಸಂಸ್ಕೃತಿಯ ಅಭಿವ್ಯಕ್ತಿ ಪ್ರಕಾರಗಳಲ್ಲಿ ಜನಪದ ಸಾಹಿತ್ಯ ಬಹುಮುಖ್ಯವಾದದ್ದು. ಜಗತ್ತಿನ ಬಹುತೇಕ ಎಲ್ಲ ಅನಕ್ಷರಸ್ಥ ಜನಸಮುದಾಯಗಳು ಹಾಗೂ ಶೋಷಿತ ಜನರ ಅನಿಸಿಕೆಗಳನ್ನು ವ್ಯಕ್ತಪಡಿಸುವುದಕ್ಕೆ ಇರುವ ಏಕೈಕ ಮಾಧ್ಯಮವೆಂದರೆ ಕಂಠಸ್ಥ ಸ್ವರೂಪದಲ್ಲಿ ಹರಿದು ಬರುವ ಜನಪದ ಸಾಹಿತ್ಯವೇ ಆಗಿದೆ. ಈ ಸಾಹಿತ್ಯದ ದೃಷ್ಟಿಯಲ್ಲಿ ಪುರುಷರಂತೆಯೇ ಸ್ತ್ರೀಯರೂ ಸಹ ತಲೆ ತಲೆಮಾರುಗಳಿಂದಲೂ ಸಮಾನವಾಗಿ ಭಾಗವಹಿಸುತ್ತಾ ಬಂದಿದ್ದಾರೆ. ಅನಕ್ಷರತೆ ಮತ್ತು ಪುರುಷ ಪ್ರಧಾನ ಸಮಾಜದ ಪ್ರಾಬಲ್ಯದ ಕಾರಣವಾಗಿ ಬಹುತೇಕ ಹಿನ್ನೆಲೆಯಲ್ಲಿಯೇ ಉಳಿದ ಸಂವೇದನೆಗಳನ್ನು ತಿಳಿದುಕೊಳ್ಳಲು ಜನಪದ ಸಾಹಿತ್ಯ ವಿಶ್ವಾಸಾರ್ಹ ಮಾಹಿತಿಯ ಆಕರ (ಡಾ.ಕೆ.ಆರ್.ಸಂಧ್ಯಾರೆಡ್ಡಿ ೨೦೦೦:೧) ಎಂದು ಅಭಿಪ್ರಾಯ ಕೊಡುತ್ತಾರೆ.

ಜನಪದ ಸಾಹಿತ್ಯ ಎಲ್ಲಿಂದಲೋ ಉದ್ಭವಿಸಿಲ್ಲ. ಜನಪದರು ತಮ್ಮ ಬದುಕಿನಲ್ಲಿ ಕಂಡುಂಡ ಅನುಭವವನ್ನು ಹಾಡಾಗಿಸಿದ್ದಾರೆ, ಕಥೆಯಾಗಿಸಿದ್ದಾರೆ, ಪುರಾಣವಾಗಿಸಿದ್ದಾರೆ ಇತ್ಯಾದಿ. ಹಾಗಾಗಿ ಜನಸಾಮಾನ್ಯರ ಅಭಿವ್ಯಕ್ತಿ ಪ್ರಕಾರಗಳಲ್ಲಿ ಜನಪದ ಸಾಹಿತ್ಯ ಪ್ರಮುಖವಾದದ್ದು. ಶಿಷ್ಟ ಸಾಹಿತ್ಯಕ್ಕಿಂತಲೂ ಭಿನ್ನವಾಗಿದ್ದು ಈ ಮೌಖಿಕ ಸಾಹಿತ್ಯದಲ್ಲಿ ಧ್ವನಿ ಇಲ್ಲದವರ ಧ್ವನಿಯ ಆಲಾಪನೆಗಳು ಕೇಳಿಬರುತ್ತವೆ. ಬಹುಪಾಲು ಅನಕ್ಷರಸ್ಥ ಜನರು, ದುಡಿಯುವ ಜನರು ಹೇಳಿಕೊಂಡ ಸಾಹಿತ್ಯವೇ ಮೌಖಿಕ ಸಾಹಿತ್ಯವಾಗಿದ್ದರಿಂದ ಅವರೇ ಹೇಳಿಕೊಂಡ ಈ ಸಾಹಿತ್ಯದಲ್ಲಿ ಅವರ ಬದುಕಿನ ಹತ್ತು ಹಲವು ಸಂಗತಿಗಳು ಹಾಸುಹೊಕ್ಕಾಗಿರುವುದರಿಂದ ಜನಸಾಮಾನ್ಯರ ಬದುಕಿನ ಬಗೆಗೆ ಅಧ್ಯಯನ ಮಾಡಬೇಕಾದ ಸಂದರ್ಭದಲ್ಲಿ ಮೌಖಿಕ ಆಕರಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ.

ಶ್ರೀಗುರು ತಿಪ್ಪೇರುದ್ರ ಸ್ವಾಮಿಯವರ ಪರಿಸರ ವ್ಯಾಪ್ತಿಯಲ್ಲಿ ಬರುವ ಜನಪದರು ಶ್ರೀ ಗಳನ್ನು ತುಂಬಾ ಆತ್ಮೀಯವಾಗಿ ಕಂಡಿದ್ದಾರೆ. ತಮ್ಮ ದೈನಂದಿನ ಬಾಳಿನಲ್ಲಿ ಕಂಡುಂಡ ನೋವು, ನಲಿವುಗಳನ್ನು ಆಡುಮಾತಿನಲ್ಲಿ ಹೃದಯಾಂತರಾಳದಿಂದ ಸುಂದರವಾಗಿ ಒಡಮೂಡಿದ ಬೆಡಗನ್ನು ಜನಪದರ ಸಾಹಿತ್ಯದಲ್ಲಿ ಸಹನು ಕಾಣಬಹುದಾಗಿದೆ. ತಿಪ್ಪೇಶ ನಮ್ಮ ಎಂದು ಬಲವಾಗಿ ನಂಬಿ, ಆತನ ಒಲುಮೆಯಿಂದಾಗಿ ತಮ್ಮ ಬದುಕು ಬಂಗಾರವಾಗುತ್ತದೆ ಎಂಬ ಭಾವನೆಯೊಂದಿಗೆ ಅಪ್ಪ ತಿಪ್ಪೇಶನಲ್ಲಿ ತಮ್ಮ ನೋವು, ನಲಿವು, ಸುಖ, ದುಃಖ, ದುಮ್ಮಾನಗಳನ್ನು ಹೇಳಿಕೊಂಡಿರುವುದನ್ನು ಜನಪದರ ಸಾಹಿತ್ಯದಲ್ಲಿ ನಾವು ಕಾಣುತ್ತೇವೆ.

"ಒತ್ತಾರೆ ಎದ್ದುನಾವ್ ತಿಪ್ಪಯ್ಯ ನೆನೆವೇವು
ಅತ್ತ ಮಕ್ಕಳ ರಮಿಸೇವು | ತಿಪ್ಪಯ್ಯನೆಸರ
ನೆತ್ತಿ ಜೋಗಳ ಹಾಡೇವು ||

ಬೈಗಾದರೂ, ಬೆಳಗಾದರೂ, ಎದ್ದರೂ ಏನು ಮಾಡಿದರೂ ತಮ್ಮ ಬದುಕಿನ ಮೇಲೆ ಪ್ರಭಾವ ಬೀರಿದ ದೈವವನ್ನು ಮನಸ್ಸಿನಲ್ಲಿಯೇ ನೆನೆದು ಒಂದು ಕ್ಷಣ ಪ್ರಾರ್ಥನೆ ಸಲ್ಲಿಸಿ ಕೃತಾರ್ಥರಾಗುವ ಸ್ವಭಾವ ನಮ್ಮ ಜನಪದರದ್ದು. ಅಳುವ ಕಂದಮ್ಮಗಳನ್ನು ಮುದ್ದಿಸಿ, ರಮಿಸಿ, ತಿಪ್ಪಯ್ಯನ ಹೆಸರೆತ್ತಿ ಇಂಪಾದ ಜೋಗುಳದ ಹಾಡುಗಳನ್ನು ಹೇಳಿ, ನಿದ್ದೆಗೆ ಶರಣಾಗುವ ಮುದ್ದು ಮುಖದ ಕಂದನೊಮ್ಮೆ ಕಣ್ಣ ತುಂಬ ನೋಡಿ ದೈನಂದಿನ ಕೆಲಸಕ್ಕೆ ತೊಡಗುವ ನಮ್ಮ ಜನಪದರು ತಮ್ಮ ಆರಾಧ್ಯ ದೈವ ತಿಪ್ಪಯ್ಯ ಹೇಗಿದ್ದಾನೆಂಬುದರ ಬಗ್ಗೆ ಹೀಗೆ ಹೇಳುತ್ತಾರೆ.

"ಉದ್ದನೆ ಮುಖದೋರು, ರುದ್ರಾಕ್ಷಿ ಕೊರಳೋರು
ಇದ್ದಾರೆ ನಮ್ಮೂರ ಮಠದಾಗೆ || ತಿಪ್ಪೇಸ್ವಾಮಿ
ಗದ್ದುಗೆ ಕಾಯಿ ಕೇಳುವ್ಯಾರು ||

"ಆ ತಿಪ್ಪಯ್ಯಗ ಮುಪ್ಪೆಂಬುದೇ ಇಲ್ಲ
ಒಪ್ಪವಾದ ಗಡ್ಡ ಊರಮೀಸೆ | ನನ್ನಯ್ಯ
ಕೊಪ್ಪಳಗ ಹೊದ್ದು ಹೊರ ನಡೆದ.

ಉದ್ದನೆಯ ಮುಖ, ಮುಖಕ್ಕೆ ಒಪ್ಪವಾದ ಗಡ್ಡ, ಮೀಸೆ ಕೊರಳೊಳಗೆ ರುದ್ರಾಕ್ಷಿಸರ, ಹಣೆಯ ಮೇಲೆ ವಿಭೂತಿ ಹೊಂದಿರುವ ತಿಪ್ಪೇಸ್ವಾಮಿಯವರು ನಮ್ಮೂರ ಮಠದಲ್ಲಿರುವುದಾಗಿ, ಅವರ ಬಗ್ಗೆ ತಿಳಿಸಿ ಅವರ ಗದ್ದುಗೆಗೆ ಕಾಯಿಯನ್ನು ಭಕ್ತಿಪೂರ್ವಕವಾಗಿ ಕಳಿಸಿಕೊಡುವ ನಮ್ಮ ಜನಪದರು, ತಮ್ಮ ಆರಾಧ್ಯ ದೈವ ಕೊಪ್ಪಳಿಗೆ ಹೊದ್ದು ಕಾಯಕಕ್ಕೆ ಹೊರಟಿರುವುದನ್ನು ಹೇಳುವುದು ಮರೆತಿಲ್ಲ.

"ಹೆಜ್ಜೆ ಹೆಜ್ಜೆಗೆ ಶಿವನ ನೆನೆಯುತ ನಡೆದೇನ
ಹೆಚ್ಚೇನ ಬಿರಿದು ಎದುರಾದೋ | ನನ್ನಯ್ಯ
ಕಜ್ಜಾಯ ಮಾಡಿ ಕರೆದೇವಾ !!"

ನಮ್ಮ ಜನಪದರಿಗೆ ತಿಪ್ಪೇಶ ಸರ್ವಸ್ವ, ಆತನ ಬಗ್ಗೆ ಆತ್ಮೀಯತೆಯಿದೆ. ಸಲುಗೆಯಿದೆ. ಏಕೆಂದರೆ ಅವರ ದೃಷ್ಟಿಯಲ್ಲಿ ತಿಪ್ಪೇಶ ಕೂಡ ಅವರ ಬಂಧುಗಳಲ್ಲೊಬ್ಬರಂತೆ ಆಗಿರುತ್ತಾರೆ. ಅಂತಹ ಗುರು ಹೆಜ್ಜೆ ಹೆಜ್ಜೆಗೆ ಶಿವನನ್ನು ನೆನೆಯುತ್ತಾರೆ.

ಹಟ್ಟಿ ತಿಪ್ಪಯ್ಯ ಹಸಿದು ಬರುತಾನೆಂದು
ರಸಬಾಳೆ ಹಣ್ಣು ಸುಲಿದಿಡುವೆ ! ಹಿಂದೆ ಬರುವ
ಬಸವಯ್ಯಗಿಡುವೆ ನೆಲಗಡೆ !!

ದುಡಿಮೆಯ ದೋಣಿಯ ಒಡೆಯ ತಮ್ಮ ನಂಬುಗೆಯ ಆರಾಧ್ಯದೈವವೆಂದು ತಿಳಿದ ನಮ್ಮ ಜನಪದರು, ಬಸವನೇ ಹುಟ್ಟುಗೋಲು, ರೈತರ ಇನ್ನೊಂದು ಜೀವವೇ ಎತ್ತು. ಉಳುಮೆ ಕೆಲಸಕ್ಕೆ ಬಂಡಿ ಎಳೆಯಲು ಹೊರೆ ಹೋರಲು, ಗೊಬ್ಬರಕ್ಕೆ ಹೀಗೆ ಬಸವ ದುಡಿಮೆಯ ಪೂರ್ಣಾವಧಿ ಪ್ರಾಣಿ, ದುಡಿಮೆಯ ದಿನಚರಿಯ ಮುಂಚೂಣಿಯಲ್ಲಿರುವ ಬಸವ ತನ್ನ ಆರಾಧ್ಯ ದೈವದೊಂದಿಗೆ ಹಾರೈಕೆಗೊಳಪಡುತ್ತಾನೆ. ತನ್ನ ದೈವಕ್ಕೆ ಪ್ರೀತಿ, ಭಕ್ತಿ, ಭಾವದೊಂದಿಗೆ ರಸಬಾಳೆಯ ಹಣ್ಣನ್ನು ಕೊಡುವುದರೊಂದಿಗೆ ಕಾಯಕದ ಜೀವನವೇ ಆಗಿರುವ ಬಸವನಿಗೆ ನೆಲಗಡೆಯನ್ನು ಕೊಟ್ಟು ಧನ್ಯನಾಗಿದ್ದಾನೆ.

"ಬಸವನ ಸಗಣಿಯ ಬಳಿವ ಕೈ ಕಸ್ತೂರಿನಾತ.
ಎಸಳಾ ಯಾಲಕ್ಕಿ ಗೊನೆ ನಾತ |

ಎನ್ನುತ್ತಾ ಬಸವನ ಬೆನ್ನಮೇಲೆ ಪ್ರೀತಿಯಿಂದ ಕೈ ಆಡಿಸಿದ್ದಾರೆ ನಮ್ಮ ಜನಪದರು.

ನಮ್ಮ ಜನಪದರ ವೃತ್ತಿ ಕೃಷಿ. ಮಳೆಯಿಲ್ಲದೆ ಬೆಳೆಯಿಲ್ಲ, ಬೆಳೆಯಿಲ್ಲದೆ ಮಳೆಯಿಲ್ಲ ಇದೊಂದು ನೆಲ, ಜಲದ ಸರಪಳಿಯ ಕ್ರಿಯೆ. ಗ್ರಾಮೀಣ ಜನತೆಗೆ ಆಧಾರಸ್ತಂಭವಾದ ಮಳೆ ಬಂದು ಕೆರೆ ತುಂಬಿದಾಗ ಅವರ ಸಂತೋಷಕ್ಕೆ ಪರಿವೇಯಿಲ್ಲ.

"ಮಳೆಬಂದ ಮರುದಿನ ಸಿರಿಕಾಣೆ ನಾಯಕನಹಟ್ಟಿ
ಮದುಕರಡು ಕೋಡಿ ಹರಿದಾವೆ ! ತಿಪ್ಪೇಸ್ವಾಮಿ
ಮಧುಭೋಪ ಹೊರಟ ಕೆರೆಯಾಗ !!

ಶ್ರೀಗಳು ಕಟ್ಟಿಸಿದ ಕೆರೆ ತುಂಬಿ ಮದವೇರಿದ ಆನೆಯಂತೆ ಏರಿಬರುವ ತೆರೆಗಳು ಕೆರೆಯರಡು ಕೋಡಿಗಳಿಂದ ಧುಮುಕಿ ಹರಿಯುವುದನ್ನು ನೋಡಲು ತಿಪ್ಪೇಶ ಮಧುಭೂಪನಂತೆ ಹೊರಟಿದ್ದಾನೆ. ಜೊತೆಗೆ ಜಗಳೂರು ಪಾಪಯ್ಯ, ಚಿಕ್ಕೇರಿ ಕೋಡಿ ಬಸವಯ್ಯನನ್ನು ಕರೆದುಕೊಂಡು ಲಿಕ್ತವಾಡಕ್ಕೆ ಹೊರಟಿದ್ದಾರೆ.

"ಹಟ್ಟಿಯ ತಿಪ್ಪಯ್ಯ ಜಗಳೂರು ಪಾಪಯ್ಯ
ಚಿಕ್ಕೇರಿ ಕೋಡಿ ಬಸವಯ್ಯ ! ಜೊತೆಗೂಡಿ
ಲಿಕ್ತವಾಡೇರ ಕೆರೆಯಾಗ !!"

ಕೆರೆ ತುಂಬಿದರೆ ನಾಯಕನಹಟ್ಟಿ ಸುತ್ತಮುತ್ತಲಿನ ಪ್ರಕೃತಿ ಸೌಂದರ್ಯ ನೋಡಲು ಎರಡು ಕಣ್ಣುಗಳು ಸಾಲವು. ತೆಂಗು, ಬಾಳೆ, ಅಡಿಕೆ, ಸುತ್ತಲೂ ಹಚ್ಚ ಹಸಿರಿನ ವಾತಾವರಣ ಜನತೆಯಲ್ಲಿ ಉಕ್ಕಿ ಹರಿಯುವ ಹುಮ್ಮಸ್ಸಿನಲ್ಲಿ ನಮ್ಮ ಜನಪದರು "ಅರಮನೆ ಗುರು ಮನೆ"ಯತ್ತ ಕಣ್ಣು ಹಾಯಿಸಿದ್ದಾರೆ.

"ಕೆರೆಯ ಸುತ್ತ ಕೇದಿಗೆ, ಗುಡಿಯ ಸುತ್ತ ಮಲ್ಲಿಗೆ
ಅರಮನೆ ಸುತ್ತಲಗ ತಿಪ್ಪೇಶನ
ಪಾಲಿಕೆ ಸುತ್ತ ಪರಿವಾರ !!"

ಕೇದಿಗೆಯ ಕಂಪು, ಮಲ್ಲಿಗೆಯ ಸುಗಂಧ, ಅರಮನೆಯ ಲರಗಣೆ ಇಂತಹ ಸೌಂದರ್ಯಯಂತ್ರ ವಾತಾವರಣದಲ್ಲಿ ತಿಪ್ಪೇಶನ ಪಾಲಿಕೆಯ ಉತ್ಸವದಲ್ಲಿ ಪಾಲುಗೊಂಡ ಪರಿವಾರದವರ ಭಕ್ತಿ ಭಾವವನ್ನು ಮರೆಯುವಂತಹ ಸನ್ನಿವೇಶ.

ತುಂಬಿದ ಕೆರೆಯಾಗೆ ತೂಗುಮಂಚದ ಮೇಲೆ
ವಾಲ್ಯಾಡಿ ವಿಭೂತಿ ಧರಿಸ್ಯಾನ
ವಾಲ್ಯಾಡಿ ವಿಭೂತಿ ಧರಿಸಿದ
ತಿಪ್ಪೇರುದ್ರಯ್ಯಗೆ ಮೇಲಾಗಿ ಕೈಯ್ಯ ಮುಗಿದ್ಯಾರೆ !
ತುಂಬಿದ ಕೆರೆಯಲ್ಲಿ ತೂಗುಮಂಚದ ಮೇಲೆ ಕುಳಿತ ತಿಪ್ಪೇಶ

ತೆರೆಗಳ ಏರಿಳಿತದಲ್ಲಿ ಓಲಾಡುತ್ತಾ ಬರುವ ತಮ್ಮ ಆರಾಧ್ಯ ದೈವಕ್ಕೆ ಭಕ್ತಿ ಪೂರ್ವಕವಾಗಿ ಕೈ ಮುಗಿಯುವ ನಮ್ಮ ಜನಪದರು.

ಬಡತನ ನಮಗುಂಟು ಬಹಳ ಮಕ್ಕಳುಂಟು
ಒಡೆಯ ತಿಪ್ಪೇಶ ಬಲವುಂಟು ! ನಮಗಿಲ್ಲ
ಒಡವೆ ವಸ್ತುಗಳ ಬಲುಚಿಂತೆ !!"

ಒಬ್ಬರಿಂದ ಬೇಡಿ ಪಡೆಯುವವರ ಹಂಗಿನಲ್ಲಿರಬೇಕು. ಇದನ್ನೆಲ್ಲಾ ನಮ್ಮ ಜನಪದರು ತಿಪ್ಪೇಶನಲ್ಲಿ ಬೇಡಿ ಪ್ರಾರ್ಥಿಸಿ ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಂಡಿದ್ದಾರೆ. ತಿಪ್ಪೇಶನ ಒಲುಮೆ ತಮಗಿರುವುದರಿಂದ ನಮ್ಮ ಜನಪದರಿಗೆ ಯಾವ ಬಡತನದ ಚಿಂತೆಯಿಲ್ಲ. ಒಡವೆ ವಸ್ತುಗಳು ಬೇಕಾಗಿಲ್ಲ. ಅವನ ಕೃಪೆಯೊಂದಿದ್ದರೆ ಸಾಕೆನ್ನುತ್ತಾರೆ.

"ಬಂಜೆಂಬು ಕಡು ಬಂದಾನ ಕಳಿದರೆ
ಬಂದೆರಗುವ ನಿನ್ನ ಅಡಿಗಳಿಗೆ ! ತಿಪ್ಪೇಶ
ಬಂಗಾರದ ಕಣ್ಣು ಇಡಿಸೇವೆ !!"

ಇನ್ನು ಮಹಿಳೆಯರಿಗೆ ಬಂಜೆತನ ಎಂಬುದೊಂದು ಶಾಪವಿದ್ದಂತೆ. ಅವರ ಮಾತೃತ್ವದ ಫಲಪ್ರದ ಅಭಿವ್ಯಕ್ತಿಗೆ ತಣ್ಣೀರೆರಚುತ್ತದೆ. ಅವರಲ್ಲಿ ಅನಾಥಪ್ರಜ್ಞೆ ಜಾಗೃತವಾಗುತ್ತದೆ. ಒಂಟಿತನದ ನೋವು ಅವರನ್ನು ಬಲವಾಗಿ ಕಾಡುತ್ತದೆ. ಆಗ ತನ್ನ ನೋವು ಮನಸ್ಸಿನ ತಳಮಳದಿಂದ ಮುಕ್ತಳಾಗಿ ಬದುಕಲು ಸಮಾಜದ ದೃಷ್ಟಿಯಲ್ಲಿ ಬಂಜೆ ಎಂಬ ಶಬ್ದದಿಂದ ವಿಮುಕ್ತಿಹೊಂದಲು ತಾಯ್ತನಕ್ಕಾಗಿ ಹಾತೊರೆಯುತ್ತಾಳೆ. (ಇಂದಿಗೂ ಶ್ರೀಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನದ (ಒಳಮಠ)ದಲ್ಲಿರುವ "ತೂಗು ಮಂಚದ ಸ್ವಾಮಿಗೆ" ಅಸಂಖ್ಯಾತ ಮಹಿಳೆಯರು ಮಕ್ಕಳಭಾಗ್ಯ ಕೋರಿ ಸಂಕಲ್ಪಿಸಿ ತೊಟ್ಟಲು ತೂಗಿ ವರ್ಷ ತುಂಬುವುದರೊಳಗಾಗಿ ಮಕ್ಕಳಭಾಗ್ಯ ಪಡೆಯುತ್ತಾರೆ)

ಹಟ್ಟಿ ತಿಪ್ಪೇಸ್ವಾಮಿ ಸತ್ಯವಂತ ಕಣೆ
ಸತ್ತೆಮ್ಮೆ ಹಾಲು ಕರೆದುಂಡು
ಸತ್ತೆಮ್ಮೆ ಹಾಲು ಕರೆದು ಪಾಯಸಮಾಡಿ
ಸುತ್ತೆಂಟು ಮಠಕ್ಕೆ ಕಳಸ್ಯಾನೆ

"ಏರಲಾರದ ರಥವ ಏರೇನು ತಿಪ್ಪೇಸ್ವಾಮಿ
ದೂರ ನೋಡೇನೆ ಘನ ಪರಿಷೆ ! ತಳುಕಿನ
ತೇರಿಗೆ ಮಿಣೆಯಾಕೆ ಬರಲಿಲ್ಲ "

ಎತ್ತರವಾದ ಏರಲಾರದಂಥ ತೇರನ್ನು ತಿಪ್ಪೇಶ ಏರಿರುವುದನ್ನು ಘನ ಪರಿಷೆಯಲ್ಲಿ ನಿಂತು ನೋಡುವ ನಮ್ಮ ಜನಪದರ ಸಾಂಪ್ರದಾಯಿಕವಾಗಿ ತಳಕು ಗ್ರಾಮದಿಂದ ಬರಬೇಕಾದ ತೇರೆಳೆಯುವ ಹಗ್ಗ ಇನ್ನೂ ಯಾಕೆ ಬರಲಿಲ್ಲ! ಎಂಬ ಆತಂಕದಲ್ಲಿದ್ದಾರೆ. ಸಂಪ್ರದಾಯ ಪದ್ಧತಿಯಂತೆ ತಳಕಿನ ಮನ್ನೇಕೋಟೆ ಗ್ರಾಮದವರು ತೇರೆಳೆಯುವ ಮಿಣೆಯನ್ನು ಒದಗಿಸುವ ಸಂಪ್ರದಾಯವಿದೆ.

ತಿಪ್ಪೇಸ್ವಾಮಿ ಗೀತೆ

ತಿಪ್ಪೇ ತಿಪ್ಪೆಂದರೆ ತಿಪ್ಪೇಯ ತಿರುಪಣ್ಣ
ತಿಪ್ಪೇ ಮೇಲಿಪ್ಪೆಮರನುಟ್ಟಿ ತಿಪ್ಪೇಸ್ವಾಮಿ
ತಾವೊಳ್ಳೆದೆಂದು ನೆಲೆನಿಂತ.

ಅರುಗೀದ ಹೊಲದಲ್ಲಿ ಮರುಗವನೆತ್ತುವರಾರೆ
ಅಳದೀಯ ಕೆಂಚೆಡೆಯ ಕೆಂಪಯ್ಯ ನಿಮಪಾದ
ಆಗಲೇ ಕಂಡೋರಿಗೆ ಕೈಲಾಸ

ಬಿತ್ತೀದ ಹೊಲದಾಗೆ (ವಲ) ಪತುರಾವೆತ್ತುವರಾರೆ
ಮುತ್ತೀನ ಕೆಂಚೆಡೆಯ ಕೆಂಪಯ್ಯನ ನಿಮಪಾದ
ನಿತ್ಯ ಕಂಡೋರಿಗೆ ಕೈಲಾಸ

ಬಾಳಿಕಾಯಿ ಚಂದ ಬಾಳಿವೂವು ಚಂದ
ಬಜಾರ ಚೆಂದಾ ಅವ್ವಾಗ ಊರಾ ಮುಂದ್ಲ
ಯೋಗಿ ತಿಪ್ಪಯ್ಯ ಮಠಚಂದ

ನುಗ್ಗಿಕಾಯಿ ಚಂದ ನುಗ್ಗಿಯಾ ಹೂವು ಚಂದ
ಮಾರಾಯ ಗುಡಿಚಂದ ಹಟ್ಟಿಯಾಗ ತಿಪ್ಪೇಸ್ವಾಮಿ
ತಾವೊಳ್ಳೆದೆಂದು ನೆಲೆನಿಂತ

ಅಳ್ಳಿಯ ನೊಲಿದೀರಿ ದಿಳ್ಳಿ(ಲ್ಲಿ) ನಾಯ್ಕನಹಟ್ಟಿ
ಆರು ಸಾವಿರದ ಎಲಿತ್ವಾಟ ತನುವೀಗೆ
ಸ್ವಾಮಿ ತಿಪ್ಪಯ್ಯ ನೆಲೆನಿಂತ

ಕಲ್ಲೇನೆ ಕಟುಗಾರು ಕುಲದಲ್ಲಿ ಪಂಚಾಚಾರ
ಕಲ್ಲೇನೆ ತಿಪ್ಪಯ್ಯ ಶಿಖರವೇ ಕಟ್ಯಾರೆ
ನಿಲಸ್ಯಾರೆ ತಿಪ್ಪಯ್ಯ ಗುಡಿಮ್ಯಾಲೆ

ಮಠದ ಬಾಗಿಲಮುಂದೆ ನಂದಿಯ ಕೋಲು
ಮೂಡುವದೇನೆ ತಂಗಿ ಮಠದಾಗೆ ತಿಪ್ಪೇಸ್ವಾಮಿ
ಬಲಕೈಲೆ ಬಾಳೇ ಎಲಿದೋಟ

ಅಣ್ಣಾನ ಗುಡಿಮುಂದೆ ಇನ್ನೇನು ಬ್ಯಾಳೆದಾವು
ಸಣ್ಣಾರುದ್ರಾಕ್ಷಿ ಕಿರುನಲ್ಲಿ ಕಿತ್ತಾಳಿ
ಅಣ್ಣಾನ ಗುಡಿಸುತ್ತ ಬ್ಯಾಳಿದಾವು.

ಅಪ್ಪಾನೆ ತಿಪ್ಪಯ್ಯ ಬುತ್ತಿವುಂಡೊತ್ತಿಗೆ
ಬಿತ್ತೀದ ಬಾಳೆ ಚಿಗುರಾವೆ ನಾಯ್ಕನಹಟ್ಟಿ
ದಿಕ್ಕೊಳ್ಳೆದೆಂದು ನೆಲೆನಿಂತ

ಸ್ವಾಮಿ ತಿಪ್ಪಯ್ಯ ಬಾನಾವುಂಡೋತಿಗೆ
ಬಾಡೀದಬಾಳೆ ಚಿಗುರಾವೆ ನಾಯ್ಕನಹಟ್ಟಿ
ತಾವು ಒಳ್ಳೇದೆಂದು ನೆಲೆಗೊಂಡ

ಅಪ್ಪಾನೆ ತಿಪ್ಪಯ್ಯ ಮತ್ತೆಲ್ಲಿದ್ದಾನೆಂದು
ಕಿತ್ತಾಲಿವನವಾ ಬೆದಕೀದ ನಾಯ್ಕನಹಟ್ಟಿ
ದಿಕ್ಕೊಳ್ಳೆದೆಂದು ನೆಲೆನಿಂತ

ಅವು ಕಾವಾರಿಂದ ತಾ ಬಂದ ತಿಪ್ಪಣ್ಣ
ಇತ್ತಾಳೆ ಚೆಂಬು ಬಲಗೈಲಿ ಇಡಗೊಂಡು
ತಾವೊಳ್ಳೇದೆಂದು ನೆಲೆಗೊಂಡ

ಅಂತ ಅಂತರಕೆ ನಿಂತಾವೆ ನಾಕು ಕಂಬ
ಎಂತ ಬಿನ್ನಣವಾ ಕಟುವ್ಯಾರೆ ನಾಯ್ಕನಹಟ್ಟಿ
ಸಂತೋಷವಾ ಶಿಖರವು

ಆಯ್ತುವಾರದಗಲೆಲ್ಲಾ ಸೋಮ್ವಾರದಿರುಳೆಲ್ಲ
ಸ್ವಾಮಿ ತಿಪ್ಪಯ್ಯ ಮದುಮಗ ನಾಯ್ಕನಹಟ್ಟಿ
ಬೀದಿಗೊಳ್ಳಲಿ ಮೆರವಣಿಗೆ

ಹೊನ್ನ ಮಾರುವ ಸಾಲು ಚಿನ್ನಾ ಮಾರುವ ಸಾಲು
ಹೆಣ್ಣು ಮಕ್ಕಳಿಡುವಂತ ಬಳೆಸಾಲು ಆದವೆ
ತಂದೆ ತಿಪ್ಪಯ್ಯ ಗಿರಿಮ್ಯಾಲೆ

ಮುತ್ತು ಮಾರುವ ಸಾಲು ರತ್ನ ಮಾರುವ ಸಾಲು
ಮುತ್ತಯಿದೇರಿಡುವ ಬಳೆಸಾಲು ಅದಾವೆ
ಅಪ್ಪ ತಿಪ್ಪಯ್ಯ ಗಿರಿಮೇಲೆ

ಮೂಡನಾಡಾ ಪರಿಸ ನೋಡುತಲಿ ಬರುತಾವೆ
ತಂದೆ ತಿಪ್ಪಯ್ಯ ಗಿರಿಮ್ಯಾಲೆ ಮರಿಪರಿಸೆ
ಸಂತೇ ಬಾಗಿಲಿಗೇ ಬರುತಾವೆ

ಬಂದೀಯ ಚೆನ್ನಮ್ಮ ಬಂದಾಳೆ ನೀರಿಗೆ
ಜಂಬಾರವೇನೆ ಮಟದಾಗೆ ತಿಪ್ಪೇಸ್ವಾಮಿ
ಒಂಭತ್ತು ದಿನದಾ ಮದುಮಗನು

ತೇರನ್ನೆಳಿಯಾಕ ತೆಂಗೀನಗ್ಗಾಬೇಕ
ಹೊಂಬಾಳೆ ಬೇಕ ಕಳಸಾಕೆ ತಿಪ್ಪೇಸ್ವಾಮಿ
ಗೊಂಬೀಯತೆರು ಎಳಿಯಾಕ

ತೇರು ಸು(ಶೃ)ಂಗರವಾಗಿ ಏಳಟ್ಟಿಯರುದ್ರ
ತೇರಿನ ಮ್ಯಾಲಿರುವ ಕಣ(ಳ)ಸ ಶೃಂಗರವಾಗಿ
ಸೂಳೇರ ಬೋಗಿ ರಥವೇನು.

ತೇರು ಶೃಂಗಾರವಾಗಿ ಬಾಳೆವತ್ತಾಗಿ
ತೇರು ಮುಂದಕ್ಕೆ ಸಾಗ್ಯಾವೆ ಪೂಜಾರಿ
ಪಾದಾ ಕಾಣಿಕೆಯನ್ನಿಟ್ಟನು.

ರುದ್ರ ನಿಮತೇರು ಬಗ್ಗುತ ಬಳುಕುತ್ತ
ರುದ್ರಾಕ್ಷಿ ಕಣಿಯುದು ರೂತ ಸಿವಯೋಗಿ ಶಿ
ರುದ್ರ ಬಂದತೇರು ಹೊಸತೇರು

ತೇರು ಕಟ್ಟುವಾಗ ಯಾರ್‍ಯಾರು ಇರಬೇಕು
ಗ್ರಾಮದಾಗೌಡ ದೊರಿಮಗ ಮಲ್ಲಣ್ಣ
ತೇರಿಗೆ ಎಣ್ಣೆ ಪರಿಸ್ಯಾನು.

ತೇರಿಗೆ ಎಣ್ಣೆ ಎರೆಸೀದ ಮಲ್ಲಣ್ಣ
ಗಾಲೀಗೆ ಕಾಯ ವಡಿಸ್ಯಾನು ಗದ್ದಲಕೆ
ತಂದೆ ತಿಪ್ಪಣ್ಣ ಬೆವತಾನು

ತಂದೆ ತಿಪ್ಪಣ್ಣ ಬೆವತಾನು ಬಸವೇರು
ಮಳೆಗಾಲಕೆ ಮಲ್ಲಿಗೆ (ಚ)ಸಳಿಗಾಲಕೆ ಕೇದಿಗೆ
ಬೆಟ್ಟಬ್ಯಾಸಿಗೆಗೆ ದವನಾವೆ

ಸ್ವಾಮಿ ತಿಪ್ಪಣ್ಣನ ಗಾಜಿನ ಮಠದಲ್ಲಿ
ತೇರುಗಳು ಸಾಗಿ ಬರ ಏಳಿ ಅಕ್ಕ ನಾವು
ಏಲಕ್ಕಿ ಸೂರೆ ಬಿಡುವಾನು

ತೇರಾನು ಎಳಿವಾಗ ಸುರ ಬೆಲ್ಲವಬಿಟ್ಟೇ
ತೇರೆಳೆದು ನೆಲಿಗೆ ನಿಲುವಾಗ ನಿವ್ವಾಳಿಸಿ
ಆರತಿಯ ಬೆಳುಗೇರು ನಾರೀರು

ಡಂಡಂ ಆದೇನು ಊರಾಗೆ ಡಂಬಾವೇನಮ್ಮ
ದೊಡ್ಡಾನೆ ತಿಪ್ಪಯ್ಯ ರಥವೇರಿ ಬರುವಾಗ
ಸಗ್ಗಾರಿ ಅಕ್ಸಾರೆ ಇರಿಯಾರು

ಹಟ್ಟಿ ತಿಪ್ಪಣ್ಣನ ಕಟ್ಟೆ ತೇರಿನ ಮ್ಯಾಲಿರುವೊ
ಉತ್ತುತ್ತಿ ಅಣ್ಣಗಿಳಿಕಚ್ಚೆ ಮತ್ತೆ ತಂದಾವು
ಹಟ್ಟಿರುದ್ರಗೆ ಉಲುಪೀಯ

ಸ್ವಾಮಿ ಶಿಖರದ ಮ್ಯಾಲೆ ಶ್ರೀಗಂಧದ ಮರನುಟ್ಟಿ
ಮರದಮ್ಯಾಲೆರಡು ಗಿಳಿರುಂತ ನುಡಿದಾವೆ
ಮಾದಿಗರ ಅರಳಯ್ನ ಶಿವಕತಿ(ಥಿ)ಯ

ಮಾದಿಗರ ಅರುಳಯ್ನ ಶಿವಕತೆ ಏಳುವಾಗ
ಅರಿವಿಲ್ಲದ ನಾರಿ ಮಲುಗ್ಯಾಳೆ ಹೊಟ್ಟೀಲಿರುವ
(ಸಿ)ಶಿಸುವು ಕೇಳಿತೋ (ಸಿ)ಶಿವಕತೆಯ

ಅಣ್ಣಾ ನಿಮತೇರು ಬಣ್ಣಾವಾಗ್ಯೆದಾವೆ
ಚಿತ್ತಾರದ ಗೊಂಬಿ ಮೇಲೇರಿ
ವೊನ್ನಿನ ಕಳಸ

ಅನ್ನೊಂದು ಗಾವುದಕೆ ಎಳೆದಾವೆ
ಆ ತೇರು ಈತೇರು ಜ್ಯೋತಿ ಲಿಂಗದ ತೇರು
ಸ್ವಾಮಿ ತಿಪ್ಪಯ್ನ ಹೊಸತೇರು ಗಾಲಿಮ್ಯಾಲೆ
ಚಿತ್ತಾರದ ಗೊಂಬಿ ನಗುತಾವೆ

ಕುದುರೆ ಹತ್ತಲುಬೇಕು ಪುತ್ರ ಮುಂದಿರಬೇಕು
(ಪ್ಪೈ)ರೇಸಿಮೆಸೀರೆ ಹುಡಸಬೇಕು ತಿಪ್ಪೇಸ್ವಾಮಿ
ತೇರಿಗೋಗಿ ಬರಬೇಕು

ತೇರಾನೆ ಎಳೆವಾಗ ಪಾರೇನೆ ನಿಂತಿದ್ದಗೆ
ಯಾಲಕ್ಕಿ ಸೂರೆ ಬಿಡುತಿದ್ದೆ ತಿಪ್ಪೇಸ್ವಾಮಿ
ತೇರೆಳೆದು ನೆಲಿಗೆ ನಿಲುವಾಗ

ತೇರಿನ ಮುಂದೆ ಏನೇನು ಈನೋದ
ಕಾಲಲಿ ಗೆಜ್ಜೆ ಕೈಬಾಕು ತಿಪ್ಪೇಸ್ವಾಮಿ
ನಿಂತಾನೆ ಸಮಾಧಿ ಎದುರಿಗೆ

ಸ್ವಾಮಿ ತಿಪ್ಪಯ್ಯೆಗೆ ವಡೆಗಾಯಿ ಇಡುಗಾಯಿ
ದವನದ ಪೆಂಡಿ ವೊರಿವೊರಿ ತಿಪ್ಪೇಸ್ವಾಮಿ
ದವನ ಸೂರಾಡಿ ಬರುತಾನೆ

ಆಕೋ ಆಕೋ ಆಕೋ ತೆಂಗಿನಕಾಯಿ
ಆಕೋ ಮದ್ದಾನೆದ ಸವಕೆ ತಿಪ್ಪಣ್ಣ
ಹೋಕಳಿ ಆಡಿ ಬರುವಾಗ

ಒಡೆಯ ತಿಪ್ಪಯ್ಯಗ ಕಡಿಯಬಾಗಿಲೆರಡು
ನಂದಿಯಕೋಲೆರಡು ಪಟನೂರು ತಿಪ್ಪಯ್ಯಗ
ನಿವ್ವಾಳಿ ಕಾಯಿ ನೂರಾರು

ಅಂಬಾರದಾ ಮಳಿಬಂದು ಮುಂಬಾರದ ಕೆರೆತುಂಬಿ
ಗಂಧಕಸ್ತೂರಿ ತೆರೆವೊಯ್ಯು ಹಿರೇಕೇರೆ
ಮುಂದಾಲ ಮನಿಯಲ್ಲಿ ಶಿವಪೂಜೆ

ಆಕಾಸದಾ ಮಳಿಬಂದು ಬೂಪಾಲನ ಕೆರೆತುಂಬಿ
ತೋಪೆ ಕಸ್ತೂರಿ ತೆರೆವೊಯ್ಯು (ಇ)ಹಿರೇಕೆರೆ
ಆಲಾದ ತೋಪಿಲಿ ಶಿವಪೂಜೆ

ಅಂಬಾರದಗ್ಗಣಿ ತೆಂಗಿನ ತಿಳಿನೀರುಯ್ದು
ಸ್ವಾಮಿ ತಿಪ್ಪಯ್ಗೆ ಶಿವಪೂಜೆಗೋಗಲುವಾಗ
ಆಕಾಸದಾಗಂಟೆ ದಣಿರೆಂದಾವು.

ಕಾವಿ ವಸ್ತುರವಿಲ್ಲ ಕಾಲೀಗೆ ಜಂಗಿಲ್ಲ
ಕೋರಾಣ್ಯಕೊಂದೇ ಬರಲಿಲ್ಲ ತಿಪ್ಪೇಸ್ವಾಮಿ
ಯೋಗಿ ಸಮಾಧಿಗೋಗಲುವಾಗ

ಉದ್ದನ ಮುಕದೋರು ರುದ್ರಾಕ್ಷಿ ಕೊರೆಳೋರು
ಇದ್ದಾರೇ ನಮ್ಮ ಮಠದಾಗೆ ತಿಪ್ಪೇಸ್ವಾಮಿ
ಗದ್ದುಗ್ಗೇ ಕಾಯಂ ಕೇಳುವ್ಯಾರೆ

ತೂಗೂ ಮಂಚದಲಿಂಗ (ಸಿ)ಶಿವಯೋಗಿ ಮಹಾಲಿಂಗ
ತೂಗುಮಂಚದ ಮಣಿಲಿಂಗ ನಿಜಕರುಣೆ
ಶಿವಯೋಗಿ ತಿಪ್ಪಯ್ಯ ನಿಜಲಿಂಗ

ಹತ್ತು ಸಾವಿರಲಿಂಗ ಹೊತ್ತಿಲಿ ಮನುಮತ ಲಿಂಗ
ಹತ್ತೆ ಸಾವಿರದ ರವರತ್ನ ಐದಾವು
ಸ್ವಾಮಿ ತಿಪ್ಪಯ್ಯ ಮಠದಾಗೆ

ಹಾಲಿಟ್ಟು ನಾನು ಹಳ್ಳದ ನೀರಿಗೋದೆ
ಹಾಲುಕ್ಕಿ ಹಳ್ಳ ಹರಿದಾವೆ ತಿಪ್ಪೇಸ್ವಾಮಿ
ಮಠ ಬಿದ್ಯಲ್ಲ ಕೆಸುರಾಗಿ

ಕೆಸರಾದರೆ ಹೊಸಮಣಿಯಾ ಹಾಕಿಸುವೆ
ಬಸವಾನ ಕಟ್ಟೀ ತುಳುಸೂವೆ ತಿಪ್ಪೇಸ್ವಾಮಿ
ಬಸವೇರಿ ಹಾಡೋ ಪದರಂಗ

ಯಾಕೆ ತಿಪ್ಪೇಸ್ವಾಮಿ ಕೋಪಾವು ನನಮ್ಯಾಲೆ
ಬೇಕೆಂದರೆ ಬೆಳ್ಳಿ ಶಿಖರಾವೆ ಮಾಡಿಸುವೆ
ಸಾಕು ಮಾಡಯ್ಯ ಬಡತಾನ

ಬಡತಾನ ಬಯಲಾಗಿ ನಮ್ಮ ಕೈಯ್ಯಿ ಮೇಲಾಗಿ
ಅಂಬಾರ ಬಾಯಿ ಅಡಿಯಾಗಿ ತಿಪ್ಪಯ್ಯ
ನಂದಾದೀವಿಗೆ ಹೊರಿಸ್ಯೇವು

ಚಿಕ್ಕೆರೆ ತುಂಬಿದರ ಸಿರಿಕಾಣೆ ನಾಯಕನಹಟ್ಟಿ
ಮುಕ್ಕುಳಿಸಿಕೋಡಿ ಅರುದಾವೆ ತಿಪ್ಪೇಸ್ವಾಮಿ
ಚಪ್ಪಾಳಿ ಬಡುದು ನಗುತಾನೆ

ಮಳಿಬಂದ ಮರುದಿನ ಸಿರಿಕಾಣೆ ನಾಯ್ಕನಟ್ಟಿ
ಮದಗೆರಡು ಕೋಡಿ ಅರುದಾವೆ ತಿಪ್ಪೇಸ್ವಾಮಿ
ಮದಬೂಪವೊರಟ ಕೇರ್‍ಯಾಗೆ

ಹಟ್ಟೀಯ ತಿಪ್ಪಯ್ಯ ಜಗಲೂರ ಪಾಪಯ್ಯ
ಚಿಕ್ಕೆರೆ ಕೋಡಿ ಬಸವಯ್ಯ ಜೊತಿ ಕೂಡಿ
ಲೆತ್ತ ವಾಡ್ಯಾರೆ ಕೆರಿಯಾಗೆ

ತುಂಬಿದ ಕೆರಿಯಾಗ ತೂಗು ಮಂಚದ ಮ್ಯಾಲೆ
ವಾಲಾಡಿ ಈ ಬುತ್ತಿ ಹರಿಸ್ಯಾರೆ ತಿಪ್ಪಯ್ಗೆ
ಮೇಲಾಡಿ ಕಯ್ಯ ಮುಗುದಾರು

ಕೇರಿಯೇರಿಯಮ್ಯಾಲೆ ಕೆಂದೂಳೆದ್ದಾವೆ
ನಂದಿ ಕೋಲಾಡಿ ನವಿಲಾಡಿ ತಿಪ್ಪೇಸ್ವಾಮಿ
ಚೆಂಡಾಡಿ ಮಠಕೆ ಹೊರಟಾನೆ

ಏಕಮ್ಮ ನಾಯ್ಕನಹಟ್ಟಿ ನೂಕುನುಗ್ಗಾದಾವೆ
ನಾಕು ಬಜಾರ ನಡುಗ್ಯಾವೆ ತಿಪ್ಪೇಸ್ವಾಮಿ
ವೋಕುಳಿಯಾಡಿ ಬರುವಾಗ

ಸ್ವಾಮೀಯ ಮಠಕೆ ಹೋದಾರೆ ಭಕ್ತರು
ಕಂಚಿನ ನಗಾರಿ ನುಡಿಸ್ಯಾರೆ ತಿಪ್ಪಯ್ಯ
ತೆಪ್ಪಕ್ಕೆ ಅಪ್ಪಾಣೆ ಕೊಡಿಸ್ವಾಮಿ

ಅಪ್ಪಾಣೆ ಕೇಳ್ಕೋರೆ ತ್ವಾಟಕ್ಕೆ ಹೊರಟಾರೆ
ತೆಪ್ಪಾದ ಮರನ ಕಡಿದಲಗೆಯ ಮಾಡಿ
ಕಂಡುಗದ ಕಡಲಿ ಪನಿವಾರ

ಕಂಡುಗದ ಕಡಲಿ ಪರಿವಾರ ದೊರೆಮನಿಯ
ಕಂಬಿಯು ಮುಂದಾಗಿ ಹೊರಟೀತು ತಿಪ್ಪೇಸ್ವಾಮಿ
ತೆಪ್ಪ ತೆರೆಮ್ಯಾಲೆ ಕೇರ್‍ಯಾಗೆ.

ಹಟ್ಟಿ ತಿಪ್ಪಯ್ಯಗೆ ಊರೆಲ್ಲ ಭಕ್ತರು
ನಾನೇನ ಒಯ್ಯಲಿ ಬಡಮಗಳು ತಿಪ್ಪಣ್ಣ
ನೂರೊಂದು ಜಡೆಯ ಎಳೆದವನ

ವಡಿಯಾ ತಿಪ್ಪಯ್ಯನ ಬಡವಾನೆಂಬುವರಾರೇ
ಬಲಕೈಲಿ ಬಾಳಿ ಎಲಿದೋಟ ಸಿರಿಯೇನು
ರವಿ ಮೂಡಿದಾಗ ಕೆರೆಏರಿ

ಕೆರೆ ಏರಿಮ್ಯಾಲೆ ನುರಿಯ ನುಗ್ಗಲಿಮುಳ್ಳು
ಬರಲಾರೆ ತಿಪ್ಪಯ್ಯ ಗಿರಿದೂರ ನನ್ನರಕೆ
ಬರುವೋನ ಕೈಯಿಲಿ ಕಳುವೇನು

ಬರುವಾರ ಕೈಯ್ಯಿಲಿ ಕಳುವಾದೆ ಎತ್ತಮ್ಮ
ಸುತ್ತಿ ಬನ್ನಿರೋ ಪೌಳಿಯ ಮುಂದೆ
ಒಪ್ಪ ನಮ್ಮ ನಿನ್ನ ಮಗನರಕೆ

ಎಸರಾನೆ ಇಡುವಾಗ ಜ್ಯಸವಂತ ಕಂದಮ್ಮ
ಸುತ್ತಿಟ್ಟು ಬಾರೋ ಪಾಳೀಯ ಮುಂದೆ
ಬಿಚ್ಚಮ್ಮ ಮಗನ ಕಿರುಜಡೆಯೆ

ದೇವಾನ ನೆನದರೆ ದಾವುತಿ ನಮಗಿಲ್ಲ
ಹಾವೆ ಕಚ್ಚಿದರೂನು (ವಿ)ಇಸವಿಲ್ಲ ತಿಪ್ಪೇಸ್ವಾಮಿ
ಸ್ಯಾವೇಯ ಮಾಡಿದರೆ ದಣಿವಿಲ್ಲ.

ಸ್ವಾಮವಾರ ದೇಯ್ಯನೇಮನಿತ್ತ್ಯದಯ್ಯ
ಮಹಾರುದ್ರ ನಿಮ್ಮ ಮಗಳಾಗಿ ಬಂದೇನು
ಹಾಲು ತಂದೇನು ಸಲಿಸಯ್ಯ

ದುರುಗಾದೂರ ಮುಂದೆ ಸುರಹೊನ್ನೆ ಮರನುಟ್ಟಿ
ತುರುವಾನೂರಿಗೆ ಬೇರು ಹರಿದಾವೆ ನಾಯಕನಹಟ್ಟಿ
ಕೊನಿ ಬೀದಿಗೆ ನೆರಳು ಕವಿದಾವೆ

ಅಕ್ಕ ನಿಮಕನಸೀಗೆ ಚಿಕ್ಕಾ ಜಂಗಮಬಂದ
ಉತ್ತುತ್ತಿ ಹಣ್ಣು ಮಕ್ಕಳ ಫಲಕಾಣೇ
ಚಿಕ್ಕಾ ಜಂಗಮನು ಶಿವಕಾಣೆ

ಅಮ್ಮ ನಮ ಕನಸಿನಾಗೆ ಬಾಲ ಜಂಗಮ ಬಂದ
ಬಾಳೆಯಣ್ಣು, ಬಾಲಾರ ಫಲಕಾಣೆ
ಬಾಲ ಜಂಗಮ ಶಿವಕಾಣೆ.

ಹೊನ್ನು ಹನ್ನೆಲ್ಲ ಹೊಳೆದಾವೇ
ಹೊನ್ನೆ ಹೊನ್ನೆಟ್ಟಿ ಬಯಲಾಗಿ ತಿಪ್ಪೇಸ್ವಾಮಿ
ಹೊನ್ನಾಗಿ ಜನಕೆ ಹೊಳೆದಾನೆ

ಮುತ್ತು ಮುತ್ತೆಂದಾರೆ ಮುತ್ತೆಲ್ಲಿ ಹೊಳೆದಾವೆ
ಮುತ್ತಿ ಮುತ್ತಿಟ್ಟಿ ಬಯಲಾಗಿ ತಿಪ್ಪೇಸ್ವಾಮಿ
ಮುತ್ತಾಗಿ ಜನಕೆ ಹೊಳೆದಾನೆ.

ಸ್ವಾಮಿ ಬರುತಾನೆಂದು ಸಾಗಿ ಬೀದಿಗೆ ಬಂದೆ
ಸ್ವಾಮಿ ನೀ ನಮಕೈಯ್ಯಿಗೆ ಸಿಗಲಿಲ್ಲ ಚಕ್ಕೆರೆಯಾ
ಯಾಲಕ್ಕಿ ತೋಪಲಿ ನೀ ಮರಿಯಾಗಿ

ರುದ್ರ ಬರುತಾನೆಂದು ಎದ್ದೋ ಬೀದಿಗೆ ಬಂದೆ
ರುದ್ರ ನಮ ಕೈಯ್ಯಿಗ ಸಿಗಲಿಲ್ಲ ತಿಪ್ಪೇಸ್ವಾಮಿ
ಹಿರೇಕೇರಿಯ ರುದ್ರಾಕ್ಷಿ ತೋಪೆ ಮರಿಯಾಗಿ

ಹಟ್ಟಿ ತಿಪ್ಪೇಸ್ವಾಮಿ ಸತ್ಯಾವಂತನು ಕಾಣೆ
ಸತ್ತೆಮ್ಮೆ ಹಾಲು ಕರೆದುಂಡ
ದಿಕ್ಕು ದಿಕ್ಕಿಗೆ ಬೈಳೆದಾವೆ.

ಸಣ್ಣಾನೆ ಕುಚ್ಚೀಗೆ ಸಣ್ಣಾಮುತ್ತಾನಾಕಿ
ಪನ್ನಂಗದಾಗೆ ಬರುತಾನೆ ತಿಪ್ಪಯ್ಯಾಗೆ
ಮಾನ್ಯಾರು ಕಯ್ಯೆತ್ತಿಮುಗುದಾರೆ

ದೊಡ್ಡಾನೆ ಕುಚ್ಚಿಗೆ ದೊಡ್ಡಾಮುತ್ತಾನಾಕೆ
(ಒ)ವಡ್ಡೋಲಗದಿಂದಲಿ ಬರುವ ತಿಪ್ಪಯ್ಯಗೆ
ದೊಡ್ಡೋರು ಕಯ್ಯೆತ್ತಿಮುಗುದಾರು

ಆಚೆ ವಾಲಗದೋರು ಈಚೆ ಪಾತ್ರದೋರು
ಬಾಕೋರು ತೋಳ ಬಸವೇರು ಬರುವಾಗ
ಬೂಪತಿಪ್ಪಯ್ಯ ಬೆವತಾನೆ

ಎತ್ತು ಅತ್ತಲುಬೇಕು ಪುತ್ರ ಮುಂದಿರಬೇಕು
ದುತ್ತಾರಿ ಸೇರೆ ಉಡಬೇಕು ತಿಪ್ಪೇಸ್ವಾಮಿಯ
ವೃಚ್ರಯಸು ನೋಡಲುಬೇಕು.

ಹಟ್ಟೀಯ ತಿಪ್ಪಯ್ಯ ಗೆಜ್ಜೇಯ ಮಠದಾಗೆ
ವೃಚ್ರಾಯದ ಸಾಗಿ ಬರ ಏಳುವಾಗ ಅಕ್ಕ ನಾವು
ಆರುತ್ತಿ ಸೂರೆ ಬಿಡುವಾನಿ

ವೃತ್ರಾಯಾಕಾಕ್ಯಾರೆ ಅತ್ತು ಸೇರಿನಗಂಟೆ
ವೃಚ್ರಾಯದ ಮುಂದೆ ಬಸವಾನೆ ಕೊರಳಿಗೆ
ಹತ್ತು ಸೇರಿನ ವುರಿಗೆಜ್ಜೆ

ಹಟ್ಟೀಯ ತಿಪ್ಪಯ್ಯ ಹಸಿದು ಬರುತಾನೆಂದು
ರಸಬಾಳೆ ಹಣ್ಣ ಸುಲಿದಿಡುವೆ ಇಂದೆ ಬರುವ
ಬಸವಾಗಿಡುವೆ ನೆಲುಗಡಲೆ

ಅಪ್ಪಾ ತಿಪ್ಪಯ್ಯಗೆ ಒಪ್ಪಾದ ಮಗಳು ನಾನು
ತುಪ್ಪಾದ ಮೀಸಲು ಕಳುವೇನು ಮಠದಾಗೆ
ಮುತ್ತೆ ಸೂರಿಟ್ಟು ಬರುವೇನು

ತಿಪ್ಪಯ್ಯ ಮಠದಾಗೆ ಕುಪ್ಪೆಸ್ವಾವಂತಿಗೆ
ತಿಪ್ಪಮ್ಮನೆಂಬೂ ಕರಬಂದು ಏದಾವೆ
ತಿಪ್ಪಯ್ಯಗೇರು ದವನಾವೇ

ಸೋಮವಾರದ ದಿನ ಸ್ವಾಮಿ ಮನೆಗೆ ಬಂದ
ಸಾರಿಸುತ್ತಾಲಿದ್ದೆ ನಡುಮನೆ ತಿಪ್ಪೇಸ್ವಾಮಿ
ಜಾರೀಕೆ ಎಂದಾರೆ ತಿರುಗ್ಯಾರೆ

ಮಾಯಕಾರ ಸ್ವಾಮಿಮಾಯಾವಾಗ್ಯೆದಾನೆ
ದೀವಿಗೆ ತರೋವುಡುಕಾನೆ ತಿಪ್ಪೇಸ್ವಾಮಿ
ಮಾಯಾವಾಗ್ಯೆದಾನೆ ಮಠದಾಗೆ

ಹತ್ತಿಹೂವಿನಂಗೆ ಅಚ್ಚಡವಾನೆಯಿದು
ಒಪ್ಪಾಲಿಲ್ಲಮ್ಮ ಮುನಿಸ್ವಾಮಿ ನಮ್ಮ ತಿಪ್ಪೇಸ್ವಾಮಿ
ಸುಪ್ಪತ್ತಿಕ್ಕಿ ಬುಡುಸಿ ಮನುಗ್ಯಾರೆ

ಮಲ್ಲಿಗೂವಿನಂಗೆ ವಲ್ಲೀಯಾನೆಯಿದು
ಒಪ್ಪಲಿಲ್ಲಮ್ಮ ಮುನಿಸ್ವಾಮಿ ನಮ್ಮ ತಿಪ್ಪೇಸ್ವಾಮಿ
ಪಲ್ಲಕ್ಕೀಲಿ ಕುಂತಾರು

ನಂದಿನಂದಿಗೆ ಮುತ್ತು ನಂದಾದೀವಿಗೆ ಬೆಳಕು
ಗಂಧಾದ ಕೊರಡಿಗೆ ನೆಲಗಾರೆ ಮಾಡೀರೆ
ತಂದೆ ತಿಪ್ಪಯ್ಯ ಮಠದಾಗೆ

ಸಾಲು ಸಾಲು ಮುತ್ತು ಪ್ರಾಣದೀವಿಗೆ ಬೆಳಕು
ಸಾಣೆ ಕಲ್ಲಲಿ ನೆಲಗಾರೆಗೈದಾರೆ
ಸ್ವಾಮಿ ರುದ್ರಾನ ಮಠದಾಗೆ

ಅಪ್ಪಾ ತಿಪ್ಪಯ್ಯಾಗೆ ಚಿಕ್ಕೋನೆ ಪೂಜಾರಿ
ಕಯ್ಯದ್ದ ಕಡಗಾವಾಗಿ ಅಚ್ಚಮಲ್ಲಿಗೂವು
ಕೊಯ್ದಪ್ಪಗಾಕ್ಯಾರೆ ಜಪಮಾಲೆ

ಕಟ್ಟುದೀವಿಗೆ ನಡುವಿಟ್ಟೆ ತಿಪ್ಪೇಸ್ವಾಮಿ
ಶಿವಪೂಜೆಗೆ ದಯಮಾಡು
ಅಂಗಾರ ದೋಳಿಗೆ ಮಾಡಿ ಅಂಗೈಯ್ಯಿ ನಂದಾವೆ

ಗಂಗಾಳ ಬೆಳಗಿ ಬುದನಿಂಬಿ ತಿಪ್ಪೇಸ್ವಾಮಿ
ತಂದೆ ಬಿನ್ನೈಕ್ಕೆ ದಯಮಾಡು
ಒಟ್ಟಾಕದೋಳಿಗೆ ಮಾಡಿ ಬೆಟ್ಟೆರಡು ನಂದಾವೆ

ಬಟ್ಟಲು ಬೆಳಗಿ ಶರಣೆಂಬೆ ತಿಪ್ಪೇಸ್ವಾಮಿ
ಅಪ್ಪಾಭಿನ್ನೈಕ್ಕೆ ದಯಮಾಡೋ
ಆತಾನೆ ಬರುವಾಗ ನಾತಾವು ಮಲ್ಲಿಗಿದು

ಸ್ವಾಮಿಯು ತಿಪ್ಪಯ್ಯ ಬರುವಾಗ ಚಿಕ್ಕೆರೆ
ತೋಪೆಲ್ಲಿ ಮಂಜು ಕವಿದಾವೆ
ರುದ್ರಾಭಿಷೇಕ ಇದ್ದಲ್ಲಿ ಅದಾವೆ ಒಡಿಯಾಗೆ

ಗದ್ದುಗೆಯ ಮೇಲಿರುವ ಒಡಿಯಾಗೆ ಅಲ್ಲಿವ್ವ
ಸಿರಿಡಾಗೈದಾವೆ ಫಣಿಲಿಂಗ
ಸುರುದುನ್ನೆ ಗುಡಿಕಟ್ಟಿ ಮುಂದೆ ಬಾವಿನೋಡಿ

ಮೇಗಳು ಕಲ್ಲು ಮರೆಮಾಡಿ ತಿಪ್ಪೇಸ್ವಾಮಿ
ದ್ಯಾವರಿಗೆ ಅಗ್ನಿಯ ಕೊಡುತಾನೆ.
ಚಂದ್ರಾನೆ ಗುಡಿಕಟ್ಟಿ ಮ್ಯಾಲೆ ಬಾವಿ ತೋಡಿ
ಇಂದಾನೆ ಕಲ್ಲು ಮರೆಮಾಡಿ ತಿಪ್ಪೇಸ್ವಾಮಿ
ಲಿಂಗಕ್ಕಗ್ಗಿಣಿಯ ಕೊಡುತ್ತಾನೆ.

ತಿಪ್ಪೇಸ್ವಾಮಿ ನಾಯಕನಹಟ್ಟಿಗೆ ಬಂದು ನೆಲೆನಿಂತ ಸನ್ನಿವೇಶವನ್ನು ಹೇಳುವಂತಹದ್ದು ತಿಪ್ಪೆಯನ್ನೆ ಆಯ್ಕೆಮಾಡಿಕೊಂಡು ಇದು ಒಳ್ಳೆಯ ಸ್ಥಳ ಎಂದು ನೆಲೆನಿಂತ ತಿಪ್ಪೇಸ್ವಾಮಿ ನಾಯಕನಹಟ್ಟಿ ಪ್ರವೇಶ ಪಡೆದ ಸಂದರ್ಭದಿಂದ ಹಿಡಿದು ಆತ ಒಡ್ಯಾಡಿದ ಹಾದಿ. ಮಠ ಮಾರಿಯ ಗುಡಿ ಎಲ್ಲವನ್ನು ಜನಪದರು ತಿಪ್ಪೇಸ್ವಾಮಿಯ ಮುಖಾಂತರ ಆ ಊರು ಬೀದಿ ಶ್ರೇಷ್ಟತೆಯನ್ನು ಪಡೆದುಕೊಂಡಿದೆ ಎಂದು ಹಾಡಿ ಹೊಗಳಿದ್ದಾರೆ. ಮಠದ ಸುತ್ತ ಬೆಳೆಯುವ ಮತ್ತು ಊರಿನಲ್ಲಿ ಬೆಳೆಯುವ ಬಾಳೆ, ನುಗ್ಗೆಯ, ಮದ್ಯದಲ್ಲಿ ತಿಪ್ಪೇಸ್ವಾಮಿ ಬಂದು ನೆಲೆನಿಂತ ಎಂಬುದನ್ನು ನೋಡಬಹುದು.

ತಿಪ್ಪೇಸ್ವಾಮಿ ಜನಪದರ ದೃಷ್ಟಿಯಲ್ಲಿ ಸಾಧುಗಳ ರೂಪದಲ್ಲಿ ಬಂದು ಜನರ ಅಂತರಾಳದಲ್ಲಿ ನೆಲೆನಿಂತು ದೈವತ್ವಕ್ಕೆ ಏರಿದ ಮಹಾ ಮಹಿಮಾಪುರುಷ. ವಾರದಲ್ಲಿ ಸೋಮವಾರ ತುಂಬಾ ಶ್ರೇಷ್ಠವಾದುದು. ಸೋಮವಾರದ ದಿನದಂದು ಸ್ವಾಮೀಯು ಪಲ್ಲಕ್ಕಿಯ ಮೆರವಣಿಗೆಯಲ್ಲಿ ಮದುಮಗನ ರೀತಿಯಲ್ಲಿ ಮೆರವಣಿಗೆಗೊಳ್ಳುವುದನ್ನು ಕಾಣಬಹುದು. ಒಡವೆ ಮಾರುವುದರಿಂದ ಹಿಡಿದು ಮಕ್ಕಳು ಹಾಕುವ ಗಾಜಿನ ಬಳೆಯ ಸಾಲುಗಳನ್ನು ಕಾಣಬಹುದು.

ಜಾತ್ರೆಯನ್ನು ಕುರಿತು 'ಬಯಲು ಸೀಮೆಯ ಜಾತ್ರೆ ನೋಡುತಲಿ ಬರುವಾತೆ'. ಬೇಗ ಬಂದೀತು ಅನಿಸುತ್ತದೆ ಎಂಬುದು ಜಾತ್ರೆಯ ಉತ್ಸವಗಳು ಆರಂಭವಾಗುವುದು ೯ ದಿನಗಳಿಂದ ಸಡಗರ ಸಂಭ್ರಮಗಳು ತುಂಬಿರುತ್ತವೆ. ತೇರನ್ನು ಎಳೆಯುವಂತಹದ್ದಕ್ಕೆ ತೆಂಗಿನಹಗ್ಗ ಬೇಕು, ಹೊಂಬಾಳೆ ಕಳಸ ಬೇಕು ಎನ್ನುವಂತಹದ್ದು, ತೇರನ್ನು ಕಟ್ಟುವಂತಹ ಸಮಯದಲ್ಲಿ ಗ್ರಾಮದ ಗೌಡ ದೊರೆಯಮಗ ಮಲ್ಲಣ್ಣ ಬರಬೇಕು ಎಂಬುದು. ತೇರನ್ನು ಎಳೆಯುವಂತಹ ಸಮಯದಲ್ಲಿ ಭಕ್ತರು ಸೂರಬೆಲ್ಲ ಮೆಣಸು ತೂರುವಂತಹದ್ದು ನಾಯಕಹಟ್ಟಿಯನ್ನು ಪ್ರವೇಶಿಸಿದಂದಿನಿಂದ ಎಲ್ಲವನ್ನು ಜನಪದರು ಗೀತೆಯ ರೂಪದಲ್ಲಿ ಹಾಡಿ ಹೊಗಳಿದ್ದಾರೆ. ಮಳೆ, ಬೆಳೆಯನ್ನು ಕುರಿತು, ಸ್ವಾಮಿಯನ್ನು ಕುರಿತು, ಜಾತ್ರೆಯ ಸಡಗರ ಸಂಭ್ರಮವನ್ನು ಮನಸಾರೆ ಹಾಡಿ ಹೊಗಳಿದ್ದಾರೆ. ಹಾಗೆಯೇ ಜನಪದರು ಸ್ವಾಮಿಯನ್ನು ದೈವವೆಂದು ಕಾಣದೆ ನಮ್ಮಲ್ಲಿ ಅವರು ಒಬ್ಬರು ಎಂಬ ಕಲ್ಪನೆಯಲ್ಲಿ ಹಾಡಿ ಹೊಗಳಿದ್ದಾರೆ. ಮಳೆ ಬಂದರೆ ನಾಯಕನಹಟ್ಟಿ ತುಂಬ ಸುಂದರವಾಗಿ ಕಾಣುತ್ತದೆ. ಸಿರಿ ತುಂಬಿ ತುಳುಕುತ್ತದೆ. ಹಾಗೆಯೇ ಮಳೆ ಬಂದರೆ ಜನ ತುಂಬ ಸಮೃದ್ಧಿಯ ಜೀವನವನ್ನು ನಡೆಸುತ್ತಾರೆ. ಮಳೆ ಬಂದಾಗ ತೆಪ್ಪೋತ್ಸವ ನಡೆಯುವಂತಹ ಸಂದರ್ಭದಲ್ಲಿ ಅದನ್ನು ನೋಡಲು ಎರಡು ಕಣ್ಣುಸಾಲದು ಅಷ್ಟು ಸುಂದರವಾಗಿರುತ್ತದೆ.

ಪೂಜೆ ವಿಧಿ ವಿಧಾನಗಳನ್ನೆಲ್ಲಾ ಕುರಿತು ಜನಪದರು ತಮ್ಮದೆ ಆದ ರೀತಿಯಲ್ಲಿ ಹಾಡಿದ್ದಾರೆ. ಜನಪದರು ತಿಪ್ಪೇಸ್ವಾಮಿಯನ್ನು ಮತ್ತು ಇಡೀ ಜಾತ್ರೆಯ ವೈಭವವನ್ನು ಕುರಿತು ಕಾವ್ಯದಲ್ಲಿ ಕಟ್ಟಿಕೊಟ್ಟಿದ್ದಾರೆ. ಕಾವ್ಯ ದೈನಂದಿನ ಕೆಲಸಕಾರ್ಯಗಳಿಂದ ಹಿಡಿದು ವಾರದ ಉತ್ಸವ ಜಾತ್ರೆ, ತೆಪ್ಪೋತ್ಸವ, ಸ್ವಾಮಿ ಮಾರಮ್ಮನ ಗುಡಿಯಲ್ಲಿ ನೆಲೆಸಿದ್ದು, ಮಠದ ಕಲ್ಪನೆ ಸ್ವಾಮಿ ಬೀದಿಯಲ್ಲಿ ನಡೆದಾಡುವ ಅವರ ಕಲ್ಪನೆಯಲ್ಲಿ ಅಚ್ಚಳಿಯದೆ ಕಾವ್ಯದ ಮೂಲಕ ಕಟ್ಟಿಕೊಟ್ಟಿರುವುದನ್ನು ಕಾಣಬಹುದು. ಒಟ್ಟಾರೆ ಕಾವ್ಯವು ಸ್ವಾಮಿ ಹಟ್ಟಿಗೆ ಬಂದು ನೆಲೆನಿಂತಾಗಿನಿಂದ ಹಿಡಿದು ಆ ಪ್ರದೇಶದಲ್ಲಿ ನಡೆಯುವುದೆಲ್ಲವನ್ನು ಕಾವ್ಯದಲ್ಲಿ ಕಾಣಬಹುದು.

ಕಂಕಣೋತ್ಸವಕ್ಕೆ ಸಿದ್ಧತೆ

ಎಲ್ಲಾ ಮುತ್ತೈದೆಯರು ನೆಲ್ಲಾ ಕುಟ್ಟಕೆ ಬನ್ನಿ
ಬಾಲಾ ಕಂದೈನಾ ಮದುವೀಗೆ ||
ಬಾಲಾ ಕಂದೈನಾ ಮದುವಿ ಅಂದರಡದಿಯೆ ||
ಸಣ್ಣಕ್ಕಿನೆಲ್ಲಾ ತೊಳಸಾನಾ ||

ಅಕ್ಕಿ ತೊಳಸನಿ ಬನ್ನಿ ಅಚ್ಚಾ ಮುತ್ತೈದೆಯರೂ
ಪುತ್ರ ಕಂದಯ್ಯ ಮದುವೀಗೆ ||
ಪುತ್ರ ಕಂದಯ್ಯ ಮದುವೀ ಅಂದರದಡಿಯೆ ||
ಸಣ್ಣಕ್ಕಿ ನೆಲ್ಲಾ ತೊಳಸಾನೀ ||

ಜಾಡೀಸಿ ಕುಟ್ಟಿದರ ಪಟ್ಟಣಾ ನಡುಗೇವೆ ||
ಕಟ್ಟೀಯ ಕಲ್ಲು ಸಡಿಲಾವು || ನಮ್ಮಪ್ಪ
ಹಟ್ಟಿಯ ದನವೂ ಬೆದರಾವೂ ||

ಝುಗ್ಗಿಸಿ ಕುಟ್ಟಿದರೆ ಊರೇನಾ ನಡಿಗೇವು ||
ಪಟಸಾಲೆ ಕಲ್ಲೇ ಸಡಿಲ್ಯಾವು || ನಮ್ಮಪ್ಪ
ಕಟ್ಟಿರುವಾ ದನವೂ ಬೆದೆರಾವು ||

ಒನಕೇ ಒನಕೆಗೆ ತಗುಲಿ ಗೆಳತೀಯ ಬಳೆ ಒಡೆದು
ಭುಜ ತಗುಲಿ ಬುಗುಡೀ ಮುರಿದಾವು || ನನ ಗೆಳತಿ
ಗರಿಸೋಕೆ ಸೆರಗೂ ಒಡೆದಾವು ||

ಗೆಳತೀ ನಮ್ಮಿಬ್ಬರಿಗೆ ಗೆಳೆತಾನ ಬಿಡದಲ್ಲೆ
ತಳುಕೇ ದೊಡ್ಡೇರಿ ತಳುಕೇನೆ || ನಾಯ್ಕಾನಟ್ಟಿ
ಮಲುಕೇ ಬಿದ್ದಾವೂ ಗೆಳತಾನ ||

ಮಂಗಳಾರತಿ ಪದ

ತಿಪ್ಪೇಯ ಸುತ್ತಿಟ್ಟ ಸನ್ಮಾನರೂಪಾನ
ತಿಪ್ಪೇನಾಯ್ಕಾನಟ್ಟಿ ತಿಪ್ಪೇಶಗೆ ||
ತಿಪ್ಪೇನಾಯ್ಕಾಹಟ್ಟಿ ತಿಪ್ಪಯ್ಯ ಸ್ವಾಮಿಗೆ ||
ದೃಷ್ಟಿ ಆರುತಿಗಾಳ ತಂದೆತ್ತೀವೆ || ಜಯ ಮಂಗಳ

ಅಣ್ಣೆಲೆ ಅಣ್ಣಡಿಕೆ ಹಣ್ಣು ತೆಂಗಿನಕಾಯಿ ||
ಹಣ್ಣಿನ ವನದಲ್ಲಿ ಬರುವಂತಾಗೆ ||
ಹಣ್ಣಿನ ವನದಲ್ಲಿ ಬರುವಾ ತಿಪ್ಪಯ್ಯಾಗೆ ||
ಹೆಣ್ಣು ಮಕ್ಕಳು ಆರೂತಿ ತಂದೆತ್ತೀರೆ || ಜಯ

ಹಸುರೇಲೆ ಕುಸುರಡಿಕೆ ಹಸಿರೂ ತೆಂಗಿನಕಾಯಿ
ಹಸೀರಿನ ವನದಲ್ಲಿ ಬರುವಂತಾಗೆ ||
ಹಸುರೀನ ವನದಲ್ಲಿ ಬರುವ ತಿಪ್ಪಯ್ಯಗೆ
ಹಸುಮಕ್ಕಾಳಾರತಿ ತಂದತ್ತೀರೆ || ಜಯ

ಒಳಗಳ ಮಠದಿಂದ ಹೊರಟಾನ ತಿಪ್ಪೇಸ್ವಾಮಿ
ನಾಡಾ ಭಕುತರ ನಡುವೆ ಬರುವಂತಾಗೆ
ನಾಡಾ ಭಕುತರ ನಡುವೆ ಬರುವಂಥ ಸ್ವಾಮಿ
ಹೆಣ್ಣು ಮಕ್ಕಳು ಆರತಿ ತಂದೆತ್ತೀರೆ || ಜಯ

ಹೊರಗಾಳ ಮಠದಿಂದ ಹೊರಟಾನಾ ತಿಪ್ಪೇಸ್ವಾಮಿ |
ಆಡೋ ಮಕ್ಕಳ ನಡುವೆ ಬರುವಂತಾಗೆ ||
ಆಡೋ ಮಕ್ಕಳ ನಡುವೆ ಬರುವಂತಾ ತಿಪ್ಪಯ್ಗೆ
ಆಸು ಮಕ್ಕಳು ಆರೂತಿ ತಂದೆತ್ತೀರೆ || ಜಯ ||

ಅಂಗೈಲಿ ಆರೂತಿ ಮುಂಗೈಲಿ ಶಿವಘಂಟೆ
ಲಿಂಗಾದ್ಯೆಯ್ಯಾ ನೀನು ದಣಿ ತೋರೊ
ಲಿಂಗಾದ್ಯೆಯಾ ನೀನು ದಣಿ ತೋರೂ ಜಂಗಮರೆ
ರಂಬೇರಾರುತಿ ತಂದು ಹೊರಗೈದಾರೆ ||

ಪಂಚಾಮಿ ಮುಖದೋರು ರುದ್ರಾಕ್ಷಿ ಕೊರೆಳೋರು
ಎಂಥಾವರೂ ತಾಯಿ ಶರಣರು ||
ಎಂಥವರೂ ತಾಯಿ ಶರಣರು ತಿಪ್ಪಗ್ಗಾನ
ಮಂಚಕ್ಕೆ ಮಲ್ಲಿಗೆ ಕೆಳುವ್ಯಾರು || ಜಯ

ಶಿವಶಿವ ಅನುವಂಥ ಶಿವ ನಮ್ಮ ಮನೆಯಾಗೆ
ಶಿವದಾರ ಅವದಾರಾ ಕೊರಳಾಗೆ ||
ಶಿವದಾರ ಅವುರಾ ಕೊರಳಾಗೆ ತಿಪ್ಪಗ್ಗಾನ ||
ಶಿವಪೂಜೆ ನಮ್ಮ ಮನಿಯಾಗೆ || ಜಯ ||

ಹಾಲಿಸಿ ಸಾರಿಸಿ ಹವಳದಲ್ಲಿ ಗುಡಿಕಟ್ಟಿ
ಮಾನಮುತ್ತೈದೆಯರು ರಂಗೋಲಿ ತುಂಬೀರಿ ||
ಯೋಗಿ ಮೂರುತಿ ನಮ್ಮ ತಿಪ್ಪಯ್ಯಗೆ || ಜಯ ||

ಮಹಾಮಾಯಿ

ಎದ್ದುನೆನದೇವಮ್ಮ ಎದುರೂ ಗುಡಿಯಮ್ಮಾನೆ ||
ಅಡ್ನಾಕುಂಕುಮದ ಹಣೆಯೋಳ || ಮಾರಮ್ಮ
ನಿದ್ರೇಗಣ್ಣಾಗ ನೆನೆದೇವ ||

ತಾಯವ್ವ ಹುಟ್ಟಿದ್ದು ತಾವ್ಯಾರು ಬಲ್ಲಾರು ||
ಮಾರೀಯ ಮೇಲೆ ಗೆದಲೇರಿ | ಹುತ್ತ ಬೆಳೆದು
ಹುಟ್ಟೀಲ್ಯಾಡ್ಯಾವೇ ಎಳೆನಾಗ ||

ಹುಟ್ಟಿಲ್ಯಾಡ್ಯಾವೋ ಎಳೆನಾಗ ಸುಳಿನಾಗ ||
ಜಗವೇ ಅಲ್ಲಾಡಿ ಬರುವಾಗ ||

ಅಕ್ಕಯ್ಯಾ ಹುಟ್ಟಿದ್ದು ಮತ್ಯಾರು ಬಲ್ಲರು
ನೆತ್ತೀಯ ಮೇಲೆ ಗೆದಲೇರಿ | ಹುತ್ತ ಬೆಳೆದು
ಹುಟ್ಟೀಡ್ಯಾಡಾವೆ ಎಳೆನಾಗ ||

ಕಡಗದ ಮಾರಮ್ಮಾ ಅಡವೇಲಿ ಬರುವಾಗ ||
ಕಡತಿ ಕಾಡೆಮ್ಮೆ ತರ ನಡುಗಿ || ಅಡವೇಲಿರುವ
ಮೃಗವೆದ್ದು ಕೈಯ್ಯ ಮುಗಿದಾವು ||

ಹತ್ತೂ ಮಾರಿನ ಮಂಡೆ ಎತ್ತಾರಕವೀಕೊಂತು |
ಹುಚ್ಚೀ ನಿನ್ಯಾರು ತಡುವೇರೆ || ಮಾರಕ್ಕ
ಹುತ್ತುಕೋಗೆಂದೂ ಕೇಳುವೀದ ||

ಸಾಸೂವೆ ಕಾಳೋದು, ರೇಸಿವೊಡ್ಡೈದಾಳೆ ||
ಚೆಲ್ಲಾಡಿ ನೆರಿಗೆ ಹೊಯಾಳೆ || ಮಾರಕ್ಕ
ಕ್ಯಾಟೀಗಾಕ್ಯಾಳೆ ಕೊನೆ ಮುಸುಗ ||

ಸೂರೆಬೆಲ್ಲ ನಿನಗೆ ಅರೂಕೋಣಾ ನಿನಗೆ ||
ಧಾವಣಿ ಕುರಿ ಕೋಣಾ ನಿನಗವ್ವಾ || ವಡ್ಡಳ್ಳೆಮ್ಮಾರಮ್ಮ
ಹಟ್ಟಿಗೆ ಇರುವಾ ಗರತೀಗೆ ||

ಬಾಯಿ ಬೀಗಾದೋರೇ ಬೇವೀನ ಸೀರೆರೆ ||
ಅಂತರಲೆ ಮೇಲೆ ಶಿಡಿಯಾಕೆ || ಮಾರಕ್ಕ
ಬೇಗಾನೆ ತಗಿಯೇ ಕಿಡಿಗಣ್ಣಾ ||

ಊರಾಗಳ ಮಾರಮ್ಮಾ ಊರೊರಗ್ಯಾಕೈದೀಯೆ ||
ತೋರೇನು ಬಾರೇ ನಿನಗಿಂಬ || ಗೌಡಾರ
ಪಡಸಾಲೆ ಮೇಲೆ ಇರುವಂತೆ ||

ಕೆರೆಯಾಗಳ ಮಾರಮ್ಮ ಉರಿಮೆದ್ದೂ ಬರುವಾಗ ||
ಸದರಿಲ್ಲ ಈ ಊರ ಗೌಡರಿಗೆ ||
ಸದರಿಲ್ಲ ಈ ಊರ ಗೌಡರು ಕೆಂಗಪ್ನೋರಾ

ನೂರೆರ್ಡ್ವಾರೂತಿ ಕಳಿಸಯ್ಯಾ ||
ಮಾರಕ್ಕಾ ಹುಟ್ಟೇಳೆ ಮಗ್ಗಾಲದ ಕೊಂಬೆಗೆ ||
ಸಣ್ಣಾ ಗೌಡಾರ ಮನೆಯಾಗೆ || ಮಾರಕ್ಕ

ಹೂವೀನ ಕರಿಬಾನ ಸುರಿಸ್ಯಾಳೆ ||
ಆ ಸೂಗಲ್ಲಿನ ಮೇಲೆ ಲೇಸಾಗಿ ಕುಂತಾಳೆ ||
ದೇಶಕ್ಕೆ ಮಾರಿ ತಿರುವ್ಯಾಳೆ || ಮಾರಕ್ಕ

ಬೀಸಣಿಕೆ ಕಳುವ್ಯಾರೆ ಗೌಡಾರು ||
ಕಟ್ಟೇ ಮೇಲೆ ಮಾರಕ್ಕ ವೊತ್ತಿರಿ ಶ್ಯಾನುಭೋಗ ||
ಕಟ್ಟೆಯ ಕೆಳಗೆ ತಳವಾರ || ತಿಪ್ಪಣ್ಣಾ

ಬಾಳೆ ಬಂಗಾರ ಜತುನಾವೇ ||
ಅಕ್ಕಾ ಮಾರಮ್ಮನ ಹೊಕ್ಕೊ ನೋಡನಿ ಬನ್ನಿ ||
ಉಕ್ಕೀನ ಕಂಬಾ ನಗುತಾವೆ || ಬಡಗೇರಣ್ಣ

ಎತ್ತರಜ್ಜ ಮುತ್ತಾ ಬಿಗಿದಾನೆ ||
ಗುಡ್ಡದಾಲರುಗೀಲಿ ಒಬ್ಬಾಳೆ ಬರುತಿದ್ದೆ ||
ಗದ್ದಾಲಿಸುತ್ತಿವೆ ಹುಲಿ ಕರಡಿ || ಮಾರಕ್ಕ
ಸದ್ದೆ ಮಾಡಮ್ಮ ಮಠದಾಗ ||

ತಿಪ್ಪೇಸ್ವಾಮಿ ಕುರಿತ ಕಥೆಗಳು

ಕೆಂಪಾವದೂತರು ಅಂತೇಳಿ ಒಬ್ಬ ಅವದೂತರಿರುತ್ತಾರೆ. ಅವರು ತಿಪ್ಪೇಸ್ವಾಮಿಗಳಿಗೆ ಬಹಳ ಆಪ್ತರು ಅವರು ದೊಡ್ಡ ಸ್ವರ್ಣ ವೈಭವಯುತವಾದ ಪಲ್ಲಕ್ಕಿಯ ಮೇಲೆ ಕೂತು ಮೆರವಣಿಗೆಯನ್ನು ಮಾಡಿಕೊಂಡು ಬರುತ್ತಿರುವುದನ್ನು ನೋಡಿದ ತಿಪ್ಪೇಸ್ವಾಮಿಯವರು ಅಲ್ಲೆ ದೊಡ್ಡ ತಿಪ್ಪೆಯ ಮೇಲೆ ನಿಂತು ಕುಣಿದಾಡುತ್ತಿರುತ್ತಾರೆ. ಹೀಗೆ ಕುಣಿದಾಡುವುದನ್ನು ನೋಡಿದ ಜನತೆಗೆಲ್ಲ ಆಶ್ಚರ್ಯವಾಗುತ್ತದೆ. ಹಾಗೂ ಕೆಂಪಾವಧೂತರಿಗೂ ಆಶ್ಚರ್ಯವಾಗುತ್ತದೆ. ಆಗ ಅವರು ಬಂದು ಕೇಳುತ್ತಾರೆ. ಏನಪ್ಪ ತಿಪ್ಪೇರುದ್ರೇಶ ನೀನು ಈ ತರಹ ಕುಣಿತಿದ್ದೀಯ ನಾನು ಇಷ್ಟು ದೊಡ್ಡ ಪ್ರಮಾಣದಲ್ಲಿ ಮೆರವಣಿಗೆ ಮಾಡಿಸಿಕೊಳ್ಳುತಿದ್ದೀನಿ ಎಂದು ಕೆಂಪಾಧೂತರು ಕೇಳುತ್ತಾರೆ.

ತಿಪ್ಪೇರುದ್ರಸ್ವಾಮಿಗಳು ಮೆರವಣಿಗೆಯೆಲ್ಲ ದೊಡ್ಡವರಿಗೆ ಸ್ವಾಮಿ ನನಿಗೆ ಯಾಕೆ ಮೆರವಣಿಗೆ ಬೇಕು. ನಾನು ತಿಪ್ಪೆಮೇಲೆ ನಿಂತು ಮೆರವಣಿಗೆ ನೋಡುತ್ತೀನಿ ಎಂದು ಹೇಳುತ್ತಾರೆ. ಅಂದರೆ ನಿಜವಾದಂತಹ ಸ್ವಾಮೀಜಿಗಳ ಉದ್ದೇಶವನ್ನು ಮರೆತು ನೀವು ಮೆರವಣಿಗೆಯನ್ನು ಮಾಡಿಸಿಕೊಳ್ಳುತ್ತಿದಿರಿ ಎಂಬ ಅಂಶವನ್ನು ಅವರಿಗೆ ಮನದಟ್ಟು ಮಾಡಿಕೊಡುತ್ತಾರೆ. ಆಗ ಕೆಂಪಾವಧೂತರು ನೀವು ನಿಜವಾಗಿ ನನ್ನ ಅಜ್ಞಾನದ, ಅಂಧಕಾರದ ಕಣ್ಣನ್ನು ತೆರೆಸಿದ್ದೀರಾ ಎಂದು ಹೇಳಿದರು. ತಿಪ್ಪೇಯ ಮೇಲೆ ಕುಣಿದಾಡಿದ್ದರಿಂದ ಅವರಿಗೆ ತಿಪ್ಪೇಸ್ವಾಮಿ, ತಿಪ್ಪೇರುದ್ರಸ್ವಾಮಿ ಎಂಬ ಹೆಸರು ಬಂತು ಎಂಬುದನ್ನು ಕಾಣುತ್ತೇವೆ. ಇದೊಂದು ಕುತೂಹಲಕಾರಿಯಾದ ಘಟನೆ ಎಂದೇ ಹೇಳಬಹುದು.

ಅಧ್ಯಾಯ - ೭

ಆಧುನಿಕತೆ ಮತ್ತು ತಿಪ್ಪೇಸ್ವಾಮಿ

ಆಧುನಿಕತೆ ಮತ್ತು ತಿಪ್ಪೇಸ್ವಾಮಿ

ಸಮಕಾಲೀನ ಒತ್ತಡಗಳಿಂದುಂಟಾದ ರೂಪಾಂತರಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ಪಂಚಗಣಾಧೀಶ್ವರರ ಆಚರಣೆಗಳಲ್ಲಿ ಆಗುತ್ತಿರುವ ಬದಲಾವಣೆಗಳು ತೀವ್ರ ಕುತೂಹಲವನ್ನು ಕೆರಳಿಸುತ್ತಿವೆ. ಬೇಡ ಸಮುದಾಯದವರು ಎಡೆಕೊಡುವ ಪದ್ಧತಿ ಮೊದಲಿನಿಂದಲೂ ಇದೆ. ಇಲ್ಲಿನ ಪೂಜಾರಿಗಳು ಮ್ಯಾಸಬೇಡರು. ಆದರೆ ಇತ್ತೀಚಿನ ೮-೧೦ವರ್ಷಗಳಿಂದ ಗರ್ಭಗುಡಿಯಲ್ಲಿ ಎಡೆಯನ್ನು ತಂದು ಒಪ್ಪಿಸುವ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಈ ಬಗ್ಗೆ ಪ್ರಶ್ನಿಸಿದಾಗ ಹೊರಮಠದ ಪೂಜಾರಿಗಳು 'ಗರ್ಭಗುಡಿಯಲ್ಲಿ ಮಾಂಸ ಎಡೆಕೊಡುವುದರಿಂದ ಮಾಂಸ ತಿನ್ನದ ಲಿಂಗಾಯತರು, ಜಂಗಮರು ಈ ಮಠಕ್ಕೆ ಬರುತ್ತಿಲ್ಲ. ಹಾಗಾಗಿ ಎಲ್ಲರನ್ನು ಈ ಮಠಕ್ಕೆ ಬರುವಂತೆ ಮಾಡಲು ಈ ಪದ್ಧತಿಯನ್ನು ಜಾರಿಗೆ ತರಲಾಗಿದೆ ಎಂದಿದ್ದಾರೆ. ಹೊರಮಠಕ್ಕೆ ಈಗಲೂ ಬೇಡರು, ಕುರುಬರು, ಕೆಳವರ್ಗದವರು ಹೆಚ್ಚಾಗಿ ಬರುತ್ತಾರೆ. ಲಿಂಗಾಯತರು ಜಂಗಮರನ್ನೊಳಗೊಂಡ ಉನ್ನತ ವರ್ಗಗಳು ಒಳಮಠಕ್ಕೆ ಹೆಚ್ಚಾಗಿ ಬರುತ್ತಾರೆ.

ಹೊರಮಠದಲ್ಲಾಗಿರುವ ಬದಲಾವಣೆ ಉನ್ನತವರ್ಗವನ್ನು ತನ್ನತ್ತ ಸೆಳೆದುಕೊಳ್ಳಬೇಕೆನ್ನುವ ಪೂಜಾರಿಯ ಬಯಕೆ ಮಾತ್ರವಾಗಿರದೆ ಸಾಮಾಜಿಕವಾಗಿ ಮೇಲುಸ್ತರದೊಂದಿಗೆ ಗುರುತಿಸಿಕೊಳ್ಳಬೇಕೆನ್ನುವ ಹಂಬಲವೂ ಕಾರಣವಾಗಿದೆ. ಸಾಮಾಜಿಕ ಸ್ಥಾನಮಾನಕ್ಕಾಗಿ ಮೇಲ್ವರ್ಗದೊಂದಿಗೆ ಗುರುತಿಸಿಕೊಳ್ಳಬೇಕೆನ್ನುವ ಪ್ರಯತ್ನ ಮತ್ತು ತಮ್ಮ ಆಹಾರ ಪದ್ಧತಿಯನ್ನು ಕೈಬಿಡಲಾಗದ ಅಸಹಾಯಕತೆಯ ತೊಳಲಾಟದಲ್ಲಿ ಎರಡು ಕಡೆ ಇರಬೇಕಾಗಿರುವ ಅನಿವಾರ್ಯತೆಯಿಂದ ಈ ಪದ್ಧತಿಯನ್ನು ರೂಢಿಸಿಕೊಳ್ಳಲಾಗಿದೆ.

'ರುದ್ರಾಕ್ಷಿ ಮಾಲೆ' ಎಂದು ಕರೆಯಲಾಗುವ ಈ ಪದ್ಧತಿಯಲ್ಲಿ ಮಾಲೆ ಧರಿಸಿದವರು ಬಿಳಿಯ ಅಂಗಿ ಅಥವಾ ಕಾವಿ ಮತ್ತು ಕೆಂಪು ವಸ್ತುವನ್ನು ಧರಿಸತಕ್ಕದ್ದು. ಈ ಪದ್ಧತಿ ಮಕರ ಸಂಕ್ರಾಂತಿಯಂದು ಮುಗಿಯುತ್ತದೆ. ಇಲ್ಲಿ ೨೦೦೦ನೇ ಇಸ್ವಿಯಿಂದ ಆರಂಭವಾಗಿದೆ. 'ಅಕ್ಷಯ ಬುತ್ತಿ' ವಿಶಿಷ್ಟ ಆಚರಣೆಯೂ ಇದೆ. ತಿಪ್ಪೇಸ್ವಾಮಿ ಘಣೆಯಪ್ಪ ಮತ್ತು ಭಕ್ತಾದಿಗಳೊಂದಿಗೆ ಊಟ ಮಾಡುವ ಪ್ರಸಂಗ ಬಂದಾಗ ಇದ್ದ ಸ್ವಲ್ಪ ಬುತ್ತಿಯನ್ನೆ ಎಲ್ಲರಿಗೂ ಹಂಚಿದ ನೆನಪಿಗೋಸ್ಕರ ಮಾಲೆ ಧರಿಸಿದರು. ಇದರಿಂದ ಮಾಲೆ ಧರಿಸಿದವರೆಲ್ಲ ತಮ್ಮವರು ಎಂದು ಗುರುತಿಸುವ ಮತ್ತು ಜಾತಿ ಬೇಧವಿಲ್ಲದೆ ಬಡವ ಶ್ರೀಮಂತ ಎನ್ನದೆ ಎಲ್ಲರ ಹತ್ತಿರವೂ ಒಯ್ಯುವ ಪ್ರಯತ್ನ ಎಂಬುದನ್ನು ಕಾಣಬಹುದು.

ಹಾಗೆ ಹೊಸದಾಗಿ ಬಂದು ಸೇರಿದ ಕಾರ್ತಿಕೋತ್ಸವದಂದು ನಡೆಯುವ 'ಲಕ್ಷ ದೀಪೋತ್ಸವ' ೧೯೮೨ರಲ್ಲಿ ಜಾರಿಗೆ ಬಂದಿದೆ. ೨೦೦೩ರಲ್ಲಿ ಬೆಳ್ಳಿ ರಥವನ್ನು ಮಾಡಿಸಲಾಗಿದೆ. ಕಾರ್ತಿಕೋತ್ಸವದಂದು ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ಮೆರವಣಿಗೆ ಮಾಡುವುದು ಪದ್ಧತಿಯಾಗಿ ಮಾರ್ಪಟ್ಟಿದೆ. ಅದೇ ೧೦೫).

ಆಧುನಿಕತೆಯ ಪ್ರಭಾವದಿಂದಾಗಿ ಜಾತ್ರೆಗೆ ಮೊದಲಿದ್ದಂತಹ ಸಡಗರ ಸಂಭ್ರಮಗಳು ಕಡಿಮೆಯಾಗಿವೆ ಯಾಕೆಂದರೆ ಎತ್ತುಗಾಡಿ ಕಟ್ಟಿಕೊಂಡು ಬರುವಂತಹದ್ದು ಜಾತ್ರೆಗಾಗಿ ನಡೆಯುವ ಸಿದ್ಧತೆಗಳು, ಸಡಗರ ಸಂಭ್ರಮಗಳು ಕಡಿಮೆಯಾಗಿವೆ. ಮೂರುದಿನ ಆಚರಿಸುವಂತಹ ಜಾತ್ರೆಯಲ್ಲಿ ಜನರು ತೇರಿನ ದಿನ ಬಂದು ಪೂಜೆ ಮಾಡಿಸಿಕೊಂಡು ಹೋಗುವುದನ್ನು ಕಾಣಬಹುದು. ಆಚರಣೆಗಳು, ಉತ್ಸವಗಳು ಹಾಗೆಯೇ ಮುಂದುವರಿದಿವೆ. ಆಧುನಿಕತೆಯ ಪ್ರಭಾವಕ್ಕೆ ಸಿಲುಕಿದ ಜನರು ಜಾತ್ರೆಯನ್ನು ಸಡಗರ ಸಂಭ್ರಮದಿಂದ ಉಲ್ಲಾಸದಿಂದ ಕಳೆಯುವುದಕ್ಕೆ ಬದಲಾಗಿ ಜಾತ್ರೆಯನ್ನು ಒಂದು ವ್ಯವಹಾರಿಕ ನೆಲೆಯಲ್ಲಿ ನಿರ್ಮಾಣಗೊಂಡಿದೆ.

ಜಾತ್ರೆಯ ಸಂದರ್ಭದಲ್ಲಿ ರಾತ್ರಿಯೆಲ್ಲ ಸ್ವಾಮಿಯ ಬಗ್ಗೆ ಭಜನೆ, ಹಾಡು, ನಾಟಕ ಮೊದಲಾದವುಗಳ ಕಡೆ ಜನ ಆಸಕ್ತಿವಹಿಸುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಅದು ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಸಿನಿಮಾಗಳ ಕಡೆ ಹೆಚ್ಚು ಜನ ಆಸಕ್ತಿವಹಿಸುತ್ತಿರುವುದನ್ನು ಕಾಣಬಹುದು. ಸ್ವಾಮಿಯ ಬಗ್ಗೆ ಜನರಲ್ಲಿ ಒಲವಿದೆ. ಹಾಗೆಯೇ ತುಂಬಾ ಉತ್ಸಾಹದಿಂದ ಜಾತ್ರೆಯಲ್ಲಿ ಭಾಗಿಯಾಗಿ ಸ್ವಾಮಿಯ ದರ್ಶನ ಪಡೆಯುತ್ತಾರೆ. ಜಾತ್ರೆಯಲ್ಲಿ ಸ್ವಪ್ರತಿಷ್ಠೆ ಮತ್ತು ರಾಜಕೀಯದ ಪ್ರಭಾವದಿಂದಾಗಿ ಜನರು ಹೆಚ್ಚು ಆಕರ್ಷಿತರಾಗಿ ವ್ಯವಹಾರಿಕ ದೃಷ್ಟಿಕೋನದಲ್ಲಿ ನೋಡುವುದನ್ನು ಕಾಣಬಹುದು.

ಪ್ರಾಣಿವಧೆಯನ್ನು ನಿಷೇದಿಸಬೇಕು ಎಂದು ಸರ್ಕಾರ ಆಜ್ಞೆ ವಿಧಿಸಿದೆ. ಪ್ರಾಣಿಗಳ ಹತ್ಯೆಯಾಗುತ್ತಿವೆ. ನರಬಲಿ ಬೇಡ ಎಂಬ ನಿಲುವನ್ನು ಕಾಣಬಹುದು. ತಿಪ್ಪೇಸ್ವಾಮಿ ಬಂದದ್ದು ಇಂತಹ ನರಮೇಧವನ್ನು ನಿಷೇಧಿಸಬೇಕು. ಅವರಲ್ಲಿರುವ ಮೌಢ್ಯ ಅಂಧಕಾರವನ್ನು ತೊಲಗಿಸುವ ನಿಟ್ಟಿನಲ್ಲಿ ಹೆಜ್ಜೆ ಹಾಕಿದವರು. ಪ್ರಾಣಿವಧೆಯನ್ನು ನಿಷೇಧಿಸಬೇಕು ಎಂದು ಹೇಳುತ್ತಾರೆ.

ಹೊರಮಠದಲ್ಲಿ ಪಾಳೆಗಾರ ವಂಶಸ್ಥರು ಪೂಜೆ ಸಲ್ಲಿಸುತ್ತಾರೆ. ಇದು ಬಯಲು ಸೀಮೆ ಸುತ್ತಮುತ್ತ ತಿನ್ನುವಂತಹ ಜನ ಜಾಸ್ತಿ ಹಾಗಾಗಿ ಇಲ್ಲಿ ಪಾಳೆಗಾರಿಕೆಯ ಆಡಳಿತವನ್ನು ಕಾಣಬಹುದು. ಆದ್ದರಿಂದ ತಿನ್ನುವಂತಹದ್ದು ಸ್ವಲ್ಪಜಾಸ್ತಿ ಎಲ್ಲರನ್ನು ಸೇರಿಸಿ ಊಟ ಮಾಡುವುದು ವಾಡಿಕೆ. ಅಲ್ಲಿ ಕುರಿ, ಕೋಳಿ ತಿನ್ನುವುದು ಕಂಡುಬರುತ್ತದೆ. ಹೊರಮಠ ಬಯಲು ಪ್ರದೇಶವಾದ್ದರಿಂದ ಬಂದಂತಹ ಜನ ಎಲ್ಲರೂ ಸೇರಿಕೊಂಡು ಕುರಿ, ಕೋಳಿ ಕಡಿದು ತಿನ್ನುವುದು ವಾಡಿಕೆ. ಕುರಿ ಕೋಳಿಯನ್ನು ತಿನ್ನಲು ದೇವರ ಹೆಸರಿನಲ್ಲಿ ಆರಂಭವಾಯಿತು. ಹೀಗೆ ಆರಂಭವಾದ ಆಚರಣೆ ಅದು ತುಂಬಾ ವ್ಯಾಪಕವಾಗಿರುವುದನ್ನು ಕಾಣಬಹುದು. ಆದರೆ ನಿಜವಾಗಿ ತಿಪ್ಪೇಸ್ವಾಮಿ ಬಂದದ್ದು ಪ್ರಾಣಿವಧೆಯನ್ನು ನಿಷೇಧಿಸಲು ಆದರೆ ಈ ಭಾಗದ ಜನರು ಹರಕೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಮುಂದುವರಿಸಿಕೊಂಡು ಹೋಗುವುತ್ತಿರುವುದನ್ನು ಕಾಣಬಹುದು.

ಧಾರ್ಮಿಕ ಆಚರಣೆಗಳು ಹೀಗೆ ಇರಬೇಕು ಎಂಬ ನಿಯಮವಿಲ್ಲ. ನಿಷ್ಠೆಯಿಂದ ನಡೆದುಕೊಳ್ಳಬೇಕು ಮತ್ತು ಪಡೆದುಕೊಳ್ಳಬೇಕು ಎಂಬುದು ವಾಡಿಕೆ. ಸಕಾರಾತ್ಮಕವಾದ ರೀತಿಯಲ್ಲಿ ನಡೆದುಕೊಳ್ಳಬೇಕು. ಬಕ್ತಿಯಿಂದ ಕೇಳಿಕೊಳ್ಳುವುದಷ್ಟೆ ಇಲ್ಲಿ ದೇವರು ಮೈಮೇಲೆ ಬರುವುದು ಹೂ ಕೊಡುವುದು ಏನು ಇಲ್ಲ. ಇಲ್ಲಿ ಏನಿದ್ದರು ಭಕ್ತಿಯಿಂದ ಕೇಳಿಕೊಳ್ಳುವುದು ಹರಕೆಯ ರೂಪದಲ್ಲಿ ನಡೆದುಕೊಳ್ಳುತ್ತಾರೆ. ಹರಕೆ ಈಡೇರಿದ ನಂತರ ಹರಕೆಯನ್ನು ಸಲ್ಲಿಸುತ್ತಾರೆ. ನಾವು ಅಂದುಕೊಂಡಿದ್ದು ನಡೆಯಿತು ಎಂಬ ನಂಬಿಕೆಯಿಂದ ಹರಕೆಯನ್ನು ಸಲ್ಲಿಸುತ್ತಾರೆ.

ಕೊಬ್ಬರಿ ಸುಡುವುದನ್ನು ನಿಷೇದಿಸಬೇಕೆಂದು ಹೇಳುತ್ತಾರೆ. ಕೊಬ್ಬರಿಯನ್ನು ರಾಶಿಗಟ್ಟಲೆ ಸುಡುವುದರಿಂದ ಹವಮಾನ ಕಲುಷಿತವಾಗುತ್ತದೆ. ಕಪ್ಪುಹೊಗೆಯಿಂದ ಕೂಡಿರುತ್ತದೆ. ಇದು ಹವಾಮಾನವನ್ನು ಕಲುಷಿತಗೊಳಿಸಿ ಜನರ ಆರೋಗ್ಯಕ್ಕೆ ಹಾನಿಯುಂಟುಮಾಡುತ್ತದೆ ಎಂದು ತಿಳಿದು, ಈ ಪದ್ಧತಿ ಬೇಡ ಎಂದು ತಿಳಿದು ಕೊಬ್ಬರಿಯನ್ನು ಸುಡವ ಬದಲು ದಾಸೋಹಕ್ಕೆ ಕೊಟ್ಟರೆ ಬಂದಂತಹ ಜನರಿಗೆ ದಾಸೋಹಕ್ಕೆ ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ ಕೊಬ್ಬರಿ ಸುಡುವುದನ್ನು ನಿಷೇಧಿಸಬೇಕು ಎಂದಿದ್ದಾರೆ. ಅದಕ್ಕೆ ಜನರು ಸ್ಪಂದಿಸುತ್ತಿಲ್ಲ ಎಂಬ ಅಂಶವನ್ನು ಕಾಣಬಹುದು.

ಅಧ್ಯಾಯ - ೮

ಉಪಸಂಹಾರ

ಉಪಸಂಹಾರ

ನಾಯಕನಹಟ್ಟಿ ತಿಪ್ಪೇಸ್ವಾಮಿ: ಸಂಕಥನ ಪ್ರಬಂಧವೂ ಎಂಟು ಅಧ್ಯಾಯಗಳನ್ನು ಒಳಗೊಂಡಿದ್ದು ಇದೊಂದು ಸಾಂಸ್ಕೃತಿಕ ಅಧ್ಯಯನವಾಗಿ ರೂಪುಗೊಂಡಿದೆ. ಪ್ರಬಂಧವು ಜನಪದ ಆಕರವಾದ ನೆಲಸಂಸ್ಕೃತಿಯನ್ನು ಆಧಾರವಾಗಿಟ್ಟುಕೊಂಡು ಅಧ್ಯಯನ ಮಾಡುವ ಪ್ರಯತ್ನವಾಗಿದೆ. ತಿಪ್ಪೇಸ್ವಾಮಿ ಜನಪದರ ನೆಲೆಯಲ್ಲಿ ಯಾವ ರೀತಿ ನೆಲೆಗೊಂಡಿದ್ದಾನೆ ಎಂಬುದರಿಂದ ಹಿಡಿದು ಆತನ ಮೂಲ, ಆತನ ಹುಟ್ಟು, ಬೆಳವಣಿಗೆ, ಆತನನ್ನು ಕುರಿತಂತೆ ಇರುವ ನಂಬಿಕೆ, ಹರಕೆ, ಪವಾಡ, ಆಚರಣೆಗಳು, ಜಾತ್ರೆ ಮುಂತಾದ ಹತ್ತು ಹಲವು ವಿಷಯಗಳನ್ನು ಕ್ರೋಢೀಕರಿಸಿಕೊಂಡು ಪ್ರಬಂಧವನ್ನು ಕಟ್ಟಿಕೊಡಲಾಗಿದೆ. ಈ ಪ್ರಬಂಧವು ಬಹುಮುಖ್ಯವಾಗಿ ಕ್ಷೇತ್ರಕಾರ್ಯದ ಆಧಾರದ ಮೇಲೆ ನೆಲೆಗೊಂಡಿದ್ದು ವಿಷಯದ ಸ್ಪಷ್ಟತೆಗೆ ಹಾಗೂ ಅದರ ಒಳನೋಟಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ.

ನಾಯಕನಹಟ್ಟಿ ತಿಪ್ಪೇಸ್ವಾಮಿ ಮಧ್ಯಕರ್ನಾಟಕ ಭಾಗದ ಜನಸಮುದಾಯಗಳ ಆರಾಧ್ಯ ದೈವವಾಗಿದ್ದು ಪಂಚಗಣಾಧೀಶ್ವರರಲ್ಲಿ ಒಬ್ಬರಾಗಿದ್ದಾರೆ. ವಚನ ಪರಂಪರೆಯ ನಂತರ ಮಧ್ಯಕರ್ನಾಟಕದಲ್ಲಿ ಬರುವ ಪಂಚಗಣಾಧೀಶ್ವರರಾದ ಶ್ರೀವೃಷಭರಾಜೇಂದ್ರ ನರಸೀಪುರ (ಕೊಟ್ಟೂರು), ಶ್ರೀ ಕೋಲಶಾಂತೇಶ್ವರ ಅರಸೀಕೆರೆ (ಹರಿಪನಹಳ್ಳಿ), ಶ್ರೀ ರುದ್ರಮುನಿ ನಿಷಾದಪುರ, (ನಾಯಕನಹಟ್ಟಿ), ಶ್ರೀ ಕೆಂಪಯ್ಯ, ಹರಪುರ, (ಹರಪನಹಳ್ಳಿ), ಶ್ರೀ ಮಹಾಸ್ವಾಮಿ, ಮದ್ದಾನಸ್ವಾಮಿ ಕೂಲಹಳ್ಳಿ, (ಹರಪನಹಳ್ಳಿ ತಾ) ಇವರುಗಳಲ್ಲಿ ರುದ್ರಮುನಿಯವರು ತಿಪ್ಪೇಸ್ವಾಮಿಯಾಗಿ ನೆಲೆನಿಂತಿರುವವರು. ಇವರು ಸರ್ವಧರ್ಮಗಳನ್ನು ಸಮನಾಗಿ ಕಾಣುತ್ತ ಸರ್ವರಲ್ಲಿಯು ಶಿವನಿರುವುದನ್ನು ಜ್ಞಾನದೃಷ್ಟಿಯಿಂದ ತಿಳಿದುಕೊಂಡು ಅಜ್ಞಾನ ಅಂಧಕಾರಗಳನ್ನು ತೊಡೆದು ಹಾಕಿದರು. ಪ್ರಸ್ತುತ ಪ್ರಬಂಧದಲ್ಲಿ ಬಹುಮುಖ್ಯವಾಗಿ ನಾಯಕನಹಟ್ಟಿ ತಿಪ್ಪೇಸ್ವಾಮಿ ಇಪ್ಪತ್ತನೆ ಶತಮಾನದಲ್ಲಿ ಪಂಚಗಣಾಧೀಶ್ವರ ಪ್ರಸ್ತುತತೆ, ಹಿನ್ನಲೆ, ಮತ್ತು ಆಗಿನ ಕಾಲದ ಒತ್ತಡಗಳು, ಪ್ರೇರಣೆಗಳು, ರಾಜಕೀಯ, ಹಾಗೂ ಸಾಂಸ್ಕೃತಿಕ ಆಯಾಮಗಳೇನು ಎಂಬುದನ್ನು ಕುರಿತು ಚರ್ಚೆಗೆ ಒಳಪಡಿಸಲಾಗಿದೆ. ಈ ನಿಟ್ಟಿನಲ್ಲಿ ಇದೊಂದು ಕ್ಷೇತ್ರಕಾರ್ಯ ಆಧಾರಿತ ಮಾಹಿತಿಗಳ ಜೊತೆಗೆ ಈಗಾಗಲೇ ಅವರ ಬಗೆಗೆ ಇರುವ ಗ್ರಂಥಸ್ಥ ಸಾಹಿತ್ಯಗಳನ್ನು ಸಹ ಪರಿಶೀಲಿನೆಗೊಳಪಡಿಸಿದ್ದು ಬಹುಮುಖ್ಯವಾಗಿ ತಿಪ್ಪೇಸ್ವಾಮಿ ಸಮಾಜಕ್ಕೆ ನೀಡಿದ ಕೊಡುಗೆ ಹಾಗೂ ಆಧುನಿಕ ಜಗತ್ತಿನಲ್ಲಿಯು ಸಹ ಜನರ ಮನಸ್ಸಿನಲ್ಲಿ ತಿಪ್ಪೇಸ್ವಾಮಿಯನ್ನು ಕುರಿತು ಇರುವ ಭಾವನೆಗಳನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ಎಂಟು ಅಧ್ಯಾಯಗಳಿದ್ದು ಮೊದಲನೆಯ ಅಧ್ಯಾಯವು ನಾಯಕನಹಟ್ಟಿ ತಿಪ್ಪೇಸ್ವಾಮಿ ಸಂಕಥನದ ಉದ್ದೇಶ, ವ್ಯಾಪ್ತಿ ಎಂದಿದ್ದು ಇದರಲ್ಲಿ ಅಧ್ಯಯನಕ್ಕೆ ಸಂಬಂಧಪಟ್ಟ ಪ್ರಸ್ತಾವನೆ, ಉದ್ದೇಶ, ವ್ಯಾಪ್ತಿ, ಅಧ್ಯಯನ ವಿಧಾನ, ಆಕರ ಸಾಮಾಗ್ರಿ ಕುರಿತಂತೆ ಪರಿಚಯ ಮಾಡಿಕೊಡಲಾಗಿದೆ.

ಅಧ್ಯಾಯ ೨ ರಲ್ಲಿ ನಾಯಕನಹಟ್ಟಿ ತಿಪ್ಪೇಸ್ವಾಮಿ ಕುರಿತು ಚರ್ಚಿಸಲಾಗಿದೆ. ಬಹುಮುಖ್ಯವಾಗಿ ಹುಟ್ಟಿನ ಬಗೆಗಿರುವ ಕಥೆಗಳು, ಅವರ ಬಾಲ್ಯದ ಬಗೆಗಿರುವ ಕಥನಗಳನ್ನು ಸಂಗ್ರಹಿಸಲಾಗಿದೆ. ಅವರನ್ನು ಕುರಿತಂತೆ ಇರುವ ಚಾರಿತ್ರಿಕ ಗೊಂದಲಗಳನ್ನು ಕುರಿತು ವಿಶ್ಲೇಷಣೆಗೆ ಒಳಪಡಿಸಲಾಗಿದೆ ಬಹುಮುಖ್ಯವಾಗಿ ಪಂಚಗಣಾಧೀಶ್ವರರಲ್ಲಿ ಒಬ್ಬರಾಗಿರುವ ಹಾಗೂ ಇತರ ಪಂಚಗಣಾಧೀಶ್ವರರು ಯಾರು, ಅವರ ಮೂಲ, ಮಧ್ಯಕಾಲೀನ ಕರ್ನಾಟಕದಲ್ಲಿ ಪಂಚಗಣಾಧೀಶ್ವರರ ಪಾತ್ರ ಮತ್ತು ಮಹತ್ವ, ಗಣಾಧೀಶ್ವರರಾಗಲು ಅವರಿಗಿದ್ದ ಒತ್ತಡಗಳು ಬಹುಮುಖ್ಯವಾಗಿ ರಾಜಕೀಯ, ಧಾರ್ಮಿಕ, ಸಾಮಾಜಿಕ, ಒತ್ತಡಗಳನ್ನು ಹೇಳುವುದರ ಜೊತೆಗೆ ಪ್ರೇರಣೆ, ಪ್ರಭಾವಗಳನ್ನು ಚರ್ಚಿಸಲಾಗಿದೆ. ಪಂಚಗಣಾಧೀಶ್ವರರು ತಮ್ಮ ಗುರುಶಿಕ್ಷಣವನ್ನು ಪಡೆದನಂತರ ಬೇರೆ ಬೇರೆ ಸ್ಥಳಗಳಿಗೆ ಹೋಗಿ ನೆಲೆಯನ್ನು ಕಂಡು ಕೊಳ್ಳುವ ಪ್ರಯತ್ನದಲ್ಲಿರುವಾಗ ತಿಪ್ಪೇಸ್ವಾಮಿಯವರು ನಾಯಕನಹಟ್ಟಿ ಪ್ರವೇಶಿಸಿದ ಸಂದರ್ಭ, ನಂತರದ ಸಂದರ್ಭ, ಕಾಯಕತತ್ವ, ಅವರ ಮೇಲೆ ಆಗಿರುವ ಶೈವನಾಥ ಸಿದ್ಧರ ಪ್ರಭಾವವನ್ನು ಚರ್ಚಿಸಲಾಗಿದೆ.

ನಾಯಕನಹಟ್ಟಿ ತಿಪ್ಪೇಸ್ವಾಮಿ ಮಠ: ಒಂದು ಪರಿಚಯ ಎಂಬ ೩ನೇ ಅಧ್ಯಯದಲ್ಲಿ ಅಲ್ಲಿರುವ ಒಳಮಠ, ರಾಜಗೋಪುರ, ಹೊರಮಠ, ಏಕಾಂತೇಶ್ವರ ಮಠ, ಗೃಹಾಂತರ ದೇವಾಲಯವನ್ನು ಕುರಿತು ಪರಿಚಯ ಮಾಡಿಲಾಗಿದೆ. ಅಧ್ಯಾಯ ೪ ರಲ್ಲಿ ನಂಬಿಕೆ, ಪವಾಡ, ಹರಕೆಗಳನ್ನು ಕುರಿತು ಚರ್ಚಿಸಲಾಗಿದೆ. ನಂಬಿಕೆ, ಹರಕೆ, ಪವಾಡಗಳು ಒಂದು ಪುಣ್ಯಕ್ಷೇತ್ರದ ಶ್ರೇಯೋಭಿವೃದ್ಧಿಗೆ ಅತ್ಯಗತ್ಯವಾದ ಅಂಶಗಳು, ನಂಬಿಕೆಯಿಲ್ಲದೆ ಹೋದರೆ ಯಾವುದೇ ಸ್ಥಳವು ಪುಣ್ಯಕ್ಷೇತ್ರವಾಗಿ ಮಾರ್ಪಡುವುದಿಲ್ಲ. ಹಾಗಾಗಿ ನಂಬಿಕೆ ಎನ್ನುವುದು ಪುಣ್ಯಕ್ಷೇತ್ರಕ್ಕೆ ಮೂಲ ಆಧಾರವಾದುದು. ಅದೇ ರೀತಿ ಹರಕೆ ಮತ್ತು ಪವಾಡಗಳು ಸಹ ಆ ಕ್ಷೇತ್ರದ ವಿಶಿಷ್ಟತೆಗೆ ಸಹಕಾರಿಯಾದವುಗಳು. ಈ ನೆಲೆಯಲ್ಲಿ ನಾಯಕನಹಟ್ಟಿ ತಿಪ್ಪೇಸ್ವಾಮಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಇರುವ ನಂಬಿಕೆ, ಪವಾಡ, ಹರಕೆಗಳನ್ನು ಕುರಿತು ಸಂಗ್ರಹಿಸುವುದರ ಜೊತೆಗೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಅಧ್ಯಾಯ ೫ ನಂಬಿಕೆ, ಹರಕೆ ಮತ್ತು ಪವಾಡಗಳು ಮತ್ತು ಆಚರಣೆಗಳು ಆಗಿದ್ದು ನಾಲ್ಕನೇ ಅಧ್ಯಾಯದ ನಂಬಿಕೆ, ಹರಕೆ, ಮತ್ತು ಪವಾಡಗಳ ಕುರಿತಂತಿರುವ ಸಾಕ್ಷಿಗಳಾಗಿ ನಮಗೆ ಈ ಆಚರಣೆಗಳು ಕಂಡು ಬರುತ್ತವೆ. ಈ ಆಚರಣೆಗಳು ಎಂಬ ಅಧ್ಯಾಯದಲ್ಲಿ ತಿಪ್ಪೇಸ್ವಾಮಿಗೆ ವಿಶಿಷ್ಟವಾಗಿ ಹಾಗೂ ಸಾಮಾನ್ಯವಾಗಿ ನಡೆಯುವ ಎಲ್ಲ ಆಚರಣೆ ಮತ್ತು ಜಾತ್ರೆಗಳ ಕುರಿತು ಅಧ್ಯಯನವನ್ನು ಮಾಡಲಾಗಿದೆ. ಈ ನಂಬಿಕೆ, ಹರಕೆ, ಪವಾಡ ಮತ್ತು ಆಚರಣೆಗಳು ಒಂದು ಕ್ಷೇತ್ರದ ಉಳಿಯುವಿಕೆ ಹಾಗೂ ಮುಂದುವರಿಯುವಿಕೆಗೆ ಬಹುಮುಖ್ಯವಾದ ಸಂಗತಿಗಳಾಗಿರುತ್ತವೆ.

ಅಧ್ಯಾಯ ೬ ಮತ್ತು ೭ ಕ್ರಮವಾಗಿ ಜನಪದ ಸಾಹಿತ್ಯ ಹಾಗೂ ಆಧುನಿಕತೆ ಮತ್ತು ತಿಪ್ಪೇಸ್ವಾಮಿ ಎಂದು ನಿರ್ವಚಿಸಿಕೊಳ್ಳಲಾಗಿದೆ. ಜನಪದ ಸಾಹಿತ್ಯ ವಿಭಾಗದಲ್ಲಿ ತಿಪ್ಪೇಸ್ವಾಮಿ ಕುರಿತ ಹಾಡು ಕಥೆಗಳನ್ನು ಕುರಿತು ಸಂಗ್ರಹಣೆ ಮತ್ತು ಅಲ್ಪಮಟ್ಟಿನ ವಿಶ್ಲೇಷಣೆಯನ್ನು ಮಾಡಲಾಗಿದೆ.

ಆಧುನಿಕ ಜಗತ್ತಿನಲ್ಲಿ ತಿಪ್ಪೇಸ್ವಾಮಿ ಕುರಿತಂತೆ ಮೊದಲಿದ್ದ ನಂಬಿಕೆ, ಆಚರಣೆಗಳು ಬದಲಾವಣೆಗೊಳ್ಳುವುದರ ಜೊತೆಗೆ ಕೆಲವೊಮ್ಮೆ ಕ್ಷೀಣಿಸುತ್ತಿವೆ. ಜಾತ್ರೆಯಲ್ಲಿಯು ಬಹಳಷ್ಟು ಬದಲಾವಣೆ ಕಂಡುಬಂದು ಮೊದಲಿನ ರೀತಿಗೂ ಈಗಿನ ರೀತಿಗೂ ತುಂಬಾ ಬದಲಾವಣೆಗಳಾಗಿವೆ. ಇದನ್ನು ಈ ಅಧ್ಯಾಯದಲ್ಲಿ ಹಿಡಿದಿಡಲಾಗಿದೆ. ಅಧ್ಯಾಯ ೮ ಸಮರೋಪವಾಗಿದೆ ಜೊತೆಗೆ ವಕ್ತೃಗಳ ಮಾಹಿತಿ ಆಧಾರಗ್ರಂಥಗಳು ಹಾಗೂ ನಾಯಕನಹಟ್ಟಿ ತಿಪ್ಪೇಸ್ವಾಮಿ ಸಂಬಂಧಪಟ್ಟ ಛಾಯಾಚಿತ್ರಗಳನ್ನು ಹಾಕಲಾಗಿದೆ.

ಅನುಬಂಧ - ೧

ವಕ್ರ ವಿವರ

ಹೆಸರು	ಸಮುದಾಯ	ವೃತ್ತಿ	ವಿದ್ಯಾಭ್ಯಾಸ	ಊರು	ವಯಸ್ಸು
ರೇವಣ್ಣ ಕೆ.ಎಂ. ರುಮಾಲೆ	ಲಿಂಗಾಯತ	ತಿಪ್ಪೇಸ್ವಾಮಿ ದೇವಸ್ಥಾನ ನಾಯಕನಹಟ್ಟಿ ಪಾರು ಪತ್ತೆಗಾರರು	೮ನೇ ತರಗತಿ	ನಾಯಕನಹಟ್ಟಿ	೭೪
ರವಿ	ಲಿಂಗಾಯತ	ದೇವಸ್ಥಾನದ ಪುರೋಹಿತ	ಎ.ಎಂ.ಜಿ.ಡಿ. ಡ್ರಾಯಿಂಗ್	ನಾಯಕನಹಟ್ಟಿ	೩೨
ರುದ್ರಪ್ಪ	ನಾಯಕ	ಹೊರಮಠ ಪುರೋಹಿತ	ಎಂ.ಎ.	ನಾಯಕನಹಟ್ಟಿ	೩೦
ಪಿತಾಂಬರ	ಲಿಂಗಾಯತ	ದೇವಸ್ಥಾನದ ಆಡಳಿತ ಮಂಡಳಿ		ನಾಯಕನಹಟ್ಟಿ	೫೭
ಬಸವರಾಜು	ಲಿಂಗಾಯತ	ದೇವಸ್ಥಾನದ ಆಡಳಿತ ಮಂಡಳಿ		ನಾಯಕನಹಟ್ಟಿ	೬೦
ಪ್ರೊ.ರಾಜೀವಲೋಚನ		ರೇಡಿಯೋ ಮಾಹಿತಿ			
ವೆಂಕಣ್ಣಚಾರ್	ಲಿಂಗಾಯತ	ದೇವಸ್ಥಾನದ ಆಡಳಿತ ಮಂಡಳಿ			೫೪
ಫಣಿಯಪ್ಪ	ಲಿಂಗಾಯತ	ಪುರೋಹಿತ		ನಾಯಕನಹಟ್ಟಿ	೫೬
ಮಾರಪ್ಪ	ಆದಿಕರ್ನಾಟಕ	ವ್ಯವಸಾಯ		ನಾಯಕನಹಟ್ಟಿ	೬೮
ಬೋಸಮ್ಮ	ಆದಿಕರ್ನಾಟಕ	ಕೂಲಿ		ನಾಯಕನಹಟ್ಟಿ	೭೧
ಪದ್ಮನಾಭ	ಬಲಿಜ	ಅಂಗಡಿವ್ಯಾಪಾರ	೩ನೇ ತರಗತಿ	ನಾಯಕನಹಟ್ಟಿ	೬೮

ಮಹಾಂತೇಶ	ಗೊಲ್ಲ	ಕ್ಯಾಸೆಟ್ ಅಂಗಡಿ	ಬಿ.ಎ.	ನಾಯಕನಹಟ್ಟಿ	೪೭
ಪಾಲಮ್ಮ	ನಾಯಕ	ಹೂವಿನವ್ಯಾಪಾರಿ		ನಾಯಕನಹಟ್ಟಿ	೫೨
ದುರುಗಮ್ಮ	ಆದಿಕರ್ನಾಟಕ	ಕೂಲಿ		ಜೋಗಿಹಟ್ಟಿ	೫೮
ಮಹಾಂತೇಶ	ಆದಿಕರ್ನಾಟಕ	ಆಟೋ ಚಾಲಕ	ಬಿ.ಎ.	ಜೋಗಿಹಟ್ಟಿ	೩೮
ಬಡಪ್ಪ	ಗೊಲ್ಲ	ವ್ಯವಸಾಯ	೮ನೇ ತರಗತಿ	ಜೋಗಿಹಟ್ಟಿ	೫೧
ಕೋಲ್ಲಮ್ಮ	ಆದಿಕರ್ನಾಟಕ	ಕೂಲಿ		ನಾಯಕನಹಟ್ಟಿ	೭೮
ದುರುಗಮ್ಮ	ಆದಿಕರ್ನಾಟಕ			ತೋರಣಗಟ್ಟೆ	೭೦
ಶಿವಪ್ಪ	ಲಿಂಗಾಯತ	ಶಿಕ್ಷಕರು	ಟಿ.ಸಿ.ಹೆಚ್.	ನಾಯಕನಹಟ್ಟಿ	೪೭
ಪ್ರದೀಪ	ರೆಡ್ಡಿ	ಬಾರ್ ಅಂಗಡಿ	ಪಿ.ಯು.ಸಿ.	ನಾಯಕನಹಟ್ಟಿ	೩೨
ಜಿತೇಂದ್ರ	ನಾಯಕ	ಅಂಗಡಿ	ಐಟಿಐ	ನಾಯಕನಹಟ್ಟಿ	೩೪
ಕಲ್ಲಪ್ಪ	ಲಿಂಗಾಯತ	ಶಿಕ್ಷಕರು	ಐಟಿಸಿ	ಮಹದೇವಪುರ	೫೮
ಕನ್ಯಾಕುಮಾರಿ	ಲಿಂಗಾಯತ	ದಿನಸಿ ಅಂಗಡಿ	ಪಿಯುಸಿ	ನಾಯಕನಹಟ್ಟಿ	೩೮
ತಿಪ್ಪಮ್ಮ	ನಾಯಕ	ಮನೆಕೆಲಸ	३ನೇ ತರಗತಿ	ಹೊರಮಠ ನಾಯಕನಹಟ್ಟಿ	೫೦
ಸುನಂದಮ್ಮ	ನಾಯಕ	ಹಾಲಿನ ವ್ಯಾಪಾರಿ		ನಾಯಕನಹಟ್ಟಿ	೪೦

ತಿಪ್ಪೇಸ್ವಾಮಿ	ಗೊಲ್ಲ	ವ್ಯವಸಾಯ		ತುರುವನೂರು	೬೦
ನಿಂಗಮ್ಮ	ಆದಿಕರ್ನಾಟಕ			ತೋರಣಗಟ್ಟೆ	೬೨
ಗಂಗಣ್ಣ	ಮಡಿವಾಳ	ಮುಖ್ಯಪೇದೆ	ಎಸ್‌ಎಸ್‌ಎಲ್‌ಸಿ	ಚಿತ್ರದುರ್ಗ	೫೪
ಕಣ್ಮೇಶ್	ಆದಿಕರ್ನಾಟಕ	ಪ್ರಾಂಶುಪಾಲರು	ಎವಿಂಜಿಡಿ	ಚಿತ್ರದುರ್ಗ	೩೧

ಅನುಬಂಧ - ೨

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಗ್ರಂಥಗಳು

೧. ಕೃಷ್ಣಮೂರ್ತಿ ಹನೂರು, ೧೯೯೩, ಮ್ಯಾಸಬೇಡರ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ಕೊಟ್ರಪ್ಪಯ್ಯ ಶಾಸ್ತ್ರಿಗಳು ಎಂ.ವಿ.ಎಸ್, ೧೯೯೫, ನಾಯಕನಹಟ್ಟಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ ಚರಿತ್ರೆ (೧೦೮ ನಾಮಾವಳಿ) ಕೊಟ್ಟೂರು.

೩. ಚಂದ್ರಶೇಖರ ವಿ.ದಾವಣಗೆರೆ, ೨೦೦೧, ಕಾಯಕಯೋಗಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ, ಶ್ರೀ ಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನ ಸಮಿತಿ, ನಾಯಕನಹಟ್ಟಿ.

೪. ಪಡಸೆಟ್ಟಿ ಎಂ.ಎಂ., ೧೯೯೨, ತಿಂಥಿಣಿ ಮೋನಪ್ಪಯ್ಯ: ಒಂದು ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಗದಗ.

೫. ಪರಮಶಿವಯ್ಯ ಜಿ.ಶಂ, ೧೯೭೬, ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು,ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬. ಮೀರಾಸಾಬಿಹಳ್ಳಿ ಶಿವಣ್ಣ, ೧೯೯೯, ದುರಗ ಜಾನಪದ, ಶಕ್ತಿ ಮುದ್ರಣ, ಬೆಂಗಳೂರು.

೭. ಮೀರಸಾಬಿಹಳ್ಳಿ ಶಿವಣ್ಣ, ೧೯೯೯, ಗೊಲ್ಲರಕಡಗ, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು.

೮. ಕೆ.ಎಂ., ೧೯೯೫, ಶ್ರೀಗುರು ತಿಪ್ಪೇರುದ್ರಸ್ವಾಮಿ ಅಷ್ಟೋತ್ತರ ಶತನಾಮಾವಳಿ, ನಾಯಕನಹಟ್ಟಿ.

೯. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೦, ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು ಒಂದು ಚಾರಿತ್ರಿಕ ಅಧ್ಯಯನ (ಅಪ್ರಕಟಿತ ಪಿ.ಎಚ್.ಡಿ.ಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಡಿ.ಟಿ.ರಂಗಸ್ವಾಮಿಯವರು, ೧೯೯೧, ಶ್ರೀಗುರುತಿಪ್ಪೇರುದ್ರಸ್ವಾಮಿ ಮಹಿಮಾಮೃತ, ನಾಯಕನಹಟ್ಟಿ.

೧೧. ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೨, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಅಂಬಳಿಕೆ ಹಿರಿಯಣ್ಣ (ಸಂ), ೧೯೯೭೮, ಕಾಡುಗೊಲ್ಲರ ಜನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೧೩. ಸಿ.ಎನ್.ಶಿವಕುಮಾರಸ್ವಾಮಿ, ಕರ್ನಾಟಕ ಜಾತ್ರೆಗಳು (ಸಂ), ೧೯೯೧, ಕುವೆಂಪು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಬಿ,.ಆರ್.ಪ್ರಾಜೆಕ್ಟ್.

೧೪. ಡಾ.ಮಂಜುನಾಥ ಬೇವಿನಕಟ್ಟಿ, ಕನ್ನಡ ಜನಪದ ನಂಬಿಕೆಗಳು, ೨೦೦೨, ಜ್ಯೋತಿ ಪ್ರಕಾಶನ, ಮೈಸೂರು.

೧೫. ಕಾಯಕಯೋಗಿ ಶ್ರೀ ಗುರು ತಿಪ್ಪೇರುದ್ರಸ್ವಾಮಿ, ಶ್ರೀಗುರು ತಿಪ್ಪೇರುದ್ರಸ್ವಾಮಿ ದೇವಸ್ಥಾನ, ನಾಯಕನಹಟ್ಟಿ. ೨೦೦೯.

೧೬. ಡಾ.ಎಸ್.ಲಕ್ಷ್ಮೀದೇವಿ, ಗ್ರಾಮ ಮತ್ತು ಶಿಷ್ಟ ದೇವತೆಗಳು, ಚಿತ್ಕಲಾ ಪ್ರಕಾಶನ, ಕುಪ್ಪಂ.

೧೭. ಸತೀಶ ಪಾಟೀಲ, ೨೦೦೬, ಪಂಚಗಣಾಧೀಶ್ವರರು, ಸಂಶೋಧನಾ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಕೆ.ಎಂ. ರೇವಣ್ಣ, ೨೦೦೬, ಮರದ ಮೇಲೆರಡು ಗಿಳಿ ಕುಂತು ನುಡಿದಾವೆ, ತಿಪ್ಪೇಶ ಪ್ರಕಾಶನ, ನಾಯಕನಹಟ್ಟಿ.

೧೯. ಕೃಷ್ಣಮೂರ್ತಿ ಹನೂರ, ೨೦೦೫, ಸಾವಿರದ ಸಿರಿಬೆಳಗು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦. ಡಾ.ಆರ್.ಅಯ್ಯಚಪ್ಪರ ಬಂದ, ೨೦೦೬, ಬಿಜಾಪುರ ಜಿಲ್ಲೆಯ ಜಾತ್ರೆಗಳು, ಯಾಸ್ಮಿನ್ ಪ್ರಕಾಶನ, ಬಿಜಾಪುರ.

೨೧. ಕನ್ನಡ ವಿಷಯ ವಿಶ್ವಕೋಶ ಸಂಪುಟ ೧, ೨೦೦೫, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು.

೨೨. ಎಂ.ಎನ್.ವೆಂಕಟೇಶ್, ೧೯೯೮, ಮೈಲಾರದ ಜಾತ್ರೆಗಳು, ಅಭಿ, ಆದರ್ಶ ಪ್ರಕಾಶನ, ಭದ್ರಾವತಿ.

೨೩. ಪ್ರೊ.ವಿದ್ವಾನ್ ವಿ.ಎಸ್.ಭಟ್, ೨೦೦೨, ಭಾರತೀಯ ಹಬ್ಬಗಳ ವೈಶಿಷ್ಟ್ಯ, ಪ್ರಾ.ಚೀ.ಬೆಂಗಳೂರು.



ನಲಿ ಹಗ್ಗ ಸ್ಪರ್ಧೆ ನಡೆಯುವಂತಹದ್ದು ಇದು.



ಜಾತ್ರೆಯಲ್ಲಿ ಗೊರವರು ನೃತ್ಯದಲ್ಲಿ ತೊಡಗಿರುವುದು.



ದನಗಳ ಸ್ಪರ್ಧೆ ನಡೆಯುವಂತಹದ್ದು.



ಹೊರ ಪಾರದಲ್ಲಿ ಸಾಧುಗಳು ಕೂರುವುದು



ಪೂಜಾ ಸಂದರ್ಭದಲ್ಲಿ ಶ್ರೀ ಶ್ರೀಗಳವರಿರುವುದು.



ಶ್ರೀ ಮಠದ ದೇವಸ್ಥಾನದ ಹಿಂದಿನ ದೃಶ್ಯ

ಕ್ಷಣದಿಂದಾಗಲ್ಲೆ ಪಾದಕ್ಷೇಪ ನಡೆಯುವಂತಹದ್ದು.

ನಿತ್ಯಗಳು ತಾಣಿಗೆ ಮಂತ್ರದ ಫಲ ನಾಡದ್ದು.



ಜಾತ್ರೆಯ ದಿನ ಬೆಳಿಗ್ಗೆ ಉಚ್ಚಾಯ ನಡೆಯುವ ಚಿತ್ರದೃಶ್ಯ.



ದೊಡ್ಡ ರಥೋತ್ಸವ ನಡೆಯುವ ಚಿತ್ರದೃಶ್ಯ.